₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಗುರುವಾರ 13.11.2025 ಸಂಪುಟ: 10 ಸಂಚಿಕೆ: 302 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬಾಲಿವುಡ್ ನಟ ಗೋವಿಂದ ಆಸ್ಪತ್ರೆಯಿಂದ ಬಿಡುಗಡೆ

ಬಾಲಿವುಡ್ ನಟ ಗೋವಿಂದ ಮಂಗಳವಾರ ತಡರಾತ್ರಿ ಮುಂಬೈನ ತಮ್ಮ ನಿವಾಸದಲ್ಲಿ ಪ್ರಜ್ಞೆ ತಪ್ಪಿ ಕುಸಿದುಬಿದ್ದಿದ್ದಾರೆ. ಅವರನ್ನು ಮುಂಬೈನ ಜುಹು ಉಪನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೂಕ್ತ ಚಿಕಿತ್ಸೆ ಪಡೆದ ನಂತರ ಗೋವಿಂದ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಸೊಂಪಾದ ಪುಟಗಳು





ದಾರಿದೀಪೋಕ್ತಿ



ಏನನ್ನು ಹೇಳಬೇಕು ಎಂದು ತಿಳಿಸುವುದು ಜ್ಞಾನ. ಏನು ಹೇಳಬೇಕು ಮತ್ತು ಏನು ಹೇಳಬಾರದು ಎಂದು ತಿಳಿಸುವುದು ವಿವೇಕ. ಏನೂ ಮಾತಾಡದೇ ಸುಮ್ಮನಿರುವುದು ಬುದ್ಧಿವಂತಿಕೆ. ನೀವು ಜ್ಞಾನಿಗಳಾ, ವಿವೇಕಶಾಲಿಗಳಾ, ಬುದ್ಧಿವಂತರಾ ಎಂಬುದನ್ನು ನೀವೇ ನಿರ್ಧರಿಸಬಹುದು.

ವಕ್ರತುಂಡೋಕ್ತಿ

ಗಂಡ-ಹೆಂಡತಿ ಪರಸ್ಪರ ಮಾತಾಡದೇ, ಅವರ ಪರವಾಗಿ ವಕೀಲರು ಮಾತಾಡುತ್ತಿದ್ದಾರೆ ಅಂದ್ರೆ, ಅವರು ಡೈವೋರ್ಸ್‌ಗೆ ಅರ್ಜಿ ಹಾಕಿದ್ದಾರೆ ಎಂದರ್ಥ.

ಹಾರಂಗಿ: ಇಬ್ಬರು ವಿದ್ಯಾರ್ಥಿಗಳ ಸಾವು

ಮಡಿಕೇರಿ: ಹಾರಂಗಿ ಹಿನ್ನೀರಿನಲ್ಲಿ ಈಜಲು ತೆರಳಿದ್ದ ಇಬ್ಬರು ವಿದ್ಯಾರ್ಥಿಗಳು ನೀರು ಪಾಲಾದ ಘಟನೆ ಕುಶಾಲನಗರ ಸಮೀಪದ ಹೇರೂರು ಗ್ರಾಮದಲ್ಲಿ ನಡೆದಿದೆ. ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸುಂಟಿಕೊಪ್ಪ ಪೊಲೀಸರು, ಕುಶಾಲನಗರ ಅಗ್ನಿ ಶಾಮಕ ದಳದ ಸಿಬ್ಬಂದಿ ಹಾಗೂ ದುಬಾರೆ ರ‍್ಯಾಫ್ಟರ್‌ಗಳು ಮೃತದೇಹಗಳಿಗಾಗಿ ಶೋಧ ಕಾರ್ಯ ನಡೆಸಿದರು. ಮಡಿಕೇರಿ ನಗರದ ಜ್ಯೂನಿಯರ್ ಕಾಲೇಜ್‌ನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿರುವ ಹೆಬ್ಬೆಟ್ಟಗೇರಿ ಗ್ರಾಮ ನಿವಾಸಿ ಪಾಂಡೀರ ಪೂವಯ್ಯ ಎಂಬುವವರ ಪುತ್ರ ಚಂಗಪ್ಪ (17) ಹಾಗೂ ಕಾಲೂರು ಗ್ರಾಮದ ನಿವಾಸಿ ಚನ್ನಪಂಡ ತಮ್ಮಯ್ಯ ಎಂಬುವವರ ಪುತ್ರ ತರುಣ್ ತಿಮ್ಮಯ್ಯ (17) ಎಂಬುವವರೇ ಮೃತ ವಿದ್ಯಾರ್ಥಿಗಳಾಗಿದ್ದಾರೆ. ಘಟನೆ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಂದುವರಿದ ಕಬ್ಬಿಗರ ಹೋರಾಟ

ಬಾಗಲಕೋಟೆ: ಬಾಗಲಕೋಟೆ ಜಿಲ್ಲೆಯ ಮುಧೋಳ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಬ್ಬಿನ ರೈತರ ಹೋರಾಟ ಮುಂದುವರಿದಿದೆ. ಮುಧೋಳದ ಲೋಕೋಪಯೋಗಿ ಇಲಾಖೆಯಲ್ಲಿ ಮಂಗಳವಾರ ತಡರಾತ್ರಿವರೆಗೂ ನಡೆದ ಅಧಿಕಾರಿಗಳು ಹಾಗೂ ರೈತರ ಸಭೆಯಲ್ಲಿ ಸರಕಾರದ ತೀರ್ಮಾನ ಒಪ್ಪದ ರೈತ ಮುಖಂಡರು ಬುಧವಾರ ತಾಲೂಕಿನ ಪ್ರತಿಯೊಂದು ರಸ್ತೆಗಳನ್ನು ಬಂದ್ ಮಾಡಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ದೆಹಲಿಯ ಹಿಟ್ನಾಳ್ ಮನೆಯಲ್ಲಿ ಸಿಎಂ ಡಿನ್ನರ್ ಪಾರ್ಟಿ ಆಪ್ತ ಸಚಿವರು, ಶಾಸಕರು ಮತ್ತು ಸಂಸದರು ಭಾಗಿ

ಸುದ್ದಿ



ದೆಹಲಿ ಸ್ಫೋಟದ ನಿಜವಾದ ಗುರಿ ಮುಂದಿನ ವರ್ಷ ಜ.26: ಉಗ್ರನ ತನಿಖೆ ವೇಳೆ ಮಾಹಿತಿ

ಬಾಬರಿ ಮಸೀದಿ ಧ್ವಂಸದ ದಿನದಂದೇ ಸ್ಫೋಟಕ್ಕೆ ಸಂಚು । ಇನ್ನೂ ಮೂರು ವೈದ್ಯರ ಬಂಧನ

ಗಣತಂತ್ರ ದಿನದಂದೇ ಸ್ಫೋಟಕ್ಕೆ ತಂತ್ರ

ದೆಹಲಿ: ಸೋಮವಾರ ರಾತ್ರಿ ದೆಹಲಿಯ ಕೆಂಪುಕೋಟೆ ಬಳಿ ಸಂಭವಿಸಿದ ಭೀಕರ ಬಾಂಬ್ ಸ್ಫೋಟದ ನಿಜವಾದ ಗುರಿಯೇನಾಗಿತ್ತು? ಸದ್ಯ ತನಿಖಾ ಸಂಸ್ಥೆಗಳ ಮೂಲಗಳಿಂದ ಹೊರಬೀಳುತ್ತಿರುವ ಮಾಹಿತಿ ಪ್ರಕಾರ ಮುಂದಿನ ವರ್ಷ ಜ.26ರಂದು ನಡೆಯಬೇಕಿರುವ ಗಣರಾಜ್ಯೋತ್ಸವದಂದು ಕೆಂಪು ಕೋಟೆ ಬಳಿ ಸ್ಫೋಟಿಸಲು ಸಿದ್ಧತೆ ಸಾಗಿತ್ತು. ಆದರೆ ಅಲ್ಲಿನ ವಿಪರೀತ ಭದ್ರತೆ ಕಂಡು ಈ ಯೋಜನೆ ಕೈಬಿಟ್ಟಿರುವ ಸಾಧ್ಯತೆಯಿದೆ. ಇನ್ನೊಂದು ಅಂದಾಜಿನ ಪ್ರಕಾರ ಈ ವರ್ಷ ಡಿ.6ರಂದು ಬಾಬರಿ ಮಸೀದಿ ಧ್ವಂಸದ ಸಂಭ್ರಮಾಚರಣೆ ವೇಳೆಯೇ ಸ್ಫೋಟಿಸಲು ಯೋಜಿಸಲಾಗಿತ್ತು ಎನ್ನಲಾಗಿದೆ. ಬಂಧಿತ 'ಉಗ್ರ ವೈದ್ಯ' ಡಾ.ಮುಜಮ್ಮಿಲ್ ಗನಯಿಯ ಮೊಬೈಲ್‌ನಲ್ಲಿ ಸಿಕ್ಕ ಕೆಲವು ಅಂಶಗಳನ್ನಿಟ್ಟು ಮೂಲಗಳು ಈ ಅಂದಾಜು ಮಾಡಿವೆ.

ಸೋಮವಾರ ರಾತ್ರಿ ಕೆಂಪುಕೋಟೆ ಮೆಟ್ರೋ ನಿಲ್ದಾಣದ ಪ್ರವೇಶ ದ್ವಾರದ ಬಳಿ ಇರುವ ಟ್ರಾಫಿಕ್ ಸಿಗ್ನಲ್‌ನಲ್ಲಿ ಕಾರ್ ಬಾಂಬ್ ಸ್ಫೋಟಗೊಂಡಿತ್ತು. ಇದಕ್ಕೆ ನಿಜವಾದ ಕಾರಣವೇನೆಂದು ಪತ್ತೆ ಮಾಡಲಾಗುತ್ತಿದೆ. ಆ ದಿನ ಐ20 ಕಾರು ಬಾಂಬ್ ಸ್ಫೋಟಿಸಲು ಅಲ್ ಫಲಾಹ್ ವಿವಿ ವೈದ್ಯ ಉಮರ್ ನಬಿ ಪೂರ್ವ ನಿಯೋಜಿತ ಯೋಜನೆ ಹೊಂದಿರಲಿಲ್ಲ. ಆದರೆ ಆತನ ಸಂಪರ್ಕದಲ್ಲಿದ್ದ ಮುಜಮ್ಮಿಲ್‌ನ ಬಂಧಿತನಾಗಿತ್ತು, 3000 ಕೆಜಿಯಷ್ಟು ಸ್ಫೋಟಕಗಳನ್ನು ಭದ್ರತಾಪಡೆಗಳು ವಶಪಡಿಸಿಕೊಂಡಿದ್ದು, ತಮಗೆ ಸಿಕ್ಕ ಮಾಹಿತಿಯನ್ನಾಧರಿಸಿ ಪೊಲೀಸರು ಉಮರ್ ಬೆನ್ನುಬಿದ್ದಿದ್ದರಿಂದ ಆತ ಗಾಬರಿಗೊಂಡಿದ್ದ. ಈ ಹಿನ್ನೆಲೆಯಲ್ಲಿ ಬಂಧನದಿಂದ ತಪ್ಪಿಸಿಕೊಳ್ಳಲು ಸ್ಫೋಟಿಸುವ ನಿರ್ಧಾರ ಮಾಡಿರಬಹುದು ಅಥವಾ ಇನ್ನೂ ಪೂರ್ತಿ ಸಿದ್ಧವಾಗದ ಬಾಂಬ್ ಅಚಾನಕ್ಕಾಗಿ ಸ್ಫೋಟಿಸಿರಬಹುದೆಂದು ಹೇಳಲಾಗಿದೆ.

ಮುಜಮ್ಮಿಲ್ ಈ ವರ್ಷ ಜನವರಿ ಮೊದಲ ವಾರದದಲ್ಲಿ ಕೆಂಪುಕೋಟೆಯ ಒಳಗೆ, ಹೊರಗೆ ಹಲವು ಬಾರಿ ಕಾಣಿಸಿಕೊಂಡಿದ್ದಾನೆ. ಅದನ್ನು ಸಿಸಿಟೀವಿಗಳಿಂದ ಪತ್ತೆ ಹಚ್ಚಲಾಗಿದೆ. ಬಾಂಬ್ ಸ್ಫೋಟ ಜ.26ರಂದು ಮಾಡಲು ಯೋಜಿಸಲಾಗಿತ್ತು ಎನ್ನುವುದು ಇದೂ ಒಂದು ಆಧಾರವಾಗಿದೆ.

ಇನ್ನೂ ಸಿದ್ಧವಾಗಿಲ್ಲದ ಬಾಂಬ್: ದೆಹಲಿಯಲ್ಲಿ ಸಿಡಿದಿರುವ ಬಾಂಬ್ ಮೂಲಗಳ ಪ್ರಕಾರ ಇನ್ನೂ ಪೂರ್ತಿಯಾಗಿ ಸಿದ್ಧವಾಗಿರಲಿಲ್ಲ. ಒಂದು ವೇಳೆ ಪಕ್ಕಾ ಬಾಂಬ್ ಆಗಿದ್ದರೆ ಹಾನಿಯ ಪ್ರಮಾಣ ಇನ್ನೂ ದೊಡ್ಡದಾಗಿರುತ್ತಿತ್ತು ಎನ್ನಲಾಗಿದೆ. → 4

ದೆಹಲಿಯ ಎಲ್‌ಎನ್‌ಜೆಪಿ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಬಾಂಬ್ ಸ್ಫೋಟದಲ್ಲಿ ಗಾಯಗೊಂಡಿರುವವರ ಆರೋಗ್ಯ ವಿಚಾರಿಸಿದರು.

74 ಎಕರೆ ಜಾಗದಲ್ಲಿದೆ ಅಲ್ ಫಲಾಹ್ ವಿವಿ

ಹರ್ಯಾಣದ ಫರೀದಾಬಾದ್‌ನ ಧೌಜ್‌ನಲ್ಲಿ ಅಲ್ ಫಲಾಹ್ ವಿವಿಯಿದೆ. 1997ರಲ್ಲಿ ಎಂಜಿನಿಯರಿಂಗ್ ಕಾಲೇಜ್ ರೂಪದಲ್ಲಿ ಇದು ಆರಂಭಗೊಂಡಿತು. ಪ್ರಸ್ತುತ 74 ಎಕರೆ ಜಾಗದಲ್ಲಿ ಹರಡಿಕೊಂಡಿದೆ. ದೆಹಲಿ ಸ್ಫೋಟದ ರೂವಾರಿಗಳು ಕೆಲಸ ಮಾಡಿರುವ ಕಾರಣದಿಂದ ಈ ವಿವಿ ಈಗ ದೇಶದ ಕೇಂದ್ರಬಿಂದುವಾಗಿ ಪರಿಣಮಿಸಿದೆ. ಕಳೆದ ಕೆಲವು ದಿನಗಳಿಂದ ಪೊಲೀಸರು ಸತತವಾಗಿ ಭೇಟಿ ನೀಡುತ್ತಿದ್ದು ತನಿಖೆ ಮಾಡುತ್ತಲೇ ಇದ್ದಾರೆ, ಒಟ್ಟು 52 ವೈದ್ಯರನ್ನು ವಿಚಾರಣೆಗೊಳಪಡಿಸಲಾಗಿದೆ. ಕೆಲವರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಸ್ಫೋಟದ ನಂತರ ನಿಸಾರ್ ಅಲ್ ಹಸನ್ ಎಂಬ ವೈದ್ಯ ನಾಪತ್ತೆಯಾಗಿದ್ದಾನೆ. 2014ರಲ್ಲಿ ಹರ್ಯಾಣ ಸರಕಾರದಿಂದ ಈ ವಿವಿಗೆ ವಿಶ್ವವಿದ್ಯಾಲಯದ ಮಾನ್ಯತೆ ದೊರೆಯಿತು. 2015ರಲ್ಲಿ ಯುಜಿಸಿಯೂ ಮಾನ್ಯತೆ ನೀಡಿತು. ಈ ವಿವಿಯನ್ನು ಅಲ್ ಫಲಾಹ್ ಚಾರಿಟೇಬಲ್ ಟ್ರಸ್ಟ್ ನಡೆಸುತ್ತದೆ. ಪ್ರೊಫೆಸರ್ ಜವಾದ್ ಅಹ್ಮದ್ ಸಿದ್ದಿಖಿ ಈ ಟ್ರಸ್ಟ್‌ನ ಮುಖ್ಯಸ್ಥರಾಗಿದ್ದಾರೆ. ವಿವಿಗೆ ಕುಲಪತಿಯೂ ಆಗಿದ್ದಾರೆ. ಇಲ್ಲೊಂದು 700 ಹಾಸಿಗೆಗಳ ಆಸ್ಪತ್ರೆಯೂ ಇದೆ. ಐದು ವರ್ಷಗಳ ಎಂಬಿಬಿಎಸ್‌ಗೆ ಒಟ್ಟು 74.50 ಲಕ್ಷ ರು. ಪಾವತಿಸಬೇಕಾಗುತ್ತದೆ.

ಸ್ಫೋಟಕ್ಕೂ ಮುಂಚೆ ಏನೇನಾಗಿತ್ತು?

1. ಅ.19ರಂದು ಜಮ್ಮುಕಾಶ್ಮೀರದ ಶ್ರೀನಗರ ಹಾಗೂ ನೌಗಾಮ್‌ನಲ್ಲಿ ಜೈಶ್ ಎ ಮೊಹಮ್ಮದ್‌ಗೆ ಸೇರಿದ ಆಕ್ಷೇಪಾರ್ಹ ಪೋಸ್ಟರ್‌ಗಳು ಪತ್ತೆ. ಈ ಬೆನ್ನಲ್ಲೇ ಮೌಲ್ವಿಗಳಾದ ಇರ್ಫಾನ್ ಅಹ್ಮದ್, ಜಮೀರ್ ಅಹ್ಮದ್ ಬಂಧನ.
2. ನ.5ರಂದು ಇದೇ ಪ್ರಕರಣದಲ್ಲಿ ಉತ್ತರಪ್ರದೇಶದಲ್ಲಿ ವೈದ್ಯ ಆದೀಲ್ ಪೊಲೀಸರ ಬಲೆಗೆ.
3. ನ.8ಕ್ಕೆ ಜಮ್ಮುಕಾಶ್ಮೀರದ ಅನಂತನಾಗ್‌ನಲ್ಲಿರುವ ಆಸ್ಪತ್ರೆಯೊಂದರಿಂದ ಎಕೆ-56 ರೈಫಲ್, ಇತರೆ ಸ್ಫೋಟಕಗಳು ವಶ. ತನಿಖೆಯ ವೇಳೆ ಸಿಕ್ಕ ಮಾಹಿತಿಯಿಂದ ಅಲ್ ಫತಾಹ್‌ನ ವೈದ್ಯ ಡಾ.ಮುಜಮ್ಮಿಲ್ ಗನಯಿ ಬಂಧನ.
4. ನ.10ರಂದು ಹರ್ಯಾಣದ ಮೇವಾಡದ ಅಲ್ ಫಲಾಹ್ ಮಸೀದಿಯ ಇಮಾಮ್ ಹಫೀಜ್ ಮೊಹಮ್ಮದ್ ಇಷ್ತಿಯಾಖ್ ನಿವಾಸದಿಂದ 2563 ಕೆಜಿ ಸ್ಫೋಟಕ ವಶ. ಸನಿಹದಲ್ಲೇ ಇದ್ದ ಇತರೆ ಜಾಗಗಳಿಂದ 358 ಕೆಜಿ ಸ್ಫೋಟಕವೂ ಪತ್ತೆ. ಒಟ್ಟು ಹತ್ತಿರಹತ್ತಿರ 3000 ಕೆಜಿ ಸ್ಫೋಟಕ ಪೊಲೀಸರ ವಶಕ್ಕೆ.
5. ಸ್ಫೋಟಕಗಳು, ಇತರೆ ಆರೋಪಿಗಳ ಬಂಧನದಿಂದ ಸ್ಫೋಟದ ರೂವಾರಿ ಉಮರ್ ನಬಿಗೆ ಗಾಬರಿ ಹುಟ್ಟಿಸಿರುವ ಸಾಧ್ಯತೆ. ದಿಢೀರ್ ಕಾರು ಬಾಂಬ್ ಸ್ಫೋಟಿಸಲು ನಿರ್ಧಾರವಾಗಿರುವ ಶಂಕೆ.

ನಬಿಗೆ ಸೇರಿದ್ದ ಕೆಂಪು ಕಾರು ವಶ

ಉಮರ್ ನಬಿಗೆ ಸೇರಿದ ಕೆಂಪು ಕಾರು ಇಕೋಸ್ಪೋರ್ಟ್ ಎಲ್ಲಿದೆ ಎಂಬ ಬಗ್ಗೆ ಪೊಲೀಸರು ವ್ಯಾಪಕ ಶೋಧ ನಡೆಸಿದ್ದರು. ಬುಧವಾರ ಈ ಕಾರನ್ನು ಹರ್ಯಾಣದ ಖಂಡವಾಲಿ ಹಳ್ಳಿಯ ಫಾರ್ಮ್‌ಹೌಸ್ ಒಂದರಲ್ಲಿ ವಶಪಡಿಸಿಕೊಳ್ಳಲಾಗಿದೆ. ನಬಿಯ ಸ್ನೇಹಿತನಿಗೆ ಸೇರಿದ ಜಾಗದಲ್ಲಿ ಇದು ಪತ್ತೆಯಾಗಿದೆ. ನಬಿಯ ಸ್ನೇಹಿತನನ್ನೂ ವಶಕ್ಕೆ ಪಡೆಯಲಾಗಿದೆ.

ಸಚಿವ ಸಂಪುಟದೊಂದಿಗೆ ಮೋದಿ ಸಭೆ

ಪ್ರಧಾನಿ ನರೇಂದ್ರ ಮೋದಿ ಕೇಂದ್ರ ಸಚಿವ ಸಂಪುಟದೊಂದಿಗೆ ದೆಹಲಿ ಬಾಂಬ್ ಸ್ಫೋಟದ ಸಂಬಂಧ ದೀರ್ಘ ಸಭೆ ನಡೆಸಿದರು. ದೆಹಲಿ ಬಾಂಬ್ ಸ್ಫೋಟ ಹೀನ ಉಗ್ರಕೃತ್ಯವೆಂದು ನಿರ್ಧಾರ ಮಾಡಲಾಯಿತು. ಈ ವೇಳೆ ಬಾಂಬ್ ದಾಳಿಯಿಂದ ಮಡಿದ 12 ಮಂದಿಗೆ ಸಂತಾಪ ಸಲ್ಲಿಸಿ 2 ನಿಮಿಷ ಮೌನಾಚರಣೆ ಮಾಡಯಿತು ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಈ ಸಂದರ್ಭದಲ್ಲಿ ತುರ್ತಾಗಿ ವೈದ್ಯಕೀಯ ನೆರವು ನೀಡಿ ವೈದ್ಯಕೀಯ ಸಿಬ್ಬಂದಿಗೂ ಕೃತಜ್ಞತೆ ಸಲ್ಲಿಸಲಾಗಿದೆ. ಅನಂತರ ಪ್ರಧಾನಿ ನರೇಂದ್ರ ಮೋದಿಯೊಂದಿಗೆ ಗೃಹಸಚಿವ ಅಮಿತ್ ಶಾ ಸಭೆ ನಡೆಸಿದ್ದಾರೆ. ಪರಿಸ್ಥಿತಿಯನ್ನು ನಿಕಟವಾಗಿ ಗಮನಿಸಲಾಗುತ್ತಿದೆ ಎಂದು ಸಚಿವರು ಹೇಳುತ್ತಿದ್ದಾರೆ.

2 ತಿಂಗಳೊಳಗೆ ಸಮೀಕ್ಷೆ ವರದಿ

ಬೆಂಗಳೂರು: ರಾಜ್ಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಎರಡೂವರೆ ತಿಂಗಳಲ್ಲಿ ಸಲ್ಲಿಸಲಿದೆ ಎಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಮೀಕ್ಷೆ ಗ್ರಾಮೀಣ ಭಾಗದಲ್ಲಿ ಶೇ.98ರಷ್ಟು ಪೂರ್ಣಗೊಂಡಿದ್ದು, ಜಿಬಿಎ ವ್ಯಾಪ್ತಿಯಲ್ಲಿ ಬಾಕಿಯಿದೆ. ಎಲ್ಲವನ್ನೂ ಒಟ್ಟುಗೂಡಿಸಿ ಇನ್ನೆರಡು ತಿಂಗಳ ಒಳಗಾಗಿ ಸರಕಾರಕ್ಕೆ ವರದಿ ಸಲ್ಲಿಕೆಯಾಗಲಿದೆ. ಆನ್‌ಲೈನ್‌ನಲ್ಲಿ ಸಮೀಕ್ಷೆಯಲ್ಲಿ ಭಾಗವಹಿಸುವುದಕ್ಕೆ ನ.30ರವರೆಗೆ ಗಡುವನ್ನು ವಿಸ್ತರಣೆ ಮಾಡಲಾಗಿದೆ. ಕೆಲವು ಜಿಲ್ಲೆಗಳಲ್ಲಿ ಪೂರ್ಣಗೊಂಡಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಶೇ.92 ರಷ್ಟು ಸಮೀಕ್ಷೆಯಾಗಿದೆ ಎಂದು ವಿವರಿಸಿದ್ದಾರೆ.

ಕಚೇರಿಯಲ್ಲಿ ಕುಳಿತು ಸಮೀಕ್ಷೆ ನಡೆಸಲಾಗಿದೆ ಎಂಬ ಆರೋಪ ನಿರಾಧಾರ. ಜಿಪಿಎಸ್ ಆಧಾರಿತವಾಗಿ ಸಮೀಕ್ಷೆ ನಡೆದಿದೆ. ಸಮೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡಿದ್ದವರು ಮನೆ ಮನೆಗೆ ತೆರಳಿ ಮಾಹಿತಿ ಕಲೆ ಹಾಕಿದ್ದಾರೆ. ಇತಿಹಾಸದಲ್ಲಿಯೇ ಈ ರೀತಿ ಕರಾರುವಕ್ಕಾಗಿ ಮಾಹಿತಿ ಕಲೆ ಹಾಕಿದ ಸಮೀಕ್ಷೆ ಬೇರೊಂದಿಲ್ಲ. ಯಾರು ಏನೇ ಟೀಕೆ ಮಾಡಿದರೂ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾತ್ರ ಅತ್ಯುತ್ತಮವಾಗಿ ನಡೆದಿದೆ ಎಂದು ಸಮರ್ಥಿಸಿಕೊಂಡರು.

ಪ್ರಿಯಾಂಕಾ ಮೊಬೈಲ್ ಹ್ಯಾಕರ್ ಬಂಧನ

ಬೆಂಗಳೂರು: ನಟ ಉಪೇಂದ್ರ ಹಾಗೂ ಪ್ರಿಯಾಂಕಾ ಮೊಬೈಲ್ ಹ್ಯಾಕ್ ಪ್ರಕರಣ ಸಂಬಂಧ ಆರೋಪಿ ಬಿಹಾರ ಮೂಲದ ವಿಕಾಸ್ ಕುಮಾರ್ ಎಂಬಾತನನ್ನು ಸದಾಶಿವ ನಗರದ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಬಂಧನಕ್ಕೆಂದು ಬಿಹಾರಕ್ಕೆ ಹೋದ ಪೊಲೀಸರೇ ಈ ಸೈಬರ್ ಖದೀಮರ ಜಾಲ ನೋಡಿ ಶಾಕ್ ಆಗಿದ್ದಾರೆ. 20ರಿಂದ 25 ವಯಸ್ಸಿನ ಯುವಕರು ಈ ದಂಧೆಯಲ್ಲಿ ನಿರತರಾಗಿದ್ದು, ಊರಿನ 150 ಮಂದಿ ಯುವಕರು ಸೈಬರ್ ಅಪರಾಧದಲ್ಲೇ ತೊಡಗಿಗೊಂಡಿರುವ ಆಘಾತಕಾರಿ ವಿಷಯ ಈ ವೇಳೆ ಬೆಳಕಿಗೆ ಬಂದಿದೆ. ಸದ್ಯ ಆರೋಪಿ ವಿಕಾಸ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಸೆ.15ರಂದು ಉಪೇಂದ್ರ ದಂಪತಿ ಮೊಬೈಲ್ ಹ್ಯಾಕ್ ಆಗಿತ್ತು. ಆನ್‌ಲೈನ್‌ನಲ್ಲಿ ಕೆಲ ವಸ್ತುಗಳನ್ನು ಪ್ರಿಯಾಂಕಾ ಉಪೇಂದ್ರ ಬುಕ್ ಮಾಡಿದ್ದರು. ಈ ವೇಳೆ ಮೊಬೈಲ್‌ಗೆ ಲಿಂಕ್ ಬಂದಿದ್ದು, ಆ ಲಿಂಕ್ ಅನ್ನು ಪ್ರಿಯಾಂಕ ಕ್ಲಿಕ್ ಮಾಡಿದ್ದರು. ಬಳಿಕ ನಟಿ ಪ್ರಿಯಾಂಕಾ ವಾಟ್ಸ್ ಆ್ಯಪ್ ಹ್ಯಾಕ್ ಮಾಡಿದ್ದ ಖದೀಮ, ಅವರ ಸಂಪರ್ಕದಲ್ಲಿದ್ದವರಿಗೆ 55 ಸಾವಿರ ಹಣ ಕಳುಹಿಸುವಂತೆ ಸಂದೇಶ ಮಾಡಿದ್ದ. ಪ್ರಿಯಾಂಕಾ, ಉಪೇಂದ್ರ ಮೊಬೈಲ್ ಕೂಡ ಹ್ಯಾಕ್ ಆಗಿತ್ತು.

ಎನ್‌ಡಿಎಗೆ ಖುಷಿ ತಂದ ಸಮೀಕ್ಷೆ, ಘಟಬಂಧನ್‌ಗೆ ಆತಂಕ

ನಾಳೆ ಬಿಹಾರ ಚುನಾವಣೆ ಫಲಿತಾಂಶ

ಪಟನಾ: ನ.6 ಮತ್ತು ನ.11ರಂದು 2 ಹಂತಗಳಲ್ಲಿ ನಡೆದ ಬಿಹಾರ ಚುನಾವಣೆ ಫಲಿತಾಂಶ ನ.14ರಂದು ಪ್ರಕಟವಾಗಲಿದೆ. ಮತದಾನ ಮುಗಿದ ಬೆನ್ನಲ್ಲೇ ಪ್ರಕಟವಾಗಿರುವ ಸಮೀಕ್ಷೆಗಳಲ್ಲಿ ಎನ್‌ಡಿಎ ಪರ ವರದಿಗಳು ಬಂದಿವೆ. ಇದು ಮಹಾಘಟಬಂಧನ್‌ಗೆ ಆತಂಕ ತಂದಿದೆ. ಒಟ್ಟು 243 ಕ್ಷೇತ್ರಗಳ ಬಿಹಾರ ಚುನಾವಣೆಯಲ್ಲಿ ಬಹುಮತಕ್ಕೆ 122 ಸ್ಥಾನಗಳು ಬೇಕು. ಎಲ್ಲ ಸಮೀಕ್ಷೆಗಳನ್ನು ಪರಿಗಣಿಸಿ ಸರಾಸರಿ ತೆಗೆದಾಗ ಜೆಡಿಯು-ಬಿಜೆಪಿ ಮೈತ್ರಿಕೂಟದ ಎನ್‌ಡಿಗೆ 146, ಆರ್‌ಜೆಡಿ-ಕಾಂಗ್ರೆಸ್‌ನ ಮಹಾಘಬಂಧನಕ್ಕೆ 92 ಸ್ಥಾನಗಳು ಬರುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ.

ಬಹುತೇಕ ಸಮೀಕ್ಷೆಗಳು ಎನ್‌ಡಿಎ ಪರ ಇದ್ದರೂ, ಆ್ಯಕ್ಸಿಸ್ ಮೈ ಇಂಡಿಯಾ ಎನ್‌ಡಿಎಗೆ ಬಹುಮತ ತಪ್ಪಿದರೂ ತಪ್ಪಬಹುದು ಎಂದಿದೆ. ಅದರ ಪ್ರಕಾರ ಎನ್‌ಡಿಎಗೆ 121ರಿಂದ 141 ಸ್ಥಾನ ಬರಲಿದೆ. ಘಟಬಂಧನಕ್ಕೆ 98ರಿಂದ 118ರವರೆಗೆ ಸ್ಥಾನ ಸಿಗಬಹುದು. ಉಳಿದೆಲ್ಲ ಸಮೀಕ್ಷಾ ಸಂಸ್ಥೆಗಳು ಎನ್‌ಡಿಎ ಪರ ಫಲಿತಾಂಶ ನೀಡಿವೆ.

ಎನ್‌ಡಿಎಗೆ ಗಾಬರಿ ಹುಟ್ಟಿಸಿರುವ ಸಂಗತಿಯೆಂದರೆ ಮತ ಪ್ರಮಾಣ. ಸಮೀಕ್ಷೆಗಳ ಸರಾಸರಿ ಪ್ರಕಾರ ಎನ್‌ಡಿಎಗೆ ಶೇ.43, ಮಹಾಘಟಬಂಧನಕ್ಕೆ ಶೇ.41 ಮತ ಬರಲಿದೆ. ಅರ್ಥಾತ್ ಇಲ್ಲಿ ಕೇವಲ ಶೇ.2 ಮತಪ್ರಮಾಣ ವ್ಯತ್ಯಾಸವಾಗಲಿದೆ. ಹೀಗೆ ನೋಡಿದರೆ ಹಲವು ಕ್ಷೇತ್ರಗಳಲ್ಲಿ ಎನ್‌ಡಿಎ ಕನಿಷ್ಠ ಅಂತರದಲ್ಲಿ ಗೆಲ್ಲುವ ಸಾಧ್ಯತೆಯಿದೆ. ಇದು ನಿಜವೇ ಆದಲ್ಲಿ ಎನ್‌ಡಿಎಗೆ ಆತಂಕ ಖಾತ್ರಿ. ಘಟಬಂಧನ್ ಭವಿಷ್ಯದ ಬಗ್ಗೆ ಭರವಸೆ ಇಟ್ಟುಕೊಳ್ಳಬಹುದು.

ಸಂಸ್ಥೆ	ಎನ್‌ಡಿಎ	ಘಟಬಂಧನ್	ಜೆಎಸ್‌ಪಿ	ಇತರೆ
ಮ್ಯಾಟ್ರಿಜ್	147-167	70-90	5	0
ಪಿ-ಮಾರ್ಕ್	142-162	80-98	1-4	0-3
ಭಾಸ್ಕರ್	145-160	73-91	-	5-10
ಪೋಲ್‌ಸ್ಟ್ರಾಟ್	133-148	87-102	-	3-5
ಚಾಣಕ್ಯ	148-172	65-89	-	3-9

ಸಮೀಕ್ಷೆಯಲ್ಲೇನಿದೆ?

1. ಬಿಹಾರದಲ್ಲಿ ಒಟ್ಟು ವಿಧಾನಸಭಾ ಸ್ಥಾನ 243, ಬಹುಮತಕ್ಕೆ ಬೇಕಿರುವುದು 122 ಸ್ಥಾನ
2. ಬಹುತೇಕ ಸಮೀಕ್ಷೆಗಳಲ್ಲಿ ಎನ್‌ಡಿಎಗೆ ಬಹುಮತ, ಘಟಬಂಧನ್‌ಗೆ ಹಿನ್ನಡೆ
3. ಎನ್‌ಡಿಎ ಮತಗಳಿಕೆ ಪ್ರಮಾಣ ಶೇ.43 ಮಾತ್ರ, ಘಟಬಂಧನ ಶೇ.41 ಮತಗಳಿಕೆ
4. ಅಂತರ ಶೇ.2 ಮಾತ್ರ: ಎನ್‌ಡಿಎಗೆ ಆತಂಕ

ಜೈಲಾತಿಥ್ಯ: ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ಕಳೆದ ಕೆಲ ದಿನಗಳಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿನ ಕೈದಿಗಳಿಗೆ ವಿಶೇಷ ಆತಿಥ್ಯ ನೀಡುತ್ತಿರುವ ಕುರಿತು ಹಲವು ಆರೋಪಗಳು ಕೇಳಿಬಂದಿವೆ. ಈ ಸಂಬಂಧ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕೈದಿಗಳ ಡಾನ್ಸ್ ವಿಡಿಯೋ ಜತೆಗೆ ಜೈಲಿನಲ್ಲಿದ್ದ ಕೈದಿಗಳು ಕೈಯಲ್ಲಿ ಮೊಬೈಲ್ ಹಿಡಿದು, ಐಷಾರಾಮಿ ಜೀವನ ನಡೆಸುತ್ತಿದ್ದ ವಿಡಿಯೋಗಳು ವೈರಲ್ ಆಗಿದ್ದವು. ರೌಡಿ ಶೀಟರ್ ಗುಬ್ಬಚ್ಚಿ ಸೀನಾ ಹುಟ್ಟುಹಬ್ಬ ಆಚರಿಸಿದ ವಿಡಿಯೋಗಳೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಹಿನ್ನಲೆ ಜೈಲು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿತ್ತು. ಈ ಎಲ್ಲಾ ಪ್ರಕರಣಗಳ ಕುರಿತು ಎಚ್ಚೆತ್ತ ಗೃಹ ಇಲಾಖೆ ಆಂತರಿಕ ತನಿಖೆಗೆ ಮುಂದಾಗಿದೆ. ಡಾನ್ಸ್ ವಿಡಿಯೋಗೆ ಸಂಬಂಧ ಪಟ್ಟಂತೆಯೂ ಎಫ್‌ಐಆರ್ ದಾಖಲಾಗಿದೆ.

ತಿಮರೋಡಿ, ಮಟ್ಟಣ್ಣವರ್ ತನಿಖೆಗೆ ಹೈ ಸಮ್ಮತಿ

ಎಸ್‌ಐಟಿ ತನಿಖೆ ತಡೆ ತೆರವು

ಬೆಂಗಳೂರು: ಧರ್ಮಸ್ಥಳ ತಲೆಬುರುಡೆ ಪ್ರಕರಣ ತನಿಖೆ ವಿಚಾರವಾಗಿ ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಧರ್ಮಸ್ಥಳ ಠಾಣೆಯ ಎಫ್‌ಐಆರ್ 39/2025 ತನಿಖೆಗೆ ಅ.30ರಂದು ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿದ್ದು, ತನಿಖೆಗೆ ಅನುಮತಿ ನೀಡಿದೆ. ಹೀಗಾಗಿ ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ, ಟಿ. ಜಯಂತ್ ಹಾಗೂ ವಿಠ್ಠಲ ಗೌಡ ಎಸ್‌ಐಟಿ ತನಿಖೆಯನ್ನು ಮತ್ತೆ ಎದುರಿಸಬೇಕಿದೆ.

ಪ್ರಕರಣ ಸಂಬಂಧ ಎಸ್‌ಐಟಿ ಪರ ವಾದಿಸಿದ್ದ ವಿಶೇಷ ಅಭಿಯೋಜಕ ಬಿ.ಎನ್. ಜಗದೀಶ್, ಮ್ಯಾಜಿಸ್ಟ್ರೇಟ್ ಅನುಮತಿ ಪಡೆದ ನಂತರವೇ ತನಿಖೆ ನಡೆಸಲಾಗುತ್ತಿದೆ. ಎಸ್‌ಐಟಿ ತನಿಖೆಯನ್ನು ಅರ್ಜಿದಾರರೇ ಹೊಗಳಿದ್ದಾರೆಂದು ನ್ಯಾಯಾಲಯಕ್ಕೆ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ತನಿಖೆಗೆ ನೀಡಿದ್ದ ತಡೆಯಾಜ್ಞೆ ತೆರವುಗೊಳಿಸಿ, ಆರೋಪಿಗಳಿಗೆ ಕಿರುಕುಳ ನೀಡದಂತೆ ಮಧ್ಯಂತರ ಆದೇಶ ವಿಸ್ತರಣೆ ಮಾಡಿ ನ್ಯಾ.ಮೊಹಮ್ಮದ್ ನವಾಜ್ ಅವರಿದ್ದ ಹೈ ಪೀಠದಿಂದ ಆದೇಶ ಮಾಡಿದೆ.

ಅರ್ಜಿದಾರರ ಪ್ರಚೋದನೆ ಮೇಲೆಯೇ ಚಿನ್ನಯ್ಯ ದೂರು ನೀಡಿದ್ದಾನೆ. ನಂತರ 164 ರಡಿ ಹೇಳಿಕೆ ನೀಡಿ ಅರ್ಜಿದಾರರ ಮೇಲೆ ಆರೋಪ ಮಾಡಿದ್ದಾನೆ. ಮೊದಲು ಇವರನ್ನು ಸಾಕ್ಷಿಗಳಾಗಿ ಪರಿಗಣಿಸಲಾಗಿತ್ತು, ಈಗ ಆರೋಪಿಗಳನ್ನಾಗಿಸಿ ನೋಟಿಸ್ ನೀಡಲಾಗಿದೆ. 35(3) ಅಡಿ ನೋಟಿಸ್ ಜಾರಿಗೊಳಿಸಿದ ಬಳಿಕ ಅರ್ಜಿದಾರರು ಬಂದಿಲ್ಲ. ಈಗ ಹೊಸದಾಗಿ ನೋಟಿಸ್ ಜಾರಿ ಗೊಳಿಸಲಾಗಿದೆ ಎಂದು ಜಗದೀಶ್ ತಿಳಿಸಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಎದುರು ಸಚಿವ ಜಾರಕಿಹೊಳಿ ಆಗ್ರಹ

ಡಿಕೆಶಿ ಸಿಎಂ ಬದಲಾವಣೆ ಪಟ್ಟಿಗೆ ಸಿದ್ದು ಬಣದಿಂದ ಸಂಘಟನೆ ಪುನಾರಚನೆ ಎದಿರೇಟು

ಕೆಪಿಸಿಸಿ ಅಧ್ಯಕ್ಷರನ್ನೇ ಬದಲಿಸಿ: ಸತೀಶ್ ದಾಳ

ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣಾ ಮತದಾನಕ್ಕೆ ಕ್ಷಣಗಣನೆ ಆರಂಭವಾಗುತ್ತಿರುವ ಹೊತ್ತಿನಲ್ಲಿಯೇ, ರಾಜ್ಯ ಕಾಂಗ್ರೆಸ್‌ನಲ್ಲಿಯೂ 'ಬದಲಾವಣೆ'ಗೆ ಪೂರಕವಾದ ಚಟುವಟಿಕೆಗಳು ಬಿರುಸಿನಿಂದ ಆರಂಭ ಗೊಂಡಿವೆ.

ಬಿಹಾರ ಚುನಾವಣಾ ಪ್ರಕ್ರಿಯೆ ಮುಗಿಯುವ ತನಕ ಯಾವುದೇ ಚರ್ಚೆ ಬೇಡ ಎಂದಿದ್ದ ಹೈಕಮಾಂಡ್ ಮಾತಿನಂತೆ, ಮತದಾನ ಮುಗಿಯುವ ತನಕ ಮೌನವಾಗಿದ್ದ ಹಲವು ನಾಯಕರು ಇದೀಗ ತಮ್ಮ ವಾದವನ್ನು ಮಂಡಿಸಲು ಶುರು ಮಾಡಿದ್ದಾರೆ. ಚಟುವಟಿಕೆ ವೇಗ ಪಡೆದುಕೊಂಡಿದ್ದರೂ, ಡಿ.ಕೆ.ಶಿವಕುಮಾರ್ ಬಳಗ ಈ ಹಂತದಲ್ಲಿಯೂ 'ಮೌನ'ಕ್ಕೆ ಶರಣಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು ಮಾತ್ರ 'ಸಿಎಂ ಬದಲಾವಣೆ'ಯಿಲ್ಲ ಎನ್ನುವ ಕೂಗನ್ನು ವ್ಯವಸ್ಥಿತವಾಗಿ ಹೆಚ್ಚಿಸುತ್ತಿದ್ದಾರೆ.

ಇಷ್ಟು ದಿನ ಸಂಪುಟ ಪುನಾರಚನೆ, ಮುಖ್ಯಮಂತ್ರಿ ಬದಲಾವಣೆ ಸೀಮಿತವಾಗಿದ್ದ ಚರ್ಚೆಗೆ ಇದೀಗ ಹೊಸ ತಿರುವನ್ನು ನೀಡುವ ಪ್ರಯತ್ನವನ್ನು ಸಚಿವ ಸತೀಶ್ ಜಾರಕಿಹೊಳಿ ಮಾಡಿದ್ದಾರೆಯೇ ಎನ್ನುವ ಪ್ರಶ್ನೆಗಳು ಶುರುವಾಗಿದೆ. ದೆಹಲಿಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿರುವ ಸತೀಶ್ ಜಾರಕಿಹೊಳಿ ಅವರು, ಮುಖ್ಯಮಂತ್ರಿ ಬದಲಾವಣೆಗೂ ಮೊದಲು ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸುವ ಮೂಲಕ ಸಂಘಟನೆಗೆ ಒತ್ತು ನೀಡಬೇಕು ಎನ್ನುವ ಗಾಳವನ್ನು ಉರುಳಿಸಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಕಳೆದೊಂದು ವರ್ಷದಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಸತೀಶ್ ಜಾರಕಿಹೊಳಿ ಅವರು ಭೇಟಿಯ ವೇಳೆ, ದೇಶಾದ್ಯಂತ ಸಂಘಟನೆಗೆ ಒತ್ತು ನೀಡುತ್ತಿರುವ ಸಮಯದಲ್ಲಿ ಕರ್ನಾಟಕದಲ್ಲಿಯೂ ಕೇಡರ್‌ಗಳನ್ನು ಬಲಪಡಿಸಿ ಕೊಳ್ಳಬೇಕಿದೆ. ಮುಂಬರಲಿರುವ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಕೆಪಿಸಿಸಿ ಅಧ್ಯಕ್ಷರನ್ನು ಬದಲಾಯಿಸುವುದು ಸೂಕ್ತ ಎನ್ನುವ ದಾಳವನ್ನು ಉರುಳಿಸಿದ್ದಾರೆ ಎಂದು ತಿಳಿದುಬಂದಿದೆ.

ಸತೀಶ್ ಅವರ ಈ ಬೇಡಿಕೆಗೆ ಸುರ್ಜೇವಾಲ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎನ್ನುವ ಸ್ಪಷ್ಟನೆ ಜಾರಕಿಹೊಳಿ ಅವರಿಗೆ ಇದ್ದರೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಪ್ರಸ್ತಾಪ ಮಂಡಿಸಿರುವುದು ಹಲವು ಚರ್ಚೆಗೆ ಕಾರಣವಾಗಿದೆ. ಆದರೆ ಮೂಲಗಳ ಪ್ರಕಾರ, ಒಂದು ವೇಳೆ ನಾಯಕತ್ವ ಬದಲಾವಣೆ ಎನ್ನುವ ಕೂಗನ್ನು ಡಿ.ಕೆ. ಶಿವಕುಮಾರ್ ಅವರು ಮುನ್ನೆಲೆಗೆ ತಂದರೆ ಆಗ ಮುಖ್ಯಮಂತ್ರಿಗಳ ಬದಲಾವಣೆಯ ಮೊದಲು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕಿದೆ ಎನ್ನುವ ಬೇಡಿಕೆಗೆ ಬುಧವಾರ ವೇದಿಕೆ ಸಿದ್ಧಪಡಿಸಿದ್ದಾರೆ ಎನ್ನಲಾಗುತ್ತಿದೆ.

ಪಟ್ಟು-ಪ್ರತಿಪಟ್ಟೇನು?

- ಮುಖ್ಯಮಂತ್ರಿ ಬದಲಾವಣೆ ಒತ್ತಡದ ಬಗ್ಗೆ ಡಿಕೆಶಿ ಬಣ ಮೌನ
- ಸಿದ್ದು ಆಪ್ತರಿಂದ ಮತ್ತೆಮತ್ತೆ 'ಸಿಎಂ ಬದಲಾವಣೆಯಿಲ್ಲ' ಹೇಳಿಕೆ
- ದೆಹಲಿಯಲ್ಲಿ ಸುರ್ಜೇವಾಲ ಭೇಟಿಯಾದ ಸತೀಶ್ ಜಾರಕಿಹೊಳಿ
- ಬೆಂಗಳೂರಲ್ಲಿ ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಭೇಟಿಯಾದ ಜಮೀರ್

ಖರ್ಗೆ ಭೇಟಿಯಾದ ಸಿದ್ದು ಆಪ್ತ ಜಮೀರ್

ಸಿದ್ದರಾಮಯ್ಯ ಅವರ ಆಪ್ತವಲಯದಲ್ಲಿ ಕಾಣಿಸಿಕೊಂಡಿರುವ ಜಮೀರ್ ಅಹ್ಮದ್ ಅವರು ಖರ್ಗೆ ಅವರನ್ನು ಭೇಟಿಯಾಗಿರುವುದು ಬಹುಚರ್ಚಿತ ವಿಷಯವಾಗಿದೆ. ಖರ್ಗೆ ನಿವಾಸದ ಮುಂದೆಯೇ ಜಮೀರ್ ಅವರು 'ಸಿಎಂ ಹುದ್ದೆಯೂ ಖಾಲಿಯಿಲ್ಲ; ಕೆಪಿಸಿಸಿ ಅಧ್ಯಕ್ಷ ಸ್ಥಾನವೂ ಖಾಲಿಯಿಲ್ಲ' ಎನ್ನುವ ಹೇಳಿಕೆ ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಖರ್ಗೆ ಅವರನ್ನು ಭೇಟಿಯಾದ ಬಳಿಕ ಜಮೀರ್ ಅವರು ಮುಂದಿನ ಅವಧಿಯಲ್ಲಿ ಡಿಕೆ ಸಿಎಂ ಆಗಲಿ ಎನ್ನುವ ಹೇಳಿಕೆಯನ್ನು ನೀಡುವ ಮೂಲಕ ಸಿದ್ದರಾಮಯ್ಯ ಅವರ ಪರವಾಗಿ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ.

ಶಿವಕುಮಾರ್ 2028ಕ್ಕೆ ಸಿಎಂ ಆಗಬೇಕು, ಅಲ್ಲಿಯವರೆಗೆ ಸಿದ್ದರಾಮಯ್ಯ ಸಿಎಂ ಎಂದು ಖರ್ಗೆ ನಿವಾಸದ ಮುಂದೆ ಜಮೀರ್ ಹೇಳಿದ್ದರೆ ಬಹಳ ಸಂತೋಷ. ನಾವು ಸಿಎಂ ಜೊತೆಯಲ್ಲಿ ಕೆಲಸ ಮಾಡುತ್ತಿದ್ದೇವೆ, ಒಟ್ಟಿಗೆ ಇದ್ದೇವೆ, ಮುಂದೆಯೂ ಇರುತ್ತೇವೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

2028ರವರೆಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. 2028ರಲ್ಲಿಯೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಆಗ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿ. ಅದಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ. ಆಗ ಅವರಿಗೆ ಅವಕಾಶವಿದೆ.
-ಜಮೀರ್ ಅಹ್ಮದ್, ಸಚಿವ

ಸಮಾಚಾರ ಸಣ್ಣದಲ್ಲ

ನೂತನ ದೇವಸ್ಥಾನಕ್ಕೆ ಭೂಮಿ ಪೂಜೆ ನಾಳೆ

ಹೊಸನಗರ: ಹೊಸನಗರದ ಮಾವಿನಕೊಪ್ಪದಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನವನ್ನು ಸುಮಾರು 3ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸುತ್ತಿದ್ದು ಅದರ ಶಂಕುಸ್ಥಾಪನೆ ನ. 14ನೇ ಶುಕ್ರವಾರ ಬೆಳಿಗ್ಗೆ ನೆರವೇರಿಸಲಾಗುವುದು ಎಂದು ಸಮಿತಿಯ ಅಧ್ಯಕ್ಷ ಬೃಂದಾವನ ಪ್ರವೀಣ್ ತಿಳಿಸಿದ್ದಾರೆ. ದೇವಸ್ಥಾನದ ಆವರಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಶುಕ್ರವಾರ ಬೆಳಿಗ್ಗೆ 10ಗಂಟೆಗೆ ಮೂಲಗದ್ದೆ ಮಠದ ಅಭಿನವ ಚನ್ನಬಸವ ಸ್ವಾಮೀಜಿ ಈ ಕಾರ್ಯಕ್ರ ಮವನ್ನು ನಡೆಸಿಕೊಡಲಿದ್ದು ಬೆಂಗಳೂರು ಉದ್ಯಮಿ ಮಹೇಂದ್ರ ಎಂ, ನಿತೀನ್ ನಾರಾಯಣ, ಈಕಾರ್ಯ ಕ್ರಮಕ್ಕೆ ಆಗಮಿಸಲಿದ್ದಾರೆ ಎಂದರು. 16ನೇ ಭಾನುವಾರ ಸಂಜೆ 4ಗಂಟೆಗೆ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ದಿವ್ಯಾನುಗ್ರಹದೊಂದಿಗೆ ಸ್ವರ್ಣ ಪಾದುಕೆ ಆಗಮಿಸಲಿದ್ದು ಭಕ್ತಾಧಿಕಾಗಳು ಆಗಮಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಕೊಡಬೇಕೆಂದು ವಿನಂತಿಸಿದರು. ಈ ವೇಳೆ ಸಮಿತಿ ಕಾರ್ಯದರ್ಶಿ ಗಣೇಶ್‌ಎನ್, ಗೌರವಾಧ್ಯಕ್ಷ ನಾಗರಾ ಜ್ಯಾಮತ್, ಉಪಾಧ್ಯಕ್ಷ ರಾಘವೇಂದ್ರ ದೇವಾಡಿಗ, ರವೀಂದ್ರ ಭಟ್, ಪುರೂಷೋತ್ತಮ ಅಡಿಗ, ಕೃಷ್ಣಮುರ್ತಿ, ಕೃಷ್ಣಮೂರ್ತಿ ಗೌಡ, ಮಹೇಂದ್ರ ಬಿ.ಎನ್, ಶಂಕರ ನಾರಾಯಣ ಅಡಿಗ, ಸತ್ಯನಾರಾಯಣ ಅಡಿಗ, ಶ್ರೀನಿವಾಸ್ದೇವಾಡಿಗ, ಚೇತನ್ ಆರ್, ಗೌತಮ್ಕುಮಾರಸ್ವಾಮಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ನಟಿ ನಯನ ತಾರಾ ದಂಪತಿ ಸರ್ಪ ಸಂಸ್ಕಾರ

ಸುಬ್ರಮಣ್ಯ: ಸೂಪರ್‌ಸ್ಟಾರ್‌ನಟಿ ನಯನತಾರಾ ದಂಪತಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಆಗಮಿಸಿ ಸರ್ಪಸಂಸ್ಕಾರ ಪೂಜೆ ನೆರವೇರಿಸಿದ್ದಾರೆ. ಬಹುಭಾಷಾ ನಟಿ ನಯನತಾರಾ ಮತ್ತು ವಿಘ್ನೇಶ್ ಶಿವನ್ ದಕ್ಷಿಣಭಾರತದ ಖ್ಯಾತ ನಾಗಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಅಲ್ಲದೆ ಕ್ಷೇತ್ರದಲ್ಲಿ ಸರ್ಪ ಸಂಸ್ಕಾರ ಸೇವೆಯನ್ನು ನಯನತಾರಾ ದಂಪತಿ ನೆರವೇರಿಸಿದ್ದಾರೆ. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಆಗಮಿಸಿದ ನಯನ ತಾರಾ ದಂಪತಿಗಳಿಗೆ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ಅವರು ಶಾಲು ಹೊದಿಸಿ ಗೌರವ ಸಲ್ಲಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಕೋಡಿಹಳ್ಳಿ ಚಂದ್ರಶೇಖರ್, ಪ್ರಮೋದ್ ಮುತಾಲಿಕ್ ರೈತರ ಹೋರಾಟಕ್ಕೆ ಸಾಥ್

ಮೆಕ್ಕೆಜೋಳ ಬೆಳೆಗಾರ ಪರ ಪ್ರತಿಭಟನೆ

ಚಿಕ್ಕಬಳ್ಳಾಪುರ ನಗರದ ಜಿಲ್ಲಾಡಳಿತ ಭವನದ ಎದುರು ಕೋಡಿಹಳ್ಳಿ ಚಂದ್ರಶೇಖರ್‌ಬಣದ ರೈತರು ಪ್ರತಿಭಟನೆ ನಡೆಸಿದರು.

ಚಿಕ್ಕಬಳ್ಳಾಪುರ: ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಬಣದ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಜಿಲ್ಲಾಡಳಿತ ಭವನದ ಎದುರು ಮೆಕ್ಕೆಜೋಳ ಸೇರಿ ಹಲವು ತರಕಾರಿಗಳನ್ನು ಸುರಿದು ಪ್ರತಿಭಟನೆ ನಡೆಸಿ ಸಚಿವ ಜಮೀರ್‌ಅಹ್ಮದ್ ವಿರುದ್ಧ ಆಕ್ರೋಶ ಹೊರಹಾಕಿದರು.

ಜಿಲ್ಲಾಡಳಿತ ಭವನದ ಎದುರು ರೈತ ಸಂಘಟನೆ ನಡೆಸಿದ ಪ್ರತಿಭಟನೆಗೆ ಶ್ರೀರಾಮಸೇನೆ ಸಂಘಟನೆಯ ರಾಜ್ಯಾಧ್ಯಕ್ಷ ಪ್ರಮೋದ್ ಮುತಾಲಿಕ್ ಸಹ ಸಾಥ್ ನೀಡುವ ಮೂಲಕ ಗಮನ ಸೆಳೆದರು.

ಈ ವೇಳೆ ಮಾತನಾಡಿದ ಕೋಡಿಹಳ್ಳಿ ಚಂದ್ರಶೇಖರ್ ,ಪೆರೇಸಂದ್ರದ ಮೆಕ್ಕೆಜೋಳದ ವ್ಯಾಪಾರಿ ರಾಮಕೃಷ್ಣಪ್ಪ ಎಂಬುವರಿಗೆ ಹೈದರಾಬಾದ್ ಮೂಲಕ ಮೂವರು ಸಹೋದರರು 2 ಕೋಟಿ ರೂಗಳ ವಂಚನೆ ನಡೆಸಿದ್ದಾರೆ. ದೂರಿನ ಆಧಾರದಲ್ಲಿ ವಂಚಕರನ್ನು ಬಂಧಿಸಿ ದಾಗ ಅವರ ಸಚಿವ ಜಮೀರ್‌ಅಹಮದ್ ವಂಚಕರಿಗೆ ಸಹಾ ಯ ಮಾಡಿ ರೈತರಿಗೆ ಮೋಸ ಮಾಡಿದ್ದು, ಇದರಿಂದ ಸಚಿವ ಜಮೀರ್ ರೈತರಿಗೆ ವಿಲನ್ ಬದಲಾಗಿದ್ದಾರೆಂದು ಕಿಡಿಕಾರಿದರು.

ಹಲವು ಜಿಲ್ಲೆಗಳ ರೈತರನ್ನು ವಂಚನೆ ಮಾಡಿರುವ ವಂಚಕರು ಮೆಕ್ಕೆಜೋಳದ ವ್ಯಾಪಾರಿಗೆ ಮಾಡಿರುವ ವಂಚನೆಯಿಅದ ಜೋಳ ಮಾರುಕಟ್ಟೆ ಸ್ಥಗಿತಗೊಂಡು 7500 ರೂಗಳಿಂದ 3000 ರೂಗಳಿಗೆ ಕುಸಿತಗೊಂಡಿದ್ದು, ಈ ನಿಟ್ಟಿನಲ್ಲಿ ಸರ್ಕಾರ 3-4 ದಿನಗಳಲ್ಲಿ ಮೆಕ್ಕೆಜೋಳದ ರೈತರಿಗೆ ಸೂಕ್ತ ಪ್ರೋತ್ಸಾಹ ಬೆಲೆ ಘೋಷಿಸಿ ನ್ಯಾಯ ಒದಗಿಸದಿದ್ದಲ್ಲಿ ಮೆಕ್ಕೆ ಜೋಳದ ಮೂಟೆಗಳೊಂದಿಗೆ ಸಿಎಂ ನಿವಾಸದ ಎದುರು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಬೆಲೆ ಕುಸಿದಿರುವ ಮೆಕ್ಕೆಜೋಳ, ಈರುಳ್ಳಿ ಸೇರಿ ಇನ್ನಿತರೆ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ಘೋಷಿಸಿ ಖರೀದಿ ಕೇಂದ್ರಗಳನ್ನು ತೆರೆಯಬೇಕು ಎಂದು ಒತ್ತಾಯಿಸಿದರು. ಸಂಘದ ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ ಮಾತನಾಡಿ, ಜಂಗಮಕೋಟೆ ಭಾಗದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಭೂಸ್ವಾಧೀನವನ್ನು ಕೈಬಿಡುವುದು ಸೇರಿ ಇನ್ನಿತರೆ ಬೇಡಿಕೆ ಈಡೇರಿಸಲು ಒತ್ತಾಯಿಸಿದರು.

ಜಮೀರ್‌ವಿರುದ್ಧ ವಾಗ್ದಾಳಿ: ರೈತರ ಪರವಾಗಿ ನಿಲ್ಲಬೇಕಾದ ಸಚಿವ ಜಮೀರ್‌ಅಹಮದ್ ಅವರು ವಂಚಕರ ಪರ ನಿಂತಿರುವುದು ಅವರಿಗೆ ಶೋಭೆ ತರುವುದಿಲ್ಲ. ಹೈದರಾಬಾದ್ ಮೂಲಕ ದೊಡ್ಡ ಮಾಫಿಯಾ ಸಹಾಯ ಮಾಡಿ ರೈತರ ಹೊಟ್ಟೆ ಮೇಲೆ ಕಾಲಿಡುತ್ತಿದ್ದು, ಅವರನ್ನು ಭಿಕ್ಷೆ ಬೇಡುವಂತೆ ಮಾಡುತ್ತಿದ್ದಾರೆಂದು ಸಚಿವರ ವಿರುದ್ಧ ಹಿಂದೂಪರ ಸಂಘಟನೆಯ ಮುಖಂಡ ಪ್ರಮೋದ್ ಮುತಾಲಿಕ್ ಕಿಡಿಕಾರಿದರು. ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ ಜಿಲ್ಲಾಧ್ಯಕ್ಷ ರಾಮನಾಥರೆಡ್ಡಿ,ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ಚಿಕ್ಕಬಳ್ಳಾಪುರ ತಾಲೂಕು ಅಧ್ಯಕ್ಷ ಎಂ.ರಾಮಾಂಜಿನಪ್ಪ, ಜಿಲ್ಲಾ ಕಾರ್ಯದರ್ಶಿ ನೆಲಮಾಕನಹಳ್ಳಿ ಗೋಪಾಲ್, ಮತ್ತಿತರರು ಇದ್ದರು.

ಕಳ್ಳ ಸಂತೆಗೆ ಅಕ್ಕಿ: ಪತ್ತೆ ಹಚ್ಚಿ

ಹೊಸನಗರ ತಾಪಂ ಸಭಾಂಗಣದಲ್ಲಿ ಗ್ಯಾರಂಟಿ ಸಮಿತಿಯ ತಾ. ಅಧ್ಯಕ್ಷ ಚಿದಂಬರ್‌ಸಭೆ ನಡೆಸುತ್ತಿರುವುದು.

ಹೊಸನಗರ: ಹೊಸನಗರ ತಾಲೂಕಿನಲ್ಲಿ ಗ್ಯಾರಂಟಿ ಯೋಜನೆಯ ಅನ್ನ ಬಾಗ್ಯ ಅಕ್ಕಿ ಕಳ್ಳ ಸಂತೆಯಲ್ಲಿ ಮಾರಾಟವಾಗುತ್ತಿದೆ. ಸಾಕಷ್ಟು ದೂರುಗಳು ಬರುತ್ತಿದ್ದುತಕ್ಷಣ ಪತ್ತೆ ಹಚ್ಚುವ ಕೆಲಸವಾಗಬೇಕೆಂದು ತಾಲೂಕಿನ ಆಹಾರ ಇಲಾಖೆ ಅಧಿಕಾರಿಗಳಿಗೆ ತಾ. ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಚಿದಂಬರ ಸೂಚಿಸಿದರು.

ತಾಪಂ ಆವರಣದಲ್ಲಿ ನಡೆದ ಗ್ಯಾರಂಟಿಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಮಗಳಲ್ಲಿ ವಾಸಿಸುತ್ತಿರುವ ಮಹಿಳೆಯರಿಗೆ ಕಷ್ಟ ಕಾಲದಲ್ಲಿ ಸರ್ಕಾರ ನೀಡುತ್ತಿರುವ 2000 ರೂ. ಆರ್ಥಿಕ ಯೋಜನೆ ಫಲ ನೀಡಿದೆ. ಜನ ಸಾಮಾನ್ಯರ ಆರ್ಥಿಕ, ಸಾಮಾಜಿಕ ನೆರವಿಗೆ ಗ್ಯಾರಂಟಿ ಯೋಜನೆಗಳು ಫಲ ನೀಡುತ್ತಿದ್ದು ಮಹಿಳೆಯರಿಗೆ ಮತ್ತುಯುವಜನತೆಗೆ ಆರ್ಥಿಕ ಬಲ ಸಿಕ್ಕಿದಂತಾಗಿದೆ ಎಂದರು. ಯುವನಿಧಿ ಯೋಜನೆ ಕುರಿತು ಮಾತನಾಡಿದ ಅವರು, ಪದವಿ ಪಡೆದ 180 ದಿನಗಳಾದರೂ ಉದ್ಯೋಗ ದೊರೆಯದ ಪದವಿಧರರಿಗೆ ಅವರ ಮುಂದಿನ 24 ತಿಂಗಳ ಅವಧಿಗೆ ಮಾಸಿಕ ಮೂರು ಸಾವಿರ ಹಾಗೂ ಡಿಪ್ಲೋಮಾ ಪೂರೈಸಿದವರಿಗೆ ಒಂದುವರೆ ಸಾವಿರ ನಿರುದ್ಯೋಗ ಭತ್ಯೆ ನೀಡುವುದು ಯುವನಿಧಿ ಯಉದ್ದೇಶವಾಗಿದೆ. ಫಲಾನುಭವಿ ಬ್ಯಾಂಕ್ಖಾತೆಗೆ ಹಣ ನೇರ ಸಂದಾಯ ಆಗಲಿದೆ ಎಂದರು. ಗ್ಯಾರಂಟಿಯ ಶಕ್ತಿ ಯೋಜನೆಯಡಿ ತಾಲೂಕಿನಲ್ಲಿ ಕೆ.ಎಸ್. ಆರ್.ಟಿ.ಸಿ ಬಸ್ ವಿರಳವಾಗಿದ್ದು ಅಧಿಕಾರಿಗಳ ಗಮನಕ್ಕೆ ತಂದು ಅತೀ ಶೀಘ್ರದಲ್ಲಿಯೇ ಮಲೆನಾಡಿಗೂ ಬಸ್ ಸೌಲಭ್ಯ ಲಭಿಸುವಂತೆ ಮಾಡುತ್ತೇನೆಂದರು, ಈ ಸಭೆಯಲ್ಲಿ ತಾಪಂ ಕಾರ್ಯನಿರ್ವಹಣಾಧಿಖಾರಿ ನರೇಂದ್ರ ಕುಮಾರ್, ಸಮಿತಿಯ ಸದಸ್ಯರು ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

ಸರಕಾರಿ ವೈದ್ಯರಲ್ಲಿ ಬದ್ಧತೆ ಇರಲಿ

ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ ತಾಪಂ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗೌರಿಬಿದನೂರು: ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯ ಹೆರಿಗೆಗಳ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ವೈದ್ಯರು ಹಣದ ಆಮಿಷಕ್ಕೆ ಒಳಗಾದ ಬಗ್ಗೆ ದೂರು ಬಂದರೆನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ ವೈದ್ಯರಿಗೆ ಖಡಕ್ ಎಚ್ಚರಿಕೆ ನೀಡಿದರು.

ನಗರದ ತಾಪಂನ ಸಾಮರ್ಥ್ಯಸೌಧ ದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವೈದ್ಯರ ಮೇಲೆ ರೋಗಿಗಳು ಅಪಾರ ನಂಬಿಕೆ ಇಟ್ಟುಕೊಂಡಿರುತ್ತಾರೆ. ವೈದ್ಯರು ಬದ್ಧತೆಯಿಂದ ಸೇವೆ ಸಲ್ಲಿಸಬೇಕು, ಹಣದ ಆಸೆಗೆ ಕರ್ತವ್ಯ ನಿರ್ವಹಿಸು ವುದನ್ನು ಸಹಿಸುವುದಿಲ್ಲ. ಅಂತಹ ದೂರು ಗಳು ಕೇಳಿಬಂದಲ್ಲಿ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು. ಸಂಬಂಧಪಟ್ಟ ವೈದ್ಯಾಧಿಕಾರಿಗಳು ಈ ಬಗ್ಗೆ ಎಚ್ಚರ ವಹಿಸುವಂತೆ ಸೂಚಿಸಿದರು.

75% ಸಹಜ ಹೆರಿಗೆ : ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆಗೆ ಬರುವಂತಹವರಿಗೆ ಶೇ.75ರಷ್ಟು ಸಹಜ ಹೆರಿಗೆ ಮಾಡುವಂತಾಗಬೇಕು. ಅವಶ್ಯ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಗೆ ಮುಂದಾಗ ಬೇಕು, ವಿನಾಕಾರಣ ಶಸ್ತ್ರಚಿಕಿತ್ಸೆ ಮಾಡಿದಲ್ಲಿ ಮಹಿಳೆಯ ಆರೋಗ್ಯಕ್ಕೂ ತೊಂದರೆಯಾಗಲಿದೆ ಎಂದು ತಿಳಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರೇಮಾ ಮತ್ತು ಸಾರ್ವಜನಿಕ ವೈದ್ಯಾಧಿ ಕಾರಿ ಡಾ. ಲಕ್ಷ್ಮೀಕಾಂತ್ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಶೇ.57ರಷ್ಟು ಮಾತ್ರ ಸಹಜ ಹೆರಿಗೆಯಾಗುತ್ತಿವೆ ಎಂದು ಶಾಸಕರಿಗೆ ತಿಳಿಸಿದರು. ತಾಲೂಕಿನ ವಿವಿಧ ಕಡೆ ಸುಮಾರು 80 ಕೋಟಿ ರೂಪಾಯಿಗಳ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ತ್ವರಿತಗತಿಯಲ್ಲಿ ನಡೆಯಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ತಹಶಿಲ್ದಾರ್‌ಕೆ.ಎಂ. ಅರವಿಂದ್. ತಾಪಂ ಇಒ ಜಿ.ಕೆ. ಹೊನ್ನಯ್ಯ, ಪೌರಾಯುಕ್ತ ಕೆ.ಜಿ. ರಮೇಶ್, ಅಧಿಕಾರಿಗಳು ಭಾಗವಹಿಸಿದ್ದರು.

ಕಾಲೇಜು ಆವರಣದ ಮರಗಳಿಗೆ ಕತ್ತರಿ: ಶಾಸಕ

ಶಿಕಾರಿಪುರ: ಅನುಮತಿ ಪಡೆಯದೆ ಕಾಲೇಜು ಆವರಣದ ಮರಗಳನ್ನು ಕತ್ತರಿಸಿದ ಬಗ್ಗೆ ಶಾಸಕ ಬಿ. ವೈ.ವಿಜಯೇಂದ್ರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರು,ಶಾಸಕರ ಮತ್ತು ಸಂಬಂಧಪಟ್ಟ ಇಲಾಖಾಧಿಕಾರಿಗಳ ಅನುಮತಿಯಿಲ್ಲದೇ ಹಲವು ಮರಗಳ ಕತ್ತರಿಸಿದ್ದರು. ಈ ಬಗ್ಗೆ ಪರಿಶೀಲಿಸಿ ಮರಗಳ ಕಡಿತದಿಂದಾಗಿ ಅತೀವ ನಷ್ಟವುಂಟಾಗಿದೆ ಎಂದು ಎಚ್ಚರಿಸಿ ಕೂಡಲೇ ಪರ್ಯಾಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.ಜತೆಗೆ ಈ ಘಟನೆ ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದರು.

ಶಿಕಾರಿಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಬೇಟಿ ನೀಡಿ ಪರಿಶೀಲಿಸಿದ ಶಾಸಕ ವಿಜಯೇಂದ್ರ.

ಪಾರ್ಕಿಂಗ್ ಸಮಸ್ಯೆ ನಿವಾರಣೆಗೆ ಸಹಕರಿಸಿ: ಎಸ್ಪಿ

ಶಿವಮೊಗ್ಗದಲ್ಲಿ ಜಿಲ್ಲಾ ರಕ್ಷಣಾಧಿಕಾರಿ ಜಿ.ಕೆ. ಮಿಥುನ್ಕುಮಾರ್ ವರ್ತಕರ ಸಂಘದ ಸಭೆಯಲ್ಲಿ ಮಾತನಾಡಿದರು.

ಶಿವಮೊಗ್ಗ: ನಾಗರೀಕರು ತಮ್ಮ ಸಮಸ್ಯೆಗಳನ್ನು ಗಮನಕ್ಕೆ ತಂದಾಗ ಮಾತ್ರ ಸುಧಾರಣೆ ಸಾಧ್ಯ ಎಂದು ಜಿಲ್ಲಾ ರಕ್ಷಣಾಧಿಕಾರಿ ಜಿ.ಕೆ. ಮಿಥುನ್ಕುಮಾರ್ ಹೇಳಿದ್ದಾರೆ.

ಅವರು ನಗರದ ಶುಭಂ ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್, ಸಂಚಾರ ಪೊಲೀಸ್ ಹಾಗೂ ನೆಹರೂ ರಸ್ತೆಯ ವರ್ತಕರ ಸಂಘ ಜಂಟಿಯಾಗಿ ನೆಹರೂ ರಸ್ತೆಯ ಸುಗಮ ಸಂಚಾರ ವ್ಯವಸ್ಥೆಗೆ ಹಮ್ಮಿಕೊಂಡಿದ್ದ ವರ್ತಕರ ಸಭೆಯಲ್ಲಿ ವರ್ತಕರ ದೂರುಗಳನ್ನು ಆಲಿಸಿ ಮಾತನಾಡಿದರು. ನಗರದ ಅಮೀರ್‌ಅಹ್ಮದ್ ವೃತ್ತದಿಂದ ಸೀನಪ್ಪಶೆಟ್ಟಿ ವೃತ್ತದವರೆಗೆ ಪ್ರತಿನಿತ್ಯ ಸಾವಿರಾರು ದ್ವಿಚಕ್ರ ಮತ್ತು ನೂರಾರು ನಾಲ್ಕು ಚಕ್ರ ವಾಹನಗಳ ನಿಲುಗಡೆ ಬಗ್ಗೆಅನೇಕ ದೂರುಗಳು ಬರುತ್ತಿದ್ದು, ಎಲ್ಲರೂ ಕೈಜೋಡಿಸಿದರೆ ಸಮಸ್ಯೆ ಬಗೆಹರಿಸಲು ಸಾಧ್ಯ ಎಂದರು.

ಈಗಾಗಲೇ ಒಟ್ಟು 21 ಕನ್ಸರ್ವೆನ್ಸಿಗಳನ್ನು ಪಾಲಿಕೆಯ ವತಿಯಿಂದ ಅಭಿವೃದ್ಧಿಪಡಿಸಲಾಗಿದೆ. ಅಲ್ಲಿ ಸಿಸಿ ಕ್ಯಾಮೇರಾ ಮತ್ತು ಬೆಳಕಿನ ವ್ಯವಸ್ಥೆ ಮಾಡಲು ಪಾಲಿಕೆ ಒಪ್ಪಿಕೊಂಡಿದ್ದು, ಕನ್ಸರ್ವೆನ್ಸಿ ನಿರ್ವಹಣೆಗೆ ಒಬ್ಬ ಸೆಕ್ಯೂರಿಟಿಯನ್ನು ನೇಮಿಸಿದರೆ ನೆಹರೂ ರಸ್ತೆಯ 150ಕ್ಕೂ ಹೆಚ್ಚಿನ ಅಂಗಡಿಗಳ ಮಾಲೀಕರು ಮತ್ತು ಸಿಬ್ಬಂದಿಗಳ ದ್ವಿಚಕ್ರ ವಾಹನಗಳನ್ನು ಕನ್ಸರ್ವೆನ್ಸಿಯಲ್ಲಿ ನಿಲುಗಡೆ ಮಾಡಿದರೆ ಸಮಸ್ಯೆ ಕಡಿಮೆಯಾಗುತ್ತದೆ. ಅಂಗಡಿ ಮುಂಭಾಗ ಕೆಲವು ವರ್ತಕರು ಫುಟ್ಬೋರ್ಡ್ ಜಾಲರಿ ಹಾಕುತ್ತಿದ್ದಾರೆ. ಇದರಿಂದ ದ್ವಿಚಕ್ರವಾಹನಗಳ ನಿಲುಗಡೆಗೆ ಸ್ಥಳಾವಕಾಶ ಕಡಿಮೆಯಾಗುತ್ತದೆ. ಇನ್ನು ಮುಂದೆ ನಿರ್ದಾಕ್ಷಿಣ್ಯವಾಗಿ ಅದನ್ನು ತೆರವುಗೊಳಿಸಲಾಗುವುದುರೆಂದು ಹೇಳಿದರು.

ಪ್ರತಿ ಅಂಗಡಿಗಳ ಮುಂದೆ ರಸ್ತೆ ಕಾಣುವಂತೆ ಸಿಸಿ ಕ್ಯಾಮೇರಾ ಅಳವಡಿಸಬೇಕು. ಆಗ ಯದ್ವಾತದ್ವಾ ನಿಲುಗಡೆ ಮಾಡುವ ವಾಹನಗಳು ಸಿಸಿ ಕ್ಯಾಮೇರಾದಲ್ಲಿ ರೆಕಾರ್ಡ್ ಆಗುತ್ತದೆ. ಅವರಿಗೆ ದಂಡ ವಿಧಿಸಲಾಗುವುದು ಎಂದರು.

ಇದಕ್ಕೂ ಮುನ್ನ ವರ್ತಕರ ಸಂಘದ ಅಧ್ಯಕ್ಷರಾದ ರಂಗನಾಥ್ ಮಾತನಾಡಿ, ಮೊದಲು ಮನೆಗೆ ಒಂದೇ ವಾಹನವಿತ್ತು. ನಗರ ಬೆಳೆದಿದೆ. ಜನಸಂಖ್ಯೆ ಜಾಸ್ತಿಯಾಗಿದೆ. ವ್ಯವಸ್ಥೆಗಳು ಬದಲಾಗಿದೆ. ಪ್ರತಿ ಮನೆಯಲ್ಲೂ ಮೂರ್ನಾಲ್ಕು ವಾಹನಗಳಿವೆ. ನೆಹರೂ ರಸ್ತೆಯ ಕಸ್ತೂರಬಾ ಕಾಲೇಜು ಹಿಂಭಾಗದಲ್ಲಿ ಕನ್ಸರ್ವೆನ್ಸಿ ಇದೆ. ಜೆ.ಹೆಚ್. ಪಟೇಲ್ ಕಾಂಪ್ಲೆಕ್ಸ್‌ನಲ್ಲೂ ಕೂಡ ಮಲ್ಟಿಲೆವೆಲ್ ಪಾರ್ಕಿಂಗ್ ವ್ಯವಸ್ಥೆಗೆ ಜಾಗ ಕಲ್ಪಿಸಬಹುದು ಎಂದರು.

ಶ್ರೀನಿಧಿ ಸಿಲ್ಕ್ ನ ಅಶ್ವತ್ಥನಾರಾಯಣಶೆಟ್ಟಿ ಮಾತನಾಡಿ, ವ್ಯಾಪಾರದಲ್ಲಿ ಸ್ಪರ್ಧೆ ಇದೆ. ಪಾರ್ಕಿಂಗ್ ಜಾಗ ಇಲ್ಲದೆ ಗ್ರಾಹಕರು ಬರುವುದಿಲ್ಲ. ಸಿಗ್ನಲ್‌ಲೈಟ್ಗಳಲ್ಲಿ ನಿಲ್ಲುವ ತಾಳ್ಮೆ ಕೂಡ ಸವಾರರಿಗೆ ಇಲ್ಲ, ಸಂಚಾರಿ ಪೊಲೀಸರಿಗೆ ವರ್ತಕರ ಪೂರ್ಣ ಸಹಕಾರವಿದೆ ಎಂದರು. ಗಾರ್ಡನ್ ಏರಿಯಾದಲ್ಲಿ ಹಾರ್ಡ್‌ವೇರ್ ಶಾಪ್ಗಳ ಹಾವಳಿ ಹೆಚ್ಚಾಗಿದ್ದು, ಅಲ್ಲಿ ಬರುವ ದೊಡ್ಡ ಲಾರಿಗಳು ಮತ್ತು ಎಲ್ಲೆಂದರಲ್ಲಿ ಅನ್ಲೋಡ್ ಮಾಡುವ ಸಣ್ಣ ವಾಹನಗಳಿಂದ ತೊಂದರೆಯಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಸಂಚಾರಿ ಇನ್‌ಸ್ಪೆಕ್ಟರ್‌ದೇವರಾಜ್, ಪ್ರಮುಖರಾದ ಬಳ್ಳೆಕೆರೆ ಸಂತೋಷ್, ಪಾಲಿಕೆ ಎಇಇ ಜ್ಯೋತಿ, ಪುಷ್ಪಾವತಿ, ಪಿಎಸ್ಐ ಭಾರತಿ, ಸ್ವಪ್ನ, ನೆಹರೂ ರಸ್ತೆಯ ವರ್ತಕರ ಸಂಘದ ಪದಾಧಿಕಾರಿಗಳು ಇದ್ದರು.

ಓಸಿಸಿಐಐ ಜಿಲ್ಲಾಧ್ಯಕ್ಷೆ ಆಗಿ ರಜಿನಿ ನೇಮಕ

ಶಿವಮೊಗ್ಗ: ಓಡ್ ಕಮ್ಯೂನಿಟಿ ಕೌನ್ಸಿಲ್ ಆಫ್ ಇಂಡಿಯಾ (ಓಸಿಸಿಐಐ)ದ ಶಿವಮೊಗ್ಗ ಜಿಲ್ಲಾ ಮಹಿಳಾ ಅಧ್ಯಕ್ಷೆಯಾಗಿ ರಜಿನಿ ಕಿರಣ್ ಟಿ.ಎಸ್. (ಬಿಆರ್ಪಿ) ರವರನ್ನು ಆಯ್ಕೆಯಾಗಿದ್ದಾರೆ. ಭೋವಿ ಸಮಾಜದ ಓಡ್ ಕಮ್ಯೂನಿಟಿ ಕೌನ್ಸಿಲ್ ಆಪ್ ಇಂಡಿಯಾದ ರಾಷ್ಟೀಯ ಅಧ್ಯಕ್ಷ ಡಾ ಹೆಚ್. ಮಾಕಳಿ ರವಿ ಅವರ ಆದೇಶದ ಮೇರೆಗೆ ರಾಜ್ಯ ಅಧ್ಯಕ್ಷ ಹೆಚ್. ಆನಂದಪ್ಪನವರ ಉಪಸ್ಥಿತಿಯೊಂದಿಗೆ ಮಾಜಿ ಸಚಿವ ಹಾಗೂ ಅರವಿಂದ ಲಿಂಬಾವಳಿ ಯವರು ಆದೇಶದ ಪತ್ರವನ್ನು ನೀಡಿ ಶಿವಮೊಗ್ಗ ಜಿಲ್ಲೆಗೆ ಮಹಿಳಾ ಅಧ್ಯಕ್ಷೆಯಾಗಿ ರಜಿನಿ ಕಿರಣ್ ಟಿ.ಎಸ್. (ಬಿಆರ್ಪಿ) ಇವರನ್ನು ಆಯ್ಕೆ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಭೋವಿ ಸಮಾಜ ತೆಲುಗು ಭಾಷಿಗರ ಸೇವಾ ಮನೋಭಾವದ ಮಹಿಳಾ ಮುಖಂಡರು ಕೈ ಜೋಡಿಸಲು ಈ ಸಂದರ್ಭದಲ್ಲಿ ಕೋರಿದ್ದಾರೆ.

N THE COURT OF THE IV ADDL CIVIL JUDGE AND J.M.F.C AT TUMAKURU
O.S. No. 102/2000
PLAINTIFF: T.H. Thimmarajamma
V/s
DEFENDANTS
D.N. Devarajaiah and others
PAPER PUBLICATION
Notice to Defendant No. 10(c) in the above case
DEFENDANT
Sri. SHIVARAJA S/o late Savithramma Aged about 55 years, residing at Doddaseebi Village. Seebi Agrahara Post, Kallambella Hobli, Sira Taluk Tumakuru District.
WHEREAS, the above plaintiff has filed this suit against the defendants for declaration and such other reliefs with respect to schedule property. In the mean time the defendant No 10 died hence the plaintiff filed L.R application for brought her L.Rs on record
SCHEDULE PROPERTY
Land bearing Sy.No. 55/2A, measuring 5 acres 28 gts, including 0-06 gts of Kharab situated at Hiredoddavadi Village, Urdigere Hobli, Tumakuru Taluk, assessed at Rs. 5/-bounded on theEAST-Land of UgraiahWEST-Land of Puttanarasaiah (It is mentioned in the decree passed in O.S. No. 221/96, as land belongs to plaintiff and defendants)NORTH -Land of NarayanappaSOUTH-Land of Kumbaiah and others.Take Notice that you have been made as of defendant No. 10(c) in the above suit and the same is posted for your appearance on 12-10-2026 at 11.00 am.before the Hon'ble IV Addl. Civil Judge, and JMFC at Tumakuru. Therefore, you are hereby by summoned to appear on the said date.Failing which the case will be heard and determined in your absence. Given under my hand and seal of this Court, this the. 11th day of Nov.2025.
By order of this court.
Shirastedar
COURT OF THE IV PRL. CIVIL JUDGE AND J.M.F.C AT TUMAKURU
Advocate for plaintiff
Sri. T.R. RAMESHBABU
B.Sc.L.L.B.,Advocate
C.S.K. Arcade
Kote Anjaneyaswamy Temple Circle, 1" Cross, Panduranganagar, TUMAKURU

IN THE COURT OF THE CIVIL JUDGE AND J.M.F.C. AT KORATAGERE
C.MIS.No.150/2025
Petitioners:- 1. Sunil D.M S/O Late Mallikarjunaiah, a/a 32 years. r/o Doddasaggere village, Holavanahalli hobli, Koratagre taluk Tumkuru dist.
V/S
Respondents:- Tahasildar, Registeare of brith and death, Koratgere taluk, Tumakur dist.
PUBLIC NOTIFICATION
Whereas the petitioner have filed the above petition to obtain the death certificate of the petitioners mother by name Rathnamma w/o Late Mallikarjunaiah, died on 20-02-2021 at Doddasaggere village Holavanahalli hobli, Koratagere taluk. If anybody has any objection or right with respect to the above said fact abd petition may filed objection in the above said case by personally or by counsel the case is posted on; 18-12-2025 at 11-00 a.m otherwise the said matter will be disposed accordance withg law. Given under my hand and the seal of the court on this 06-11-2025.
By order of the court
Sd/-, shirastedar
chivil judge (jr. Dn)
& J.M.F.C. court koratage.
B.H.Nagendrappa,
Advocate for petitioner.
Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS.No.383/2025
Petitioners:- 1. Rangaswamaiah s/o Late Rangappa, aged about 55 years. R/o Buddenahallai, Holavanahalli hobli, Koratagere taluk.
V/S
Respondents:- The Tahasildar, The Registeare, brith and death/ com, Koratgere, koratagere taluk.
PUBLIC NOTIFICATION
The petitioners mother Ramakka w/o Late Rangappa@Rangaiah, died on 10-11-1980 at in the house of petitioner at Buddenahalli, Holavanahalli hobli, Koratagere taluk. is there any other L,Rs are hereby summoned to appear in the above court in person or by a pleader on:-05-01-2026 at 11-00 A.M. to answer to the same, failing which the petition will be disposed off exparte. Given under my hand and the seal of the court on this 06-11-2025
By order of the court
Sd/-, shirastedar
chivil judge (jr. Dn)
& J.M.F.C. court koratage.
B.N.Nagendrappa, B.A.LL.B.
Advocate for petitioner.
Koratagere.

[illegible]

[illegible]

[illegible]

[illegible]

[illegible]

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ
ಸಿಮಿಸ್ ಸಂಖ್ಯೆ-699/2025
ಅರ್ಜಿದಾರರು:
1.ಅಶ್ವತ್ಥಯ್ಯ ಬಿನ್ ಲೇಟ್ ಬೋಡರಂಗಪ್ಪ-72 ವರ್ಷ,
2.ದೊಡ್ಡಯ್ಯ ಬಿನ್ ಲೇಟ್ ಬೋಡರಂಗಪ್ಪ- 65 ವರ್ಷ,
3.ಲಕ್ಷ್ಮಮ್ಮ ಬಿನ್ ಲೇಟ್ ಬೋಡರಂಗಪ್ಪ*62 ವರ್ಷ.
4 ಪುಟ್ಟರಂಗಪ್ಪ ಬಿನ್ ಲೇಟ್ ಬೋಡರಂಗಪ್ಪ-60 ವರ್ಷ,
ಎಲ್ಲರವಾಸ: ಮುದ್ದಯ್ಯನಪಾಳ್ಯ ಗ್ರಾಮ, ಕಸಬಾ ಹೋಬಳಿ, ಮಧುಗಿರಿ ತಾಲ್ಲೂಕು.
ವಿರುದ್ಧ
ಎದುರುದಾರರು:
ತಹಶೀಲ್ದಾರ್, ಮಧುಗಿರಿ, ಮಧುಗಿರಿ ತಾಲ್ಲೂಕು.
ಸಾರ್ವಜನಿಕ ಪ್ರಕಟಣೆ.
ಮೇಲ್ಕಂಡ 1 ರಿಂದ 4ನೇ ಅರ್ಜಿದಾರರ ತಾತನಾದ ಚಿಕ್ಕಬೋಡರಂಗಪ್ಪ ಬಿನ್ ಲೇಟ್ ಚಿಕ್ಕಣ್ಣ ರವರು 12-06-1965 ರಂದು ಮಧುಗಿರಿ ತಾಲ್ಲೂಕು, ಕಸಬಾ ಹೋಬಳಿ, ಮುದ್ದಯ್ಯನಪಾಳ್ಯ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 08/12/2025 ರಂದು ಬೆಳಿಗ್ಗೆ 11-00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು.ಇಲ್ಲವಾದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. 2025 ನೇ ವರ್ಷದ ನವೆಂಬರ್ ತಿಂಗಳ 11 ನೇ ದಿನ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ,ನ್ಯಾಯಾಲಯದ ಮೊಹರಿನೊಂದಿಗೆ,
ಶಿರಸ್ತೇದಾರರು
ಅಧಿಕ ಸಿವಿಲ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಜಿ.ಎನ್.ನರಸಿಂಹಮೂರ್ತಿ ಬಿ.ಎ.ಎಲ್.ಎಲ್.ಬಿ.
ವಕೀಲರು, ಮಧುಗಿರಿ.

IN THE COURT OF THE CIVIL JUDGE AND J.M.F.C. AT KORATAGERE
C.MIS.No.377/2025
Petitioners:- 1. Manjulamma w/o Doddachittaiah, aged about 50 years. r/o Mahalinganahatti, Bukkapattana post, C.N.Durga hobli, koratagere taluk. 2. Byramma w/o Kariyanna, aged about 48 years. r/o Kuruduveeranahalli, Gollarahatti, Kora hobli,Tumkuru taluk & dist.
V/S
Respondents:- The Registrar of birth and death's and The Tahasildar, Koratagere Koratgere taluk.
PUBLIC NOTIFICATION
The above named petitioners is filed petition for obtaion the death certificate of thes petitiners father Bagavantha SIddaiah s/o Kallaiah, died on 28-11-2003 and petitiones mother Chikkamma w/o Bagavantha Siddaiah, died on 12-10-2013 at Boraiahnahtti village, C.N.Durga hobli, koratagere taluk. is there any other legal representatives are here by summoned to appear before this court in person or by a pleader on:-17-12-2025 at 11-00 A.M. to answer the same, failing which the petition will be disposed off exparte.Given under my hand and the seal of the court on this day of 28-10-2025.
By order of the court
Sd/-, shirastedar
chivil judge (jr. Dn)
& J.M.F.C. court koratage.
Nattakallappa,
Advocate for petitioner.
Koratagere.

IN THE COURT OF THE CIVIL JUDGE & J.M.F.C. AT KORATAGERE
C.Mis No: 387/ 2025.
Petitioners: 1. Srinivasaiah.P.N S/o Late Nagarajappa, A/a 41 years. 2. HanumanthanaBhovi s/o Late GanganaBhovi, A/a 74 years.3. Papakka w/o Late Nagarajappa, A/a 56 years. All R/o Pemmedevarahalli, Kasaba hobli, Koratagere taluk.
V/S
Respondents: The Thasildar, The registrear, of birth and death, Koratagere taluk.
PUBLIC NOTIFICAION
Where as the petitioner have filed the above petition to obtain the death certificate of 1st petitioners Grand mother by name Yallamma w/o Late Ganganabhovi, died on 30-10-2014. at Koratagere taluk. Kasaba hobli, Pemmedevarahalli, It is hereby notify that whoever has interest or objection to obtain the death certificates of the petitioner grand mother may appear in person or through your advocate on; 03-12-2025 in the above case. Failing which the matter will be heard written mined in your absence
By order of the court
Sd/-,Shirastedar
Civil judge & J.M.F.C.court Koratagere.
Mallikarjunaiah
Advocate For petitioner.
Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS.No.392/2025
Petitioners:- 1. Siddagangaiah s/o Late Mallaiah, a/a 56 years. r/o Madavara village, Kasaba hobli, Koratagre taluk.
V/S
Respondents:- The Tahasildar, Registeare of brith and death, Koratgere taluk, Tumakur dist.
PUBLIC NOTIFICATION
Whereas the petitioner have filed the above petition to obtain the death certificate of the 1st petitioners mother by name Parvathamma w/o Mallaiah, died on 23-11-1986 Madavara, kasaba hobli, Koratagere taluk. If anybody has any objection or right with respect to the above said fact abd petition may filed objection in the above said case by personally or by counsel the case is posted on; 05-01-2026 at 11-00 a.m otherwise the said matter will be disposed accordance withg law. Given under my hand and the seal of the court on this 06-11-2025.
By order of the court
Sd/-, shirastedar
chivil judge (jr. Dn)
& J.M.F.C. court koratage.
B.H.Nagendrappa,
Advocate for petitioner.
Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS.No.370 /2025
Petitioners:- 1. Hanumaiah s/o Late Jatangappa, aged about 65 years. R/O S.Gollahalli villege, Kolala hobli, Koratagere taluk, Tumkuru dist.
V/S
Respondents:- The Tahasildahar birth & Death, Register koratagere, Koratgere taluk, Tumakuru dist.
PUBLIC NOTIFICATION
Whereas the petitioner have filed the above petition to obtain the death certificate of the petitioners sisters by Hanumakka w/o Late Ramaiah died on 14-07-2013 at Chikkapalya village, Holavahalli hobli, Koratagere taluk Tumkuru Dist & Hanumanthamma W/o Late Ramaiah died on 10-06-2013 at chunchenahalli villege, holavanahalli hobli, koratagere taluk, Tumkuru dist. It is hereby notify that whoever has interest or objection to obtain the death certificates of the petitioner sisters may appear in person or through your advocate on; 18-12-2025 in the above case. Failing which the matter will be heard and place in exparte.
By order of the court
Sd/-, shirastedar
chivil judge (jr. Dn)
& J.M.F.C. court koratage.
K.B.Anil
Anusha.K Yadav.
Advocate for petitioner.
Koratagere.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಹಾಸನ ಶಾಖೆ (05622) ಶ್ರೀಚರಣ ಕಾಂಪ್ಲೆಕ್ಸ್, ಸುವರ್ಣ ಹೋಟೆಲ್ ಹಿಂಭಾಗ, ಹಾಸನ-573201. E-mail: sbi.05622@sbi.co.in
ನಿಯಮ 8(1) ಸ್ವಾಧೀನದ ಸೂಚನೆ (ಸ್ಥಿರಾಸ್ಥಿಗಳಿಗಾಗಿ)
ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯುರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ.
ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರಿವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ಥಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.
• ಡಿಮ್ಯಾಂಡ್ ನೋಟಿಸ್‌ನ ದಿನಾಂಕ: 02.09.2025 • ಸ್ವಾಧೀನ ಪಡೆದುಕೊಂಡ ದಿನಾಂಕ: 10.11.2025
• ಒಟ್ಟು ಸಾಲದ ಮೊತ್ತ: ರೂ. 3,44,73,184/- (ಮೂರು ಕೋಟಿ ನಲವತ್ತನಾಲ್ಕು ಲಕ್ಷದ ಎಪ್ಪತ್ತಮೂರು ಸಾವಿರ ನೂರ ಎಂಭತ್ತನಾಲ್ಕು ರೂಪಾಯಿಗಳು ಮಾತ್ರ) ದಿನಾಂಕ 06-11-2025 ರವರಗೆ+ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
• ಸಾಲಗಾರರ ಹೆಸರು ಮತ್ತು ವಿಳಾಸ: ಮೆ: ಸಮೃದ್ಧಿ ಎಂಟರ್‌ಪ್ರೈಸಸ್, ನಂ. 49/ಎ, ನೆಲಅಂತಸ್ತು, ಅಶ್ವಬ್ರಹ್ಮ, ಬಿ.ಎಂ. ರಸ್ತೆ, ಸಿಕೆಎಸ್ ಶಾಲೆಯ ಬಳಿ, ಹಾಸನ-573201.
• ಪಾಲುದಾರರ ಹೆಸರು ಮತ್ತು ವಿಳಾಸ: 1) ನಾಗೇಂದ್ರ ಪ್ರಸಾದ್ ಡಿ.ಬಿ S/o ಭುಜಬಲರಾಜ್ ಡಿ.ಪಿ. 2) ದೀಪ್ತಿ ಪ್ರಸಾದ್ W/o ನಾಗೇಂದ್ರ ಪ್ರಸಾದ್ ಡಿ.ಬಿ. ಇಬ್ಬರ ವಿಳಾಸ: ನಂ. 49/ಎ, ನೆಲಅಂತಸ್ತು, ಅಶ್ವಬ್ರಹ್ಮ, ಬಿ.ಎಂ. ರಸ್ತೆ, ಸಿಕೆಎಸ್ ಶಾಲೆಯ ಬಳಿ, ಹಾಸನ-573201.
• ಜಾಮೀನುದಾರರ ಹೆಸರು ಮತ್ತು ವಿಳಾಸ: 1) ನಾಗೇಂದ್ರ ಪ್ರಸಾದ್ ಡಿ.ಬಿ S/o ಭುಜಬಲರಾಜ್ ಡಿ.ಪಿ., 2) ದೀಪ್ತಿ ಪ್ರಸಾದ್ W/o ನಾಗೇಂದ್ರ ಪ್ರಸಾದ್ ಡಿ.ಬಿ. 3) ಪ್ರತೀಕ್ ಜೈನ್ S/o ನಾಗೇಂದ್ರ ಪ್ರಸಾದ್ ಡಿ.ಬಿ. ಎಲ್ಲರ ವಿಳಾಸ: ನಂ. 49/ಎ, ನೆಲಅಂತಸ್ತು, ಅಶ್ವಬ್ರಹ್ಮ, ಬಿ.ಎಂ. ರಸ್ತೆ, ಸಿಕೆಎಸ್ ಶಾಲೆಯ ಬಳಿ, ಹಾಸನ-573201.
• ಅಡಮಾನವಿಟ್ಟ ಆಸ್ತಿಯ ವಿವರಗಳು: ಆಸ್ತಿ ಸಂಖ್ಯೆ 1: ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ವಸತಿ ಕಟ್ಟಡ ಆಸ್ತಿ ಹಳೆ ಖಾತ ನಂ. 1584, AR No. 234, PID No. 1-1-507-49A, ಪೂರ್ವದಿಂದ ಪಶ್ಚಿಮಕ್ಕೆ: 18.28 ಮೀ., ಉತ್ತರದಿಂದ ದಕ್ಷಿಣಕ್ಕೆ: 11.27 ಮೀ., ಒಟ್ಟು 206.01 ಚ.ಮೀ. ವಿಳಾಸ: ಭಾನು ಚಿತ್ರಮಂದಿರದ ಹಿಂಭಾಗ, ಅಡ್ಡ ರಸ್ತೆ, ಬಿ.ಎಂ. ರಸ್ತೆ, ಕರೀಗೌಡ ಕಾಲೋನಿ, ವಾರ್ಡ್ ನಂ. 01, ಹಾಸನ. ನಾಗೇಂದ್ರ ಪ್ರಸಾದ್ ಡಿ.ಬಿ. S/o ಭುಜಬಲರಾಜ್ ಡಿ.ಪಿ.ರವರ ಹೆಸರಿನಲ್ಲಿ ಪೂರ್ವಕ್ಕೆ: ಹೆಚ್.ಡಿ. ಭೀಮಯ್ಯ ಹಾಗೂ ಇತರರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮೂಡಲಗಿರಿಗೌಡರ ಆಸ್ತಿ, ದಕ್ಷಿಣಕ್ಕೆ: ಡಾ. ರಾಜಶೇಖರ್‌ರವರ ಆಸ್ತಿ. ಆಸ್ತಿ ಸಂಖ್ಯೆ 2: ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಆಸ್ತಿ AR No. 656, ಹಳೆ ಖಾತಾ ಆಸ್ತಿ 931/921, SAS No. 560, PID No. 24-1-146-16 ಪೂರ್ವದಿಂದ ಪಶ್ಚಿಮಕ್ಕೆ: 13.411227 ಮೀ., ಉತ್ತರದಿಂದ ದಕ್ಷಿಣಕ್ಕೆ: 18.897638 ಮೀ., ಒಟ್ಟು 253.4405 ಚ.ಮೀ., ವಿಳಾಸ: ವಾರ್ಡ್ ನಂ. 24, ಗಾಂಧಿ ಬಜಾರ್, ಹಾಸನ. ದೀಪ್ತಿ ಪ್ರಸಾದ್ W/o ನಾಗೇಂದ್ರ ಪ್ರಸಾದ್ ಡಿ.ಬಿ.ರವರ ಹೆಸರಿನಲ್ಲಿ ಪೂರ್ವಕ್ಕೆ: ನಾಗೇಂದ್ರ ಪ್ರಸಾದ್ ಡಿ.ಬಿರವರ ಆಸ್ತಿ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ನೆಹರು ರಸ್ತೆ. ಆಸ್ತಿ ಸಂಖ್ಯೆ 3: ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಆಸ್ತಿ AR No. 1042, ಹಳೆ ಖಾತ ಸಂಖ್ಯೆ 1046, PID No. 23-1-506-10A ಪೂರ್ವದಿಂದ ಪಶ್ಚಿಮಕ್ಕೆ: 1.828804 ಮೀ., ಉತ್ತರದಿಂದ ದಕ್ಷಿಣಕ್ಕೆ: 19.050038 ಮೀ. ಒಟ್ಟು 34.838625 ಚ.ಮೀ. ವಿಳಾಸ: ವಾರ್ಡ್ ನಂ. 23, ಗಾಂಧಿ ಬಜಾರ್, ಹಾಸನ. ದೀಪ್ತಿ ಪ್ರಸಾದ್ W/o ನಾಗೇಂದ್ರ ಪ್ರಸಾದ್ ಡಿ.ಬಿ.ರವರ ಹೆಸರಿನಲ್ಲಿ ಪೂರ್ವಕ್ಕೆ: ರಾಜುರವರ ಆಸ್ತಿ, ಪಶ್ಚಿಮಕ್ಕೆ: ನಾಗೇಂದ್ರ ಪ್ರಸಾದ್ ಡಿ.ಬಿ.ರವರ ಆಸ್ತಿ, ಉತ್ತರಕ್ಕೆ: ದೀಪ್ತಿ ಪ್ರಸಾದ್‌ರವರ ಆಸ್ತಿ, ದಕ್ಷಿಣಕ್ಕೆ: ನೆಹರು ರಸ್ತೆ.
ದಿನಾಂಕ: 13.11.2025 ಸಹಿ/- ಅಧಿಕೃತ ಅಧಿಕಾರಿ
ಸ್ಥಳ: ಹಾಸನ ಭಾರತೀಯ ಸ್ಟೇಟ್ ಬ್ಯಾಂಕ್, (SARFAESI ಕಾಯಿದೆ-2002 ಅಡಿಯಲ್ಲಿ)

ಸಮಾಚಾರ ಸಣ್ಣದಲ್ಲ

ಉಚಿತ ಬೈಕ್ ರಿಪೇರಿ ಸರ್ವಿಸಿಂಗ್ ತರಬೇತಿ

ಚಿಕ್ಕಬಳ್ಳಾಪುರ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು ಸೊಣ್ಣಹಳ್ಳಿಪುರದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನ. 20ರಿಂದ 30 ದಿನಗಳ ಕಾಲ ಪುರುಷರಿಗಾಗಿ ದ್ವಿಚಕ್ರ ವಾಹನ ರಿಪೇರಿ ಮತ್ತು ಸರ್ವೀಸಿಂಗ್ ಉಚಿತ ತರಬೇತಿ ಶಿಬಿರವನ್ನು ಏರ್ಪಡಿಸಿದೆ. ಆಸಕ್ತರು ನ.20ರ ಗುರುವಾರ ಬೆಳಿಗ್ಗೆ 10.00 ಘಂಟೆಗೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಸೊಣ್ಣಹಳ್ಳಿಪುರ, ಹಸಿಗಾಳ (ಅಂಚೆ), ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನಡೆಯುವ ತರಬೇತಿಗೆ ವಿದ್ಯಾರ್ಹತೆಗಳೊಂದಿಗೆ ಮತ್ತು ವಿಳಾಸ ದಾಖಲಾತಿಗಳೊಂದಿಗೆ ಹಾಜರಾಗಬೇಕಾಗಿ ಈ ಮೂಲಕ ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 8970476050 ಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸಂಸ್ಥೆಯ ನಿರ್ದೇಶಕರು ತಿಳಿಸಿದ್ದಾರೆ.

ಸಚಿವರ ರಾಜೀನಾಮೆಗೆ ರೈತಸಂಘ ಆಗ್ರಹ

ರಾಮನಗರ: ಪ್ರಾಣಿ ಮತ್ತು ಮಾನವ ಸಂಘರ್ಷವನ್ನು ತಡೆಯುವಲ್ಲಿ ವಿಫಲರಾಗಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಅವರಿಗೆ ಮನವಿ ಸಲ್ಲಿಸಿದರು.
ಜಿಲ್ಲೆಯ ಕನಕಪುರ ತಾಲ್ಲೂಕಿನ ಕುನೂರು ಬಳಿ ನ.7ರಂದು ಎರಡು ಕಾಡಾನೆಗಳು ಹಾರೋಬೆಲೆ ಡ್ಯಾಂ ಹಿನ್ನೀರಿನಲ್ಲಿ ಮುಳುಗಿ ದುರಂತ ಸಾವನ್ನಪ್ಪಿದ್ದರೂ ಈವರೆಗೆ ಅರಣ್ಯ ಸಚಿವರು ಸ್ಥಳಕ್ಕೆ ಭೇಟಿ ನೀಡಿಲ್ಲ. ಕೂಡಲೇ ಅರಣ್ಯ ಸಚಿವರು ಕಾಡಾನೆಗಳ ಸಾವಿನ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ. ಮಲ್ಲಯ್ಯ ಮಾತನಾಡಿ ಎರಡು ಕಾಡಾನೆಗಳ ಸಾವಿಗೆ ಅರಣ್ಯ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿತನ ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುಮಾರಸ್ವಾಮಿ ಮಾತನಾಡಿ ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ರೈತ ಸಂಘದ ರಾಜ್ಯ ಸಂಚಾಲಕ ಚೀಲೂರು ಮುನಿರಾಜು ಮಾತನಾಡಿ, ಜಿಲ್ಲೆಯಲ್ಲಿ ಅಕ್ರಮ ಹೋಂ ಸ್ಟೆಗಳು, ಫಾರ್ಮ್ ಹೌಸ್ ಗಳು ನಿರ್ಮಾಣವಾಗಿದ್ದು, ಹೆಚ್ಚು ಜನರ ಓಡಾಟದಿಂದ ಕಾಡು ಪ್ರಾಣಿಗಳಿಗೆ ತೊಂದರೆಯಾಗುತ್ತಿದೆ. ಇವುಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ರೈತ ಸಂಘದ ಪದಾಧಿಕಾರಿಗಳಾದ ವಿಜಯ್ ಕುಮಾರ್,ತಿಮ್ಮೇಗೌಡ, ವೆಂಕಟೇಶ್, ಕುಮಾರ್,ರವಿ, ಶಂಭುಗೌಡ, ಕಿರಣ್ ಸಾಗರ್ ಮತ್ತಿತರರು ಇದ್ದರು.

ಆಟೋ ಚಾಲಕರಿಂದ ಕನ್ನಡ ರಾಜ್ಯೋತ್ಸವ

ಶಿರಾ: ಕನ್ನಡ ಅನ್ನದ ಭಾಷೆ, ನಮ್ಮ ಅಸ್ಮಿತೆ, ನಮ್ಮ ಹೃದಯ ನಾವೆಲ್ಲರೂ ಕನ್ನಡದಲ್ಲಿಯೇ ವ್ಯವಹರಿಸಿ ಜೀವನ ನಡೆಸುವ ಭಾಷೆ. ಕನ್ನಡಿಗರು ಹೋರಾಟ ಮಾಡಬೇಡಿ. ಕನ್ನಡ ಮಾತನಾಡಿ ಸಾಕು. ಕನ್ನಡ ಅದಾಗಿಯೇ ಬೆಳೆಯುತ್ತದೆ ಎಂದು ಕನಕ ಬ್ಯಾಂಕ್ ನಿರ್ದೇಶಕರಾದ ಕಡೆಮನೆ ಎಸ್ ರವಿಕುಮಾರ್ ಹೇಳಿದರು. ಅವರು ನಗರದ ಅಂಬೇಡ್ಕರ್‌ಸರ್ಕಲ್ನಲ್ಲಿ ಚಲನಚಿತ್ರ ನಟ ದಿವಂಗತ ಶಂಕರ್‌ನಾಗ್ ಅವರ ಹುಟ್ಟು ಹಬ್ಬದ ಪ್ರಯುಕ್ತ ಅಂಬೇಡ್ಕರ್‌ಸರ್ಕಲ್ ಆಟೋ ಚಾಲಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 70ನೇ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದರು. ಆಡಳಿತದಲ್ಲಿ ಪ್ರಧಾನವಾಗಿ ಬೆಳೆಸಿದಾಗ ಮಾತ್ರ ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಉಳಿಯಲು-ಬೆಳೆಯಲು ಸಾಧ್ಯ ಎಂದರು. ನಗರಸಭಾ ಸದಸ್ಯರಾದ ಎಸ್.ಎಲ್. ರಂಗನಾಥ್ ಮಾತನಾಡಿ,ಆಟೋ ಚಾಲಕರಿಗೆ ನಗರಸಭೆಯಿಂದ ನಿವೇಶನ ನೀಡಬೇಕು ಎಂದು ಒತ್ತಾಯಿಸುವುದಾಗಿ ತಿಳಿಸಿದರು. ಯುವ ಮುಖಂಡ ಬರಗೂರು ಯುವರಾಜ್ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪಡೆದ ಹರ್ಷದ್ ಅವರನ್ನು ಅಭಿನಂದಿಸಲಾಯಿತು. ನವೋದಯ ಯುವ ವೇದಿಕೆ ಅಧ್ಯಕ್ಷ ಜಯರಾಮಕೃಷ್ಣ, ಸೋಮಶೇಖರ್,ಜಗದೀಶ್, ರಂಗನಾಥ್, ಯಲ್ಲಪ್ಪ, ಶ್ರೀಧರ, ಹರೀಶ್, ಭೂತೇಶ್, ರಂಗ, ರಂಗನಾಥ್ ಜಂಗ್ಲಿ, ಪುನೀತ್, ಗುಡ್ಡದಹಟ್ಟಿ ರಂಗಪ್ಪ, ಅಭಿ, ಸಿದ್ದಪ್ಪ, ಮಾರೇಶ್, ಇದ್ದರು.

ಸಂಸ್ಥೆಗಳಿಂದ ಅರ್ಜಿ ಆಹ್ವಾನ

ತುಮಕೂರು: ವಿಕಲಚೇತನರ ಹಾಗೂ ಹಿರಿಯನಾಗರಿಕರ ಸಬಲೀಕರಣ ಇಲಾಖೆಯಡಿ ಜಿಲ್ಲೆಯಲ್ಲಿ ಅಂಗವಿಕಲರ ಪುನರ್ವಸತಿ ಕೇಂದ್ರ(ಡಿ.ಡಿ.ಆರ್.ಸಿ) ವನ್ನು ಆರಂಭಿಸಲು ಭಾರತೀಯ ರೆಡ್ಕ್ರಾಸ್ ಸೊಸೈಟಿ ಅಥವಾ ಜಿಲ್ಲಾ ವ್ಯಾಪ್ತಿಯಲ್ಲಿ ವಿಕಲಚೇತನರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ಅಥವಾ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ಮಹಾವಿದ್ಯಾಲಯಗಳಿಂದ ಪ್ರಸ್ತಾವನೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ನವೆಂಬರ್29ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯನಾಗರಿಕರ ಕಲ್ಯಾಣಾಧಿಕಾರಿ ಚಿದಾನಂದಮೂರ್ತಿ ಬಿ.ಎಸ್. ತಿಳಿಸಿದ್ದಾರೆ.

{ಕೆ.ಎನ್.ರಾಜಣ್ಣ } ಶಾಸಕ

ರಾಜಕಾರಣ ಎಂಬುದು ನಿಂತ ನೀರಲ್ಲ. ಅದು ಯಾವಾಗಲು ಚಲನಾಶೀಲ. ನಮ್ಮ ರಾಜ್ಯದಲ್ಲಿ ಬದಲಾವಣೆ ಆಗು ಹೋಗುಗಳು ಆಗ್ತವೆ. ಬೇರೆ ರಾಜ್ಯದಲ್ಲೂ ಆಗುವುದಿಲ್ಲ ಅಂತೇನಿಲ್ಲ. ನಾನು ಹೈಕಮಾಂಡ್ ಮುಖಂಡರಿಗೆ ಪತ್ರ ಬರೆದಿದ್ದೇನೆ. ಬಿಹಾರ್ ಎಲೆಕ್ಷನ್ ನಲ್ಲಿ ಬ್ಯುಸಿಯಾಗಿದ್ದಾರೆ. ಅವರು ನಾಳೆಯೇ ಬನ್ನಿ ಅಂದ್ರೆ, ನಾಳೆನೇ ಹೋಗ್ತೀನಿ.

ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಕೈಜೋಡಿಸಲು ಸಚಿವ ಡಾ.ಜಿ.ಪರಮೇಶ್ವರ್‌ಮನವಿ

ಮಕ್ಕಳ ಪೋಷಕರಿಗೆ ಸಚಿವರ ಪತ್ರ

ತುಮಕೂರು: ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಮುಂದಾಗಿರುವ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ್,ವಿದ್ಯಾರ್ಥಿಗಳ ಪೋಷಕರಿಗೆ ಪತ್ರ ಬರೆದು ಮಕ್ಕಳ

ಮೌಲ್ಯಾಧಾರಿತವಾದ ಉಜ್ವಲ ಭವಿಷ್ಯಕ್ಕಾಗಿ ನಾವೆಲ್ಲರು ಒಟ್ಟಾಗಿ ಶ್ರಮಿಸೋಣ ಬನ್ನಿ ಎಂದು ಪೋಷಕರಿಗೆ ಮನವಿ ಮಾಡಿದ್ದಾರೆ.

ತುಮಕೂರು ಮತ್ತು ಮಧುಗಿರಿ ಎರಡೂ ಶೈಕ್ಷಣಿಕ ಜಿಲ್ಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ಫಲಿತಾಂಶ ಕುಸಿತಕಾಣುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸಚಿವ ಡಾ.ಜಿ.ಪರಮೇಶ್ವರ್ ಕಳೆದ ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ, ಶಿಕ್ಷಕರಿಗೆ ಎಚ್ಚರಿಕೆ ನೀಡಿದ್ದರು. ಮುಂದುವರೆದು ಪೋಷಕರಿಗೂ ಅವರ ಜವಾಬ್ದಾರಿ ಮನಗಾಣಿಸಿ, ಫಲಿತಾಂಶ ಸುಧಾರಣೆಗೆ ಸಹಕರಿಸುವಂತೆ ಕೋರಿ ಎರಡೂ ಶೈಕ್ಷಣಿಕ ಜಿಲ್ಲೆಯ ಪ್ರತಿಯೊಬ್ಬ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಪೋಷಕರಿಗೆ ಪತ್ರ ಬರೆದಿದ್ದಾರೆ.

ಪತ್ರದ ಸಾರಾಂಶ ಹೀಗಿದೆ. ಆತ್ಮೀಯ ಪೋಷಕ ಬಂಧುಗಳೇ, ನಿಮ್ಮ ಮಗು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಮಗುವು ತನ್ನ ಜೀವನದ ಕನಸಿನ ಯೋಜನೆ ರೂಪಿಸಿಕೊಳ್ಳುವ ಹಂತಗಳಲ್ಲಿ 10ನೇ ತರಗತಿ ಪ್ರಮುಖವಾಗಿದೆ. 10ನೇ ತರಗತಿ ತೇರ್ಗಡೆಯು ಭವಿಷ್ಯದ ಹೆಬ್ಬಾಗಿಲು ಆಗಿರುತ್ತದೆ.

ಈ ದಿನಗಳಲ್ಲಿ ನಾವು ಶಾಲೆಗೆ ತೆರಳಿ ನಮ್ಮ ಮಗುವಿನ ಕಲಿಕೆ, ಸಮಸ್ಯೆ, ಮುಂತಾದ ಅಂಶಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿ, ಅವರು ನೀಡುವಂತಹ ಸಲಹೆಗಳನ್ನು ಪರಿಗಣಿಸಿ ಅಳವಡಿಸಿಕೊಳ್ಳಬೇಕಿದೆ. ಶಾಲೆಯಲ್ಲಿ ಮಗುವು ಕಳೆಯುವ ಸಮಯ ಕೇವಲ 8 ಗಂಟೆ. 16 ಗಂಟೆ ನಿಮ್ಮೊಂದಿಗೆ ಇರುತ್ತದೆ. ಇದರಿಂದ ಶಾಲೆಯಲ್ಲಿ ಶಿಕ್ಷಕರು ಕಲಿಸಿದ ಪಾಠ ಪ್ರವಚನ ಅಭ್ಯಾಸ ಮಾಡಿಸುವುದು ಪೋಷಕರ ಜವಾಬ್ದಾರಿ ಆಗಿರುತ್ತದೆಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪರೀಕ್ಷೆ ಹತ್ತಿರವಿರುವಾಗ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ಪ್ರೋತ್ಸಾಹಿಸುವುದು ಅತ್ಯಗತ್ಯ ಎಂದು ಪತ್ರದಲ್ಲಿ ವಿವರಿಸಿ , ಫಲಿತಾಂಶ ಸುಧಾರಣೆಗೆ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಶಾಲೆಗಳಲ್ಲಿ ಪುನರಾವರ್ತನೆ ಮತ್ತು ಪುನರ್ಮನನ ತರಗತಿಗಳು ನಡೆಯುತ್ತಿವೆ. ಅಭ್ಯಾಸ, ಪರೀಕ್ಷೆ, ಹಲವು ಕಾರ್ಯತಂತ್ರ ರೂಪಿಸಲಾಗಿದೆ. ಇದರಿಂದ ಮಕ್ಕಳು ಪರೀಕ್ಷೆಗೆ ಹಬ್ಬದಂತೆ ಸಿದ್ಧರಾಗುತ್ತಿದ್ದಾರೆ. ಪರೀಕ್ಷೆ ಹತ್ತಿರವಿರುವಾಗ ಮಕ್ಕಳ ಮಾನಸಿಕ ಮತ್ತು ದೈಹಿಕ ಆರೋಗ್ಯ ಬಹಳ ಮುಖ್ಯ. ಉತ್ತಮ ಆಹಾರ, ಒಳ್ಳೆಯ ನಿದ್ದೆ, ಮತ್ತು ಸಂತೋಷದಿಂದ ಅಧ್ಯಯನ ಮಾಡುವುದು ಮುಖ್ಯ. ಹೀಗೆ ಪರೀಕ್ಷೆಗೆ ಮಕ್ಕಳನ್ನು ಸಜ್ಜುಗೊಳಿಸಬೇಕು ಎಂದು ಪೋಷಕರ ಪಾತ್ರದ ಬಗ್ಗೆ ಪತ್ರದಲ್ಲಿ ಗಮನಸೆಳೆದಿದ್ದಾರೆ.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಜೀವನದ ಪ್ರಮುಖ ಘಟ್ಟ. ಪರೀಕ್ಷೆಯಲ್ಲಿ ಫೇಲ್ ಆದರೆ ಅವರನ್ನು ಕೂಲಿಗೆ, ಮಣ್ಣು ಹೊರಲು ಹಾಕುತ್ತಾರೆ, ಹೀಗಾಗಬಾರದು. ಮಕ್ಕಳ ಭವಿಷ್ಯ ರೂಪಿಸುವುದು ನಮ್ಮೆಲ್ಲರ ಹೊಣೆ. ಮಕ್ಕಳ ಕಲಿಕೆ, ಉತ್ತಮ ಫಲಿತಾಂಶಕ್ಕೆ ಪೋಷಕರ ಸಹಕಾರ ಬಹಳ ಮುಖ್ಯ. ಈ ದೃಷ್ಟಿಯಲ್ಲಿ ಪೋಷಕರಿಗೆ ಪ್ರೀತಿಯಿಂದ ಪತ್ರ ಬರೆದಿದ್ದೇನೆ ಎಂದು ಸಚಿವ ಪರಮೇಶ್ವರ್ ತಿಳಿಸಿದ್ದಾರೆ.

ಗಾರ್ಮೆಂಟ್ಸ್ ನೌಕರರ ಪ್ರತಿಭಟನೆ

ತುಮಕೂರು: ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಸಿಕೊಂಡು ಕೂಲಿ ಕೊಡದೆ ಪರಾರಿಯಾದ ಮಾಲೀಕನ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಕಾರ್ಮಿಕರು ಜನವಾದಿ ಮಹಿಳಾ ಸಂಘಟನೆ ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಕ್ಯಾತ್ಸಂದ್ರದ ಆರ್.ವಿ.ಲೈಫ್ ಸ್ಟೈಲ್ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ 3-4 ತಿಂಗಳಿನಿಂದ ಕೂಲಿ ನೀಡಿಲ್ಲ. ಅವರು ನೀಡಿದ್ದ ಚೆಕ್ ಬೌನ್ಸ್ ಆಗಿದೆ. ಈಗ ಮಾಲೀಕರು ಕಾರ್ಖಾನೆ ಮುಚ್ಚಿಕೊಂಡು ಪರಾರಿಯಾಗಿದ್ದಾರೆ. 25-30 ಮಹಿಳಾ ಕಾರ್ಮಿಕರಿಗೆ ವೇತನ ಕೊಟ್ಟಿಲ್ಲ'' ಎಂದು ಜನವಾದಿ ಮಹಿಳಾ ಸಂಘಟನೆ ಜಿಲ್ಲಾ ಸಂಚಾಲಕಿ ಟಿ.ಆರ್.ಕಲ್ಪನಾ ಹೇಳಿದರು.

ಸುಮಾರು 9 ತಿಂಗಳು ಕಾಲ ಕ್ಯಾತ್ಸಂದ್ರ, ಬಡ್ಡಿಹಳ್ಳಿ ಭಾಗದಲ್ಲಿ ಉತ್ಪಾದನಾ ಚಟುವಟಿಕೆ ನಡೆಸಿದ್ದರು.

ಭಾನುವಾರ ಸಹ ರಜೆ ನೀಡದೆ ಕೆಲಸ ಮಾಡಿಸಿಕೊಂಡಿದ್ದರು. ಕಾರ್ಮಿಕರಿಗೆ ಬರಬೇಕಾದ ಕೂಲಿ ಕೊಡಿಸಿ, ಅವರ ಬದುಕಿಗೆ ನೆರವಾಗಬೇಕು ಎಂದು ಒತ್ತಾಯಿಸಿ ಕಾರ್ಮಿಕ ಅಧಿಕಾರಿ, ಡಿವೈಎಸ್ಪಿ, ಹೆಚ್ಚುವರಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಸಿಐಟಿಯು ಜಿಲ್ಲಾ ಮಂಡಳಿಯ ಸದಸ್ಯ ಸುಜಿತ್ ನಾಯಕ ಇತರರು ಪಾಲ್ಗೊಂಡಿದ್ದರು.

ಗಾರ್ಮೆಂಟ್ಸ್ ಮಾಲೀಕನ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಜನವಾದಿ ಮಹಿಳಾ ಸಂಘಟನೆಯಿಂದ ಪ್ರತಿಭಟನೆ ನಡೆಯಿತು.

ಸರ್ವ ದಾರ್ಶನಿಕರ ಜಯಂತಿ ನ.26ರಂದು

ಚಿಕ್ಕನಾಯಕನಹಳ್ಳಿ: ಸಂವಿಧಾನ ಸಮರ್ಪಣಾ ದಿನದ ಸಂದರ್ಭದಲ್ಲಿ 53 ಸರ್ವದಾರ್ಶನಿಕರ ಜಯಂತಿಯನ್ನು ನ. 26ರಂದು ಒಂದೇ ವೇದಿಕೆಯಲ್ಲಿ ಆಚರಿಸಲು ತೀರ್ಮಾನಿಸಿರುವುದು, ಎಲ್ಲಾ ಸಮುದಾಯದವರನ್ನು ಒಳಗೊಂಡ ಬಸವಣ್ಣನವರ ಅನುಭವ ಮಂಟಪದ ಕಲ್ಪನೆಯಾಗಿದೆ ಎಂದು ಶಾಸಕ ಸಿ.ಬಿ. ಸುರೇಶಬಾಬು ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತಸೌಧದಲ್ಲಿ ಮಂಗಳವಾರ ನಡೆದ ಸರ್ವ ದಾರ್ಶನಿಕರ ಜಯಂತಿ ಆಚರಣಾ ಸಮಿತಿಯ ಕಾರ್ಯದರ್ಶಿಗಳು ಹಾಗೂ ವಿವಿಧ ಸಮುದಾಯಗಳ ಮುಖಂಡರ ಸಭೆಯಲ್ಲಿ ಮಾತನಾಡಿದರು.

ನಾಡು ಕಂಡ 53 ಮಹನೀಯರ ಜಯಂತಿಗಳನ್ನು ಒಟ್ಟು 33 ಸಮುದಾಯದವರೊಂದಿಗೆ ಸೇರಿ ಒಂದೇ ವೇದಿಕೆಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ.

ನ.26ರಂದು ಎಲ್ಲಾ ಮಹನೀಯರ ಭಾವಚಿತ್ರಗಳ ಮೆರವಣಿಗೆಯೊಂದಿಗೆ ಸಿದ್ದಗಂಗಾ ಮಠದ ಶ್ರೀಗಳ ದಿವ್ಯಸಾನಿಧ್ಯದಲ್ಲಿಎಲ್ಲಾ ಸಮುದಾಯಗಳ ಮಠಾದೀಶರುಗಳು ಮಂತ್ರಿಗಳ

ಚಿಕ್ಕನಾಯಕನಹಳ್ಳಿ ತಾಲೂಕು ಆಡಳಿತ ಸೌಧದಲ್ಲಿ ಸರ್ವ ದಾರ್ಶನಿಕರ ಜಯಂತಿ ಕುರಿತು ಪೂರ್ವಭಾವೀ ಸಭೆ ನಡೆಯಿತು.

ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮ ಪಕ್ಷಾತೀತವಾಗಿ, ರಾಜಕೀಯೇತರವಾಗಿ, ಜಾತ್ಯಾತೀತವಾಗಿ ನಡೆಯಲಿದ್ದು ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಶಾಸಕರು ಮನವಿ ಮಾಡಿದರು.

ಸಭೆಯಲ್ಲಿ ದೇವಾಂಗ ಸಮಾಜದ ರಂಗನಾಥ್, ಉಪ್ಪಾರ ಸಮಾಜದ ಹನುಂತಪ್ಪ, ಬಲಿಜ ಸಮಾಜದ ಚಂದ್ರಶೇಖರ್,ನಿವೃತ್ತ ತಹಸೀಲ್ದಾರ್ ಲಕ್ಷ್ಮಣಪ್ಪ, ದಲಿತ ಮುಖಂಡ ತೀರ್ಥಪುರಕುಮಾರ್,ವೈಷ್ಣವ ಸಮಾಜದ ಶ್ರೀನಿವಾಸ್, ಸೇರಿದಂತೆ ಇತರರು ಮಾತನಾಡಿದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್‌ಪುರಂದರ ಕೆ, ಇಒ ದೊಡ್ಡಸಿದ್ದಯ್ಯ, ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿಂಗದಹಳ್ಳಿ ರಾಜ್ಕುಮಾರ್,ಮಾಜಿ ಜಿ.ಪಂ. ಸದಸ್ಯರುಗಳಾದ ರಾಮಚಂದ್ರಯ್ಯ, ಮಂಜುಳಮ್ಮ, ಲೋಹಿತಾಬಾಯಿ, ಬಿಇಒ ಕಾಂತರಾಜು ಇದ್ದರು.

ಬಾಂಬ್ ಸ್ಫೋಟ: ಈ 3 ತಿಂಗಳಲ್ಲೇ ಹೆಚ್ಚು

ತುಮಕೂರು: ದೆಹಲಿಯಲ್ಲಿ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಆಗಿರುವಂತಹ ಬಾಂಬ್ ಬ್ಲಾಸ್ಟ್‌ಗಳ ಬಗ್ಗೆ ಹೆಚ್ಚಾಗಿ ವರ್ಷದ ಸೆಪ್ಟೆಂಬರ್‌ಮತ್ತು ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ಹೆಚ್ಚಾಗಿ ಸ್ಫೋಟ ಆಗಿವೆ ಎಂದು ಮಾಜಿ ಸಚಿವ ರಾಜಣ್ಣ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಈ ಬಾರಿಯ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಬಹಳಷ್ಟು ಜನ ಸತ್ತು ಹೋಗಿದ್ದಾರೆ ಕೆಲ ಬಾರಿ ಕೆಲವು ಬಾರಿ ಕಡಿಮೆ ಜನ ಸತ್ತಿದ್ದಾರೆ.ನಿರಂತರವಾಗಿ ನಡೆಯುವ ಒಂದು ವ್ಯವಸ್ಥಿತ ಸಂಚು ಎಂದರು.

ರಾಜಕೀಯ ಬದಲಾವಣೆ: ರಾಜಕಾರಣ ಎಂಬುದು ನಿಂತ ನೀರಲ್ಲ. ಅದು ಯಾವಾಗಲು ಚಲನಾಶೀಲತೆ ಹೊಂದಿರುವಂತಹದ್ದು. ಆ ಚಲನಾಶೀಲತೆ ಹೊಂದಿರು ತಕ್ಕಂತೆ, ನಮ್ಮ ರಾಜ್ಯದಲ್ಲಿ ಬದಲಾವಣೆಗಳು ಆಗ್ತವೆ. ಬೇರೆ ರಾಜ್ಯದಲ್ಲೂ ಆಗುವುದಿಲ್ಲ ಅಂತೇನಿಲ್ಲಎಂದರು.

ನಾನು ಹೈಕಮಾಂಡ್ ಮುಖಂಡರಿಗೆ ಪತ್ರ ಬರೆದಿದ್ದೇನೆ. ಇವತ್ತು ನಾಳೆ ಕೂಡ ಪತ್ರ ಬರೀತೀನಿ. ಅವಕಾಶ ಕೇಳಿ ಪತ್ರ ಬರೀತೀನಿ. ಅವರು ಬಿಹಾರ್‌ಎಲೆಕ್ಷನ್ ನಲ್ಲಿ ಬ್ಯುಸಿಯಾಗಿದ್ದಾರೆ ಹಾಗಾಗಿ ಅವಕಾಶ ಕೊಟ್ಟಿಲ್ಲ. ಅವರು ಸಮಯ ಕೊಟ್ಟು ನಾಳೆ ಬಂದ್ರಿ, ಅಂದ್ರೆ, ನಾಳೆನೇ ಹೋಗ್ತೀನಿ. ಅವರು ಯಾವಾಗ ಸಮಯ ಕೊಡ್ತಾರೋ ಅವಾಗ ದೆಹಲಿಗೆ ಹೋಗ್ತೀನಿ ಎಂದರು.

ನಾನು ಹಿಂದೆ ನಡೆದ ಘಟನೆ ಬಗ್ಗೆ ಸಂಪೂರ್ಣವಾದ ವಿವರವುಳ್ಳ ಪತ್ರವನ್ನು ಕಳಿಸಿದ್ದೇನೆ.ಮೇಲ್ ಮೂಲಕ ಮತ್ತು ಹಾರ್ಡ್ ಕಾಪಿಯನ್ನು ಕೂಡ ಕಳಿಸಿದ್ದೇನೆ.ಈಗ ನಾನು ಅವರನ್ನು ಭೇಟಿ ಮಾಡೋದಕ್ಕೆ ಸಮಯ ಕೇಳಿದ್ದೇನೆ ನಾನು ಕೇಳಿರೋದು ಯಾವುದೇ ಮಂತ್ರಿ ಕೆಲಸ ಕೊಡಿ ಅಂತ ಅಲ್ಲ. ಕೇಂದ್ರದಲ್ಲಿ ಏನೋ ಒಂದು ತಪ್ಪು ಅಭಿಪ್ರಾಯ ಮೂಡಿದೆ ಅದನ್ನ ಕ್ಲಿಯರ್ ಮಾಡ್ಲಿಕ್ಕೆ ಸಮಯ ಕೇಳಿದ್ದೇನೆ ಬಂದಿಲ್ಲ ಎಂದರು.

ಇಂದಿರಾ ಕೊಂದವರು ಒಳಗಿನವರೇ : ವಿಧಾನಸೌಧದಲ್ಲಿ ನಕ್ಸಲರು ಇದ್ದಾರೆ ಎಂಬ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಮಾತನಾಡಿ, ಮಾವಿನ ಹಣ್ಣಿನಲ್ಲಿ ಗೊತ್ತಿಲ್ದೆ ಒಳಗಡೆ ಹುಳ ಸೇರಿಕೊಂಡು ಗೊತ್ತಾಗೋದಿಲ್ಲ. ನಕ್ಸಲ್ ಟೆರರಿಸ್ಟ್‌ಗಳೇ ಇರಲಿ, ಯಾವಾಗ ಎಲ್ಲಿ ಸೇರ್ಕೊ ಳ್ಳುತ್ತಾರೋ ಗೊತ್ತಾಗೋದಿಲ್ಲ. ರಾಜಕಾರಣಕೋಸ್ಕರ ಅವರ ಆಫೀಸಲ್ಲೇ ಇದ್ದಾರೆ ಅಂತ ನಾವು ಹೇಳಬಹುದು. ನಕ್ಸಲರು ಮತ್ತು ಟೆರರಿಸ್ಟ್ ಗಳು ನಮ್ಮೆಲ್ಲರಿಗಿಂತ ಬುದ್ದಿವಂತರು ಇರುತ್ತಾರೆ. ಅವರು ಸೇರ್ಬೇಕು ಅಂತ ಬಂದರೆ ಯಾವ ರೀತಿ ಬೇಕಾದರೂ ಸೇರಿಕೊಳ್ಳುತ್ತಾರೆ. ಇಂದಿರಾಗಾಂಧಿಯನ್ನ ಕೊಂದು ಹಾಕಿದವರು ಒಳಗಡೆ ಇದ್ದವರೆ.ಹೊರಗಡೆಯಿಂದ ಬಂದೇನು ಕೊಲೆ ಮಾಡ್ಲಿಲ್ಲ ಎಂದರು.

ತಂತ್ರಜ್ಞಾನದಿಂದ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ

ತುಮಕೂರು: ವಿಜ್ಞಾನ, ತಂತ್ರಜ್ಞಾನದಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿದ್ದು, ಅಂತರಜಾಲದಲ್ಲಿ ದೊರೆಯುವ ಮಾಹಿತಿಯನ್ನು ಜ್ಞಾನವಾಗಿ ಪರಿವರ್ತಿಸುವ ಗುರುತರ ಜವಾಬ್ದಾರಿ ಮತ್ತು ಸವಾಲು ಪ್ರತಿಯೊಬ್ಬರ ಶಿಕ್ಷಕರ ಮೇಲಿದೆ ಎಂದು ಶಾಸಕ ಜಿ.ಬಿ.ಜೋತಿಗಣೇಶ್ ತಿಳಿಸಿದರು.

ನಗರದ ಶ್ರೀ ಸಿದ್ದಗಂಗಾ ಕಲಾ,ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನ ಎನ್.ಸಿ.ಸಿ., ಎನ್.ಎಸ್.ಎಸ್ ,ಕ್ರೀಡೆ,ಸಾಂಸ್ಕೃತಿಕ ಮತ್ತು ರೆಡ್ಕ್ರಾಸ್ ಚಟುವಟಿಕೆಗಳ ''ಅಭಿವ್ಯಕ್ತಿ'' ಗೆ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳು ಸಹ ಅಂತರಜಾಲದ ಮಾಹಿತಿಯನ್ನು ತಮ್ಮ ಬೌದ್ಧಿಕ ಬೆಳವಣಿಗೆಗೆ ಪೂರಕವಾಗಿ ಬಳಕೆ ಮಾಡಿಕೊಳ್ಳಬೇಕಿದೆ ಎಂದರು.

ಅಭಿವ್ಯಕ್ತಿ ಸಾಂಸ್ಕೃತಿಕ ಸ್ಪರ್ಧೆಗಳ ಕರಪತ್ರ ಬಿಡುಗಡೆ ಮಾಡಿ ಮಾತನಾಡಿದ ಹಂಪಿ ಕನ್ನಡ ವಿವಿಯ ಕುಲಪತಿ ಪ್ರೊ.ಡಿ.ವಿ. ಪರಮಶಿವಮೂರ್ತಿ,ವಿದ್ಯಾರ್ಥಿಗಳಿಗೆ ಪರೀಕ್ಷೆ ಒತ್ತಡದಿಂದಾಗಿ ಭಾವನೆಗಳನ್ನು ವ್ಯಕ್ತಿಪಡಿಸಲು ಸಮಯವೇ ಇಲ್ಲದಂತಾಗಿದೆ. ಸಂಬಂಧಗಳೇ ಬೇಡದ ಭಾವನ ರಹಿತ ಜೀವನ ಇಂದಿನ ಯುವ ಸಮೂಹದಲ್ಲಿ ಕಂಡು ಬರುತ್ತಿದೆ. ದಯೆ, ಕರುಣೆ, ಪ್ರೀತಿ, ಮಾನವೀಯತೆ ಮರೆಯಾಗುತ್ತಿದ್ದು,

ನಗರದ ಶ್ರೀ ಸಿದ್ದಗಂಗಾ ಪದವಿ ಕಾಲೇಜಿನ ,ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಚಾಲನೆ ನೀಡಿದರು.

ಇದು ನಿಜವಾದ ಜೀವನವಲ್ಲ. ನಾನು ಕೂಡ ಇದೇ ಕಾಲೇಜಿನ ಹಳೆಯ ವಿದ್ಯಾರ್ಥಿ ಎಂಬುದೇ ಹೆಮ್ಮೆಯ ವಿಚಾರ ಎಂದರು ಸಾನಿಧ್ಯವಹಿಸಿದ್ದ ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರಸ್ವಾಮೀಜಿ , ನಮ್ಮ ದೇಶದಲ್ಲಿ ಉಪನ್ಯಾಸ ನೀಡುವವರು ಸಾಕಷ್ಟು ಜನರಿದ್ದಾರೆ. ಆದರೆ ಅವುಗಳನ್ನು ಆಚರಣೆಗೆ ತರುವವರು ಬಹಳ ಕಡಿಮೆ. ಇಂದಿನ ಮಕ್ಕಳು ಪ್ರಕೃತಿಗೆ ವಿರುದ್ದವಾಗಿ ನಡೆದುಕೊಳ್ಳುತಿದ್ದಾರೆ .ಗ್ರಾಮೀಣ ಮಕ್ಕಳ ಬದುಕು ಹಸನಾಗಬೇಕು. ವ್ಯಕ್ತಿ ಬುದ್ದಿ ಮತ್ತು ಭಾವನೆಗಳ ವಿಕಾಸವೇ ನಿಜವಾದ ಶಿಕ್ಷಣ. ಒಳ್ಳೆಯ ಚಾರಿತ್ರ ನಿರ್ಮಾಣವೇ ಶಿಕ್ಷಣದ ಗುರಿ ಎಂದು ನುಡಿದರು. ಶ್ರೀಸಿದ್ದಗಂಗಾ ಪದವಿ ಕಾಲೇಜುಗಳ ಸಂಯೋಜಕರಾದ ಡಾ.ಡಿ.ಎನ್.ಯೋಗೀಶ್ವರಪ್ಪ, ಕಾಲೇಜಿನ ಹಳೆಯ ವಿದ್ಯಾರ್ಥಿ ವಿಜಯ್, ಪ್ರಾಂಶುಪಾಲರಾದ ಡಾ.ನಿಜಲಿಂಗಪ್ಪ ಮಾತನಾಡಿದರು. ಅಭಿವ್ಯಕ್ತಿ ಸಂಚಾಲಕರಾದ ರತ್ನಮ್ಮ, ಸಹ ಸಂಚಾಲಕರಾದ ಶ್ರೀವಲ್ಲಿ, ಎನ್.ಸಿ.ಸಿ.ಅಧಿಕಾರಿ ರಾಮಲಿಂಗಾರೆಡ್ಡಿ ಉಪಸ್ಥಿತರಿದ್ದರು.

ಅಭಿವೃದ್ಧಿ ಬುಕ್ ಲೆಟ್ 20ಕ್ಕೆಬಿಡುಗಡೆ: ಎಂಎಲ್ಸಿ

ಕೋಲಾರ: ಕಳೆದ ಎರಡೂವರೆ ವರ್ಷದಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಕೊತ್ತೂರು ಮಂಜುನಾಥ್ ಸಾರಥ್ಯದಲ್ಲಿ 177 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದ್ದು ನ.20ರಂದು ಸಾಧನೆಗಳ ಬುಕ್ಲೆಟ್ ಬಿಡುಗಡೆ ಮಾಡಲಾಗುತ್ತಿದೆ ಎಂದು ಎಂಎಲ್ಸಿ ಅನಿಲ್ ಕುಮಾರ್‌ಹೇಳಿದರು.

ತಾಲೂಕಿನ ಮದ್ದೇರಿ ಗ್ರಾಮ ಪಂಚಾಯಿತಿ ಕಟ್ಟಡ ಉದ್ಘಾಟನೆ ಮತ್ತು ಸಿಸಿ ರಸ್ತೆ ಶಂಕುಸ್ಥಾಪನೆ ನರವೇರಿಸಿ ಮಾತನಾಡಿ, ಸರ್ಕಾರಕ್ಕೆ ಎರಡೂವರೆ ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಕೈಗೊಂಡಿರುವ ಸಾಧನೆಗಳನ್ನು ಜನತೆಯ ಮುಂದಿರಿಸಲಾಗುತ್ತಿದೆ ಎಂದರು.

ಸಿ.ಬೈರೇಗೌಡರು ಮದ್ದೇರಿಯಲ್ಲಿ ನಿರ್ಮಿಸಿರುವ ಸೌಲಭ್ಯ ಉಳಿಸಿಕೊಳ್ಳಬೇಕಿದ್ದು ಬಯಲು ರಂಗಮಂದಿರ ಪುನರುಜ್ಜೀವನಗೊಳಿಸಿ ರಾಮೇಗೌಡರ ಹೆಸರನ್ನು ಇಡಲಾಗುವುದೆಂದು ತಿಳಿಸಿದರು. ಮದ್ದೇರಿ ಆಸ್ಪತ್ರೆಗೆ ಶುಶ್ರೂಷಕಿಯನ್ನು ನೇಮಿಸಲಾಗಿದ್ದು ಹಳ್ಳಿಯ ಎಲ್ಲ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುತ್ತದೆ ಎಂದು ನುಡಿದರು.

ಶಾಸಕ ಕೊತ್ತೂರು ಮಂಜುನಾಥ್ ಮಾತನಾಡಿ, ಜನತೆ ರಾಜಕೀಯವನ್ನು ಚುನಾವಣೆಗೆ ಸೀಮಿತಗೊಳಿಸಿ ನಂತರ ಪಕ್ಷಾತೀತವಾಗಿ ಅಭಿವೃದ್ಧಿಗೆ ಕೈ ಜೋಡಿಸಬೇಕು. ಸಾರ್ವಜನಿಕರು ದ್ವೇಷದ ರಾಜಕೀಯ ಕೈಬಿಟ್ಟು ಯಾರಿಗೂ ಕೇಡು ಬಯಸದೆ ಅಭಿವೃದ್ಧಿಗೆ ಗಮನ ಕೊಡಬೇಕು ಎಂದು ಹೇಳಿದರು.

ಮುಖಂಡ ಶ್ರೀನಿವಾಸ್ ಮಾತನಾಡಿ, ಮದ್ದೇರಿ ಮೂಲ ಸೌಲಭ್ಯ ವಂಚಿತವಾಗಿದ್ದು ಆಸ್ಪತ್ರೆಯಲ್ಲಿ ವೈದ್ಯರಿಲ್ಲ. ಶಾಲೆಗೆ ಮೂಲ ಸವಲತ್ತುಗಳಿಲ್ಲ, ಕೆರೆ ಅಭಿವೃದ್ಧಿ ಅಗತ್ಯವಿದ್ದು ಸಾರಿಗೆ ಬಸ್ ಸೌಲಭ್ಯ ಕಲ್ಪಿಸಬೇಕು. ಸ್ಮಶಾನಕ್ಕೆ ದಾರಿ ಮಾಡಿಸಿಕೊಡಬೇಕು ಎಂದು ಮನವಿ ಮಾಡಿದರು.

ಪಂಚಾಯತಿ ಅಧ್ಯಕ್ಷ ಬಾಬು, ಉಪಾಧ್ಯಕ್ಷೆ ಪ್ರೇಮ, ಕೋಮುಲ್ ನಿರ್ದೇಶಕ ಚಂಜಿಮಲೆರಮೇಶ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ, ವೇಮಗಲ್-ನರಸಾಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಉರುಟಿಅಗ್ರಹಾರ ಚೌಡರೆಡ್ಡಿ, ಮುಖಂಡರಾದ ಜಗನ್, ವೀರೇಂದ್ರಪಾಟೀಲ್, ತಾಪಂ ಇಒ ಮಂಜುನಾಥ್, ಪಿಡಿಒ ಪಿ.ಬಿ.ರೇವಣ್ಣ ಇದ್ದರು.

ಶಾಸಕ ಕೊತ್ತೂರು ಮಂಜುನಾಥ್ ಮದ್ದೇರಿಯಲ್ಲಿ ಸಿಸಿ ರಸ್ತೆಗೆ ಶಂಕುಸ್ಥಾಪನೆ ನೆರವೇರಿಸಿದರು.

200ಕ್ಕೂ ಅಧಿಕ ಗ್ರಾಮಗಳಿಗೆ ಭೇಟಿ, ಸಮಸ್ಯೆ ಆಲಿಕೆ

ಗ್ರಾಮ ಸಂಜೀವಿನಿ ನೂತನ ಕಟ್ಟಡ ಉದ್ಘಾಟಿಸಿದ ಶಾಸಕ ಪ್ರದೀಪ್ ಈಶ್ವರ್



ಆವಗುರ್ಕಿಗ್ರಾಮಪಂಚಾಯಿತಿ ಕಟ್ಟಡದಲ್ಲಿ ಶಾಸಕ ಪ್ರದೀಪ್ ಈಶ್ವರ್ ಗ್ರಾಮ ಸಂಜೀವಿನಿ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು.

ಚಿಕ್ಕಬಳ್ಳಾಪುರ: ಆವಲಗುರ್ಕಿ ಗ್ರಾಮಪಂಚಾಯಿತಿ ಮೊದಲ ಮಹಡಿ ಕಟ್ಟಡದಲ್ಲಿ ಸುಮಾರು 35.5 ಲಕ್ಷ ರೂಗಳ ವೆಚ್ಚದಲ್ಲಿ ನಿರ್ಮಿಸಿರುವ ಗ್ರಾಮ ಸಂಜೀವಿನಿ ಕಟ್ಟಡವನ್ನು ಶಾಸಕ ಪ್ರದೀಪ್ ಈಶ್ವರ್‌ಉದ್ಘಾಟಿಸಿ ಮಾತನಾಡಿದರು.

ತಾಲ್ಲೂಕಿನ ಆವಲಗುರ್ಕಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯ ಸಂಜೀವಿನಿ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು ಇದರ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕೆಂದರು.

ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮದಡಿಯಲ್ಲಿ ಈವರೆಗೆ 200ಕ್ಕೂ ಹೆಚ್ಚು ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲೆ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರ ನೀಡಿದ್ದೇನೆ. ವೃದ್ದಾಪ್ಯ ವೇತನ ಪಡೆಯ ಬೇಕಾದರೆ ಮೂರು ತಿಂಗಳು ಬೇಕಾಗುತ್ತದೆ. ಆದರೆ ನಾನು ಗ್ರಾಮಗಳಿಗೆ ತಹಸೀಲ್ದಾರ್,ಕಂದಾಯ ಅಧಿಕಾರಿಗಳು ಮತ್ತು ತಾಪಂ, ಗ್ರಾಪಂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಅರ್ಹರಿಗೆ ಸ್ಥಳದಲ್ಲೇ ವೃದ್ದಾಪ್ಯವೇತನ, ವಿಧವಾ ವೇತನವನ್ನು ಮಂಜೂರು ಮಾಡಿಸುತ್ತಿದ್ದೇನೆ ಎಂದರು.

ಈ ವೇಳೆ ತಾಪಂ ಕಾರ್ಯನಿರ್ವಹಣಾಧಿಕಾರಿ ಮಂಜುನಾಥ್, ಗ್ರಾಪಂ ಅಧ್ಯಕ್ಷೆ ನಳಿನಿ ರಮೇಶ್, ಪಿಡಿಒ ಅರುಣಗೋಪಿ, ಕಾರ್ಯ ದರ್ಶಿ ನಾಗರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ನಾಗಭೂಷಣ್, ರಕ್ಷತ್ ರೆಡ್ಡಿ, ಮುಖಂಡರಾದ ಡ್ಯಾನ್ಸ್ ಶ್ರೀನಿವಾಸ್, ನಾಗೇಶ್, ರಮೇಶ್ ಬಾಬು,ದೇವರಾಜ್ ಇದ್ದರು.

ರೈತ ಮುಖಂಡರ' ಸಭೆ | ಟೋಲ್ ಸಮಸ್ಯೆ ಬಗೆಹರಿಸುವ ಭರವಸೆ ಕೊಟ್ಟ ಗುಬ್ಬಿ ಶಾಸಕ ಎಸ್.ಆರ್ ..ಶ್ರೀನಿವಾಸ್

ಚರ್ಚೆ ಬಳಿಕವೂ ತಾರ್ಕಿಕ ಅಂತ್ಯ ಕಾಣದ ಟೋಲ್ ಕಗ್ಗಂಟು

ಗುಬ್ಬಿ: ತಾಲೂಕಿನ ಜಿ.ಹೊಸಹಳ್ಳಿ ಬಳಿ ಆರಂಭವಾದ ಟೋಲ್ ತೆರಿಗೆ ಸಂಗ್ರಹಕ್ಕೆ ಎರಡು ಬಾರಿ ವಿರೋಧಿಸಿ ಪ್ರತಿಭಟನೆ ನಡೆಸಿದ್ದ ರೈತರಿಂದ 15 ದಿನ ಗಡುವು ಪಡೆದಿದ್ದ ಶಾಸಕ ಎಸ್.ಆರ್.ಶ್ರೀನಿವಾಸ್ ಸಭೆ ನಡೆಸಿ ಚರ್ಚಿಸಿದರು.

ತಾಪಂ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ರೈತರು ಕೇವಲ ರೈತಾಪಿ ವರ್ಗ ಓಡಾಡುವ ಈ ರಸ್ತೆಗೆ ವಾಹನ ತೆರಿಗೆ ಹಾಕುವುದು ಸರಿಯಲ್ಲ. ಯಾವ ಹೆದ್ದಾರಿ ನಿಯಮ ಪಾಲಿಸದೆ ಕಳೆದ ಹತ್ತು ವರ್ಷದ ಹಿಂದೆ ನಿರ್ಮಾಣವಾದ ಕೇಶಿಪ್ ರಸ್ತೆಗೆ ದಿಢೀರ್ ಅವೈಜ್ಞಾನಿಕ ಟೋಲ್ ಮಾಡಿರುವುದು ಖಂಡನೀಯ ಎಂದು ನೇರ ಚರ್ಚೆಗೆ ಇಳಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಎ.ಗೋವಿಂದರಾಜು ಮಾತನಾಡಿ, ಸ್ಥಳೀಯ ರೈತರಿಗೆ ಅನಾನುಕೂಲ ಮಾಡುವ ಟೋಲ್ ಇಲ್ಲಿ ಅನಾವಶ್ಯಕ. ಯಾವುದೇ ಕೈಗಾರಿಕಾ ವಲಯ ಇಲ್ಲದ ಈ ಭಾಗದ ರಸ್ತೆ ಕೇವಲ ರೈತರು ಬಳಸುತ್ತಾರೆ. ಟೋಲ್ ತೆರವು ಮಾಡದಿದ್ದರೆ ರೈತರ ಆಕ್ರೋಶದ ಕಟ್ಟೆ ಒಡೆಯುತ್ತದೆ ಎಂದು ಎಚ್ಚರಿಕೆ ನೀಡಿದರು.ಜೆಡಿಎಸ್ ಮುಖಂಡ ಹೊನ್ನಗಿರಿಗೌಡ ಮಾತನಾಡಿ, ರೈತರ ಬವಣೆ ಅರಿತ ಶಾಸಕರು ಸಂಬಂಧಪಟ್ಟ ಸಚಿವರು ಹಾಗೂ

ಜಿ.ಹೊಸಹಳ್ಳಿ ಬಳಿಯ ಟೋಲ್ ತೆರವಿಗೆ ಸಂಬಂಧಿಸಿದಂತೆ ಗುಬ್ಬಿ ತಾಪಂ ಸಭಾಂಗಣದಲ್ಲಿ ಶಾಸಕ ಎಸ್.ಆರ್. ಶ್ರೀನಿವಾಸ್ ಸಭೆ ನಡೆಸಿ ಚರ್ಚಿಸಿದರು.

ಅಧಿಕಾರಿಗಳ ಜೊತೆ ಚರ್ಚಿಸಿ ರೈತರ ಪರ ನಿಲುವು ತೋರುವ ತೀರ್ಮಾನ ಕೈಗೊಳ್ಳಬೇಕು. ಟೋಲ್ ಕಂಪನಿ ಗುತ್ತಿಗೆದಾರ ಶಾಸಕರಿಗೆ ತಿಳಿಸಿದ್ದೇವೆ ಎನ್ನುತ್ತಾರೆ. ಆದರೆ ನಮ್ಮ ಗಮನಕ್ಕೆ ಬಂದಿಲ್ಲ ಎಂದು ಶಾಸಕರು ಹೇಳುತ್ತಾರೆ. ಈ ಗೊಂದಲ ಮೂಡುವ ಬದಲು ಎಲ್ಲರೂ ಒಟ್ಟಿಗೆ ಚರ್ಚಿಸಿ ಒಂದು ತೀರ್ಮಾನ ಕೈಗೊಳ್ಳಿ ಎಂದು ತಿಳಿಸಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಕಳ್ಳಿಪಾಳ್ಯ ಲೋಕೇಶ್ ಮಾತನಾಡಿ, ಅವೈಜ್ಞಾನಿಕ ಟೋಲ್ ಬಗ್ಗೆ ವಿವರಿಸಿ ದ್ದರೂ ಸಚಿವರು ಒಪ್ಪುತ್ತಿಲ್ಲ. ಎರಡು ಕಿಮೀ ವ್ಯಾಪ್ತಿಯ ಜನರಿಗೆ ಮಾತ್ರ ವಾಹನ ಸಂಚಾರ ಅನುವು ಮಾಡುವುದು ಸರಿಯಲ್ಲ. ಇಡೀ ತಾಲ್ಲೂಕಿನ ಜನರಿಗೆ ಅನುಕೂಲ ಆಗಬೇಕು. ಇಲ್ಲವಾದರೆ ಟೋಲ್ ಅಗತ್ಯವಿಲ್ಲ. ರೈತರು ಮುಂದಿನ ಹೋರಾಟಕ್ಕೆ ಬಂದರೆ ಟೋಲ್ ಕಿತ್ತೊಗೆಯುತ್ತಾರೆ. ಈ ಸಭೆಯಲ್ಲಿ ರೈತರ ಪರ ತೀರ್ಮಾನ ಕೈಗೊಳ್ಳಿ ಎಂದು ತಿಳಿಸಿದರು.

ರೈತರ ಮಾತುಗಳನ್ನು ಆಲಿಸಿದ ಶಾಸಕ ಎಸ್. ಆರ್.ಶ್ರೀನಿವಾಸ್ ಮಾತನಾಡಿ, ಈ ಹಿಂದೆಯೇ ಸರಕಾರ ಕರಾರು ಮಾಡಿಕೊಂಡಿದೆ. ಈಗ ನಿಯಮ ಬದಲಿಸಲು ಸಾಧ್ಯವಿಲ್ಲ. ಗುತ್ತಿಗೆದಾರರ ಜೊತೆ ಚರ್ಚಿಸಿ ಒಂದು ಒಪ್ಪಂದ ಮಾಡಬಹುದಾಗಿದೆ. ತಾಲ್ಲೂಕಿನ ವಾಹನಗಳಿಗೆ ಪಾಸ್ ವ್ಯವಸ್ಥೆ ಮಾಡಲು ಚರ್ಚೆ ಮಾಡುತ್ತೇನೆ. ಅಥವಾ ನನ್ನ ಕ್ಷೇತ್ರದಿಂದ ಟೋಲ್ ಸ್ಥಳಾಂತರದ ಬಗ್ಗೆ ಚರ್ಚಿಸುತ್ತೇನೆ ಎಂದು ಭರವಸೆ ನೀಡಿದರು.

ಕೊನೆಗೂ ಸಭೆಯಲ್ಲಿ ಯಾವುದೇ ತಾರ್ಕಿಕ ಅಂತ್ಯ ಕಾಣದ ಚರ್ಚೆ ಮುಂದಿನ ಸಭೆ ನಡೆಸಿ ತಿಳಿಸುವುದಾಗಿ ಶಾಸಕರು ಸಭೆ ಅಂತ್ಯಗೊಳಿಸಿದರು.

ಸಭೆಯಲ್ಲಿ ತಹಸೀಲ್ದಾರ್‌ಆರತಿ.ಬಿ, ತಾಪಂ ಇಒ ರಂಗನಾಥ್, ಸಿಪಿಐ ರಾಘವೇಂದ್ರ, ರೈತ ಸಂಘದ ತಾಲೂಕು ಅಧ್ಯಕ್ಷ ವೆಂಕಟೇಗೌಡ, ಪ್ರಧಾನ ಕಾರ್ಯದರ್ಶಿ ಸಿ.ಜಿ.ಲೋಕೇಶ್, ಜಿಲ್ಲಾ ಕಾರ್ಯದರ್ಶಿ ಶಂಕರಪ್ಪ, ಗ್ರಾಪಂ ಸದಸ್ಯ ರೇಣುಕಾಪ್ರಸಾದ್, ಜಿ.ಎಂ.ಶಿವಾನಂದ್, ರೈತಸಂಘದ ಸಿ.ಟಿ.ಕುಮಾರ್,ಗುರುಚನ್ನಬಸವಪ್ಪ, ಯತೀಶ್, ಪ್ರಕಾಶ್, ವೀರಭದ್ರೇಗೌಡ ಇನ್ನಿತರರು ಇದ್ದರು.

ಗಾರುಡಿಗ ಸಮಾಜ ಕುರಿತ ಮಾಹಿತಿ ಕೊಡಿ

ತುಮಕೂರು: ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಸಮಾಜ ಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕಿ ಡಾ. ಸುನೀತಾ ವಿ. ಗಾಣಿಗೇರ್ ಅವರ ನೇತೃತ್ವದಲ್ಲಿ ಗಾರುಡಿಗ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗು ಸಾಂಸ್ಕೃತಿಕ ಆಯಾಮಗಳ ಕುರಿತು ಸಂಶೋಧನೆ ಆರಂಭವಾಗಿದೆ.

ಇದಕ್ಕಾಗಿ ಸರಕಾರ 10.90 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಡಾ. ಡಿ.ಸಿ. ನಂಜುಂಡ ಸಹಸಂಶೋಧಕರಾಗಿ, ಗೋವಿಂ ದರಾಜು ಸಂಶೋಧನ ಸಹಾಯಕರಾಗಿ, ಜನಾ ರ್ದನ ಕ್ಷೇತ್ರ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರುವ ಗಾರುಡಿಗ ಸಮುದಾಯದವರು ಕೊಳ್ಳೇಗಾಲ, ಚಾಮ ರಾಜನಗರ, ಮೈಸೂರು, ಶಿವಮೊಗ್ಗ, ಚಿಕ್ಕಮ ಗಳೂರು, ರಾಯಚೂರು, ಕೊಪ್ಪಳ ಭಾಗಗಳಲ್ಲಿ ವಾಸವಿದ್ದು ಗಾರುಡಿ, ಗಾರುಡಿಗ, ಗಾರಡಿಗ (ಹಿಂದೂ ಹಾಗೂ ಮುಸ್ಲಿಂ) ಹೆಸರುಗಳನ್ನು ಹೊಂದಿದ್ದಾರೆ. ಈ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರುವ ಬಗ್ಗೆ ರಾಜ್ಯ ಸರಕಾರಕ್ಕೆ ವರದಿ ನೀಡಲಾಗುವುದು. ಈ ಸಮುದಾಯದ ಬಗ್ಗೆ ಯಾವುದೇ ಮಾಹಿತಿಯುಳ್ಳವರು ತುಮಕೂರು ವಿವಿ ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗವನ್ನು ಅಥವಾ ಮೊಬೈಲ್ ಸಂಖ್ಯೆ 9686608006 ಸಂಪರ್ಕಿಸಿ ಮಾಹಿತಿ ನೀಡಬಹುದು ಎಂದು ಪ್ರಧಾನ ಸಂಶೋಧಕಿ ಡಾ. ಸುನೀತಾ ವಿ. ಗಾಣಿಗೇರ್ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಋತುಚಕ್ರದ ರಜೆ ಆದೇಶ

ಬೆಂಗಳೂರು: ಮಹಿಳಾ ನೌಕರರಿಗೆ ಋತುಚಕ್ರ ರಜೆ ನೀಡಲು ರಾಜ್ಯ ಸರಕಾರ ಅಧಿಕೃತ ಆದೇಶ ಹೊರಡಿಸಿದೆ. ಸರಕಾರಿ, ಅನುದಾನಿತ, ಖಾಸಗಿ ಎಲ್ಲಾ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ತಿಂಗಳಲ್ಲಿ ಒಂದು ದಿನ ಋತುಚಕ್ರ ರಜೆ ನೀಡಬೇಕು. ತಿಂಗಳಲ್ಲಿ ಒಂದು ದಿನ ವರ್ಷಕ್ಕೆ 12 ದಿನ ವೇತನ ಸಹಿತ ರಜೆ ನೀಡುವಂತೆ ಸರಕಾರ ಆದೇಶಿಸಿದೆ. ಮಹಿಳಾ ನೌಕರರು ಆಯಾ ತಿಂಗಳ ಋತುಚಕ್ರ ರಜೆಯನ್ನು ಆಯಾ ತಿಂಗಳಿನಲ್ಲಿಯೇ ಬಳಸಿಕೊಳ್ಳುವುದು. ಹಿಂದಿನ ತಿಂಗಳ ಋತುಚಕ್ರ ರಜೆಯನ್ನು ಮುಂದಿನ ತಿಂಗಳಿಗೆ ವಿಸ್ತರಿಸಲು ಅವಕಾಶವಿರುವುದಿಲ್ಲ. ಋತುಚಕ್ರ ರಜೆ ಪಡೆಯಲು ಮಹಿಳಾ ನೌಕರರು ವೈದ್ಯಕೀಯ ಪ್ರಮಾಣ ಪತ್ರ ಒದಗಿಸುವ ಅವಶ್ಯಕತೆ ಇರುವುದಿಲ್ಲ. 18 ವರ್ಷದಿಂದ 52 ವರ್ಷದ ಎಲ್ಲಾ ಮಹಿಳಾ ನೌಕರರಿಗೆ ಕಡ್ಡಾಯ ರಜೆ ನೀಡಲು ಆದೇಶಿಸಿದೆ.

ಗಣತಂತ್ರ ದಿನದಂದೇ ಸ್ಫೋಟಕ್ಕೆ ತಂತ್ರ?

← ಮೊದಲಪುಟದಿಂದ

ಕೆಂಪುಕೋಟೆ ಬಳಿ ಸಿಕ್ಕಿರುವ ಸ್ಫೋಟಕಗಳಿಗೂ, ಫರೀದಾಬಾದ್‌ನಲ್ಲಿ ಲಭಿಸಿರುವ ಸ್ಫೋಟಕಗಳು ಪಕ್ಕಾ ಹೋಲುತ್ತವೆ ಎಂದು ವಿಧಿವಿಜ್ಞಾನ ತಜ್ಞರು ಹೇಳಿದ್ದಾರೆ.
ಇದು ಉಗ್ರರ ದಾಳಿ: ಪೊಲೀಸರ ಇದುವರೆಗಿನ ತನಿಖೆ ಪ್ರಕಾರ ದೆಹಲಿ ಬಾಂಬ್ ಸ್ಫೋಟ ಉಗ್ರರ ದಾಳಿಯೆಂದು ಖಚಿತವಾಗಿದೆ. ಟರ್ಕಿ, ಅಫ್ಘಾನಿಸ್ತಾನದಿಂದ ಈ ದಾಳಿಯನ್ನು ನಿರ್ವಹಿಸಲಾಗಿದೆ. ಇದರ ಸೂತ್ರಧಾರಿಗಳು ಅಲ್ಲಿದ್ದಾರೆಂದು ಹೇಳಲಾಗಿದೆ.
ಹಲವರ ಬಂಧನ: ದೆಹಲಿ ಸ್ಫೋಟಕ್ಕೆ ಸಂಬಂಧಿಸಿ ಬುಧವಾರ ಇಷ್ತಿಯಾಖ್ ಎಂಬ ಮೌಲ್ವಿಯನ್ನು ಹರ್ಯಾಣದ ಮೇವಾಡ ದಲ್ಲಿ ಬಂಧಿಸಲಾಗಿದೆ. ಇನ್ನು ಅಲ್ ಫಲಾಹ್ ವಿವಿಯಿಂದ ಇನ್ನೂ ಮೂವರು ವೈದ್ಯರನ್ನು ವಶಕ್ಕೆ ಪಡೆಯಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
13.11.2025
ಗುರುವಾರದ ಅತಿಥಿ
ಶ್ರೀ ರಾಜ್ ಆಚಾರ್ಯ

ವಿಷಯ
ಕರ್ನಾಟಕ ಏಕೀಕರಣ ಒಂದು ಚಿಂತನೆ
vishwavani.news

ಬೆಂಗಳೂರಿನಲ್ಲಿ ವ್ಯಾಪಾರ ವಹಿವಾಟು ನಡೆಸಲು ಮುಂದಾಗಿರುವ ಸಿಂಗಾಪುರ

ರಾಜ್ಯದಲ್ಲಿ ಹೂಡಿಕೆಗೆ ಸಿಂಗಾಪುರ ಉತ್ಸುಕ: ಡಿಸಿಎಂ

ಬೆಂಗಳೂರು: ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಸಿಂಗಾಪುರ ದೇಶವು ವ್ಯಾಪಾರ ವಹಿವಾಟು ನಡೆಸಲು ಹೆಚ್ಚು ಉತ್ಸುಕವಾಗಿದೆ. ತಂತ್ರಜ್ಞಾನ ಹಂಚಿಕೊಳ್ಳುವಿಕೆ ಸೇರಿದಂತೆ ಕೈಗಾರಿಕಾ ಪಾರ್ಕ್ ಆರಂಭಿಸುವ ಬಗ್ಗೆ ಸಿಂಗಾಪುರ ವಿದೇಶಾಂಗ ಸಚಿವರು ಚರ್ಚೆ ನಡೆಸಿದರು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸಿಂಗಾಪುರ ವಿದೇಶಾಂಗ, ವಾಣಿಜ್ಯ ಮತ್ತು ಕೈಗಾರಿಕೆ ಸಚಿವೆ ಗಾನ್ ಶಿಯೋ ಹುಯಂಗ್ ಅವರ ನೇತೃತ್ವದ ಸಿಂಗಾಪುರ ಸರಕಾರದ ನಿಯೋಗದೊಂದಿಗೆ ಚರ್ಚಿಸಿದ ಬಳಿಕ ಮಾತನಾಡಿದ ಅವರು, ಕಳೆದ ವರ್ಷ ಸಿಂಗಪುರದ ಕೌನ್ಸಲೇಟ್‌ಗೆ ಬಂದಿದ್ದರು. ಗುರುವಾರ ಅವರು ಬೆಂಗಳೂರಿನಲ್ಲಿ ಕಚೇರಿ ಆರಂಭಿಸುತ್ತಿದ್ದಾರೆ. ಅವರು ಒಪ್ಪಿದರೆ ಒಂದು ಬಹುಮಹಡಿ ಕಟ್ಟಡ ನಿರ್ಮಿಸಿ ಅವರ ಎಲ್ಲಾ ಕಚೇರಿಗಳು ಒಂದೇ ಕಡೆ ಇರುವಂತೆ ಮಾಡಲು ಪ್ರಸ್ತಾವನೆ ನೀಡಿದ್ದೇನೆ. ನಾನು ಈ ವಿಚಾರವಾಗಿ ಬೇರೆ ದೇಶದವರ ಜತೆಗೂ ಮಾತನಾಡಿದ್ದೆ. ಭದ್ರತಾ ಉದ್ದೇಶದಿಂದ ಕೆಲವರು ಒಪ್ಪಿರಲಿಲ್ಲ. ಈಗ ಒಂದು ಪ್ರಯತ್ನ ಮಾಡುತ್ತಿದ್ದೇವೆ. ಹಲವು ದೇಶದ ಜನ ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿದ್ದು, ಇಲ್ಲಿ ಬಂಡವಾಳ ಹೂಡಿಕೆಗೆ ಮುಂದಾಗಿದ್ದಾರೆ ಎಂದು ತಿಳಿಸಿದರು.

2026ರಲ್ಲಿ ಸಿಂಗಾಪುರ ಭೇಟಿ: ಎಂ.ಬಿ.ಪಾಟೀಲ

ಇನ್ನು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮಾತನಾಡಿ, ಆಸಿಯಾನ್ ರಾಷ್ಟ್ರಗಳ ಪೈಕಿ ಭಾರತದಲ್ಲಿ ಅತ್ಯಧಿಕ ವಿದೇಶಿ ನೇರ ಹೂಡಿಕೆ ಮಾಡುತ್ತಿರುವ ಸಿಂಗಾಪುರ ಜತೆ ಕೈಗಾರಿಕಾ ಮತ್ತು ವಾಣಿಜ್ಯ ಸಹಭಾಗಿತ್ವ ಬೆಳೆಸಿಕೊಳ್ಳಲು ರಾಜ್ಯದ ಪಾಲಿಗೆ ಒಳ್ಳೆಯ ಅವಕಾಶಗಳಿವೆ. ಇದನ್ನು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ 2026ರ ಮೊದಲ ಅವಧಿಯಲ್ಲಿ ಆ ದೇಶಕ್ಕೆ ಭೇಟಿ ನೀಡಲಾಗುವುದು. ಅದಕ್ಕೂ ಮುನ್ನ ದ್ವಿಪಕ್ಷೀಯ ಕೈಗಾರಿಕಾ ಬಾಂಧವ್ಯ ವರ್ಧನೆ ಕುರಿತು ಅಧಿಕಾರಿಗಳ ಮಟ್ಟದಲ್ಲಿ ವಿಚಾರ ವಿನಿಮಯ ನಡೆಸಲಾಗುವುದು ಎಂದು ತಿಳಿಸಿದರು.

ಭೇಟಿಯ ವೇಳೆ ನಮ್ಮಿಂದ ಸಿಂಗಾಪುರದ ಕಂಪನಿಗಳಿಗೆ ಏನೇನಾಗಬೇಕು ಮತ್ತು ಆ ದೇಶದಲ್ಲಿರುವ ನಮ್ಮಲ್ಲಿನ ಕಂಪನಿಗಳಿಗೆ ಅಲ್ಲಿಯ ಸರಕಾರದ ಮಟ್ಟದಲ್ಲಿ ಯಾವ ಕೆಲಸಗಳಾಗಬೇಕು ಎನ್ನುವುದನ್ನು ಚರ್ಚಿಸಲಾಯಿತು. ವೈಮಾನಿಕ ಕ್ಷೇತ್ರದಲ್ಲಿ ಪ್ರಮುಖವಾಗಿರುವ ಎಂ.ಆರ್.ಒ. ವಲಯದಲ್ಲಿ ಸಿಂಗಪುರ ಹೆಸರುವಾಸಿಯಾಗಿದೆ. ಈ ಕ್ಷೇತ್ರದಲ್ಲಿ ರಾಜ್ಯಕ್ಕೆ ಸಹಾಯ ಮಾಡುವ ಭರವಸೆಯನ್ನು ಗಾನ್ ಅವರು ನೀಡಿದ್ದಾರೆ' ಎಂದಿದ್ದಾರೆ.

ಬೆಂಗಳೂರು ಮತ್ತು ಸಿಂಗಾಪುರ ನಡುವೆ ಅನೇಕ ವಿಷಯಗಳಲ್ಲಿ ಸಾಮ್ಯತೆ ಇದೆ. ಎರಡೂ ನಗರಗಳು ವಿಶ್ವದರ್ಜೆಯ ನಗರಗಳು. ಹೀಗಾಗಿ ಪರಸ್ಪರ ಸಹಭಾಗಿತ್ವದ ಸಮನ್ವಯಕ್ಕೆ ಒತ್ತು ನೀಡಲಾಗುವುದು. 2020ರಿಂದ ಇಲ್ಲಿಯವರೆಗೆ ಸಿಂಗಪುರದ ಕಂಪನಿಗಳು ಭಾರತದಲ್ಲಿ 174.88 ಬಿಲಿಯನ್ ಡಾಲರ್ ಹೂಡಿಕೆ ಮಾಡಿವೆ. ಇದು ದೇಶಕ್ಕೆ ಹರಿದು ಬಂದಿರುವ ಒಟ್ಟು ವಿದೇಶಿ ನೇರ ಹೂಡಿಕೆಯಲ್ಲಿ ಶೇ.24ರಷ್ಟಿದೆ. ಆ ದೇಶದಲ್ಲಿ 9 ಸಾವಿರಕ್ಕೂ ಹೆಚ್ಚು ಭಾರತೀಯ ಕಂಪನಿಗಳಿದ್ದು, ಸಿಂಗಪುರದ 440 ಕಂಪನಿಗಳು ಭಾರತದಲ್ಲಿ ಸಕ್ರಿಯವಾಗಿವೆ ಎಂದು ಹೇಳಿದರು.

ಸಿಂಗಾಪುರ ವಿದೇಶಾಂಗ, ವಾಣಿಜ್ಯ ಮತ್ತು ಕೈಗಾರಿಕೆ ಸಚಿವೆ ಗಾನ್ ಶಿಯೋ ಹುಯಂಗ್ ಅವರ ನೇತೃತ್ವದ ಸಿಂಗಾಪುರ ಸರಕಾರದ ನಿಯೋಗದೊಂದಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಎಂ.ಬಿ.ಪಾಟೀಲ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಅಮೆರಿಕದ ಉತಾ ಪ್ರಾಂತ್ಯದ ಪ್ರತಿನಿಧಿಗಳೊಂದಿಗೆ ಸಭೆ

ವೈಮಾಂತರಿಕ್ಷ, ರಕ್ಷಣೆ ಮತ್ತು ತಂತ್ರಜ್ಞಾನ ವಲಯಗಳಲ್ಲಿ ರಾಜ್ಯದಲ್ಲಿ ಹೂಡಿಕೆ ಮಾಡುವ ಸಂಬಂಧ ಅಮೆರಿಕದ ಉತಾ ಪ್ರಾಂತ್ಯದ ಸೆನೆಟ್ ಅಧ್ಯಕ್ಷ ಜಬೇಜ್ ಸ್ಟುವರ್ಟ್ ಆ್ಯಡಮ್ಸ್ ಮತ್ತು ಅಲ್ಲಿನ ವಿಶ್ವ ವಾಣಿಜ್ಯ ಕೇಂದ್ರದ ಮುಖ್ಯಸ್ಥ ಹಾಗೂ ಸಿಇಒ ಜೊನಾಥನ್ ಫ್ರೀಡ್ಮನ್ ಜತೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಬುಧವಾರ ಚರ್ಚೆ ನಡೆಸಿದರು. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ಸಭೆಯ ಬಳಿಕ ಮಾತನಾಡಿದ ಸಚಿವರು, ಅಮೆರಿಕದ ಪಶ್ಚಿಮ ಭಾಗದಲ್ಲಿರುವ ಉತಾ ಪ್ರಾಂತ್ಯದ ಕಂಪನಿಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಆಸಕ್ತಿ ಹೊಂದಿವೆ. ತಯಾರಿಕೆ, ಜೀವವಿಜ್ಞಾನಗಳು, ರೋಗನಿದಾನ ಕ್ಷೇತ್ರ, ಶಿಕ್ಷಣ ಮತ್ತು ಇ-ಮೊಬಿಲಿಟಿ ಕ್ಷೇತ್ರಗಳಲ್ಲಿ ಸಹ ಬಂಡವಾಳ ತೊಡಗಿಸಲು ಅವು ಚಿಂತನೆ ನಡೆಸುತ್ತಿವೆ ಎಂದು ತಿಳಿದುಬಂದಿದೆ. ನಮ್ಮಲ್ಲಿನ ಕೈಗಾರಿಕಾ ನೀತಿ, ಮೂಲಸೌಕರ್ಯ, ಪ್ರೋತ್ಸಾಹನಾ, ರಿಯಾಯಿತಿ, ಏಕಗವಾಕ್ಷಿ ವ್ಯವಸ್ಥೆಗಳ ಬಗ್ಗೆ ಆ್ಯಡಮ್ಸ್ ಮತ್ತು ಫ್ರೀಡಮನ್ ಇಬ್ಬರಿಗೂ ಮನವರಿಕೆ ಮಾಡಿಕೊಡಲಾಗಿದೆ ಎಂದರು.

ದೆಹಲಿ ಸ್ಫೋಟ ಕೇಂದ್ರದ ವೈಫಲ್ಯ: ಖರ್ಗೆ

ಬೆಂಗಳೂರು: ದೆಹಲಿಯಲ್ಲಿ ನಡೆದ ಸ್ಫೋಟವನ್ನು ಕೇಂದ್ರ ಸರಕಾರದ ವೈಫಲ್ಯ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದು, ಭಯೋತ್ಪಾದಕ ಕೃತ್ಯದ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ಕೊಡಬೇಕು. ಆಗ ಮಾತ್ರ ಉಗ್ರ ಚಟುವಟಿಕೆಗಳನ್ನು ತಡೆಗಟ್ಟಲು ಸಾಧ್ಯ ಎಂದು ಆಗ್ರಹಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಭದ್ರತೆಗೆ ಸಂಬಂಧಿಸಿದಂತೆ ಎನ್ಐಎ, ರಾನಂತಹ ಉನ್ನತ ಸಂಸ್ಥೆಗಳು ಕಾರ್ಯನಿರ್ವಹಿಸುವ ರಾಷ್ಟ್ರ ರಾಜಧಾನಿಯಲ್ಲಿ ಇಂತಹ ಘಟನೆ ನಡೆದಿರುವುದು ದುರದೃಷ್ಟಕರ. ಸರಕಾರ ವಿಫಲವಾಗಿದ್ದು, ಕಾಂಗ್ರೆಸ್ ಇಡೀ ಪ್ರಕರಣದ ಸಂಪೂರ್ಣ ವರದಿಗಾಗಿ ಕಾಯುತ್ತದೆ ಎಂದು ಹೇಳಿದರು.

ಸ್ಫೋಟದ ಬಗ್ಗೆ ಕಾಂಗ್ರೆಸ್ ಪಕ್ಷವು ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸುತ್ತದೆ. ಸ್ಫೋಟದ ಹಿಂದೆ ಇರುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಸರಕಾರವನ್ನು ಒತ್ತಾಯಿಸಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ಇದರಿಂದ ಇತರರು ಹಾಗೆ ಮಾಡಲು ಹೆದರಬೇಕು ಎಂದು ಖರ್ಗೆ ಹೇಳಿದರು.

ಸಚಿವ ಜಮೀರ್ ಅಹ್ಮದ್ ದೆಹಲಿ ಸ್ಫೋಟದ ಕುರಿತು ಮಾತನಾಡಿ, ಇಸ್ಲಾಂ ಧರ್ಮದಲ್ಲಿ ಭಯೋತ್ಪಾದನೆಗೆ ಅವಕಾಶ ಇಲ್ಲ. ಹಾಗಾಗಿ ಭಯೋತ್ಪಾದಕರು ಮುಸ್ಲಿಮರಾಗಲು ಸಾಧ್ಯವಿಲ್ಲ. ಇಸ್ಲಾಂ ಧರ್ಮದ ಪ್ರಕಾರ ಭಯೋತ್ಪಾದನೆ ಮಾಡುವವನು ಮುಸ್ಲಿಂ ಅಲ್ಲ.
-ಜಮೀರ್ ಅಹಮ್ಮದ್, ಸಚಿವ

ಮುಂದಿನ ತಿಂಗಳು ಚಳಿಗಾಲದ ಅಧಿವೇಶನದಲ್ಲಿ ತಮ್ಮ ಪಕ್ಷವು ಸಂಸತ್ತಿನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಿದೆ ಎಂದು ಹೇಳಿದರು. ಈಗ ಕೇಂದ್ರ ಸರಕಾರ ಪ್ರಕರಣವನ್ನು ರಾಷ್ಟ್ರೀಯ ಗುಪ್ತಚರ ಸಂಸ್ಥೆಗೆ ಹಸ್ತಾಂತರಿಸಿದ್ದಾರೆ. ತನಿಖಾ ವರದಿ ಹೊರಬರಲಿ. ಡಿ.1ರಿಂದ ಸಂಸತ್ತಿನ ಅಧಿವೇಶನ ಪ್ರಾರಂಭವಾಗಲಿದೆ, ಅದರ ನಂತರ ನೋಡೋಣ ಎಂದು ಖರ್ಗೆ ಹೇಳಿದರು.

ಸಿನಿಮಾ ಹಣದಿಂದ ನೆತ್ತಿ ಮೇಲೊಂದು ಸೂರು ಕಂಡ ಕಲಾವಿದ

ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾ ತಿಥಿ ಗಡ್ಡಪ್ಪ ನಿಧನ

ಮಂಡ್ಯ: ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಚಲನಚಿತ್ರವಾದ ತಿಥಿ ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿ ಮನೆ ಮಾತಾಗಿದ್ದ ಗಡ್ಡಪ್ಪ (ಮೂಲ ಹೆಸರು ಚನ್ನೇಗೌಡ) ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ.

ಮೃತರಿಗೆ 89 ವರ್ಷ ವಯಸ್ಸಾಗಿತ್ತು.

ಮಂಡ್ಯ ತಾಲೂಕಿನ ನೊದೆ ಕೊಪ್ಪಲು ಗ್ರಾಮ ದವರಾದ ಗಡ್ಡಪ್ಪ ಅವರ ಮೂಲ ಹೆಸರು ಚನ್ನೇಗೌಡ. ಗ್ರಾಮದಲ್ಲಿ ಹೋಟೆಲ್ ನಡೆಸುತ್ತಿದ್ದ ಅವರನ್ನು ಅಲ್ಲಿಗೆ ಬರುವವರು ಗಡ್ಡಪ್ಪ ಎಂದೇ ಕರೆಯುತ್ತಿದ್ದರು. ಆ ಹೆಸರಿನಿಂದಲೇ ಖ್ಯಾತಿ ಪಡೆದಿದ್ದ ಅವರು ಜತೆಗೆ ಸಿನಿಮಾ ಪ್ರೇಮಿಯಾಗಿದ್ದರು. ಮಂಡ್ಯ ಮೂಲದವರೇ ಆದ ಈರೇಗೌಡ ಎಂಬುವವರು ಬರೆದಿದ್ದ ತಿಥಿ ಸಿನಿಮಾದ ಚಿತ್ರಕಥೆಯ ಗಡ್ಡಪ್ಪ ಪಾತ್ರಕ್ಕೆ ಚನ್ನೇಗೌಡರೇ ಸೂಕ್ತ ವ್ಯಕ್ತಿ ಎಂದು ಸಿನಿಮಾ ತಂಡ ಆಯ್ಕೆ ಮಾಡಿಕೊಂಡಿತ್ತು.

2015ರಲ್ಲಿ ಬಿಡುಗಡೆಯಾದ ಕನ್ನಡ ಚಲನಚಿತ್ರವಾದ ತಿಥಿ ಸಿನಿಮಾವನ್ನು ರಾಮ್ ರೆಡ್ಡಿ ನಿರ್ದೇಶಿಸಿದ್ದರು. ಮಂಡ್ಯ ಜಿಲ್ಲೆಯ ಹಳ್ಳಿಗಳ ವೃತ್ತಿಪರರಲ್ಲದ ನಟರ ಗುಂಪನ್ನು ಒಳಗೊಂಡಿದ್ದ ಈ ಚಿತ್ರ, ತಮ್ಮ 101 ವರ್ಷದ ಹಿರಿಯ ವ್ಯಕ್ತಿ ಯ ಸಾವಿಗೆ ಮೂರು ತಲೆ ಮಾರುಗಳ ಪುರು ಷರು ಪ್ರತಿಕ್ರಿ ಯಿಸುವ (ಅರೆ) ಹಗುರವಾದ ಕಥೆಯಾಗಿತ್ತು. ಈ ಸಿನಿಮಾದಲ್ಲಿ ಗಡ್ಡಪ್ಪ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದರು. ಆಗಸ್ಟ್ 8, 2015ರಂದು 68ನೇ ಲೊಕಾ ನೊರ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಥಮ ಪ್ರದರ್ಶನಗೊಂಡಿತು. ಅಲ್ಲಿ ಇದು ಗೋಲ್ಡನ್ ಲೆಪರ್ಡ್- ಫಿಲ್ಮ್ ಮೇಕರ್ಸ್ ಆಫ್ ದಿ ಪ್ರೆಸೆಂಟ್ ವಿಭಾಗ ಮತ್ತು ಮೊದಲ ಫೀಚರ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. 63ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಕನ್ನಡದ ಅತ್ಯುತ್ತಮ ಫೀಚರ್ ಚಿತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಗೆದ್ದುಕೊಂಡಿತು. 2016ರಲ್ಲಿ ಕರ್ನಾಟಕ ಚಲನಚಿತ್ರ ಪ್ರಶಸ್ತಿ ಸಹ ಈ ಸಿನಿಮಾಗೆ ದೊರೆಯಿತು.

ಪುತ್ರಿ ಕಣ್ಣೀರು: ಮೃತ ಗಡ್ಡಪ್ಪ ಪುತ್ರಿ ಶೋಭಾ ಮಾತನಾಡಿ, ಒಂದು ತಿಂಗಳ ಹಿಂದೆ ಬಿದ್ದು ಪೆಟ್ಟಾಗಿ ಚಿಕಿತ್ಸೆ ಕೊಡಿಸಲಾಗಿತ್ತು. ಹಾರ್ಟ್ ಪೇಶೆಂಟ್ ಕೂಡ ಆಗಿದ್ದರು. ಸಿನಿಮಾ ಆಫರ್‌ಗಳು ಇದ್ದವು. ಆರೋಗ್ಯ ಸರಿಯಿಲ್ಲದ ಕಾರಣ ಶೂಟಿಂಗ್‌ಗೆ ಕಳುಹಿಸುತ್ತಿರಲಿಲ್ಲ. ಅವರಿಂದಲೇ ಆರ್ಥಿಕವಾಗಿ ಮನೆ ನಡೆಯುತ್ತಿತ್ತು. ಕಷ್ಟದಿಂದ ಜೀವನ ನಡೆಸುತ್ತಿದ್ದರ ಎಂದು ತಂದೆಯನ್ನ ನೆನೆದು ಪುತ್ರಿ ಕಣ್ಣೀರಿಟ್ಟರು.

20ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯ

ತಿಥಿ ಸಿನಿಮಾದಿಂದ ಮನೆ ಮಾತಾದ ಗಡ್ಡಪ್ಪ ಅವರ ಮೊದಲ ಚಿತ್ರ ದೇಶ, ವಿದೇಶ ಸೇರಿದಂತೆ ಹಲವು ದೇಶಗಳಲ್ಲಿ ಪ್ರದರ್ಶನಗೊಂಡು ಯಶಸ್ಸು ಸಿಕ್ಕ ಹಿನ್ನಲೆಯಲ್ಲಿ ಅದೃಷ್ಟವೂ ಕುಲಾಯಿಸಿತು. 78ರ ಇಳಿ ವಯಸ್ಸಿನಲ್ಲಿ ಗುಡಿಸಿಲಿನಲ್ಲಿ ವಾಸವಿದ್ದ ಇವರ ಮನೆ ಮುಂದೆ ನಿರ್ಮಾಪಕರು ದಂಡೇ ಬರುವಂತಾಯಿತು. ಬಳಿಕ ತರ್ಲೆ ವಿಲೇಜ್, ಜಾನಿ ಮೇರಾ ನಾಮ್, ಹಳ್ಳಿ ಪಂಚಾಯಿತಿ, ಗಡ್ಡಪ್ಪನ ದುನಿಯಾ, ಗಡ್ಡಪ್ಪನ ಸರ್ಕಲ್, ಹಾಲು ತುಪ್ಪ, ಕರ್ಮ, ತಾತನ್ ಮದುವೆ ಮೊಮ್ಮಗನ ಪ್ರಸ್ತ ಸೇರಿದಂತೆ 20ಕ್ಕೂ ಅಧಿಕ ಸಿನಿಮಾ ದಲ್ಲಿ ನಟಿಸಿದ್ದಾರೆ. ಸಿನಿಮಾದಲ್ಲಿ ಬಂದ ಹಣದಿಂದ ಗುಡಿಸಿಲಿನಲ್ಲಿದ್ದ ಅವರು ಬಳಿಕ ಮನೆಯೊಂದನ್ನು ಕಟ್ಟಿಕೊಂಡರು.

ಸಚಿವರ ಸಂತಾಪ

ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾ ತಿಥಿ ಖ್ಯಾತಿಯ ಗಡ್ಡಪ್ಪ ನಿಧನಕ್ಕೆ ಕೇಂದ್ರ ಭಾರೀ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಸಂತಾಪ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಕಂಬನಿ ಮಿಡಿದಿರುವ ಅವರು, ಮಂಡ್ಯ ತಾಲೂಕಿನ ಕುಗ್ರಾಮ ನೊದೆ ಕೊಪ್ಪಲಿನಲ್ಲಿ ಜನಿಸಿ, ವಯೋವೃದ್ಧ ವಯಸ್ಸಿನಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದ ಅವರ ನಿಧನಕ್ಕೆ ನನ್ನ ಸಂತಾಪಗಳು ಎಂದು ತಿಳಿಸಿದ್ದಾರೆ.

ಅತ್ಯಾಚಾರಕ್ಕೆ ಯತ್ನ: ಆರೋಪಿ ವಶಕ್ಕೆ

ಬೆಂಗಳೂರು: ವಿಶೇಷಚೇತನ ಯವತಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಕಾಮುಕನನ್ನು ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ.ನ. 9ರಂದು ಆಡುಗೋಡಿಯ ಎಂ.ಆರ್. ನಗರದಲ್ಲಿ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಆರೋಪಿ ವಿಘ್ನೇಶ್ ಅಲಿಯಾಸ್ ದಾಡು ಎಂಬಾತನನ್ನು ಬಂಧಿಸಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ-1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 052
ಸಂಖ್ಯೆ: ಕವಶಿಸಸ/ಕಾಅ-1/ಟೆಂಡರ್-20/2025-26 ದಿನಾಂಕ: 12.11.2025
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಅಭಿವೃದ್ಧಿ ಹಾಗೂ ಸಿವಿಲ್ ದುರಸ್ಥಿ ಕಾಮಗಾರಿಗಳಿಗೆ **(Tender Indent No. 785, 784, 782, 741, 738, 787, 743, 792, 760, 756, 763, 751, 790, 735, 734, 793, 761, 755, 789, 788, 733, 739, 736, 737, 748, 740** ಮತ್ತು **742)** ಇ-ಪೋರ್ಟಲ್ ಮುಖಾಂತರ ದಿನಾಂಕ: 12.11.2025 ರಂದು ಟೆಂಡರ್‌ನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 27.11.2025 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http://kppp.karnataka.gov.in ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/-
ಕಾರ್ಯಪಾಲಕ ಅಭಿಯಂತರರು-1, ಕವಶಿಸಸಂ, ಬೆಂಗಳೂರು
ಡಿಐಪಿಆರ್/ಸಿಪಿ/3752/ಸಿಎಲ್/2025-26

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ
ದೂರವಾಣಿ : 08539 – 220844 ಫ್ಯಾಕ್ಸ್: 221235
ಇ-ಮೇಲ್ : deo.koppal@gmail.com
ಸಂಖ್ಯೆ/ಕಂದಾಯ/ಸಿಬ್ಬಂದಿ/137/2025/ಇ-357905 ದಿನಾಂಕ: 12/11/2025
ಟೆಂಡರ್ ಪ್ರಕಟಣೆ
(ಕೆಪಿಪಿಪಿ-ಪೋರ್ಟಲ್ ಮೂಲಕ)
ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಅಧೀನ ಕಚೇರಿಗಳಿಗೆ ಅವಶ್ಯವಿರುವ 04 ಪ್ರೋಗ್ರಾಮರ್ಸ್, 12 ಡಾಟಾ ಎಂಟ್ರಿ ಆಪರೇಟರ್, 09 ವಾಹನ ಚಾಲಕರು ಹಾಗೂ 12 ಗ್ರೂಪ್-ಡಿ ಸಿಬ್ಬಂದಿಗಳನ್ನು **ದಿ:01.01.2026** ರಿಂದ **ದಿ:31.12.2026** ರವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಟೆಂಡರ್ ಆಹ್ವಾನಿಸಲಾಗಿದ್ದು, ಕೆಪಿಪಿಪಿ-ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **ದಿ: 28/11/2025 ರ ಅಪರಾಹ್ನ 05.00** ಗಂಟೆವರೆಗೆ ಇರುತ್ತದೆ. ಷರತ್ತು, ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ-ಪೋರ್ಟಲ್ ಪರಿಶೀಲಿಸಲು ತಿಳಿಸಲಾಗಿದೆ.
ಸಹಿ/- ಜಿಲ್ಲಾಧಿಕಾರಿಗಳು ಹಾಗೂ ಟೆಂಡರ್ ಕರೆಯುವ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಚೇರಿ, ಕೊಪ್ಪಳ.
ವಾ.ಸಾ.ಇ/ಕೊಪ್ಪಳ/449/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರಕಾರ
ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101
ಜಿಲ್ಲಾ : ಗದಗ ರಾಜ್ಯ : ಕರ್ನಾಟಕ
ದೂ : 08372-259932 ಇ-ಮೇಲ್ : ka.gadag.betageri.cmc@gmail.com
ನಂ.ಗಬೆನಸ/ತಾಂ.ವಿ/ಅಮೃತ್2.0/ವಹಿ/ಟೆಂಡರ್/2025-26 ದಿನಾಂಕ: 12-11-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಅಮೃತ-2.0 ಕೇಂದ್ರ ಪುರಸ್ಕೃತ ಯೋಜನೆಯ ಅನುದಾನದಲ್ಲಿ **ಟೆಂಡರಿಗಿಟ್ಟ ಮೊತ್ತ ರೂ.72.01ಲಕ್ಷಗಳಿಗೆ ಒಟ್ಟು 01** ಕಾಮಗಾರಿಯ 2ನೇ ಕರೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, **ಇಂಡೆಂಟ್ ನಂ:1) DMA/2025-26/OW/WORK_INDENT 47954 (Call-2), http://kppp.karnataka.gov.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.
ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗದಿ ಪಡಿಸಿದ ದಿನಾಂಕಗಳಂದು ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	19-11-2025 Up to 16.00 Hours
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	20-11-2025 Up to 16.30 Hours

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ KPPP Portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/-ಶ್ರೀ ರಾಜಾರಾಮ ಪವಾರ (ಕೆ.ಎ.ಎಮ್.ಎಸ್)
ಪೌರಾಯುಕ್ತರು
ನಗರಸಭೆ ಗದಗ-ಬೆಟಗೇರಿ
ವಾ.ಸಾ.ಇ/ಗದಗ/373/ದೇಶಪಾಂಡೆಪಬ್ಲಿಸಿಟಿ/2025-26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ
ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025-26/ಐ.ಎಫ್.ಟಿ. ನಂ.99/4078 ದಿನಾಂಕ: 11-11-2025
ಟೆಂಡರ್ ಪ್ರಕಟಣೆ – (2ನೇ ಕರೆ)
(ದ್ವಿ-ಲಕೋಟೆ ಪದ್ಧತಿಯಲ್ಲಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999 ನಿಯಮ 2000 ರನ್ವಯ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆಲಸದ ಹೆಸರು: **ವಿತಾವಿಯ ಪ್ರಾದೇಶಿಕ ಕೇಂದ್ರ ಕಲಬುರಗಿಯಲ್ಲಿಯ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಊಟೋಪಚಾರವನ್ನು ಗುತ್ತಿಗೆಯ ಆಧಾರದ ಮೇಲೆ ಪೂರೈಸುವ ಟೆಂಡರ್ ಸರಾಸರಿ ವಾರ್ಷಿಕ ಮೊತ್ತ ರೂ. 1,13,67,191/- (ತೆರಿಗೆ ರಹಿತ) (2ನೇ ಕರೆ)** ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯ ಮೂಲಕ ಕೆಟರರ್ಸ್‌ಗಳಿಂದ ಆಮಂತ್ರಿಸಲಾಗಿದೆ. ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **14-11-2025** ರಿಂದ ಪಡೆದುಕೊಳ್ಳಬಹುದು.
ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ವಾಸಾಸಂಇ/ಬೆಳಗಾವಿ/1301/ಅಡ್ವರ್ಟೋರ್/2025-26

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.
ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/10/2025-26 ದಿನಾಂಕ: 12.11.2025
ಟೆಂಡರ್ ಆಹ್ವಾನ ಪ್ರಕಟಣೆ
ಬೆಂ.ಮ.ಸಾ.ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ಬಿಡಿಭಾಗಗಳನ್ನು/ಸೇವೆಗಳನ್ನು ಪಡೆಯಲು **KPP Portal** ನ ಮೂಲಕ ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರ	ಕೆಪಿಪಿಪಿ ಸಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
		ನಿಯಮಿತ ಟೆಂಡರ್	
1	BMTC/2025-26/ IND0203 CALL-2	ವೋಲ್ವೋ ಏರ್‌ಸಸ್ಪೆನ್ಷನ್ ಬಿಡಿಭಾಗಗಳ ಖರೀದಿ ಬಗ್ಗೆ.	15-12-2025 at 17:00 Hrs.
2	BMTC/2025-26/ IND0205 CALL-2	ವೋಲ್ವೋ ರೇಡಿಯೇಟರ್ ಅಸೆಂಬ್ಲಿ ಖರೀದಿ ಬಗ್ಗೆ.	27-11-2025 at 17:00 Hrs.
3	BMTC/2025-26/ IND0206 CALL-2	ವೋಲ್ವೋ ಎಂಜಿನ್ ಬಿಡಿಭಾಗಗಳ ಖರೀದಿ ಬಗ್ಗೆ.	27-11-2025 at 17:00 Hrs.
4	BMTC/2025-26/ IND0208 CALL-2	ವೋಲ್ವೋ ಎಲೆಕ್ಟ್ರಿಕಲ್ ಬಿಡಿಭಾಗಗಳ ಖರೀದಿ ಬಗ್ಗೆ.	28-11-2025 at 17:00 Hrs.
5	BMTC/2025-26/ IND0221 CALL-2	ಕ್ಯೂರಿಂಗ್ ಎನ್ವೆಲಪ್ಸ್ ಮತ್ತು ಬ್ಯಾಗ್‌ಗಳ ಖರೀದಿ ಬಗ್ಗೆ.	27-11-2025 at 17:00 Hrs.
6	BMTC/2025-26/ IND0231	ಮಾಸ್ಕಿಂಗ್ ಟೇಪ್ ಮತ್ತು ಬಫಿಂಗ್ ಶೀಟ್‌ಗಳ ಖರೀದಿ ಬಗ್ಗೆ.	28-11-2025 at 17:00 Hrs.
7	BMTC/2025-26/ IND0232	ವಿವಿಧ ಗಾತ್ರದ GHT ನಟ್ಸ್ ಮತ್ತು ಬೋಲ್ಟ್‌ಗಳ ಖರೀದಿ ಬಗ್ಗೆ.	28-11-2025 at 17:00 Hrs.
8	BMTC/2025-26/ IND0233	ರಿಫ್ಲೆಕ್ಟಿವ್ ಟೇಪ್ಸ್ ಮತ್ತು ಟ್ರಾನ್ಸ್‌ಪರೆಂಟ್ ಶೀಟ್ಸ್‌ಗಳ ಖರೀದಿ ಬಗ್ಗೆ.	28-11-2025 at 17:00 Hrs.
9	BMTC/2025-26/ IND0234	ಟೈರ್‌ಗಳು, ಟ್ಯೂಬ್‌ಗಳು, ಫ್ಲಾಪ್ ಸೆಟ್ ಟ್ಯೂಬ್‌ಲೆಸ್ ರೇಡಿಯಲ್ ಟೈರ್‌ಗಳು, ಹೆಚ್ಚುವರಿ ಟ್ಯೂಬ್‌ಗಳು ಫ್ಲಾಪ್‌ಗಳು ಖರೀದಿ ಬಗ್ಗೆ	15-12-2025 at 17:00 Hrs.
10	BMTC/2025-26/ IND0235	ಅಲ್ಯೂಮಿನಿಯಂ ಪಾಪ್ ರಿವೆಟ್ಸ್‌ಗಳ ಖರೀದಿ ಬಗ್ಗೆ.	28-11-2025 at 17:00 Hrs.
11	BMTC/2025-26/ IND0236	2K PU ಪೇಂಟ್ಸ್ ಖರೀದಿ ಬಗ್ಗೆ.	15-12-2025 at 17:00 Hrs
		ತಿದ್ದುಪಡಿ: KPP-ಪೋರ್ಟಲ್‌ನಲ್ಲಿ ಈ ಕೆಳಕಂಡ ಟೆಂಡರ್‌ಗಳಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು ಕೆಳಕಂಡತೆ ವಿಸ್ತರಿಸಲಾಗಿದೆ.	
12	BMTC/2025-26/ IND0214	ಸ್ಟೀರಿಂಗ್ ಅಸೆಂಬ್ಲಿ ಮತ್ತು ಬಿಡಿಭಾಗಗಳ ಖರೀದಿ ಬಗ್ಗೆ.	15-12-2025 at 17:00 Hrs.
13	BMTC/2025-26/ IND0224	ಸ್ಕ್ವೇರ್ ಟ್ಯೂಬ್ ಗಳು/ ರೌಂಡ್ ಪೈಪ್‌ಗಳ ಖರೀದಿ ಬಗ್ಗೆ.	28-11-2025 at 17:00 Hrs.

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ನಿಂದ ಪಡೆಯಬಹುದು.
ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ KPP-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.
ಸೂಚನೆ: ಆಸಕ್ತಿಯುಳ್ಳ ಬಿಡ್‌ದಾರರು KPP ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಮಾಹಿತಿ ಪಡೆಯಬಹುದಾಗಿರುತ್ತದೆ.
ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೋಂದಾಯಿತ ಕಛೇರಿ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001
ದೂರವಾಣಿ ಸಂಖ್ಯೆ: 080-22289966/22256688 ಫ್ಯಾಕ್ಸ್: 080-22264477
ಇ-ಮೇಲ್: mail@vjnl.in, ವೆಬ್‌ಸೈಟ್: www.vjnl.in CIN No: U41000KA2016SGC097260
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ-572132
ಫೋನ್ ನಂ.: 08137- 282112 ಇ-ಮೇಲ್:eeyetmadhugiri4@gmail.com
ಕ್ರಸಂ: ಕಾಇಂ:ವಿಜನಿನಿ:ಎಹೊಯೋ/ಮ/ವಿ.04/ಟೆ.ಅ-08/2025-26 ದಿನಾಂಕ: 10.11.2025
ಟೆಂಡರ್ ಪ್ರಕಟಣೆ: (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿಭಾಗ ಹಾಗೂ ಉಪ-ವಿಭಾಗ ಕಛೇರಿಗಳಿಗೆ **ಒಟ್ಟು 05** ಕಾಮಗಾರಿಗಳ **ರೂ.10.00 ಲಕ್ಷ**ದಿಂದ **ರೂ.12.25 ಲಕ್ಷ**ಗಳಿಗೆ ಮಾನವ ಸೇವೆಯ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಸದರಿ ಸೇವೆಗಳಿಗೆ **Percentage Tender** ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಇ-ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in** ವೆಬ್ ಸೈಟ್ ಮೂಲಕ **ದಿನಾಂಕ: 11.11.2025 ರಿಂದ ದಿನಾಂಕ: 26.11.2025** ರ **ಸಂಜೆ 5:30 ಗಂಟೆ**ಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.
ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ **ದಿನಾಂಕ: 18.11.2025 ರ ಸಂಜೆ 3:00 ಗಂಟೆ**ಯವರೆಗೆ ಸಂಪರ್ಕಿಸಬಹುದು ಹಾಗೂ ಸ್ವೀಕೃತ ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ **ದಿನಾಂಕ: 28.11.2025 ರಂದು ಬೆಳಗ್ಗೆ 11:00 ಗಂಟೆ**ಗೆ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು.
ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿ.ಜ.ನಿ.ನಿ, ಎತ್ತಿನಹೊಳೆ ಯೋಜನಾ ವಿಭಾಗ-04
ಮಧುಗಿರಿ,
DIPR/TUM/RO-159/25-26/Oysters

ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ – 562 159. ದೂರವಾಣಿ : 080 – 2727 4108.
ಇ-ಮೇಲ್ : dudc_ramangara@yahoo.co.in
ಸಂ. : ರಾ.ಜಿ.ನ.ಕೋ./ಎಂ.ಯು.ಎನ್.(1)/ಅಮೃತ ನ-4/ರಾಮನಗರ (ಉಳಿತಾಯ)/ ಆರ್/81/2025-26 ದಿನಾಂಕ : 11-11-2025
ಟೆಂಡರ್ ಪ್ರಕಟಣೆ
ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) 4ನೇ ಹಂತದ ಯೋಜನೆಯ ಈ ಕೆಳಕಂಡ ಕಾಮಗಾರಿಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ರವರು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಆಸಕ್ತಿಯುಳ್ಳ ಗುತ್ತಿಗೆದಾರರು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ. ಪೋರ್ಟಲ್ ವೇದಿಕೆಯಿಂದ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇ.ಎಂ.ಡಿ. ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಕೆ.ಪಿ.ಪಿ. ಪೋರ್ಟಲ್ ಆನ್‌ಲೈನ್ ಮೂಲಕವೇ ಪಾವತಿಸುವುದು.
1) ಇಂಡೆಂಟ್ ನಂ. **1) DMA/2025-26/BD/WORKINDENT _50920, 2) DMA/2025-26/RD/WORKINDENT_50894,** 2) ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : 204.76 ಲಕ್ಷಗಳು ಮತ್ತು ರೂ. 839.02 ಲಕ್ಷಗಳಾಗಿರುತ್ತದೆ, 3) ಇ.ಎಂ.ಡಿ ಮೊತ್ತ : ರೂ. 3.08 ಲಕ್ಷಗಳು ಮತ್ತು ರೂ. 12.52 ಲಕ್ಷಗಳಾಗಿರುತ್ತದೆ, 4) ಪೂರ್ವಭಾವಿ ಸಭೆ ದಿನಾಂಕ : 28-11-2025 ರ ಮಧ್ಯಾಹ್ನ 3.00 ಗಂಟೆಗೆ, 5) ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 12-12-2025 ರ ಸಂಜೆ 5.30 ಗಂಟೆಗೆ,6) ಟೆಂಡರ್‌ಗಳನ್ನು (ತಾಂತ್ರಿಕ ಬಿಡ್) ತೆರೆಯುವ ದಿನಾಂಕ : 15-12-2025 ರ ಬೆಳಿಗ್ಗೆ 11.00 ಗಂಟೆ ನಂತರ.
ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.
ಡಿಐಪಿಆರ್/ರಾಮನಗರ/440/ಮಣಿಪಾಲ್/2025-26

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001. ದೂರವಾಣಿ: +91-0821-2520512
ಇಮೇಲ್: mmcrimysore@yahoo.com, ವೆಬ್‌ಸೈಟ್: www.mmcri.karnataka.gov.in
ಸಂಖ್ಯೆ: ಸರಬ/ವಿವ/389/2023-24 ದಿನಾಂಕ: 03.11.2025
ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ವಿಷಯ : ಈ ವಿದ್ಯಾಲಯದ ಆಡಳಿತ ವ್ಯಾಪ್ತಿಯಲ್ಲಿರುವ ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನೊಳಗೊಂಡಂತೆ ಆವರಣದಲ್ಲಿ ಉಪಹಾರ ಮಂದಿರವನ್ನು ನಡೆಸಲು ಟೆಂಡರ್ ಅಹ್ವಾನಿಸಿರುವ ಬಗ್ಗೆ.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನೊಳಗೊಂಡಂತೆ ಆವರಣದಲ್ಲಿ ಉಪಹಾರ ಮಂದಿರವನ್ನು ನಡೆಸಲು ಮೂರು ವರ್ಷದ ಅವಧಿಗೆ ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ಮೂಲಕ **ದಿನಾಂಕ 12.11.2025** ರಿಂದ ಪಡೆಯಬಹುದಾಗಿದ್ದು, **ದಿನಾಂಕ 26.11.2025 ರಂದು** ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.
ಸಹಿ/- ನಿರ್ದೇಶಕರು ಮತ್ತು ಡೀನ್,
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು
DIPR/MYS/KAVITA/1213/2025-26

ಸಮಾಚಾರ ಸಣ್ಣದಲ್ಲ

ಬಸ್ ಡಿಕ್ಕಿ: ತರಕಾರಿ ಅಂಗಡಿಗೆ ನುಗ್ಗಿದ ಕಾರು

ಸಕಲೇಶಪುರ: ಕಾರು ಚಾಲಕನ ಅಜಾರುಗತೆ ಚಾಲನೆಯಿಂದ ಕೆ.ಎಸ್.ಆರ್.ಟಿ.ಸಿ ಬಸ್ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರು ರಸ್ತೆ ಬದಿಯಲ್ಲಿರುವ

ತರಕಾರಿ ಅಂಗಡಿಯೊಂದಕ್ಕೆ ನುಗ್ಗಿರುವ ಘಟನೆ ಬುಧವಾರ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಹಳೇ ರಾಷ್ಟ್ರೀಯ ಹೆದ್ದಾರಿ 75 ಬಾಳೆಗದ್ದೆ ಬಡಾವಣೆಯಲ್ಲಿರುವ ಕುಬೇರ ಹೋಟೆಲ್ ಸಮೀಪ ಐ20 ಕಾರು ಚಾಲಕನೊಬ್ಬ ರಸ್ತೆಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಯೂ ಟರ್ನ್ ತೆಗೆದುಕೊಳ್ಳುವ ಸಂಧರ್ಭದಲ್ಲಿ ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಹೋಗುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸ್ ಕಾರಿಗೆ ಡಿಕ್ಕಿ ಹೊಡೆದಿದೆ ಪರಿಣಾಮ ಕಾರು ರಸ್ತೆಯ ಮತ್ತೊಂದು ಬದಿಯಲ್ಲಿದ್ದ ತರಕಾರಿ ಅಂಗಡಿಗೆ ನುಗ್ಗಿದೆ. ಅದೃಷ್ಟವಷಾತ್ ತರಕಾರಿ ಅಂಗಡಿಯ ಮಾಲಕಿ ಇನ್ನೊಂದು ಕಡೆಯಿದ್ದಿದ್ದರಿಂದ ಯಾವುದೆ ಅನಾಹುತ ಸಂಭವಿಸಿಲ್ಲ.

ಗುಪ್ತಚರ ವೈಫಲ್ಯವೇ ದಿಲ್ಲಿ ಸ್ಫೋಟಕ್ಕೆ ಕಾರಣ

ದಾವಣಗೆರೆ: ಕೇಂದ್ರ ಸರಕಾರ, ಕೇಂದ್ರ ಗೃಹ ಇಲಾಖೆಯ ಭದ್ರತಾ ವೈಫಲ್ಯವೇ ದಿಲ್ಲಿ ಸ್ಫೋಟಕ್ಕೆ ಮುಖ್ಯ ಕಾರಣವ ಎಂದು ಸಂಸದೆ ಡಾ.ಪ್ರಭಾ

ಮಲ್ಲಿಕಾರ್ಜುನ್ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಆಪರೇಷನ್ ಸಿಂಧೂರಕ್ಕೆ ಪ್ರತಿಯಾಗಿ ದಿಲ್ಲಿ ಸ್ಫೋಟ ನಡೆಸಲಾಗಿದೆ ಎನ್ನಲಾಗುತ್ತಿದೆ. ಕೂಡಲೇ ಕೇಂದ್ರ ಗೃಹ ಸಚಿವರು ಭಯೋತ್ಪಾದನಾ ಚಟುವಟಿಕೆಗೆ ಕಡಿವಾಣ ಹಾಕಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಕೆಂಪು ಕೋಟೆಯು ಸಾಕಷ್ಟು ಜನಸಂದಣಿ ಹೊಂದಿರುವ ಪ್ರದೇಶ. ಅಲ್ಲಿ ಚರ್ಚ್, ಗುರುದ್ವಾರ, ಗೌರಿ ಶಂಕರ ದೇವಸ್ಥಾನ ಇದೆ. ಅದೇ ಸ್ಥಳದಲ್ಲಿ ಸ್ಫೋಟ ಸಂಭವಿಸಿ 13 ಜನ ಜೀವ ಕಳೆದುಕೊಂಡಿರುವುದು ಆತಂಕಕಾರಿ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಚಿತ್ತಾಪುರ ಪಥ ಸಂಚಲನ ಹೈ ವಿಚಾರಣೆ ಇಂದು

ಕಲಬುರಗಿ: ಚಿತ್ತಾಪುರದಲ್ಲಿ ಆರೆಸ್ಸೆಸ್ ಪಥಸಂಚಲನಕ್ಕೆ ಅನುಮತಿ ನೀಡುವ ಕುರಿತ ವಿಚಾರಣೆ ಗುರುವಾರ (ನ.13) ಮಧ್ಯಾಹ್ನ 2.30ಕ್ಕೆ ಕಲಬುರಗಿ ವಿಭಾಗೀಯ ಹೈಕೋರ್ಟ್ ಪೀಠದಲ್ಲಿ ನಡೆಯಲಿದೆ. ಪಥಸಂಚಲನಕ್ಕೆ ಅನುಮತಿ ಕೋರಿ ಆರೆಸ್ಸೆಸ್ ಜಿಲ್ಲಾ ಸಂಘಚಾಲಕ ಅಶೋಕ್ ಪಾಟೀಲ್ ಸೇರಿದಂತೆ ವಿವಿಧ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಪೀಠ ಕಳೆದ ನವೆಂಬರ್ 7ರಂದು ಕೈಗೊಂಡು, ಪ್ರತ್ಯೇಕ ದಿನಾಂಕ ನಿಗದಿಪಡಿಸುವಂತೆ ಸರಕಾರಕ್ಕೆ ಸೂಚಿಸಿತ್ತು. ಪ್ರತ್ಯೇಕ ದಿನಾಂಕ ನಿಗದಿಯಾಗದಿದ್ದರೆ ನ್ಯಾಯಾಲಯವೇ ತೀರ್ಮಾನಿಸಲಿದೆ ಎಂದು ಪೀಠ ತಿಳಿಸಿತ್ತು. ಹೈಕೋರ್ಟ್ ಆದೇಶದಂತೆ ಮೊದಲು ಕಲಬುರಗಿಯಲ್ಲಿ ಶಾಂತಿ ಸಭೆ ನಡೆದಿತ್ತು. ಆದರೆ ಯಾವುದೇ ಒಮ್ಮತ ಮೂಡದೆ ಅದು ಅಶಾಂತಿಯಲ್ಲಿ ಅಂತ್ಯವಾಯಿತು. ನಂತರ ಬೆಂಗಳೂರಿನ ಕಚೇರಿಯಲ್ಲಿ 2ನೇ ಶಾಂತಿ ಸಭೆ ನಡೆದಿದ್ದು, ಅದು ಫಲಪ್ರದವಾಗಿದೆ. ಸಭೆಯಲ್ಲಿ ಆರೆಸ್ಸೆಸ್ ಮುಖಂಡರು ನ.13 ಅಥವಾ 16ರಂದು ಪಥ ಸಂಚಲನಕ್ಕೆ ಅವಕಾಶಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.



ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಗರುಡಾಚಾರ್ ಪಾಳ್ಯ, ಬೆಂಗಳೂರು**

ಸಮಸ್ಯೆಯೇನು..?: ರಸ್ತೆ ಪಕ್ಕದಲ್ಲಿ ಸುರಿದಿರುವ ತ್ಯಾಜ್ಯ ತೆರುವ ಮಾಡುವ ಕುರಿತು.

- **ಪರಿಹಾರ:** ಮಹದೇವಪುರ ವಿಧಾನಸಭಾ ಕ್ಷೇತ್ರದ ಗರುಡಾಚಾರ್ ಪಾಳ್ಯದ 8ನೇ ಕ್ರಾಸ್‌ನ ಬಸ್ ನಿಲ್ದಾಣ ಸಮೀಪದ ರಸ್ತೆ ಪಕ್ಕದಲ್ಲಿ ಸುರಿದಿರುವ ಕಸವನ್ನು ವಿಲೇವಾರಿ ಮಾಡದ ಬಗ್ಗೆ ಸ್ಥಳೀಯರೊಬ್ಬರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಜಿಬಿಎ ಅಧಿಕಾರಿಗಳು ಪೌರ ಕಾರ್ಮಿಕರ ಮೂಲಕ ಕಸವನ್ನು ವಿಲೇವಾರಿ ಮಾಡಿಸಿದ್ದಾರೆ. ಸಾರ್ವಜನಿಕರು ಕಸ ಹಾಕದಂತೆ ಫಲಕ ಅಳವಡಿಕೆ ಮಾಡಿಸಿದ್ದಾರೆ.

ಮತ್ತೊಮ್ಮೆ ಸಭೆ ವಿಫಲ, ಮುಧೋಳದಲ್ಲಿ ರಸ್ತೆ ತಡೆದು ಆಕ್ರೋಶ | ಎತ್ತಿನ ಬಂಡಿ, ಟ್ರ್ಯಾಕ್ಟರ್‌ಗೆ ಕಬ್ಬು ತುಂಬಿಸಿ ಪ್ರತಿಭಟನೆ

ಬಾಗಲಕೋಟೆ, ಬೀದರ್‌ನಲ್ಲಿ ಕಬ್ಬಿನ ಕಿಚ್ಚು ತೀವ್ರ

ಬಾಗಲಕೋಟೆ: ಜಿಲ್ಲೆಯ ಮುಧೋಳದ ಲೋಕೋಪಯೋಗಿ ಇಲಾಖೆಯಲ್ಲಿ ಮಂಗಳವಾರ ತಡರಾತ್ರಿವರೆಗೂ ನಡೆದ ಅಧಿಕಾರಿಗಳು ಹಾಗೂ ರೈತರ ಸಭೆಯಲ್ಲಿ ಸರಕಾರದ ತೀರ್ಮಾನ ಒಪ್ಪದ ರೈತ ಮುಖಂಡರು ಬುಧವಾರ ಮುಧೋಳ ತಾಲೂಕಿನಲ್ಲಿ ರಸ್ತೆ ತಡೆ ಕರೆ ನೀಡಿದರು.

ಸಭೆ ವಿಫಲವಾದ ಹಿನ್ನೆಲೆಯಲ್ಲಿ ಬುಧವಾರ ಬೆಳ್ಳಂಬೆಳಿಗ್ಗೆ ಮುಧೋಳ ತಾಲೂಕಿನ ಪ್ರತಿಯೊಂದು ರಸ್ತೆಗಳನ್ನು ಬಂದ್ ಮಾಡಿ ರೈತರು ಆಕ್ರೋಶ ಹೊರ ಹಾಕಿದರು.

ವಿಜಯಪುರ-ಬೆಳಗಾವಿ ಹೆದ್ದಾರಿಯನ್ನು ಕಸಬಾ ಜಂಬಗಿ ಕ್ರಾಸ್ ಬಳಿ ಬಂದ್ ಮಾಡುವ ಮೂಲಕ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದರು. ರಸ್ತೆ ಬಂದ್ ಹಿನ್ನೆಲೆ ವಾಹನ ಸವಾರರ ಪರದಾಡಿದರು. ಪ್ರತಿಭಟನಾಕಾರರ ಜತೆ ವಾಹನ ಸವಾರರ ವಾಗ್ವಾದ ನಡೆಸಿದರು. ಬೆಳಗ್ಗೆ 11ರ ಹೊತ್ತಿಗೆ ತೀವ್ರ ಸ್ವರೂಪ ಪಡೆದ ಪ್ರತಿಭಟನೆ ಗ್ರಾಮೀಣ ಭಾಗದ ಎಲ್ಲ ರಸ್ತೆ ಬಂದ್ ಮಾಡಿದರು. ಮುಧೋಳ ತಾಲೂಕಿನ ಶಿರೋಳ ಬಳಿ ಜಮಖಂಡಿ ಡಿವೈಎಸ್ಪಿ ಸೈಯ್ಯದ್ ರೋಷನ್ ಜಮೀರ್ ಅವರ ಕಾರು ಅಡ್ಡಗಟ್ಟಿದ ರೈತರು. ಸಕ್ಕರೆ ಕಾರ್ಖಾನೆ ಮಾಲೀಕರ ಪರವಾಗಿದ್ದೀರೆಂದು ಆರೋಪಿಸಿದ ರೈತರು. ಕೆಲಕಾಲ ರೈತರು ಮತ್ತು ಡಿವೈಎಸ್ಪಿ ನಡುವೆ ಮಾತಿನ ಚಕಮಕಿ ನಡೆ ಯಿತು. ನಂತರ ಡಿವೈಎಸ್ಪಿ ಮನವಿ ಮೇರೆಗೆ ರೈತರು ವಾಹನ ಬಿಟ್ಟರು. ಮಂಟೂರ, ಮೆಳ್ಳಿಗೇರಿ, ಇಂಗಳಿ ಯಡಹಳ್ಳಿ, ಹೆಬ್ಬಾಳ ಕ್ರಾಸ್, ಮೆಟಗುಟ್ಟ, ಹಲಕಿ, ನಿಂಗಾಪುರ, ಕುಳಲಿ, ಒಂಟಗೋಡಿ ಸೇರಿದಂತೆ ಪ್ರತಿ ಗ್ರಾಮದ ರಸ್ತೆಯನ್ನು ಬಂದ್ ಮಾಡಿ ಆಕ್ರೋಶ ವ್ಯಕ್ತ ಪಡಿಸಿದರು.

ಲೋಕಾಪುರ-ಯಾದವಾಡ ರಸ್ತೆಯ ಹಲಕಿ ಗ್ರಾಮದಲ್ಲಿ ರೈತರು ರಸ್ತೆ ತಡೆ ನಡೆಸಿದರು.

3,300 ಬೆಲೆಗೆ ಬೆಳೆಗಾರರು ಪಟ್ಟು

ಬುಧವಾರ ಸಂಜೆ ಜಿಲ್ಲಾಡಳಿತದ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ರೈತ ಮುಖಂಡರೊಂದಿಗೆ ಸಭೆ ನಡೆಸಿದರು. ಸಭೆಯಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರು ಟನ್ ಕಬ್ಬಿಗೆ 3,250 ರು. ನೀಡುವುದಾಗಿ ಒಪ್ಪಿದ್ದಾಗಿ ತಿಳಿಸಿದರು. ಇದಕ್ಕೆ ಒಪ್ಪದ ರೈತರು ಯಾವುದೇ ರಿಕವರಿ ನೋಡದೇ ಟನ್ ಕಬ್ಬಿಗೆ 3,300 ನೀಡಲೇಬೇಕು ಪಟ್ಟು ಹಿಡಿದಿದ್ದಾರೆ. ರೈತ ಮುಖಂಡರಾದ ಬಸವಂತ ಕಾಂಬಳೆ, ಮುತ್ತಪ್ಪ ಕೋಮಾರ, ಸುಭಾಸ ಶಿರಬೂರ, ಈರಪ್ಪ ಹಂಚಿನಾಳ, ಸುರೇಶ ಚಿಂಚಲಿ, ಮಹೇಶ ಪಾಟೀಲ, ದುಂಡಪ್ಪ ಯರಗಟ್ಟಿ, ಶ್ರೀಶೈಲ ಪಾಟೀಲ, ಸುರೇಶ ರಾಮತೀರ್ಥ, ರಾಕೇಶ ಗಡದನ್ನವರ, ಸುರೇಶ ಚಿಂಚಲಿ, ಮುತ್ತು ಹೊಸಕೋಟಿ, ಅಶೋಕ ಪಡಸಲಗಿ, ಹಣಮಂತ ಪಾಟೀಲ ಸೇರಿದಂತೆ ಸಾವಿರಾರೂ ಸಂಖ್ಯೆಯಲ್ಲಿ ರೈತರು ಸೇರಿದ್ದರು.

ಮುಧೋಳ ತಾಲೂಕಿನ ಸೋರಗಾಂವಿಯಲ್ಲಿ ರೈತರು ರಸ್ತೆಗೆ ಅಡ್ಡಲಾಗಿ ಮುಳ್ಳಿನ ಕಂಟಿಗಳನ್ನು ಹಚ್ಚಿ ರಸ್ತೆ ತಡೆ ನಡೆಸಿದರು.

ಇಂದು ಟ್ರ್ಯಾಕ್ಟರ್ ರ‍್ಯಾಲಿ

ವಿವಿಧ ಅಧಿಕಾರಿಗಳು ಹಾಗೂ ಸಕ್ಕರೆ ಕಾರ್ಖಾನೆಯವರು ಸೇರಿ ರೈತ ಮುಖಂಡರು ಮತ್ತೊಂದು ಸುತ್ತಿನ ಸಭೆ ನಡೆಸಿದರು. ಈ ಸಭೆಯಲ್ಲೂ ರೈತರು ತಮ್ಮ ಬೇಡಿಕೆ ಸಡಿಲಿಸದ ಪರಿಣಾಮ ಸಭೆ ವಿಫಲಗೊಂಡಿದೆ. ಸಭೆ ವಿಫಲ ಆಗುತ್ತಿದ್ದಂತೆ ರೈತ ಮುಖಂಡರು ವೇದಿಕೆಗೆ ಬಂದು ಇಂದು ಮುಧೋಳ ನಗರದಲ್ಲಿ ಟ್ರ್ಯಾಕ್ಟರ್ ರ‍್ಯಾಲಿಗೆ ಕರೆ ನೀಡಿದ್ದಾರೆ.

ಬೀದರ: ಟನ್ ಕಬ್ಬಿಗೆ 3500 ರೂಪಾಯಿ ಕಬ್ಬಿನ ದರ ನಿಗದಿ ಪಡಿಸಬೇಕು ಎಂದು ಆಗ್ರಹಿಸಿ ಜಿಲ್ಲೆಯ ಹುಮನಾಬಾದ ನಗರದಲ್ಲಿ ರೈತರಿಂದ ಬ್ರಹತ್ ಪ್ರತಿಭಟನೆ ನಡೆಸಿದರು. ಬೀದರ ಜಿಲ್ಲಾ ಸಂಯುಕ್ತ ಕಿಸಾನ್ ಮೋರ್ಚಾ, ರೈತ ಸಂಘಟನೆಗಳ ಒಕ್ಕೂಟ,

ನಗರದ ಪ್ರಮುಖ ವೃತಗಳ ಮುಖಾಂತರ ರಾಷ್ಟ್ರೀಯ ಹೆದ್ದಾರಿ ಕಡೆಗೆ ಹೋರಟ ಎತ್ತಿನ ಬಂಡಿ.ಟ್ರಾಕ್ಟರ್‌ಗೆ ಕಬ್ಬು ಕಟ್ಟಿ ಹಸಿರು ಶಾಲು ಬಿಸುತ್ತಾ ಜೈ ಜವಾನ್ ಜೈ ಕಿಸಾನ್ ಎನ್ನುವ ಘೋಷಣೆಯೊಂದಿಗೆ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಮೆರವಣಿಗೆಯು ರಾಷ್ಟ್ರೀಯ ಹೆದ್ದಾರಿ ಕಡೆಗೆ ಸಾಗುತ್ತಿರುವಾಗ ಮಾರ್ಗಮಧ್ಯದಲ್ಲಿ ಪ್ರತಿಭಟನಾ ನಿರತ ರೈತರನ್ನು ಪೊಲೀಸರು ತಡೆದರು. ರೈತರ ಪ್ರತಿಭಟನೆಗೆ ದಲಿತ ಸಂಘಟನೆ, ಕಾರ್ಮಿಕ ಸಂಘಟನೆ ಹಾಗೂ ವಕೀಲ ಸಂಘಟನೆಯವರು ಸೇರಿ ಹಲವಾರು ಸಂಘಟನೆಗಳು ಬೆಂಬಲ ಸೂಚಿಸಿದವು. ಪ್ರತಿಭಟನೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು.

ಸಚಿವ ಖಂಡ್ರೆಗೆ ಶ್ರದ್ಧಾಂಜಲಿ: ಎತ್ತಿನ ಬಂಡಿ, ಟ್ಯಾಕ್ಟರ್ ಅಲ್ಲಿ ಹಳ್ಳಿ ಹಳ್ಳಿಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದ ರೈತರು, ಸಿಎಂ ಸಿದ್ದರಾಮಯ್ಯ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರ ಶ್ರದ್ಧಾಂಜಲಿ ಭಾವಚಿತ್ರ ಹಿಡಿದು ಆಕ್ರೋಶ ವ್ಯಕ್ತಪಡಿಸಿದರು. ರೈತರಿಂದ ಆ ಮೂವರ ಭಾವಚಿತ್ರಗಳು ಕಸಿದುಕೊಳ್ಳಲು ಪೊಲೀಸರು ಮುಂದಾದ ಹರಸಾಹಸ ಪಟ್ಟರು. ಹುಮನಬಾದ್ ಡಿವೈಎಸ್ಪಿ ಮಡಿವಾಳಪ್ಪ ಟ್ರ್ಯಾಕ್ಟರ್ ಏರಿ ಭಾವಚಿತ್ರ ಕಸಿದುಕೊಳ್ಳಲು ಯತ್ನಿಸಿದರು ಕೂಡ ರೈತರು ಭಾವಚಿತ್ರ ನೀಡುವುದಕ್ಕೆ ನಿರಾಕರಿಸಿದರು. ಈ ಸಮಯದಲ್ಲಿ ಕೆಲಹೊತ್ತು ಪೊಲೀಸ್ ಮತ್ತು ರೈತರ ನಡುವೆ ವಾಕ್ಸಮರ ನಡೆಯಿತು. ಬೀದರ್ ಜಿಲ್ಲೆಯಲ್ಲಿ ಪ್ರತಿ ಟನ್ ಕಬ್ಬಿಗೆ 3,200 ರೂ. ನಿಗದಿ ಮಾಡಬೇಕು. ಅಲ್ಲಿಯವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ, ನಮ್ಮ ಬೇಡಿಕೆಗಳು ಈಡೇರುವವರೆಗೆ ನಮ್ಮ ಹೋರಾಟ ನಿರಂತರವಾಗಿ ಮುಂದುವರೆಯಲಿದೆ ಎಂದು ರೈತರು ಎಚ್ಚರಿಸಿದರು. ರೈತರ ಹೋರಾಟಕ್ಕೆ ಹುಮನಾಬಾದ್‌ನ ಶಾಸಕ ಸಿದ್ದು ಪಾಟೀಲ್, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ್ ಪಾಟೀಲ್, ಮಾಜಿ ಸಚಿವ ರಾಜಶೇಖರ್ ಪಾಟೀಲ್, ಎಂಎಲ್ಸಿ ಭೀಮರಾವ್ ಪಾಟೀಲ್ ಬೆಂಬಲ ಸೂಚಿಸಿದರು. ಪಕ್ಷಾತೀತವಾಗಿ ರೈತರ ಹೋರಾಟಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್ ಎರಡು ಪಕ್ಷದ ನಾಯಕರು ಬೆಂಬಲ ನೀಡಿದರು.

ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ

ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಭೇಟಿ ನೀಡಿ ನಾಳೆ ರೈತರು ಹಾಗೂ ಕಾರ್ಖಾನೆ ಆಡಳಿತ ಮಂಡಳಿಯವರನ್ನು ಕರೆದು ಸಭೆ ನಡೆಸುವ ಮೂಲಕ ರೈತರ ಬೇಡಿಕೆಗೆ ಸ್ಪಂದಿಸುವ ಭರವಸೆ ನೀಡಿದರು.

ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನೆ.

ಮುಖ್ಯಾಂಶಗಳು

- 50 ಕ್ಕೂ ಅಧಿಕ ಎತ್ತಿನ ಬಂಡಿ, ಟ್ರ್ಯಾಕ್ಟರ್ ನೊಂದಿಗೆ ಪ್ರತಿಭಟನೆಗೆ ಆಗಮಿಸಿದ ರೈತರು.
- ಸಿಎಂ, ಸಕ್ಕರೆ ಸಚಿವ ಹಾಗೂ ಈಶ್ವರ್ ಖಂಡ್ರೆ ಭಾವಚಿತ್ರ ಪ್ರದರ್ಶನ ಬೆಂಕಿ
- ಪಕ್ಷ ಭೇದ ಮರೆತು ಪ್ರತಿಭಟನೆಯಲ್ಲಿ ಪಾಲ್ಗೊಂಡ ಗಣ್ಯರು

ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ವಿಶೇಷ ಪೂಜೆ

ಡಿಸಿಎಂ ಡಿಕೆ ಶಿವಕುಮಾರ್ ಮುಖ್ಯಮಂತ್ರಿಯಾಗಲೆಂದು ಪ್ರಾರ್ಥಿಸಿ ಹುಲಿಯೂರು ದುರ್ಗದ ಹಳೇವೂರಮ್ಮ ದೇಗುಲದಲ್ಲಿ ಚಂಡಿಕಾ ಹೋಮ ನಡೆಯಿತು.

ಕುಣಿಗಲ್: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲೆಂದು ಪ್ರಾರ್ಥಿಸಿ ಹುಲಿಯೂರುದುರ್ಗ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಹುಲಿಯೂರುದುರ್ಗದ ಹಳೇವೂರಮ್ಮ ದೇವಾಲಯದಲ್ಲಿ ಪೂಜೆ, ಚಂಡಿಕಾ ಹೋಮ ನಡೆಸಿದರು. ಸೋಮವಾರ ರಾತ್ರಿಯಿಂದಲೇ ಪೂಜೆಗಳು ನಡೆದಿದ್ದು, ಮಂಗಳವಾರ ಬೆಳಗ್ಗೆ ಚಂಡಿಕಾ ಹೋಮ ನಡೆಯಿತು. ಹಂಗರಹಳ್ಳಿ ವಿದ್ಯಾ ಚೌಡೇಶ್ವರಿ ಮಠದ ಬಾಲಮಂಜುನಾಥ ಸ್ವಾಮೀಜಿ, ಶಾಸಕ ಡಾ.ರಂಗನಾಥ್ ಪೂಜೆಯಲ್ಲಿ ಭಾಗವಹಿಸಿದ್ದರು. ರಂಗನಾಥ್ ಮಾತನಾಡಿ, ಕಾರ್ಯಕರ್ತರ ಮನಸ್ಥಿತಿಗೆ ಒಪ್ಪಿ ಕಾರ್ಯಕ್ರಮದಲ್ಲಿ ಭಾಗಿಯಾಗಿರುವೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲೆಂದು ಅಪೇಕ್ಷೆ ಪಡುತ್ತಿದ್ದು, ದೈವ ಬಲದ ಕೃಪೆಯಿಂದ ಮುಖ್ಯಮಂತ್ರಿಯಾಗಬಹುದು ಎಂದರು.

ವಿಜಯೇಂದ್ರ ಅಧ್ಯಕ್ಷತೆ ಮುಂದುವರಿಕೆ: ಬಿಎಸ್‌ವೈ

ಬಿಹಾರ ರಾಜ್ಯದಲ್ಲಿ ಬಿಜೆಪಿ ಮೈತ್ರಿಕೂಟಕ್ಕೆ ಗೆಲುವು ಖಚಿತ

ಶಿವಮೊಗ್ಗ: ನಿರೀಕ್ಷೆಗೂ ಮೀರಿ ಬಿಹಾರ ಚುನಾವಣೆಯಲ್ಲಿ ಬಿಜೆಪಿಯ ಮೈತ್ರಿ ಗೆಲುವು ಸಾಧಿಸಲಿದೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಶಿವಮೊಗ್ಗದಲ್ಲಿ ಮಾತನಾಡಿದ ಅವರು, ನಮ್ಮ ನಿರೀಕ್ಷೆ ಮೀರಿ ಬಿಹಾರ ಚುನಾವಣೆಯಲ್ಲಿ ಪ್ರಧಾನ ಮಂತ್ರಿ ಮೋದಿ ಹಾಗೂ ಅಮಿತ್ ಷಾ ಅವರ ಪರಿಶ್ರಮದಿಂದ ಚುನಾವಣೆಯಲ್ಲಿ ಈಗಾಗಲೇ ಗೆದ್ದಿದ್ದೇವೆ. ಚುನಾವಣೆಯಲ್ಲಿ ಕಾಂಗ್ರೆಸ್ ಅಡ್ರೆಸ್ ಇಲ್ಲದಂತೆ ಆಗಿದೆ. ಈಗಾಗಲೇ ಎಲ್ಲಾ ಸಮೀಕ್ಷೆಗಳು ಅದನ್ನೇ ಹೇಳುತ್ತಿವೆ. ದೊಡ್ಡ ಗೆಲುವು ಸಾಧಿಸಲಿದ್ದೇವೆ. ಬಿಹಾರದ ಚುನಾವಣೆಯ ಫಲಿತಾಂಶದ ನಂತರ ಎಲ್ಲ ತಿಳಿದು ಬರಲಿದೆ ಎಂದು ತಿಳಿಸಿದರು. ದೆಹಲಿ ಬ್ಲಾಸ್ಟ್‌ಗೆ ಅತ್ಯಂತ ವ್ಯವಸ್ಥಿತವಾದ ಪಿತೂರಿ ಮಾಡಿದ್ದರು. ಅಲ್ಯೂಮಿನಿಯಂ ಸಲ್ಫೇಟ್ ರಾಸಾಯನಿಕ ಬಳಕೆ ಮಾಡಿ ಬ್ಲಾಸ್ಟ್ ಮಾಡಿದ್ದಾರೆ. ಇದರ ಹೊಣೆಹೊತ್ತವರಿಗೆ ಗತಿ ಕಾಣಿಸುವುದಾಗಿ ಪ್ರಧಾನಮಂತ್ರಿ ಹಾಗೂ ಗೃಹ ಸಚಿವರು ಹೇಳಿದ್ದಾರೆ. ದೊಡ್ಡ ಅನಾಹುತವಾಗುವುದನ್ನು ತಡೆದಿದ್ದಾರೆ. ಆರೋಪಿಗಳನ್ನು 24 ಗಂಟೆಯಲ್ಲಿ ಬಂಧಿಸಲಾಗಿದೆ. ಬಹಳ ಪ್ರಮಾಣದಲ್ಲಿ ಈ ಕೃತ್ಯದಲ್ಲಿ ಒಂದು ಸಮಾಜದವರು ಭಾಗಿಯಾಗಿರುವುದು ಜಗಜ್ಜಾಹೀರಾಗಿದೆ. ಇದನ್ನು ನಾನು ಖಂಡಿಸುತ್ತೇನೆ. ಸ್ವಲ್ಪ ಯಾಮಾರಿದ್ದರೂ ಅನಾಹುತವಾಗುತ್ತಿತ್ತು. ಬಹಳ ಆಶ್ಚರ್ಯಕರ ಸಂಗತಿ ಎಂದರೆ, ದಾಳಿ ಹಿಂದೆ ಇರುವವರು ಮಹಿಳಾ ಹಾಗೂ ಪುರುಷ ವೈದ್ಯರು ಎಂದರು.

> ವಿಜಯೇಂದ್ರ ಅವರೇ ಬಿಜೆಪಿ ರಾಜಾಧ್ಯಕ್ಷರಾಗಿ ಮುಂದುವರೆಯುತ್ತಾರೆ. ಕಾರ್ಯಕರ್ತರು ಸಹ ಅವರೇ ಮುಂದುವರೆಯಬೇಕು ಎಂದು ಆಶಿಸಿದ್ದಾರೆ. ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ, ಎಲ್ಲರೂ ಅವರೇ ಇರಬೇಕು ಎಂದು ಆಶಿಸುತ್ತಿದ್ದಾರೆ.
>
> -ಬಿ.ಎಸ್.ಯಡಿಯೂರಪ್ಪ ಮಾಜಿ ಸಿಎಂ

ಒಂದೇ ಗ್ರಾಮದ 150 ಮಂದಿ ಅಪರಾಧ ಕೃತ್ಯ

ನಟಿ ಪ್ರಿಯಾಂಕಾ ಉಪೇಂದ್ರ ಮೊಬೈಲ್ ಹ್ಯಾಕ್: ಬಂಧನ

ಬೆಂಗಳೂರು: ನಟ ಉಪೇಂದ್ರ ಹಾಗೂ ಪ್ರಿಯಾಂಕಾ ಮೊಬೈಲ್ ಹ್ಯಾಕ್ ಪ್ರಕರಣ ಸಂಬಂಧ ಆರೋಪಿ ಬಿಹಾರ ಮೂಲದ ವಿಕಾಸ್ ಕುಮಾರ್ ಎಂಬಾತನನ್ನು ಸದಾಶಿವನಗರ ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಬಂಧನಕ್ಕೆಂದು ಬಿಹಾರಕ್ಕೆ ಹೋದ ಪೊಲೀಸರೇ ಈ ಸೈಬರ್ ಖದೀಮರ ಜಾಲ ನೋಡಿ ಶಾಕ್ ಆಗಿದ್ದಾರೆ. 20ರಿಂದ 25 ವಯಸ್ಸಿನ ಯುವಕರು ಈ ದಂಧೆಯಲ್ಲಿ ನಿರತರಾಗಿದ್ದು, ಊರಿನ 150 ಮಂದಿ ಯುವಕರು ಸೈಬರ್ ಅಪರಾಧದಲ್ಲೇ ತೊಡಗಿಗೊಂಡಿರುವ ಆಘಾತಕಾರಿ ವಿಷಯ ಈ ವೇಳೆ ಬೆಳಕಿಗೆ ಬಂದಿದೆ. ಸದ್ಯ ಆರೋಪಿ ವಿಕಾಸ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಆನ್‌ಲೈನ್‌ನಲ್ಲಿ ಕೆಲ ವಸ್ತುಗಳನ್ನು ಪ್ರಿಯಾಂಕಾ ಉಪೇಂದ್ರ ಬುಕ್ ಮಾಡಿದ್ದರು. ಈ ವೇಳೆ ಮೊಬೈಲ್‌ಗೆ ಲಿಂಕ್ ಬಂದಿದ್ದು, ಆ ಲಿಂಕ್ ಅನ್ನು ಪ್ರಿಯಾಂಕ ಕ್ಲಿಕ್ ಮಾಡಿದ್ದರು. ಬಳಿಕ ನಟಿ ಪ್ರಿಯಾಂಕಾ ವಾಟ್ಸ್ ಆ್ಯಪ್ ಹ್ಯಾಕ್ ಮಾಡಿದ್ದ ಖದೀಮ, ಅವರ ಸಂಪರ್ಕ ದಲ್ಲಿದ್ದವರಿಗೆ 55 ಸಾವಿರ ಹಣ ಕಳುಹಿಸುವಂತೆ ಸಂದೇಶ ಮಾಡಿದ್ದ.

ವಂಚಕರ ಖಾತೆಗೆ 1.5 ಲಕ್ಷ ಹಣ ವರ್ಗಾವಣೆ

ಹಣ ಅಗತ್ಯವಿದೆ ಎಂದು ಪ್ರಿಯಾಂಕ ಅವರ ವಾಟ್ಸ್ ಆ್ಯಪ್‌ನಿಂದ ಆರೋಪಿ ಹಲವರಿಗೆ ಸಂದೇಶ ಕಳುಹಿಸಿದ್ದು, ಈ ವೇಳೆ ಪ್ರಿಯಾಂಕಾ ಅವರೇ ಸಂದೇಶ ಕಳುಹಿಸಿದ್ದು ಎಂದು ಕೆಲವರು ಹಣ ಹಾಕಿದ್ದಾರೆ. ಸ್ವತಃ ಉಪೇಂದ್ರ ಪುತ್ರ ಕೂಡ ತಾಯಿ ಖಾತೆಗೆ ಐವತ್ತು ಸಾವಿರ ಹಣಹಾಕಿದ್ದರು. ಇನ್ನು ಕೆಲವರು ಅನುಮಾನಗೊಂಡು ಪ್ರಿಯಾಂಕಾ ಅವರ ನಂಬರ್‌ಗೆ ಕರೆ ಮಾಡಿದರೆ ಕಾಲ್ ಕಟ್ ಆಗುತ್ತಿತ್ತು. ವಿಷಯ ಗೊತ್ತಾಗುತ್ತಿದ್ದಂತೆ ಸದಾಶಿವನಗರ ಠಾಣೆಗೆ ಈ ಬಗ್ಗೆ ಪ್ರಿಯಾಂಕಾ ದೂರು ನೀಡಿದ್ದರು. ಆದರೆ, ಅದಾಗಲೇ ಸೈಬರ್ ವಂಚಕನ ಖಾತೆಗೆ ಒಂದೂವರೆ ಲಕ್ಷ ರು. ಹಣ ವರ್ಗಾವಣೆ ಆಗಿತ್ತು.

ಸುಳ್ಳು ಜಾತಿ ಪತ್ರದ ಬಗ್ಗೆ ಎಚ್ಚರ ಅಗತ್ಯ

ಚಿತ್ರದುರ್ಗ: ಒಳಮೀಸಲಾತಿ ವಿಷಯದಲ್ಲಿ ಕೆಲವರು ಸುಳ್ಳು ಸುದ್ದಿ ಹರಡಿಸುತ್ತಿದ್ದು, ಇದಕ್ಕೆಲ್ಲ ಸಿಎಂ ಸಿದ್ದರಾಮಯ್ಯ ತೆರೆ ಎಳೆದಿದ್ದಾರೆ ಎಂದು ಮಾಜಿ ಸಚಿವ ಎಚ್.ಆಂಜನೇಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ಬಳಿಕ ಜಾತಿಪ್ರಮಾಣ ಪತ್ರ ವಿತರಣೆಗೆ ಇದ್ದ ಅಡ್ಡಿ ಆತಂಕಗಳು ದೂರಗೊಂಡಿವೆ. ಈಗಾಗಲೇ ತಂತ್ರಾಂಶ ಕಾರ್ಯಾರಂಭಗೊಂಡಿದೆ ಎಂದರು.

ನಾನು ಆದಿಕರ್ನಾಟಕ ಜಾತಿಸೂಚಕ ಗುಂಪಿಗೆ ಸೇರಿದ್ದು ಮಾದಿಗ ಜಾತಿಯವನಾಗಿದ್ದು, ಈ ಸಂಬಂಧ ಹೊಳಲ್ಕೆರೆ ತಹಸೀಲ್ದಾರ್‌ರಿಂದ ಜಾತಿಪ್ರಮಾಣ ಪತ್ರ ಪಡೆದಿದ್ದೇನೆ. ಈ ಮೂಲಕ ಅಧಿಕೃತವಾಗಿ ಪ್ರಮಾಣ ಪತ್ರ ವಿತರಣೆ ಕಾರ್ಯ ಆರಂಭಗೊಂಡಿದೆ ಎಂದು ತಿಳಿಸಿದರು. ಒಳಮೀಸಲಾತಿ ಜಾರಿ ಬಳಿಕ ಬಹುದೊಡ್ಡ ಸವಾಲು ನಮ್ಮ ಮುಂದಿದೆ. ನುಸುಳುಕೋರರು ಎ ಗುಂಪಿಗೆ ಪ್ರವೇಶ ಮಾಡದಂತೆ ಜಾಗ್ರತೆ ವಹಿಸಬೇಕಾಗಿದೆ. ತಹಸೀಲ್ದಾರ್, ಜಿಲ್ಲಾಧಿಕಾರಿಗಳು ಜಾತಿ, ಸಿಂಧುತ್ವ ಪ್ರಮಾಣ ಪತ್ರ ವಿತರಣೆ ಸಂದರ್ಭ ವಂಶವೃಕ್ಷ, ಜಾತಿಯ ಮೂಲ ಪತ್ತೆ ಹಚ್ಚಬೇಕು ಎಂದರು.

ಒಂದು ವೇಳೆ ಸುಳ್ಳು ಜಾತಿ ಮೂಲಕ ಎ ಗುಂಪಿಗೆ ಪ್ರವೇಶಿದರೆ ಅಂತಹವರನ್ನು ನಾವುಗಳೇ ಪತ್ತೆ ಹಚ್ಚಿ ಕಠಿಣ ಶಿಕ್ಷೆ ವಿಧಿಸುವಂತೆ ಸರಕಾರದ ಮೇಲೆ ಒತ್ತಡ ತರುತ್ತೇವೆ. ಈ ಸಂಬಂಧ ಒಳಮೀಸಲಾತಿ ಕಾವಲು ಸಮಿತಿ ಎಲ್ಲೆಡೆ ರಚಿಸುತ್ತೇವೆ ಎಂದು ತಿಳಿಸಿದರು.

> ಸಿ ಗುಂಪಿಗೆ ಯಾವುದೇ ಸಮಸ್ಯೆ ಇಲ್ಲ. ಆದರೆ, ಎ ಮತ್ತು ಬಿ ಗುಂಪಿನಲ್ಲಿ ಎಕೆ,ಎಡಿ ಯವರು ತಮ್ಮ ಮೂಲ ಜಾತಿ ದಾಖಲಿಸಿಕೊಳ್ಳುವ ವೇಳೆ ಸುಳ್ಳು ಹೇಳಿ ಅಶಕ್ತರ ಗುಂಪು ಪ್ರವೇಶಿಸುವ ಆತಂಕ ಇದೆ. ಇದಕ್ಕೆ ಕಡಿವಾಣ ಹಾಕಲು ಅಧಿಕಾರಿಗಳು ವಂಶವೃಕ್ಷ, ಸ್ಥಳ ಪರೀಶೀಲನೆ ನಡೆಸುವುದು ಅಗತ್ಯವಿದೆ.
>
> -ಎಚ್.ಆಂಜನೇಯ, ಮಾಜಿ ಸಚಿವ

ದೇಶದ ಭದ್ರತೆಗೆ ಒಂದಾಗಬೇಕು: ಸುಬುಧೇಂದ್ರ ತೀರ್ಥ ಸ್ವಾಮೀಜಿ

ಹೊಸಪೇಟೆ: ದೆಹಲಿಯ ಕೆಂಪುಕೋಟೆಯ ಬಳಿ ಮಹಾಸ್ಫೋಟದಿಂದ ಶಾಂತಿ, ಆಸ್ತಿಪಾಸ್ತಿ ಹಾನಿ ಆಗಿದೆ. ಇದನ್ನು ಉಗ್ರವಾಗಿ ಖಂಡಿಸುತ್ತಿದ್ದೇನೆ. ದೇಶದ ಶಾಂತಿ, ಭದ್ರತೆ ವಿಚಾರದಲ್ಲಿ ಎಲ್ಲರೂ ಒಂದಾಗಿ ಕೇಂದ್ರ ಸರಕಾರಕ್ಕೆ ಬೆಂಬಲವಾಗಿ ನಿಲ್ಲಬೇಕು ಎಂದು ಮಂತ್ರಾಲಯ ರಾಘವೇಂದ್ರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಹೇಳಿದ್ದಾರೆ.

ಹಂಪಿಯಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿ, ದೇಶದ ಎಲ್ಲ ಪ್ರಜೆಗಳು ಶಾಂತಿ ಭಂಗವಾಗುವಂತಹ ಘಟನೆಗಳು ಸಂಭವಿಸುವ ಸೂಚನೆ ದೊರೆತಲ್ಲಿ ಸೂಕ್ತ ಭದ್ರತಾ ಇಲಾಖೆಗಳಿಗೆ ತಿಳಿಸಬೇಕು. ಜನರು ಇಂತಹ ಘಟನೆಗಳ ವಿರುದ್ಧ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದರು. ನಮ್ಮ ದೇಶ ಶಾಂತಿಪ್ರಿಯವಾದ ದೇಶ, ಇಲ್ಲಿ ಕ್ಷುದ್ರ ಶಕ್ತಿಗಳು, ಉಗ್ರ ಶಕ್ತಿಗಳು ಶಾಂತಿ, ನೆಮ್ಮದಿ ಕೆಡಿಸಲು ಯತ್ನಿಸುತ್ತಿವೆ. ನಮ್ಮ ದೇಶ ತಾನಾಗೀಯೆ ಹೋಗಿ, ಯುದ್ಧ, ದಬ್ಬಾಳಿಕೆ, ಉಗ್ರವಾದ ಮಾಡುವ ದೇಶವಲ್ಲ. ಯಾವುದೋ ದೇಶದ ಪ್ರೇರಣೆ ಪಡೆದು ಕೆಂಪುಕೋಟೆಯ ಬಳಿ ಬಂದು ವಿಧ್ವಂಸಕ ಕೃತ್ಯ ಎಸಗಲಾಗಿದೆ. ನಮ್ಮ ದೇಶ ಮತ್ತು ವಿಶ್ವಸಂಸ್ಥೆ ಒಟ್ಟುಗೂಡಿ ಅಪರಾಧಿಗಳಿಗೆ ಶಿಕ್ಷೆ ನೀಡಬೇಕಾಗಿದೆ ಎಂದು ಶ್ರೀಗಳು ಹೇಳಿದರು.

ಕಾನೂನುಬಾಹಿರ ಕೃತ್ಯಕ್ಕೆ ಸರಕಾರದಿಂದ ಸಹಕಾರ

ಕಾರ್ಕಳ: ಶಿರ್ಲಾಲು, ನಲ್ಲೂರು, ಮತ್ತು ತೆಳ್ಳಾರು ಪ್ರದೇಶಗಳಲ್ಲಿ ನಡೆದ ಸರಣಿ ಅಕ್ರಮ ಚಟುವಟಿಕೆಗಳ ಬಗ್ಗೆ ಶಾಸಕ ವಿ.ಸುನೀಲ್ ಕುಮಾರ್ ಅವರು ರಾಜ್ಯ ಸರಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಡ ಹೈನುಗಾರ್ತಿಗೆ ಮಾರಕಾಸ್ತ್ರ ತೋರಿಸಿ ದನ ಕಳ್ಳತನ, ಅಕ್ರಮ ಕಸಾಯಿ ಖಾನೆ, ಹಾಗೂ ಕಾಡುಪ್ರಾಣಿ ಮಾಂಸ ಪತ್ತೆ ಇದೆಲ್ಲವೂ ರಾಜ್ಯದ ಕಾನೂನು -ಸುವ್ಯವಸ್ಥೆಯ ಕರಾಳ ಮುಖದ ನಿಜ ಸ್ವರೂಪ ಬಿಚ್ಚಿಟ್ಟಿದೆ ಎಂದು ಕಿಡಿಕಾರಿದ್ದಾರೆ. ಈ ಎಲ್ಲಾ ಘಟನೆಗಳನ್ನು ತೀವ್ರವಾಗಿ ಖಂಡಿಸಿರುವ ಅವರು, ಇಂತಹ ಹಲವು ಪ್ರಕರಣಗಳ ಆರೋಪಿಗಳೆಲ್ಲರೂ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡಿದವರು. ಅಕ್ರಮ ಗೋಹತ್ಯೆ ದಂಧೆಯ ಹಣವನ್ನು ಕಾಂಗ್ರೆಸ್ ಚುನಾವಣೆಗೆ ಬಳಸುತ್ತಿದೆಯೇ? ಕಾಂಗ್ರೆಸ್ ರಕ್ಷಣೆ ನಿಲ್ಲುತ್ತದೆ ಎಂಬ ಕಾರಣಕ್ಕೆ ಕಿಡಿಗೇಡಿಗಳು ಭಯವಿಲ್ಲದೆ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದರು.

ಹಳೇ ವೈಷಮ್ಯಕ್ಕೆ ಹಾಡಹಗಲೇ ಮಾರಣಾಂತಿಕ ಹಲ್ಲೆ

ಎಸ್‌ಡಿಎ ಮೇಲೆ ಹಲ್ಲೆ, ಕೊಲೆ ಯತ್ನ

ಯಾದಗಿರಿ: ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ಹಾಡಹಗಲೇ ಶಹಬಾದ ನಗರಸಭೆ ಮಾಜಿ ಅಧ್ಯಕ್ಷೆ, ಪ್ರಸುತ್ತ ಯಾದಗಿರಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಸ್‌ಡಿಎ ಸಿಬ್ಬಂದಿ ಅಂಜಲಿ ಕಂಬಾನೂರ (35)

ಎಂಬುವವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ ಘಟನೆ ಬುಧವಾರ ನಡೆದಿದೆ.

ಯಾದಗಿರಿ ನಗರದ ಗ್ರೀನ್ ಸಿಟಿ ಬಡಾವಣೆಯಲ್ಲಿ ರುವ ಸಮಾಜ ಕಲ್ಯಾಣ ಕಚೇರಿಯಲ್ಲಿ ಕಾರ್ಯನಿರ್ವ ಹಿಸುತ್ತಿದ್ದರು. ಎಂದಿನಂತೆ ಕರ್ತವ್ಯಕ್ಕಾಗಿ ಕಚೇರಿಗೆ ಕಾರಿನಲ್ಲಿ ಆಗಮಿಸುವ ವೇಳೆ ದುಷ್ಕರ್ಮಿಗಳು ಅವರನ್ನು ಬೆನ್ನಟ್ಟಿ ಬಂದು ನಗರದ ಚಿತ್ತಾಪುರ ರಸ್ತೆಯಲ್ಲಿ ಹರಿತವಾದ ಮಾರಕಾಸ್ತ್ರಗಳಿಂದ ಹಲ್ಲೆಮಾಡಿದ್ದಾರೆ.

ಘಟನೆ ನಡೆದ ತಕ್ಷಣವೇ ಕಾರು ಚಾಲಕ ಅಜ್ಮೀರ್ ದಾಳಿ ಲೆಕ್ಕಿಸದೇ ಗಾಯಾಳು ಅಂಜಲಿ ಅವರನ್ನು ಯಿಮ್ಸ್ ಆಸ್ಪತ್ರೆ ದಾಖಲಿಸಿದ್ದಾರೆ. ಸದ್ಯ ಕಲಬುರಗಿಯಲ್ಲಿ ಚಿಕಿತ್ಸೆ ನೀಡಲಾ ಗುತ್ತಿದ್ದು, ಗಂಭೀರ ಸ್ಥಿತಿಯಲ್ಲಿದ್ದಾರೆ. ಹಲ್ಲೆ ನಡೆದ ಸ್ಥಳಕ್ಕೆ ಎಸ್.ಪಿ ಪೃಥ್ವಿಕ್ ಶಂಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

- ಗಂಡನ ಸಾವಿನ ಬಳಿಕ ಅನುಕಂಪದಲ್ಲಿ ಸರಕಾರಿ ಹುದ್ದೆ
- ಯಾದಗಿರಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಸ್‌ಡಿಎ

2 ವರ್ಷದ ಹಿಂದೆ ಪತಿಯ ಹತ್ಯೆ?

ಕಲಬುರಗಿ ಜಿಲ್ಲೆಯ ಶಹಾಬಾದ್ ಪಟ್ಟಣದ ನಿವಾಸಿ ಯಾಗಿರುವ ಅಂಜಲಿ, ಕಳೆದ ಎರಡು ವರ್ಷಗಳ ಹಿಂದೆ ಎಸ್‌ಡಿಎ ಹುದ್ದೆಗೆ ಸೇರಿದ್ದರು. ಕಳೆದ 2 ವರ್ಷಗಳ ಹಿಂದೆ ಅಂಜಲಿ ಪತಿ ಗಿರೀಶನನ್ನು ಭೀಕರವಾಗಿ ಕೊಲೆ ಮಾಡಲಾಗಿತ್ತು. ಪತಿಯ ಕೊಲೆಯಾದ ಬಳಿಕ ಅವರ ಅನುಕಂಪದ ಆಧಾರದ ಮೇಲೆ ಹುದ್ದೆ ನೀಡಲಾಗಿತ್ತು. ಸರಕಾರಿ ನೌಕರಿಗೆ ಸೇರುವ ಮುನ್ನ ಎರಡು ಬಾರಿ ಶಹಾಬಾದ್ ನಗರಸಭೆ ಅಧ್ಯಕ್ಷೆಯಾ ಗಿಯೂ ಕೆಲಸ ಮಾಡಿದ್ದರು. ಇದೀಗ ಇವರ ಮೇಲೆ ಹಲ್ಲೆಯಾಗಿ ರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ವಿಭಜನೆ ಆಗ್ರಹಿಸಿ ರಾಷ್ಟ್ರಪತಿ, ಪ್ರಧಾನ ಮಂತ್ರಿಗೆ ಶಾಸಕ ರಾಜು ಕಾಗೆ ಪತ್ರ

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯಕ್ಕೆ ಬೇಡಿಕೆ

ಬೆಳಗಾವಿ: ಉತ್ತರ ಕರ್ನಾಟಕ ಭಾಗವು ಪ್ರತಿಯೊಂದು ವಲಯದಲ್ಲೂ ನಿರಂತರವಾಗಿ ಅನ್ಯಾಯ, ತಾರತಮ್ಯ ಮತ್ತು

ನಿರ್ಲಕ್ಷ್ಯವನ್ನು ಎದುರಿಸುತ್ತಿದೆ. ಈ ಭಾಗದ 15 ಜಿಲ್ಲೆಗಳನ್ನು ಒಳಗೊಂಡ ಪ್ರತ್ಯೇಕ ರಾಜ್ಯ ರಚಿಸಬೇಕು ಎಂದು ಉಲ್ಲೇಖಿಸಿ ಕಾಂಗ್ರೆಸ್ ಶಾಸಕ ರಾಜು ಕಾಗೆ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲರು ಹಾಗೂ ಸಿಎಂ ಸಿದ್ದರಾಮಯ್ಯನವರಿಗೆ ಪತ್ರ ಬರೆದಿದ್ದಾರೆ.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕು ಎನ್ನುವ ಬೇಡಿಕೆಯನ್ನು ಮತ್ತೆ ರಾಜು ಕಾಗೆಯವರು ಮುನ್ನೆಲೆಗೆ ತಂದಿದ್ದಾರೆ. ಆ ಬೆನ್ನಲ್ಲೇ ರೊಚ್ಚಿಗೆದ್ದ ಉತ್ತರ ಕರ್ನಾಟಕ ಹೋರಾಟ ಸಮಿತಿ, ಉತ್ತರ ಕರ್ನಾಟಕ ವಿಕಾಸ ವೇದಿಕೆಯು ಚಳಿಗಾಲದ ಅಧಿವೇಶನದಲ್ಲಿ ಬೇಡಿಕೆಗಳನ್ನು ಈಡೇರಿಸದಿದ್ದರೆ ಸುವರ್ಣ ವಿಧಾನಸೌಧದ ಮೇಲೆ ಪ್ರತ್ಯೇಕ ರಾಜ್ಯದ ಧ್ವಜಾರೋಹಣದ ಎಚ್ಚರಿಕೆಯನ್ನು ಕೊಟ್ಟಿದೆ.

ಮಲತಾಯಿ ಧೋರಣೆ: ಕರ್ನಾಟಕ ಏಕೀಕರಣವಾದಾಗಿನಿಂದ ಉತ್ತರ ಕರ್ನಾಟಕದ ಜಿಲ್ಲೆಗಳು ನಿರಂತರವಾಗಿ ಅನ್ಯಾಯ, ತಾರತಮ್ಯ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಮಲತಾಯಿ ಧೋರಣೆ ತೋರಲಾಗುತ್ತಿದೆ. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾದರೆ, ಮತ್ತೊಂದು ಹೆಮ್ಮೆಯ ಕನ್ನಡ ಮಾತನಾಡುವ ರಾಜ್ಯಕ್ಕೆ ಜನ್ಮ ನೀಡುವಂತಾಗುತ್ತದೆ. ಇದು ನಮಗೆಲ್ಲರಿಗೂ ಹೆಮ್ಮೆಯ ವಿಷಯವೂ ಹೌದು. ಉತ್ತರ ಕರ್ನಾಟಕವು ಎಲ್ಲ ರೀತಿಯ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಪ್ರದೇಶವಾಗಿದೆ. ಕನ್ನಡ ಭಾಷೆಯ ಉಳಿವಿಗೆ ಹಾಗೂ ಕರ್ನಾಟಕದ ಏಕೀಕರಣಕ್ಕೆ ಮಹತ್ವದ ಕೊಡುಗೆ ನೀಡಿದೆ ಎಂದು ತಮ್ಮ ಪತ್ರದಲ್ಲಿ ರಾಜುಕಾಗೆ ಅವರು ಉಲ್ಲೇಖಿಸಿದ್ದಾರೆ.

15 ಜಿಲ್ಲೆ ಸೇರಿಸಿ ರಾಜ್ಯ ರಚಿಸಿ

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ರಾಯಚೂರು, ಉತ್ತರ ಕನ್ನಡ, ಹಾವೇರಿ, ವಿಜಯನಗರ, ಬಳ್ಳಾರಿ ಮತ್ತು ದಾವಣಗೆರೆಯನ್ನು ಒಳಗೊಂಡ 15 ಜಿಲ್ಲೆಗಳನ್ನು ಉತ್ತರ ಕರ್ನಾಟಕ ರಾಜ್ಯವನ್ನಾಗಿಸಲು ರಾಷ್ಟ್ರಪತಿ, ಪ್ರಧಾನಿ, ಸಿಎಂಗೆ ಶಾಸಕ ರಾಜು ಕಾಗೆ ಅವರು ನವೆಂಬರ್ 4 ರಂದು ಪತ್ರ ಬರೆದಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಮತಾಂಧ ಶಕ್ತಿಗಳ ದಮನ ಅಗತ್ಯ

ದೇಶವಿದ್ರೋಹಿ ಶಕ್ತಿಗಳು ರಾಜಧಾನಿಯನ್ನು ದೆಹಲಿಯನ್ನು ಗುರಿಯಾಗಿಸಿಕೊಂಡು ಮತ್ತೊಮ್ಮೆ ವಿಧ್ವಂಸಕ ಕೃತ್ಯ ಎಸಗಿವೆ. ವಿದ್ರೋಹಿಗಳು ಭಾರೀ ಪ್ರಮಾಣದ ಸ್ಫೋಟಕ ಸಂಗ್ರಹಿಸಿ ದೇಶದ ಆಯಕಟ್ಟಿನ ಸ್ಥಳಗಳಲ್ಲಿ ಪ್ರಮುಖ ದಿನಗಳಂದು ಹಿಂಸಾಕೃತ್ಯ ಎಸಗಲು ಮುಂದಾಗಿದ್ದಾರೆನ್ನುವುದು ಪ್ರಾಥಮಿಕ ತನಿಖೆಯಲ್ಲಿ ಬಯಲಾಗಿದೆ. ಎಂದಿನಂತೆ ಈ ಸ್ಫೋಟ ಘಟನೆಯಲ್ಲೂ ಪಾಕಿಸ್ತಾನ ಬೆಂಬಲಿತ ಉಗ್ರ ಸಂಘಟನೆ ಜೈಶೆ ಮೊಹಮ್ಮದ್ ಹೆಸರು ಕೇಳಿ ಬಂದಿದೆ. ಆದರೆ ಈ ಬಾರಿ ಬಂಧಿತರು ಸಾಮಾನ್ಯರಲ್ಲ. ಜನರ ಜೀವ ಉಳಿಸಬೇಕಾದ ವೈದ್ಯರು ಧರ್ಮದ ಅಫೀಮು ತುಂಬಿಕೊಂಡು ಸಾಮೂಹಿಕ ವಿನಾಶದ ಕೃತ್ಯಕ್ಕೆ ಮುಂದಾಗಿರುವುದು ಆಘಾತಕಾರಿ ಸಂಗತಿ. ಈವರೆಗೆ ಉಗ್ರಗಾಮಿ ಸಂಘಟನೆಗಳು ಅಮಾಯಕರ ದಾರಿ ತಪ್ಪಿಸಿ ವಿಧ್ವಂಸಕ ಕೃತ್ಯಕ್ಕೆ ಬಳಸುತ್ತವೆ ಎಂದು ಹೇಳಲಾಗುತ್ತಿತ್ತು. ಈಗ ವೈದ್ಯ ವೃತ್ತಿಯಲ್ಲಿ ತೊಡಗಿದ ಅತ್ಯಂತ ಸುಶಿಕ್ಷಿತ ವರ್ಗದಲ್ಲೂ ಈ ಸಂಘಟನೆಗಳು ಧರ್ಮದ ಹೆಸರಿನಲ್ಲಿ ವಿಷ ಬೀಜ ತುಂಬಲು ಯಶಸ್ವಿಯಾಗಿವೆ. ಫರಿದಾಬಾದ್‌ನ ಅಲ್ ಫಲಾಹ್ ವಿವಿಯಲ್ಲಿ ಭವಿಷ್ಯದ ವೈದ್ಯ ವಿದ್ಯಾರ್ಥಿಗಳನ್ನು ರೂಪಿಸಬೇಕಾದ ಪ್ರೊಫೆಸರ್‌ಗಳು ತಮ್ಮ ವೃತ್ತಿಗೆ ಸಂಪೂರ್ಣವಾಗಿ ವಿರುದ್ಧವಾದ 'ಜೀವ ತೆಗೆಯುವ' ಕೆಲಸಕ್ಕೆ ಸಂಚು ರೂಪಿಸಿದ್ದು ಕಳವಳಕಾರಿ ಸಂಗತಿ. ಶಿಕ್ಷಣವು ಭಯೋತ್ಪಾದನೆಯ ವಿರುದ್ಧದ ಖಾತರಿ ಅಲ್ಲ ಎನ್ನುವುದು ಈಗ ಸ್ಪಷ್ಟವಾಗಿದೆ. ಮೂಲಭೂತವಾದವು ವೃತ್ತಿಪರ ಮಟ್ಟವನ್ನು ತಲುಪಿದ್ದು, ಉನ್ನತ ಹಿನ್ನೆಲೆಯುಳ್ಳ ಜನರೂ ಕೂಡ ಗುಪ್ತವಾಗಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದು. ಇದು ನಮ್ಮ ಭದ್ರತಾಪಡೆಗಳಿಗೆ ಹೊಸ ಸವಾಲು. ಕಾಶ್ಮೀರದಲ್ಲಿನ ಒಂದು ಸಣ್ಣ ಪೋಸ್ಟರ್‌ನಿಂದ ಪ್ರಾರಂಭವಾದ ತನಿಖೆಯು ಫರಿದಾಬಾದ್‌ನಲ್ಲಿನ ಉಗ್ರರ ದೊಡ್ಡ ಸಂಚನ್ನು ಪತ್ತೆಹಚ್ಚಲು ಕಾರಣವಾಗಿದೆ. ಉಗ್ರರ ದಾಳಿಗಳನ್ನು ತಡೆಯಬೇಕಾದರೆ ಇಂತಹ ಪ್ರತಿಯೊಂದು ಸುಳಿವನ್ನೂ ಬೆನ್ನಟ್ಟಲೇಬೇಕಾಗಿದೆ. ಅಕ್ರಮ ಶಸ್ತ್ರಾಸ್ತ್ರಗಳ ಸಾಗಣೆ, ಗುಪ್ತಚರ ಮಾಹಿತಿ ಹಂಚಿಕೆ ಮತ್ತು ಗಡಿ ಸಮನ್ವಯವನ್ನು ಬಲಪಡಿಸಬೇಕಿದೆ. ಧರ್ಮದ ಹೆಸರಿನಲ್ಲಿ ಯುವಕರನ್ನು ದುರ್ಮಾರ್ಗಕ್ಕೆ ಪ್ರೇರೇಪಿಸುವ ಝಕೀರ್ ನಾಯ್ಕ್‌ನಂತಹ ಧರ್ಮಗುರುಗಳನ್ನು ಪತ್ತೆ ಹಚ್ಚಿ ಶಿಕ್ಷಿಸಬೇಕಾಗಿದೆ. ಮಕ್ಕಳು ಶಿಕ್ಷಣದಲ್ಲಿ ಹೆಸರಿನಲ್ಲಿ ಜೀವಘಾತಕ ಮನೋಭಾವ ರೂಢಿಸಿಕೊಳ್ಳದಂತೆ ಪೋಷಕರು ಎಚ್ಚರಿಕೆ ವಹಿಸಬೇಕು.

ಸೊಂಪಾದಕೀಯ

ಗಂಡನಿಗಿಲ್ಲ ಪಿಂಚಣಿ

ನಮ್ಮ ಸಮಾಜದಲ್ಲಿ ಆಗಾಗ ಕೇಳಿಬರುವ, ಅದರಲ್ಲೂ ಮಹಿಳೆಯರ ವಿಷಯ ಬಂದಾಗೆಲ್ಲ ತೇಲಿಬರುವ ಪದಪುಂಜ ಅಂದ್ರೆ, ಇದು ಪುರುಷ ಪ್ರಧಾನ ಸಮಾಜ ಅನ್ನೋದು. ಆದರೆ ಸಮಾಜದಲ್ಲಿ ನಿಜವಾಗಿಯೂ ಕೆಲವು ಕಟ್ಟಳೆ, ಕಾನೂನು ಸವಲತ್ತುಗಳನ್ನು ನೋಡಿದರೆ ಗಂಡಸರಿಗೆ ಅದ್ಯಾವ ಸೀಮೆ ಪ್ರಾಮುಖ್ಯತೆ ಸಿಗುತ್ತಿದೆ ಅನ್ನೋ ಪ್ರಶ್ನೆ ಮೂಡೋದು ಸಹಜ. ವಿಚ್ಛೇದನ ಪ್ರಕರಣಗಳಲ್ಲಂತೂ ಪುರುಷನೇ ನಿಜವಾದ ಶೋಷಿತ. ಸಂಸಾರ ಹದಗೆಟ್ಟಾಗ ಗಂಡ ಹೆಂಡತಿ ಬೇರೆ ಆಗ್ತಾರೆ. ಅದು ಒಂಥರ ಮಾನಸಿಕ ನೋವು. ಆದರೆ ಅದಕ್ಕೆ ಸಮಾಧಾನಕರ ಬಹುಮಾನ ಎಂಬಂತೆ ಮಹಿಳೆಯರಿಗೆ ಜೀವನಾಂಶ ಸಿಗುತ್ತದೆ. ಆದರೆ ಪುರುಷ ಆ ಜೀವನಾಂಶ ಕೊಡಬೇಕಾಗಿರೋದ್ರಿಂದ ಅವನಿಗೆ ಮಾನಸಿಕ ಸಂಕಷ್ಟದ ಜತೆಗೆ ಆರ್ಥಿಕ ಸಂಕಷ್ಟ ಕೂಡಾ ಎದುರಾಗುತ್ತದೆ. ಇನ್ನು ಹೆಂಡತಿಯ ಮಾತು ಕೇಳದಿದ್ದರೆ ಸಾಕು, ಗಂಡನ ಮೇಲೆ ವರದಕ್ಷಿಣೆ ಕೇಸು ಗ್ಯಾರಂಟಿ. ಅಲ್ಲೂ ಗಂಡು ಶೋಷಿತನೇ. ಇದೆಲ್ಲಾ ಸಾಲದು ಎಂಬಂತೆ ಸರಕಾರಗಳಿಂದ ಬರುವ ಸವಲತ್ತುಗಳಲ್ಲೂ ಮಹಿಳೆಯರಿಗೇ ಆದ್ಯತೆ. ನಮ್ಮ ಕಾಂಗ್ರೆಸ್ ಸರಕಾರ ಅಂತೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಗೃಹಲಕ್ಷ್ಮಿ ಯೋಜನೆ ಅಡಿಯಲ್ಲಿ ಹಣ ಎನ್ನುತ್ತಾ ಗಂಡಸರನ್ನು ಮರೆತೇಬಿಟ್ಟಿದೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಪಿಂಚಣಿ ಹಣದಲ್ಲೂ ಪುರುಷರನ್ನು ಕಡೆಗಣಿಸಲಾಗುತ್ತಿದೆ. ಗಂಡನಿಗೆ ಪಿಂಚಣಿ ಬರುತ್ತಿದ್ದು ಆತ ನಿಧನ ಹೊಂದಿದರೆ ಆ ಹಣ ಹೆಂಡತಿಗೆ ಸೇರುತ್ತದೆ. ಹಾಗೆಯೇ, ಹೆಂಡತಿಗೆ ಪಿಂಚಣಿ ಹಣ ಬರುತ್ತಿದ್ದರೆ ಅದು ಗಂಡನಿಗೆ ಇಷ್ಟು ದಿನ ಸೇರುತ್ತಿತ್ತು. ಆದರೆ ಈಗ ಮಹಿಳೆಯರ ಪಿಂಚಣಿ ಹಣವನ್ನು ಗಂಡನಿಗೆ ಕೊಡೋದರ ಬದಲು ಅದನ್ನು ಮಕ್ಕಳಿಗೆ ಕೊಡಬೇಕು ಅಂತ ಹೊಸ ಕಾನೂನು ಬರ್ತಾ ಇದೆಯಂತೆ. ಅಲ್ಲೂ ಗಂಡು ಮಕ್ಕಳಿಗೆ ಸಿಗುತ್ತೋ ಇಲ್ವೋ ಗೊತ್ತಿಲ್ಲ. ಅಂತೂ ಪಾಪ ಇಲ್ಲೂ ಪಾಪಿ ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾನೆ. ಗಂಡಸು ಅಕ್ಷರಶಃ ಪರದೇಸಿ ಅನ್ನಿಸಿದರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ವಿಂಡ್‌ಸಾಕ್ ಗಳ ಪಾತ್ರ

ಸಾಮಾನ್ಯವಾಗಿ ಎಲ್ಲ ವಿಮಾನ ನಿಲ್ದಾಣಗಳಲ್ಲಿ ರನ್ ವೇ ಸನಿಹದಲ್ಲಿ ಕೊಳವೆಯಾಕಾರದ, ಬಟ್ಟೆಯಲ್ಲಿ ಮಾಡಿದ, ಬಾವುಟದಂತೆ ಹಾರುವ, ಗಾಳಿಯ ದಿಕ್ಕಿನ ಸೂಚಕ (Windsock)ವನ್ನು ಗಮನಿಸಿರಬಹುದು. ಇದರ ಮಹತ್ವ, ಇತಿಹಾಸ, ವಿಮಾನಯಾನದಲ್ಲಿ ಅದರ ಪಾತ್ರ ವೇನು? ಇದು ವಿಮಾನಯಾನದಲ್ಲಿ ಒಂದು ಸರಳವಾದ, ಅವಶ್ಯಕ ಸಾಧನ. ಇದು ವಿಮಾನಯಾನ ಮತ್ತು ಅನೇಕ ಕೈಗಾರಿಕಾ ಪ್ರದೇಶಗಳಲ್ಲಿ ಕಂಡು ಬರುವ ಒಂದು ಸರಳ, ಆದರೆ ಅತ್ಯಂತ ಮಹತ್ವದ ಸಾಧನ. ನೀವು ವಿಮಾನ ನಿಲ್ದಾಣ, ಹೆಲಿಪ್ಯಾಡ್ (ಹೆಲಿಕಾಪ್ಟರ್ ಇಳಿಯುವ ಸ್ಥಳ) ಬಳಿ ಪ್ರಕಾಶಮಾನವಾದ, ಶಂಕುವಿನಾಕಾರದ (ಕೋನ್ ಆಕಾರದ) ಬಟ್ಟೆಯ ರಚನೆಯು ಗಾಳಿಯಲ್ಲಿ ಹಾರಾಡುವುದನ್ನು ನೋಡಿರಬಹುದು. ಅದೇ ವಿಂಡ್‌ಸಾಕ್. ಇದು ವಿಮಾನದ ಪೈಲಟ್‌ಗಳಿಗೆ ಮತ್ತು ನೆಲದ ಸಿಬ್ಬಂದಿಗೆ ಗಾಳಿಯ ದಿಕ್ಕು ಮತ್ತು ಅದರ ವೇಗದ ಕುರಿತು ನೈಜ-ಸಮಯದ (real-time) ಮಾಹಿತಿಯನ್ನು ಒದಗಿಸುವ ಒಂದು ದೃಶ್ಯ ಸಾಧನವಾಗಿದೆ. ವಿಂಡ್‌ಸಾಕ್‌ನ ಕಾರ್ಯನಿರ್ವಹಣೆಯು ಅತ್ಯಂತ ಮೂಲಭೂತವಾದ ಭೌತಶಾಸ್ತ್ರದ ತತ್ವವನ್ನು ಆಧರಿಸಿದೆ. ವಿಂಡ್‌ಸಾಕ್‌ನ ಅತ್ಯಂತ ಪ್ರಮುಖ ಕಾರ್ಯವೆಂದರೆ ಗಾಳಿಯು ಬೀಸುವ ದಿಕ್ಕನ್ನು ತೋರಿಸುವುದು. ಗಾಳಿಯು ವಿಂಡ್‌ಸಾಕ್‌ನ ಅಗಲವಾದ ಬಾಯಿಯೊಳಗೆ ಪ್ರವೇಶಿಸಿ, ಅದನ್ನು ಹೊರಕ್ಕೆ ತಳ್ಳುತ್ತದೆ. ಪರಿಣಾಮವಾಗಿ, ವಿಂಡ್‌ಸಾಕ್ ಯಾವಾಗಲೂ ಗಾಳಿಯು ಯಾವ ದಿಕ್ಕಿನಿಂದ ಬರುತ್ತಿದೆಯೋ ಅದರ ವಿರುದ್ಧ ದಿಕ್ಕಿಗೆ ಅಂದರೆ, ಗಾಳಿಯು ಹೋಗುತ್ತಿರುವ ದಿಕ್ಕಿಗೆ ಬೊಟ್ಟು ಮಾಡಿ ತೋರಿಸುತ್ತದೆ. ಉದಾಹರಣೆಗೆ, ವಿಂಡ್‌ಸಾಕ್ ಪೂರ್ವ ದಿಕ್ಕಿಗೆ ಚಾಚಿದ್ದರೆ, ಗಾಳಿಯು ಪಶ್ಚಿಮ ದಿಕ್ಕಿನಿಂದ ಪೂರ್ವಕ್ಕೆ ಬೀಸುತ್ತಿದೆ ಎಂದು ಅರ್ಥ. ವಿಮಾನಗಳನ್ನು ಹಾರಿಸುವಾಗ, ಪೈಲಟ್‌ಗಳಿಗೆ ಗಾಳಿಯು ಯಾವ ದಿಕ್ಕಿನಿಂದ ಬರುತ್ತಿದೆ ಎಂಬುದು ಮುಖ್ಯವಾಗುತ್ತದೆ. ಗಾಳಿಯ ದಿಕ್ಕಿನಷ್ಟೇ ಅದರ ವೇಗವೂ ವಿಮಾನ ಹಾರಾಟದಲ್ಲಿ ನಿರ್ಣಾಯಕ. ವಿಂಡ್‌ಸಾಕ್‌ನ ಮತ್ತೊಂದು ಮುಖ್ಯ ಕಾರ್ಯವೆಂದರೆ ಗಾಳಿಯ ವೇಗವನ್ನು ಅಂದಾಜು ಮಾಡಲು ಸಹಾಯ ಮಾಡುವುದು. ವಿಂಡ್‌ಸಾಕ್ ಎಷ್ಟು ಹೆಚ್ಚಾಗಿ ನೇರವಾಗಿ ಚಾಚಿಕೊಂಡಿರುತ್ತದೆಯೋ, ಗಾಳಿಯ ವೇಗವು ಅಷ್ಟು ಪ್ರಬಲವಾಗಿದೆ ಎಂದರ್ಥ. ಇದು ಸಂಪೂರ್ಣವಾಗಿ ಅಡ್ಡವಾಗಿ (horizontal)ದ್ದರೆ, ಅದು ಗಮನಾರ್ಹವಾದ ಗಾಳಿಯ ವೇಗವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ, ಪೂರ್ಣವಾಗಿ ಚಾಚಿದ ವಿಂಡ್‌ಸಾಕ್ ಎಂದರೆ ಸುಮಾರು 15 ನಾಟ್‌ಗಳು (Knots) (ಸುಮಾರು 28 ಕಿ.ಮೀ/ಗಂಟೆಗೆ) ಅಥವಾ ಅದಕ್ಕಿಂತ ಹೆಚ್ಚಿನ ವೇಗದ ಗಾಳಿ ಇದೆ ಎಂದು ಅಂದಾಜು ಮಾಡಬಹುದು. ಕೆಲವು ವಿಂಡ್‌ಸಾಕ್‌ಗಳು ಗಾಳಿಯ ವೇಗವನ್ನು ಹೆಚ್ಚು ನಿಖರವಾಗಿ ಅಂದಾಜಿಸಲು ಸಹಾಯ ಮಾಡಲು ವಿವಿಧ ಬಣ್ಣದ ಪಟ್ಟಿಗಳನ್ನು (ಉದಾಹರಣೆಗೆ, ಕಿತ್ತಳೆ ಮತ್ತು ಬಿಳಿ) ಹೊಂದಿರುತ್ತವೆ. ಎಷ್ಟು ಪಟ್ಟಿಗಳು ಸಂಪೂರ್ಣವಾಗಿ ಹಾರಾಡುತ್ತಿವೆ ಎಂಬುದನ್ನು ನೋಡಿ ಪೈಲಟ್‌ಗಳು ಗಾಳಿಯ ವೇಗವನ್ನು ನಿರ್ಧರಿಸಬಹುದು. ಉದಾಹರಣೆಗೆ, ಐದು ವಿಭಾಗಗಳನ್ನು ಹೊಂದಿರುವ ವಿಂಡ್‌ಸಾಕ್‌ನಲ್ಲಿ, ಪ್ರತಿ ವಿಭಾಗವು 3 ನಾಟ್‌ಗಳ ವೇಗವನ್ನು ಪ್ರತಿನಿಧಿಸಬಹುದು. ಪೈಲಟ್‌ಗಳು ಟೇಕಾಫ್ ಮತ್ತು ಲ್ಯಾಂಡಿಂಗ್ ಸಮಯದಲ್ಲಿ ವಿಂಡ್‌ಸಾಕ್‌ನ ಮೇಲೆ ತೀವ್ರವಾಗಿ ಅವಲಂಬಿತರಾಗಿರುತ್ತಾರೆ. ಇದು ವಿಶೇಷವಾಗಿ ಸಣ್ಣ ವಿಮಾನ ನಿಲ್ದಾಣಗಳಲ್ಲಿ ಅಥವಾ ಹೆಲಿಪ್ಯಾಡ್‌ಗಳಲ್ಲಿ, ಅತ್ಯಾಧುನಿಕ ಗಾಳಿ ಮಾಪಕ (anemometer) ಅಥವಾ ಇತರ ಉಪಕರಣಗಳು ಲಭ್ಯವಿಲ್ಲದಿರಬಹುದು, ಅಲ್ಲಿ ವಿಂಡ್‌ಸಾಕ್‌ನ ಪಾತ್ರವು ನಿರ್ಣಾಯಕ. ವಿಮಾನಗಳು ಸಾಮಾನ್ಯವಾಗಿ ಮುಂದಿನಿಂದ ಬರುವ ಗಾಳಿಯ (Headwind) ವಿರುದ್ಧ ದಿಕ್ಕಿನಲ್ಲಿ ಟೇಕಾಫ್ ಮತ್ತು ಲ್ಯಾಂಡಿಂಗ್ ಮಾಡಲು ಆದ್ಯತೆ ನೀಡುತ್ತವೆ. ಹೆಡ್‌ವಿಂಡ್ ರೆಕ್ಕೆಗಳ ಮೇಲೆ ಹೆಚ್ಚು ಎತ್ತುವ ಬಲವನ್ನು (Lift) ಸೃಷ್ಟಿಸಲು ಸಹಾಯ ಮಾಡುತ್ತದೆ. ಇದರಿಂದ ವಿಮಾನವು ಕಡಿಮೆ ಓಡುದಾರಿಯಲ್ಲಿ (Runway) ವೇಗವನ್ನು ಪಡೆದು ಹಾರಲು ಸಾಧ್ಯವಾಗುತ್ತದೆ ಮತ್ತು ಇಳಿಯುವಾಗ ಸುರಕ್ಷಿತವಾಗಿ ಬೇಗ ನಿಲ್ಲಲು ಸಹಾಯ ಮಾಡುತ್ತದೆ. ರನ್‌ವೇಗೆ ಅಡ್ಡಲಾಗಿ ಬೀಸುವ ಬಲವಾದ ಕ್ರಾಸ್‌ವಿಂಡ್ (ಅಡ್ಡಗಾಳಿ) ವಿಮಾನದ ನಿಯಂತ್ರಣವನ್ನು ಕಷ್ಟಕರವಾಗಿಸಿ ಅಪಾಯವನ್ನುಂಟು ಮಾಡಬಹುದು. ವಿಂಡ್‌ಸಾಕ್ ಪೈಲಟ್‌ಗೆ ಆ ಕ್ಷಣದ ಗಾಳಿಯ ದಿಕ್ಕನ್ನು ತಕ್ಷಣವೇ ದೃಢೀಕರಿಸಲು ಸಹಾಯ ಮಾಡುತ್ತದೆ, ಇದರಿಂದ ಅವರು ಯಾವ ರನ್‌ವೇಯನ್ನು ಬಳಸಬೇಕು ಅಥವಾ ಯಾವ ಕೋನದಲ್ಲಿ ಇಳಿಯಬೇಕು ಎಂದು ನಿರ್ಧರಿಸಬಹುದು.

ರಿಸ್ಕ್ ಇದ್ದಾಗಲೇ ಬದುಕು ಮತ್ತಷ್ಟು ರೋಚಕ

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ದೇವತೆಗಳು ನಮ್ಮ ಬಗ್ಗೆ ಹೊಟ್ಟೆ ಉರಿದುಕೊಳ್ಳುತ್ತಾರೆ. ಏಕೆ ಗೊತ್ತಾ? ನಾವು ನಶ್ವರರು. ಇಲ್ಲಿ ಯಾವುದೂ ಶಾಶ್ವತ ಅಲ್ಲ. ಈ ಕ್ಷಣ ಇದೆಯಲ್ಲ... ಇದು ಮತ್ತೆಂದೂ ಮರಳಿ ಬರುವುದಿಲ್ಲ, ಅದಕ್ಕಾಗಿಯೇ ನಮ್ಮ ಜೀವನ ಇಷ್ಟೊಂದು ಸುಂದರ ಬದುಕು ಶಾಶ್ವತ ಅಲ್ಲ' ಎಂಬ ಸಂಗತಿಯನ್ನೂ ಸಕಾರಾತ್ಮಕವಾಗಿ ಪರಿಭಾವಿಸುತ್ತ ಟ್ರಾಯ್ ಚಿತ್ರದ ನಾಯಕ ಪಾತ್ರಧಾರಿ ಹೇಳುವ ಮಾತುಗಳು ಎಷ್ಟು ವರ್ಷವಾದರೂ ಕಾಡುತ್ತವೆ. ಹೇಗೂ ಒಂದು ದಿನ ಸಾಯಬೇಕಲ್ಲ ಎಂದು ನೀವು ತಣ್ಣಗೇ ಆಯುಷ್ಯ ಸವೆಸಬಹುದು. ಹಾಗೆ ಮಾಡಿದರೆ ಎಲ್ಲವೂ ಬಹುತೇಕ ಸುಸೂತ್ರವಾಗಿರುತ್ತದೆ. ಯಾರೂ ನಿಮ್ಮ ಮೇಲೆ ಕೋಪಗೊಳ್ಳುವುದಿಲ್ಲ, ಟೀಕಾಸ್ತ್ರ ಬಿಡುವುದಿಲ್ಲ, ಕೋರ್ಟು ಕಚೇರಿಗಳಿಗೆ ಎಳೆಯುವುದಿಲ್ಲ. ನೀವು ಬದುಕಿದ್ದೀರಿ ಎಂತಲೇ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ, ನೀವು ನಡೆಯುವುದೇ ಇಲ್ಲವಾದ್ದರಿಂದ ಎಡವುವ ಪ್ರಶ್ನೆಯೇ ಇಲ್ಲ!

ಆದರೆ ಬದುಕು ಎಂಬುದು ರಿಸ್ಕ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಇರುವ ಅವಕಾಶ ಎಂದು ಪರಿಭಾವಿಸಿದ್ದೇ ಆದರೆ ನಿಮ್ಮ ನಡಿಗೆ ತಾನೇ ತಾನಾಗಿ ಚುರುಕಾಗುತ್ತದೆ. ನಿಮ್ಮ ಧೌಡನ್ನು ನೋಡಿ ಅನೇಕರು ಆರೋಗ್ಯ ಕೆಡಿಸಿಕೊಳ್ಳುತ್ತಾರೆ, ಸುಮ್ ಸುಮ್ನ ನಿಮ್ಮ ಮೇಲೆ ಬೀಳುತ್ತಾರೆ. ಕಲ್ಲೆಸೆಯುತ್ತಾರೆ. ಆದರೆ ಅದರಲ್ಲೊಂದು ಮಜವಿದೆ, ಬದುಕಿನ ಅರ್ಥವಿದೆ. ಈ ಸಂಗತಿ ನಿಮಗೆ ಅರ್ಥವಾಗಬೇಕಾದರೆ ಮತ್ತೆ ಎಡತಾಕಬೇಕಿರುವುದು ನಿಮ್ಮಿಷ್ಟದ ಸಾಹಸಪ್ರಿಯ ವ್ಯಕ್ತಿಯನ್ನೇ ಹೌದು, ಇನ್ನು ಮುಂದಿನ ಮಾತುಗಳು ರಿಚರ್ಡ್ ಬ್ರಾನ್ಸನ್‌ನ ಕಡೆಯಿಂದ...

• • •

ಇದು 1997ರ ಮಾತು, ಬಿಸಿಗಾಳಿ ತುಂಬಿದ ಬಲೂನ್ ಹಾರಾಟದ ಸ್ಪರ್ಧೆ ಕಣ್ಣೆದುರಿಗಿತ್ತು. ನಾನೇನೋ ಉತ್ಸಾಹದಿಂದಲೇ ಹೊರಟು ನಿಂತಿದ್ದೆ. ಈ ಸ್ಪರ್ಧೆಯಲ್ಲಿ ವಿಪರೀತ ಎಂಬಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರುತ್ತಾರೆ ಎಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಆದರೂ ಮನದ ಒಂದು ಮೂಲೆಯಲ್ಲಿ ಏನೋ ಅಳುಕು. ಬೈ ಛಾನ್ಸ್ ಏನಾದರೂ ಆಗಬಾರದ್ದು ಆಗಿಬಿಟ್ಟರೆ? ನಾನು ಜೀವಂತವಾಗಿ ಹಿಂತಿರುಗದೇ ಹೋದರೆ? ನಮ್ಮ ಕುಟುಂಬ ವರ್ಗದವರಿಗೆ ನನ್ನ ದರ್ಶನವೇ ಆಗದೇ ಹೋದರೆ...?

ಇಂಥದೊಂದು ಯೋಚನೆ ಬಂದಾಕ್ಷಣ ನಿಂತಲ್ಲೇ ಒಮ್ಮೆ ಮೈ ನಡುಗಿತು. ತಕ್ಷಣವೇ ಸಾವರಿಸಿಕೊಂಡು ನನ್ನ ಮಕ್ಕಳಿಗೆ ಒಂದು ಪತ್ರ ಬರೆದಿಟ್ಟೆ, ಅದರ ಸಾರಾಂಶ ಹೀಗಿತ್ತು: 'ಪ್ರೀತಿಯ ಹೋಲಿ ಆ್ಯಂಡ್ ಸ್ಯಾಮ್, ತುಂಬ ಸಂದರ್ಭದಲ್ಲಿ ಬದುಕೆಂಬುದು, ನಾವು ಕಲ್ಪಿಸಿಕೊಂಡಿರುತ್ತೇವಲ್ಲ? ಅದಕ್ಕಿಂತ ಭಿನ್ನವಾಗಿರುತ್ತದೆ. ಕೃತಕವಾಗಿರುತ್ತದೆ, ಒಂದೊಂದು ಸಂದರ್ಭದಲ್ಲಿ ಬದುಕೆಂಬುದು ಕೇವಲ ಸಂಭ್ರಮಗಳಿಂದ ಸೃಷ್ಟಿಯಾಗಿದೆ. ಸಂಭ್ರಮಗಳೆಲ್ಲ ಒಂದಾದ ಸಂದರ್ಭವೇ ಬದುಕಾಗಿದೆ ಎನಿಸುತ್ತದೆ ನಿಜ. ಆದರೆ, ನಂತರದ ಒಂದೆರಡು ದಿನಗಳಲ್ಲಿ ಬದುಕೆಂಬುದು ಏನೇನೂ ಇಲ್ಲದ ಮರುಭೂಮಿ ಎಂದೂ ಅನಿಸಿಬಿಡುತ್ತದೆ. ಡಿಯರ್ ಕಿಡ್ಸ್, ನಿಮಗೇ ಗೊತ್ತಿರುವಂತೆ, ಒಂದೊಂದು ಕ್ಷಣವನ್ನೂ ತೀವ್ರವಾಗಿ ಅನುಭವಿಸಬೇಕು ಎಂದು ಆಸೆಪಡುವವನು ನಾನು. ಹಾಗಾಗಿ ಒಂದು ಸಾಹಸವನ್ನು, ಸಂತೋಷವನ್ನು, ಅನುಭವವನ್ನು ನನ್ನದಾಗಿಸಿಕೊಳ್ಳಬೇಕು ಎಂಬ ಆಸೆಯಿಂದಲೇ ಬಿಸಿಗಾಳಿ ಬಲೂನ್ ಹಾರಾಟದ ಸ್ಪರ್ಧೆಗೆ ಹೊರಟಿದ್ದೇನೆ...

ಬಲೂನ್ ಹಾರಾಟದ ಸ್ಪರ್ಧೆಯ ಸಂದರ್ಭದಲ್ಲಿ ನನಗೆ ಏನಾದರೂ ಆಗಿಬಿಡಬಹುದು, ಜೀವಂತವಾಗಿ ಹಿಂದಿರುಗದೇ ಹೋಗಬಹುದು ಎಂಬ ಭಾವವೊಂದು ಕ್ಷಣಕ್ಷಣವೂ ಹೆದರಿಸಿದ ಸಂದರ್ಭದಲ್ಲಿಯೇ ನಾನು ಇಂಥದೊಂದು ಪತ್ರ ಬರೆದಿಟ್ಟು ಬಂದಿದ್ದೆ. ನಮ್ಮ ಅದೃಷ್ಟ ದೊಡ್ಡದಿತ್ತು. ಸಣ್ಣದೊಂದು ಅವಘಡವೂ ನಡೆಯಲಿಲ್ಲ. ಮೊರಾಕ್ಕೊದ ಮರಕೇಶ್‌ನಿಂದ ನಾವು ಖುಷಿ, ಉತ್ಸಾಹದಿಂದಲೇ ಬೆಳ್ಳಂಬೆಳಗ್ಗೆಯೇ ಬಲೂನ್ ಹಾರಾಟ ಆರಂಭಿಸಿದ್ದೆವು. ಮುಂದಿನ ಹನ್ನೆರಡು ತಾಸುಗಳಲ್ಲಿ ನಾವು ಅಟ್ಲಾಸ್ ಪರ್ವತಗಳಿಗೆ ಡಿಕ್ಕಿ ಹೊಡೆದು ಉರಿದು ಹೋಗುತ್ತೇವೇನೋ ಎಂಬ ಆತಂಕ ನನ್ನಲ್ಲಿ ಮನೆಮಾಡಿತ್ತು. ಭಯದ ಸಂದರ್ಭದಲ್ಲಿ ಬದುಕಿನ ಕಡೆಗಾಲದಲ್ಲಿ ಮನುಷ್ಯ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾನೆ ಎಂದು ಅವರಿವರು ಹೇಳುವುದನ್ನು ಕೇಳಿದ್ದೇನೆ. ಆದರೆ, ಹಾಗೆಲ್ಲ ನೆನಪುಗಳೊಂದಿಗೆ ಉಳಿಯುವ ಸಂಭ್ರಮ ನನಗಿರಲಿಲ್ಲ. ಕಾರಣ, ಬಲೂನು ದಿಢೀರನೆ ನೆಲಕ್ಕಿಳಿದಂತೆ, ರಾತ್ರಿಯಿಡೀ ಆಗಸದಲ್ಲಿಯೇ ಇರುವಂತೆ ನೋಡಿಕೊಳ್ಳುವುದೇ ನನಗೆ ದೊಡ್ಡ ಕಸರತ್ತಾಗಿತ್ತು. ಅದು ಹೇಗೆ ಹಾರಾಡುತ್ತಲೇ ರಾತ್ರಿ ಕಳೆದೆನೋ, ಅದನ್ನು ವಿವರಿಸಲೂ ನನ್ನಿಂದ ಸಾಧ್ಯವಿಲ್ಲ.

ಕ್ರಮೇಣ ಬೆಳಕಾದಂತೆ ಕಾಣತೊಡಗಿತು. ಸ್ವಲ್ಪ ಹೊತ್ತಿನ ನಂತರ ಬೆಳಕು ನಿಚ್ಚಳವಾಯಿತು. ನಾನು ಬೆರಗಿನಿಂದಲೇ ಕೆಳಗೆ ನೋಡಿದೆ. ಅಲ್ಲಿ ಮರುಭೂಮಿಯೊಂದು ಕಾಣುತ್ತಿತ್ತು. ಆ ಜಾಗದಲ್ಲಿ ನಾವು ಬಲೂನನ್ನು ಸುರಕ್ಷಿತವಾಗಿ ಇಳಿಸಬಹುದಿತ್ತು. ಬಲೂನ್ ಹಿಡಿದು ಹೊಸದೊಂದು ಸಾಹಸಕ್ಕೆ ಅಣಿಯಾದೆನಲ್ಲ? ಆ ನಂತರದ ಕೆಲವೇ ಕ್ಷಣಗಳಲ್ಲಿ ನನ್ನ

ಪಾಲಿಗೆ ಇನ್ನೊಂದು ಬೆಳಗೇ ಇಲ್ಲ ಎಂಬ ಭಾವ ನನ್ನನ್ನು ಪದೇಪದೆ ಆವರಿಸಿಕೊಂಡಿತ್ತು. ಕಂಗಾಲು ಮಾಡಿತ್ತು. ಹೆದರಿಸಿತ್ತು. ನಡುಗಿಸಿತ್ತು. ಈ ಎಲ್ಲ ಕಾರಣಗಳಿಂದ ಬೆಳಗ್ಗೆಯನ್ನು ಕಂಡಾಕ್ಷಣ ಪುನರ್ಜನ್ಮ ಪಡೆದಂಥ ಸಂಭ್ರಮ ನನ್ನದಾಯಿತು. ಹಾರುತ್ತಿದ್ದ ಬಲೂನ್‌ನಲ್ಲಿ ಕುಳಿತೇ ಮರುಭೂಮಿಯಲ್ಲಿ ಉದಯಿಸುತ್ತಿದ್ದ ಸೂರ್ಯನ ಚೆಲುವನ್ನು ಕಣ್ತುಂಬಿಕೊಂಡೆ. ಚುಮುಚುಮು ಬಿಸಿಲಿ ತುಂಬಾ ಹಿತವೆನಿಸಿತು. ಈ ಸಂದರ್ಭದಲ್ಲೇ ಅಂದಿನ ರಾತ್ರಿ ಅನುಭವಿಸಿದ ಭೀತಿ ನೆನಪಿಗೆ ಬಂತು. ಉಹುಂ, ಇನ್ನೆಂದೂ ಈ ಬಲೂನು ಹಿಡಿದುಕೊಂಡು ಹಾರಲೇಬಾರದೆಂದು ಪ್ರತಿಜ್ಞೆ ಮಾಡಿದೆ.

ಇಷ್ಟಾದರೂ, ನನಗೆ ಹಾರುವುದು ಪಂಚಪ್ರಾಣ. ಈ ಬಲೂನ್ ಮೇಲಿನ ಹುಚ್ಚು ಎಷ್ಟಿದೆಯೆಂದರೆ ಬಿಸಿಗಾಳಿ ತುಂಬಿದ ಬಲೂನ್ ಒಂದನ್ನು ನಾನು ಖರೀದಿಸಿ ಇಟ್ಟುಕೊಂಡಿದ್ದೇನೆ. ನನ್ನಲ್ಲಿರೋದು ಪುಟ್ಟ ಬುಟ್ಟಿ ಹೊಂದಿರುವ ಹಾರುವ ಬಲೂನ್ Around the World in 80 Daysm ಎಂಬ ಚಿತ್ರದಲ್ಲಿದೆಯಲ್ಲ... ಅಂಥದೇ ಪುಟ್ಟದಾದ ಬಲೂನ್ ಅದು, ನಮ್ಮ ಮನೆ ಮಂದಿ, ಸ್ನೇಹಿತರು ಹಾಗೂ ಬಂಧುಗಳೊಂದಿಗೆ ಆಗೊಮ್ಮೆ ಈಗೊಮ್ಮೆ ಬಾನೆತ್ತರದಲ್ಲಿ ಹಾರಾಟ ನಡೆಸುವುದು ನನ್ನ ಅತ್ಯಂತ ಪ್ರೀತಿಯ ಹವ್ಯಾಸ. ಹೀಗೆ ಹಾರಾಡುವಾಗ ಪ್ರಕೃತಿಯೊಂದಿಗೆ ಲೀನವಾಗುತ್ತಿದ್ದೇನೆ ಎಂಬ ಸಾರ್ಥಕ ಭಾವ ನನ್ನದು.

ಅರ್ಧಗಂಟೆಯ ಹಿಂದಷ್ಟೇ ಭೂಮಿಯ ಮೇಲಿದ್ದು ನಂತರದ ಕೆಲವೇ ಕ್ಷಣಗಳಲ್ಲಿ ಜತೆಗಾರರಿಂದ ಬೇರ್ಪಟ್ಟು ಅವರಿಗೆ ಟಾಟಾ ಎನ್ನುತ್ತ ಆಗಸಕ್ಕೇರುವ ಖುಷಿಯಿದೆಯಲ್ಲ? ಅದು ವರ್ಣನೆಗೆ ನಿಲುಕದ್ದು. ಹೀಗೆ ಬಲೂನ್‌ನಲ್ಲಿ ಕುಳಿತು ಹಕ್ಕಿಯಂತೆ ಹಾರುವಾಗ ನಮ್ಮನ್ನು ಮೊಬೈಲ್ ಕಾಡುವುದಿಲ್ಲ, ಮಿಸ್ ಕಾಲ್‌ನ ರಗಳೆಯಿಲ್ಲ, ಸಾಲಗಾರರ ಕಾಟವಿಲ್ಲ, ಹೆಂಡತಿಯ ಹೆದರಿಕೆಯೂ ಇರುವುದಿಲ್ಲ, ನೀಲಾಗಸದಲ್ಲಿ ನಾವು ಪರಿಪೂರ್ಣ ಸ್ವತಂತ್ರರಾಗಿರುತ್ತೇವೆ. ಈ ಖುಷಿಯಲ್ಲೇ ಒಮ್ಮೆ ಕೆಳಗೆ ನೋಡಿದರೆ ಬೆಟ್ಟಗುಡ್ಡ, ಹೊಲ-ಗದ್ದೆಗಳು, ಹತ್ತಿರವೇ ಇರುವ ಪುಟ್ಟ ಕೆರೆ, ಜಾನುವಾರುಗಳು, ತಂತಮ್ಮ ಕೆಲಸದಲ್ಲಿ ತೊಡಗಿರುವ ಜನರು ಕಾಣಿಸುತ್ತಾರೆ. ಇದನ್ನು ಮೀರಿದ ಖುಷಿಯೆಂದರೆ ಪಕ್ಷಿಗಳು ಬಲೂನ್‌ಗೆ ತಾಗಿದಂತೆಯೇ ಹಾರಿಹೋಗುತ್ತವೆ. ಬಿಡಿ, ಆ ಕ್ಷಣದ ವಿವರಣೆ ವರ್ಣನೆಗೆ ನಿಲುಕದ್ದು. ಪ್ರತಿಯೊಂದು ಕ್ಷಣವನ್ನೂ ಆನಂದದಿಂದ ಅನುಭವಿಸುವುದು ಹೇಗೆ? ಸಂತೃಪ್ತಿಯಿಂದ ಬದುಕುವುದು ಹೇಗೆ ಎಂಬ ಪ್ರಶ್ನೆ ಮೊದಲಿನಿಂದಲೂ ನನ್ನನ್ನು ಕಾಡುತ್ತಲೇ ಇತ್ತು. ಈ ಪ್ರಶ್ನೆಗೆ ಮೀನುಗಾರನೊಬ್ಬನ ಬದುಕಿನ ಚಿತ್ರವೇ ನನಗೆ ಉತ್ತರ ಒದಗಿಸಿತು.

ಈ ಪ್ರಸಂಗ ನಡೆದದ್ದು ಜಪಾನ್‌ನಲ್ಲಿ. ನಾನು ಅದೊಮ್ಮೆ ಕ್ರಿಸ್‌ಮಸ್ ರಜೆಯ ಸಂದರ್ಭದಲ್ಲಿ ಜಪಾನ್‌ಗೆ ತೆರಳಿದ್ದೆ. ಅಲ್ಲಿ ದಿನವೂ ಮೀನುಗಾರರನ್ನು, ಅವರ ಬದುಕು-ಬವಣೆಯನ್ನು ನಾನು ಗಮನಿಸುತ್ತಿದ್ದೆ. ಸಮುದ್ರದ ಆಳ-ಅಗಲ, ಮೀನು ಮಾರಾಟದಿಂದ ಇರುವ ಲಾಭ-ನಷ್ಟ, ವ್ಯಾಪಾರದ ಒಳಗುಟ್ಟುಗಳೆಲ್ಲ ಆ ಮೀನುಗಾರರಿಗೆ ಕರತಲಾಮಲಕವಾಗಿದ್ದವು. ಆದರೂ ಅವರು ಮೀನು ಮಾರಾಟದ 'ಡಾನ್'ಗಳಾಗಲು ಪ್ರಯತ್ನಿಸುತ್ತಿರಲಿಲ್ಲ. ಅವತ್ತಿಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಹಿಡಿಯುತ್ತಿದ್ದರು. ನಿಜ ಹೇಳಬೇಕೆಂದರೆ ಆ ಜನರಿಗೆ ಆಸೆಯಾಗಲಿ, ದುರಾಸೆಯಾಗಲಿ, ವಿಪರೀತ ಮಹತ್ವಾಕಾಂಕ್ಷೆಯಾಗಲಿ, ದಿಢೀರನೆ ಎವರೆಸ್ಟ್ ಹತ್ತಿ ಸುದ್ದಿ ಮಾಡಬೇಕೆಂಬ ಹಪಾಹಪಿಯಾಗಲಿ ಇರಲಿಲ್ಲ, ಇವತ್ತು ಖುಷಿಯಿಂದ ಬದುಕೋಣ. ನಾಳೆಯನ್ನು ನಾಳೆಯೇ ನೋಡಿಕೊಳ್ಳೋಣ ಎಂದು ಅವರು ಮೊದಲೇ ನಿರ್ಧರಿಸಿರುತ್ತಿದ್ದರು. ಈ ಕಾರಣದಿಂದಲೇ ಅವರು ಖುಷಿಯಿಂದ, ಉಲ್ಲಾಸದಿಂದ ಬದುಕುತ್ತಿದ್ದರು.

ಸಂಕೋಚ, ನಾಚಿಕೆ ಮತ್ತು ಹಿಂಜರಿಕೆಯನ್ನು ಬದಿಗಿಟ್ಟು ಜೀವಿಸಲು ಶುರು ಮಾಡಬೇಕು. ಆಗ ಕೂಡ ಒಂದೊಂದು ಕ್ಷಣವನ್ನೂ ಸಂಭ್ರಮದಿಂದ ಬದುಕಲು ಸಾಧ್ಯ. ಈ ಮಾತಿಗೆ ಉದಾಹರಣೆಯಾಗಿ ನಮ್ಮ ಅಜ್ಜಿಯ ಕಥೆ ಹೇಳಬೇಕು. ಈ ಅಜ್ಜಿಗೆ ಅದೊಮ್ಮೆ ಇದ್ದಕ್ಕಿದ್ದಂತೆ ಬಾತ್‌ರೂಂ ಡ್ಯಾನ್ಸ್ ಕಲಿವ ಉಮೇದಿ ಬಂತು. ಆಗ ಅವಳ ವಯಸ್ಸು 88 ವರ್ಷ ! ಆ ವಯಸ್ಸಿನಲ್ಲಿ ಡ್ಯಾನ್ಸ್ ಕಲಿಯಲು ಹೋದರೆ ಜನ ಆಡಿಕೊಳ್ಳುವುದಿಲ್ಲವೆ? ಅದೂ ಅಲ್ಲದೆ, ಸರಿಯಾಗಿ ನಡೆದಾಡಲೂ ಸಾಧ್ಯವಾಗದಂಥ ವಯಸ್ಸು ಅದು. ಡ್ಯಾನ್ಸ್ ಮಾಡುವಾಗ ಆಕಸ್ಮಿಕವಾಗಿ ಆಯತಪ್ಪಿ ಬಿದ್ದರೆ ಕಾಲಿನ ಮೂಳೆಯೇ 'ಲಟಕ್' ಎಂದುಬಿಡುತ್ತದೆ. ಇದೆಲ್ಲ ಗೊತ್ತಿದ್ದೂ ಅಜ್ಜಿ ಹಟ ಬಿಡಲಿಲ್ಲ, ಡ್ಯಾನ್ಸ್ ಕೋರ್ಸ್‌ಗೆ ಸೇರಿಕೊಂಡೇಬಿಟ್ಟಳು. ಮುಂದಿನ ವರ್ಷ ಡ್ಯಾನ್ಸ್ ಪರೀಕ್ಷೆ ತೆಗೆದುಕೊಂಡು ಪಾಸು ಮಾಡಿದಳು ಕೂಡ. 90ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಮರುದಿನವೇ 'ಗಾಲ್ಫ್ ಆಡಬೇಕಲ್ಲ ಎಂದು ಪಿಸುಗುಟ್ಟಿದಳು. ಅಷ್ಟೇ ಅಲ್ಲ, ಆ ಆಟವನ್ನು ಕಲಿತುಬಿಟ್ಟಳು. ಮುಂದೆ 95ನೇ ವಯಸ್ಸಿಗೆ ಬಂದಾಗ- ಅದ್ಯಾರೋ ಪರಿಚಯದವರು-ಸ್ಟೀಫನ್ ಹಾಕಿನ್ಸ್‌ನ ಪುಸ್ತಕ A Brief History of Time ತುಂಬಾ ಚೆನ್ನಾಗಿದೆ ಗೊತ್ತಾ ಎಂದರು. ಈ ಅಜ್ಜಿ ಒಂದೆರಡೇ ದಿನಗಳಲ್ಲಿ ಆ ಪುಸ್ತಕ ತರಿಸಿ ಕನ್ನಡಕ ಏರಿಸಿ ಓದಲು ಕೂತೇಬಿಟ್ಟಳು. ಅಷ್ಟೇ ಅಲ್ಲ, 99ನೇ ವಯಸ್ಸಿನಲ್ಲಿ ಸಾಯುವ ಮುನ್ನ ಈಕೆ ಪ್ರಪಂಚ ಪರ್ಯಟನೆಯನ್ನೂ ಮುಗಿಸಿದ್ದಳು. ಪ್ರತಿಯೊಂದು ಕ್ಷಣವನ್ನೂ ಉತ್ಕಟವಾಗಿ ಬದುಕಬೇಕು ಎಂಬುದೇ ಅವಳ ಆಸೆಯಾಗಿತ್ತು. ಈ ಆಸೆಯೇ ಅವಳನ್ನು 99 ವರ್ಷ ಬದುಕಿಸಿತು.

ಇದೇ ಮಾತನ್ನು ನನ್ನ ಹೆತ್ತವರ ಕುರಿತೂ ಹೇಳುತ್ತೇನೆ. ನನ್ನ ಹೆತ್ತವರಿಗೆ ಈಗಾಗಲೇ 80 ವರ್ಷ ತುಂಬಿದೆ, ಈ ಇಳಿವಯಸ್ಸಿನಲ್ಲೂ ಅವರು ವಿಮಾನ ಪ್ರಯಾಣಕ್ಕೆ ತುದಿಗಾಲಲ್ಲಿ ನಿಂತಿರುತ್ತಾರೆ, ಇಂತಿಂಥ ತಿಂಗಳು ಇಂತಿಂಥ ದೇಶಗಳಿಗೆ ಹೋಗಿ ಬರಬೇಕು ಎಂದೆಲ್ಲ ಪ್ಲಾನ್ ಹಾಕಿರುತ್ತಾರೆ, ನನ್ನ ವ್ಯವಹಾರ, ವಹಿವಾಟು, ನನ್ನ ಒಂದೊಂದೇ ಹುಚ್ಚು ಸಾಹಸಗಳನ್ನು ಗಮನಿಸುತ್ತಾರೆ. 'ಚಿಯರ್ಸ್ ಎಂದು ಹೇಳಿ ಪ್ರೋತ್ಸಾಹಿಸುತ್ತಾರೆ. ಅದೊಮ್ಮೆ ಇಂಥದೇ ಹುಚ್ಚು ಅಲೆದಾಟದಲ್ಲಿ ಕಾಡಿನ ಮಧ್ಯೆ ನಾನು ಕಣ್ಮರೆಯಾಗಿದ್ದಾಗ ಈ 80ರ 'ಹರೆಯ(?)ದ ಅಪ್ಪ-ಅಮ್ಮ ನನ್ನನ್ನು ಹುಡುಕಿಕೊಂಡು ಬರಲು ಕಾಡಿಗೆ ಹೊರಟು ನಿಂತಿದ್ದರು. ಅವರ ಉಲ್ಲಾಸದ ಜೀವನ ನೆನಪಾದರೆ ಸಾಕು, ನನ್ನ ಸಂಭ್ರಮ ನೂರುಪಟ್ಟು ಹೆಚ್ಚುತ್ತದೆ. ಮನೆಯವರೊಂದಿಗೆ ನಾವು ಹೆಚ್ಚು ಸಮಯ ಕಳೆಯುವುದಿಲ್ಲ, ನಿಮಗೆ ಮನೆಮಂದಿಗಿಂತ ನಿಮ್ಮ ಕಂಪನಿಯೇ ಹೆಚ್ಚಾಗಿ ಹೋಗಿದೆ. ವರ್ಷದಲ್ಲಿ ಒಂದೆರಡು ತಿಂಗಳಾದರೂ ಈ ವ್ಯಾಪಾರ, ವ್ಯವಹಾರ, ಲಾಭ-ನಷ್ಟದ ಮಾತು ಬಿಟ್ಟು ಹಾಯಾಗಿ ಹರಟೆ ಹೊಡೆಯುತ್ತ ಬದುಕಲು ಸಾಧ್ಯವಿಲ್ಲವೆ? ಇದು ನನ್ನ ಹೆಂಡತಿಯ ಅನುದಿನದ ಪ್ರಶ್ನೆ, ಈ ಪ್ರಶ್ನೆಯನ್ನು ಅವಳು ಮೇಲಿಂದಮೇಲೆ ಕೇಳತೊಡಗಿದಾಗ ಅವಳ ವಾದದಲ್ಲೂ ಹುರುಳಿದೆ ಅನ್ನಿಸಿತು. ಪರಿಣಾಮವಾಗಿ, ದಕ್ಷಿಣ ಆಫ್ರಿಕಾದಲ್ಲಿ ಒಂದು ಮನೆ ಕಟ್ಟಿಸಿದೆ. ಕುಟುಂಬದವರೊಂದಿಗೆ ಅಲ್ಲಿದ್ದೆ. ಈ ಸಂದರ್ಭದಲ್ಲಿ ಮೊಬೈಲ್ ಅಥವಾ ಇ-ಮೇಲ್‌ಗೆ ಗಂಟುಬಿದ್ದರೆ- ಕಚೇರಿಯಲ್ಲಿ ಇದ್ದಂತೆಯೇ ಭಾಸವಾಗುತ್ತದೆ ಅನ್ನಿಸಿತು. ತಕ್ಷಣವೇ ಸ್ಯಾಟಲೈಟ್ ಫೋನ್‌ನ ಸಂಪರ್ಕ ಪಡೆದು, ಪ್ರತಿದಿನವೂ ಹದಿನೈದು ನಿಮಿಷದ ಅವಧಿಯನ್ನು ಆಫೀಸ್ ಕೆಲಸಕ್ಕೆ ಎಂದು ಮೀಸಲಿಟ್ಟೆ.

ಸಾವಿರಾರು ಕೋಟಿ ರುಪಾಯಿ ವಹಿವಾಟಿನ ಕಂಪನಿ ನನ್ನದು. ಈ ವ್ಯವಹಾರವನ್ನೆಲ್ಲ ಗಮನಿಸಲು ಕೇವಲ ಹದಿನೈದು ನಿಮಿಷ ಸಾಕಾ ಎಂಬುದು ಹಲವರ ಪ್ರಶ್ನೆ, ಅದಕ್ಕೆ ನಾನು ಹೀಗೆ ಉತ್ತರಿಸುತ್ತೇನೆ. ಹದಿನೈದು ನಿಮಿಷ ಅಂದ್ರೆ ಸುಮ್ನೆ ಅಲ್ಲ ಸ್ವಾಮಿ, 900 ಸೆಕೆಂಡು! ಒಂದು ವಿಭಾಗದ ಮುಖ್ಯಸ್ಥನೊಂದಿಗೆ ಐದು ಸೆಕೆಂಡ್ ಮಾತು ಎಂದುಕೊಂಡರೂ ಹದಿನೈದು ನಿಮಿಷದಲ್ಲಿ 180 ಜನರೊಂದಿಗೆ ಮಾತಾಡಬಹುದು. ಇಷ್ಟು ಟೈಂ ಸಾಕಾಗಲ್ಲ ಅಂದ್ರೆ ಹೇಗೆ?

ನಿಮ್ಮ ಯಶಸ್ಸಿನ ಗುಟ್ಟೇನು ಎಂಬ ಪ್ರಶ್ನೆಯನ್ನು ಈಗಲೂ ನನಗೆ ಹಲವರು ಕೇಳುತ್ತಾರೆ. ನನ್ನ ಉತ್ತರ ಇಷ್ಟೇ- ಯಾವ ಸಂದರ್ಭದಲ್ಲೂ ನಾನು ಯೋಚಿಸುವುದನ್ನು, ಅದೂ ಪಾಸಿಟಿವ್ ಆಗಿ ಯೋಚಿಸುವುದನ್ನು ನಿಲ್ಲಿಸುವುದಿಲ್ಲ. ನಾನು ಕಾಫಿ ಹೀರುವಾಗ, ಸ್ನಾನ ಮಾಡುವಾಗ, ಊಟ ಮಾಡುವಾಗ, ಕಚೇರಿಗೆ ಹೋಗುವಾಗ ಕೂಡ ನನ್ನ ಮಿದುಳು ಏನನ್ನೋ ಯೋಚಿಸುತ್ತಿರುತ್ತದೆ. ದೀರ್ಘಾವಧಿ ಕಾಲ ನಿದ್ರೆ ಮಾಡುತ್ತ ಕಳೆದರೆ, ಸೋಮಾರಿಯಾಗಿ ಬಿಡುವ ಭಯ ನನ್ನದು. ಜೊತೆಗೆ ಗಾಢ ನಿದ್ರೆಯ ಸಂದರ್ಭದಲ್ಲಿ ನನ್ನ ಮಿದುಳು ಯೋಚಿಸುವುದನ್ನೇ ಮರೆತುಬಿಡುತ್ತದೆ ಎಂಬ ಆತಂಕ ಕೂಡ ನನ್ನದು. ಹಾಗಾಗಿ ಒಂದೆರಡು ಗಂಟೆಗಳಲ್ಲೇ ನಿದ್ರೆ ಮುಗಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ. ಅರ್ಧ ಗಂಟೆಯ ಕಾಲ ಕೂತಲ್ಲಿಯೇ ನಿದ್ದೆ ಹೊಡೆಯುವ ಕಲೆಗಾರಿಕೆ ಕೂಡ ಸಿದ್ಧಿಸಿದೆ. ಹೀಗೆ ಹತ್ತಿಪ್ಪತ್ತು ನಿಮಿಷ ಕೂತಲ್ಲೇ ನಿದ್ದೆ ಹೊಡೆಯುವ ಕಲೆ ಇಂಗ್ಲೆಂಡಿನ ಮಾರ್ಗರೇಟ್ ಥ್ಯಾಚರ್ ಹಾಗೂ ವಿನ್‌ಸ್ಟನ್ ಚರ್ಚಿಲ್‌ಗೂ ಇತ್ತಂತೆ!

ನನ್ನ ಮಾತಿನ ಒಟ್ಟು ಅರ್ಥ ಇಷ್ಟೆ: ''ಪ್ರತಿಯೊಂದು ದಿನವನ್ನೂ 'ಇವತ್ತೇ ಕಡೆಯ ದಿನ ಎಂಬಂತೆ ಬದುಕಿಬಿಡಬೇಕು. ಆದರೆ, ಆ ಬದುಕಲ್ಲಿ ಅವಸರವಿರಬಾರದು. ಒಂದು ಗುರಿ ಸಾಧನೆಯ ಹಿಂದೆ ಸೇಡಿರಬಾರದು. ದ್ವೇಷ ಇರಬಾರದು. ಯಾರನ್ನೇ ಹಣಿಯುವ ದುರುದ್ದೇಶ ಇರಬಾರದು, ಒಂದು ಕಷ್ಟ ಎದುರಾದಾಗ ಎದೆಗುಂದುವ ಮನಸ್ಸಿರಬಾರದು. ಬದಲಿಗೆ, ಪ್ರತಿಯೊಂದು ಸಮಸ್ಯೆಗೆ ಪರಿಹಾರವಿದ್ದೇ ಇದೆ. ಅದು ನಮ್ಮ ಕಣ್ಮುಂದೆಯೇ ಇದೆ ಎಂಬ ಭಾವ ನಮ್ಮ ಉಸಿರಾಗಿ, ನೆರಳಾಗಿ ಇರಬೇಕು.''

ನನ್ನ ಪಾಲಿಗೆ ಬದುಕೆಂಬುದು ಸಾವಿರ ವಿಸ್ಮಯಗಳ, ಸಾವಿರ ತಿರುವುಗಳ ಸಂತೆ. ನಾನು ಪ್ರತಿಯೊಂದು ತಿರುವನ್ನೂ ಬೆರಗಿನಿಂದಲೇ ನೋಡಲು ಆಸೆಪಡುತ್ತೇನೆ. ಹಾಗೆಯೇ ಬದುಕುತ್ತಿದ್ದೇನೆ. ನನ್ನ ಸುತ್ತಮುತ್ತಲೇ ಇರುವ ಕೆಲವರು ಹೀಗೆ ಯೋಚಿಸುವುದೇ ಇಲ್ಲ, ಅವರೆಲ್ಲ ಲಾಟರೀಲಿ ಹಣ ಗೆದ್ದಂತೆ ರಾತ್ರೋ ರಾತ್ರಿ ಶ್ರೀಮಂತನಾಗಬೇಕು ಅನ್ನುತ್ತಾರೆ. ಜಾದೂಗಾರನ ಥರಾ ಮತ್ತೇನನ್ನೋ ಸೃಷ್ಟಿಸಬೇಕು ಅನ್ನುತ್ತಾರೆ. ಅಂಥವರಿಗೆ ನಾನು ಹೇಳುವುದಿಷ್ಟೆ, ದಿಢೀರನೆ ಬಂದ ಹಣ ಹಾಗೂ ಪರಿಶ್ರಮವಿಲ್ಲದೆ ಸೃಷ್ಟಿಸಿದ ಕಂಪನಿ ಹೆಚ್ಚು ದಿನ ಉಳಿಯುವುದಿಲ್ಲ, ಹಾಗಾಗಿ, ಅಂಥವುಗಳ ಬಗ್ಗೆ ಮಾತಾಡುವುದಿರಲಿ, ಯೋಚಿಸುವುದಕ್ಕೂ ನನಗೆ ಇಷ್ಟವಿಲ್ಲ. ಸಮಯವೂ ಇಲ್ಲ, ನನ್ನಲ್ಲಿ ಮಾತ್ರ ನನಗೆ ನಂಬಿಕೆ.

ಈ ಮೈಲುಗಲ್ಲು ತಲುಪಿದ್ದು ಸುಲಭದ ಹಾದಿಯಾಗಿರಲಿಲ್ಲ!

ಕ್ರೀಡಾಪಟುಗಳಿಗೆ ಪ್ರಧಾನಿ ನರೇಂದ್ರ ಮೋದಿಯವರ ಪ್ರೋತ್ಸಾಹ ನಿಜಕ್ಕೂ ಕೆಲಸ ಮಾಡುತ್ತಿದೆ. ಜೈ ಶಾ ಹೆಣೆದ ತಂತ್ರಗಾರಿಕೆ ಮಹಿಳಾ ಕ್ರಿಕೆಟ್‌ನ ಗತಿಯನ್ನೇ ಬದಲಿಸಿದೆ. ಇಂದು ಹಳ್ಳಿಹಳ್ಳಿಗಳಲ್ಲೂ ಗಂಡುಮಕ್ಕಳಂತೆ ಹೆಣ್ಣುಮಕ್ಕಳು ಕೂಡ ಕ್ರಿಕೆಟ್ ಆಡತೊಡಗಿದ್ದಾರೆ. ಭಾರತೀಯ ಮಹಿಳಾ ಕ್ರಿಕೆಟ್‌ನಲ್ಲಿ ಹೊಸ ಶಕೆ ಆರಂಭವಾಗಿದೆ.

ಸಂಗತ

ಡಾ.ವಿಜಯ್ ದರಡಾ
vveditoped@gmail.com

ಇತ್ತೀಚೆಗೆ ಭಾರತಕ್ಕೆ ಐಸಿಸಿ ಮಹಿಳಾ ವಿಶ್ವಕಪ್ ತಂದುಕೊಟ್ಟ ಈ ಮಣ್ಣಿನ ಹೆಣ್ಣುಮಕ್ಕಳು ನಮ್ಮೆಲ್ಲರ ಎದೆ ಉಬ್ಬುವಂತೆ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಅವರನ್ನೆಲ್ಲ ತಮ್ಮ ನಿವಾಸಕ್ಕೆ ಆಹ್ವಾನಿಸಿ, ಖುದ್ದಾಗಿ ಎಲ್ಲರನ್ನೂ ಬರಮಾಡಿಕೊಂಡು ಆತಿಥ್ಯ ನೀಡಿದ್ದನ್ನು ನೋಡಿ ನಿಜಕ್ಕೂ ಕಣ್ಣು ತುಂಬಿ ಬಂತು. ಅದು ಈ ದೇಶದ ಕ್ರೀಡಾ ಇತಿಹಾಸದಲ್ಲಿ ದಾಖಲಾಗುವ ಸುವರ್ಣ ಕ್ಷಣಗಳಲ್ಲೊಂದು. ಆ ದಿನದ ಸಮಾರಂಭವನ್ನು ನೋಡಿದಾಗ ನನಗೆ ಜೈ ಶಾ ಅವರ ಚಾಣಾಕ್ಷ ತಂತ್ರಗಾರಿಕೆ, ಅದರಲ್ಲೂ ಕ್ರಿಕೆಟ್ ಬಗ್ಗೆ ಅವರಿಗಿರುವ ಬದ್ಧತೆ, ಜೊತೆಗೆ ಇಷ್ಟು ವರ್ಷಗಳ ಕಾಲ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಮಹಿಳಾ ಕ್ರಿಕೆಟ್ ಆಟವನ್ನು ಅವರು ಹಟಕ್ಕೆ ಬಿದ್ದು ಮೇಲೆತ್ತಿದ ಪರಿ ನೆನಪಾಯಿತು. ಹೀಗಾಗಿ ನಮ್ಮ ವೀರ ವನಿತೆಯರ ಜೊತೆಗೆ ಇದು ಕ್ರಿಕೆಟ್‌ಗೆ ಸಂಬಂಧಪಟ್ಟ ಎಲ್ಲರ ವಿಜಯ. ವಿಶ್ವಕಪ್ ಗೆಲುವಿಗೆ ಅಭಿನಂದನೆ ಹೇಳುವಾಗ ನಾವು ಎಲ್ಲ ಕಾರಣಕರ್ತರನ್ನೂ ನೆನೆಯಬೇಕು.

ರಾಜಕಾರಣದಲ್ಲಿ ನಮ್ಮ ಪ್ರಧಾನಿ ಒಬ್ಬ ನುರಿತ ಆಟಗಾರನೆಂಬುದು ಈಗಾಗಲೇ ಸಾಬೀತಾಗಿದೆ. ದೊಡ್ಡ ದೊಡ್ಡ ಸವಾಲಿನ ಸಂದರ್ಭಗಳಲ್ಲೂ ಅವರು ಅದ್ಭುತ ಆಟಗಳನ್ನು ಆಡಿ ಗೆದ್ದಿದ್ದಾರೆ. ಬಹುಶಃ ಗೆಲುವನ್ನು ಸಂಭ್ರಮಿಸುವುದರಲ್ಲಿನ ಖುಷಿಯನ್ನು ಅವರಿಗಿಂತ ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲವರು ಯಾರೂ ಇರಲಿಕ್ಕಿಲ್ಲ. ಈ ದೇಶದ ಮಕ್ಕಳು ಯಾವಾಗ ಏನೇ ದೊಡ್ಡ ಸಾಧನೆ ಮಾಡಿದರೂ ಅವರನ್ನು ಖುದ್ದಾಗಿ ಅಭಿನಂದಿಸಿ ಪ್ರೋತ್ಸಾಹಿಸುವುದನ್ನು ಮೋದಿ ಮರೆಯುವುದಿಲ್ಲ. ಈ ಹಿಂದೆ ಬೇರೆ ಪ್ರಧಾನಿಗಳು ಇದನ್ನು ಮಾಡಿಲ್ಲ ಎಂದಲ್ಲ. ಆದರೆ ಮೋದಿ ಅಂತಹ ಯಾವ ಅವಕಾಶವನ್ನೂ ಮಿಸ್ ಮಾಡುವುದಿಲ್ಲ. ಸೋತಾಗ ಕೂಡ ಅವರು ಪ್ರೋತ್ಸಾಹದಾಯಕ ಮಾತುಗಳನ್ನಾಡಿ ಕ್ರೀಡಾಪಟುಗಳಿಗೆ ಧೈರ್ಯ ತುಂಬಿದ್ದಾರೆ. ಕ್ರೀಡೆ ಮತ್ತು ಕ್ರೀಡಾ ಸ್ಫೂರ್ತಿಯ ಬಗ್ಗೆ ಮೋದಿಯವರಿಗೆ ಇರುವ ಗೌರವ ಏನೆಂಬುದು ನನಗೆ ಗೊತ್ತು. ಒಂದು ಸೂಕ್ಷ್ಮ ಸಂಗತಿ ಹೇಳುತ್ತೇನೆ, ಕೇಳಿ. ನಮ್ಮ ಹೆಣ್ಣುಮಕ್ಕಳು ವಿಶ್ವಕಪ್‌ನೊಂದಿಗೆ ಮೋದಿಯವರ ಜೊತೆ ಹೋಗಿ ನಿಂತು ಫೋಟೋಗೆ ಪೋಸ್ ನೀಡುವಾಗ ಮೋದಿ ತಮ್ಮ ಕೈಗಳಿಂದ ಟ್ರೋಫಿಯನ್ನು ಎತ್ತಲು ಹೋಗಲಿಲ್ಲ. ಬದಲಿಗೆ ಅದು ಕ್ರಿಕೆಟಿಗರ ಕೈಯಲ್ಲೇ ಇರುವಂತೆ ನೋಡಿಕೊಂಡರು. ಈ ಹಿಂದೆ ಪುರುಷರ ತಂಡ ವಿಶ್ವಕಪ್ ತಂದಾಗಲೂ ಅವರು ಹೀಗೇ ಮಾಡಿದ್ದರು.

ಮಹಿಳಾ ವಿಶ್ವಕಪ್‌ನ ಫೈನಲ್ ದಿನ ನಾನು ಪದೇ ಪದೆ ಜೈ ಶಾ ಅವರನ್ನು ನೆನಪಿಸಿಕೊಂಡಿದ್ದೆ. ಅಹಮದಾಬಾದ್‌ನಲ್ಲಿ ಹಿಂದೊಮ್ಮೆ ಅವರನ್ನು ಭೇಟಿಯಾಗಿದ್ದಾಗ, 'ನೋಡ್ತಾ ಇರಿ, ನಾನು ಪುರುಷರ ಮತ್ತು ಮಹಿಳೆಯರಿಬ್ಬರ ವಿಶ್ವಕಪ್‌ಗಳನ್ನೂ ಭಾರತಕ್ಕೆ ತರುತ್ತೇನೆ ಎಂದು ಹೇಳಿದ್ದರು. ನಮ್ಮ ಗೃಹ ಮಂತ್ರಿ ಹಾಗೂ ರಾಜಕೀಯ ರಂಗದ ಚಾಣಕ್ಯ ಅಮಿತ್ ಶಾ ಅವರ ಮಗ ಜೈ ಶಾ. ಆಲದ ಮರದ ನೆರಳಿನಲ್ಲಿ ಆಲದ ಗಿಡ ಬೆಳೆಯುವುದಿಲ್ಲ ಎಂಬ ಮಾತಿದೆ. ಆದರೆ ಈ ಮಾತು ಸುಳ್ಳೆಂದು ಜೈ ಶಾ ಸಾಬೀತು ಮಾಡಿದ್ದಾರೆ. ಅವರು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಚೇರ್ಮನ್ ಆದಾಗ ಜನರು 'ಅರೆ, ಇವರ್ಯಾರು? ಎಲ್ಲಿಂದ ಬಂದರು? ಬಿಸಿಸಿಐ ಅಧ್ಯಕ್ಷರಾಗುವುದಕ್ಕೆ ಈತನಿಗೆ ಏನು ಅರ್ಹತೆಯಿದೆ? ಎಂದು ಕೇಳಿದ್ದರು. ಆದರೆ ಜೈ ಶಾ ತಾನು ಕೂಡ ತಂದೆಯಂತೆ ಚಾಣಾಕ್ಷ ತಂತ್ರಗಾರ, ಅಪ್ಪಟ ಚಾಣಕ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರು ಕ್ರಿಕೆಟ್‌ನ ಆಡಳಿತವನ್ನೇ ಆಮೂಲಾಗ್ರವಾಗಿ ಬದಲಿಸಿದ್ದಾರೆ. ದೇಶದ ಕ್ರಿಕೆಟ್ ಆಡಳಿತವನ್ನು ತಮ್ಮ ಕಪಿಮುಷ್ಟಿಯಲ್ಲಿ ಇರಿಸಿಕೊಂಡಿದ್ದ ಎಲ್ಲಾ ಸ್ವಯಂಘೋಷಿತ 'ಕ್ರಿಕೆಟ್ ದಿಗ್ಗಜ'ರನ್ನೂ ದೂರ ಸರಿಸಿ, ಆಡಳಿತದ ಗಮನ ಕೇವಲ ಕ್ರಿಕೆಟ್ ಮೇಲೆ ಮಾತ್ರ ಇರುವಂತೆ ಮಾಡಿದ್ದಾರೆ!

ಜೈ ಶಾ ಅಧಿಕಾರ ಸ್ವೀಕರಿಸಿದ ನಂತರ ಭಾರತೀಯ ಕ್ರಿಕೆಟ್ ತಂಡ ಸದಾ ಯಶಸ್ಸಿನ ಹಾದಿಯಲ್ಲೇ ಸಾಗುತ್ತಿದೆ ಎಂಬುದನ್ನು ಎಲ್ಲರೂ ಗಮನಿಸಿದ್ದಾರೆ. ಆದರೆ, ಮಹಿಳಾ ಕ್ರಿಕೆಟ್ಟನ್ನು ಮೇಲೆತ್ತುವುದು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ, ಭಾರತದಲ್ಲಿ ಪುರುಷರ ಕ್ರಿಕೆಟ್‌ಗೂ ಮಹಿಳಾ ಕ್ರಿಕೆಟ್‌ಗೂ ಅಜಗಜಾಂತರ ವ್ಯತ್ಯಾಸವಿತ್ತು. ಪುರುಷರ ಕ್ರಿಕೆಟ್ ಆಗರ್ಭ ಶ್ರೀಮಂತರ ಮನೆಯ ಅದ್ದೂರಿ ಮದುವೆಯಂತಿದ್ದರೆ, ಮಹಿಳೆಯರ ಕ್ರಿಕೆಟ್ ಬಡವರ ಮನೆಯ ಸೊರಗಿದ ಮದುವೆಯಂತಿತ್ತು. ಮಹಿಳಾ ಕ್ರಿಕೆಟಿಗರು ತೀವ್ರ ನಿರ್ಲಕ್ಷ್ಯ, ಅವಮಾನ ಹಾಗೂ ಶೋಷಣೆಗೆ ತುತ್ತಾಗುತ್ತಿದ್ದರು. ಅವರು ಆಡಿದ ಪಂದ್ಯಗಳಿಗೆ ಸರಿಯಾಗಿ ಗೌರವಧನವನ್ನೂ ನೀಡುತ್ತಿರ ಲಿಲ್ಲ. ಅವರಿಗೆ ವಿಮಾನ ಟಿಕೆಟ್ ಕೊಂಡುಕೊಳ್ಳುವುದಕ್ಕೂ ಕಷ್ಟವಿತ್ತು. ವಿಶೇಷ ಬಸ್‌ಗಳ ಸೌಕರ್ಯವಿರಲಿಲ್ಲ. ವಿಮಾನ ನಿಲ್ದಾಣಗಳಲ್ಲಿ ಎಲ್ಲರಂತೆ ಕ್ಯೂ ನಿಲ್ಲಬೇಕಿತ್ತು. ನಾನು ಇದನ್ನೆಲ್ಲ ಕಣ್ಣಾರೆ ನೋಡಿದ್ದೇನೆ. ಹಾಗಾಗಿಯೇ ನಮ್ಮ ಹೆಣ್ಣುಮಕ್ಕಳ ಕ್ರಿಕೆಟ್ ಯಾನ ಎಷ್ಟು ಕಷ್ಟದ್ದು ಎಂಬುದನ್ನು ಅಧಿಕಾರಯುತವಾಗಿ ಹೇಳಬಲ್ಲೆ. ಡಯಾನಾ ಎಡುಲ್ಜಿ, ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ, ಹರ್ಮನ್‌ಪ್ರೀತ್ ಕೌರ್ ಹಾಗೂ ಸ್ಮೃತಿ ಮಂಧನಾ ಅವರ ಹೋರಾಟಗಳನ್ನು ನಾನು ನೋಡಿದ್ದೇನೆ. ನಮ್ಮ ಲೋಕಮತ ಮೀಡಿಯಾ ಗ್ರೂಪ್‌ನಿಂದ ಬಹಳ ಹಿಂದೆಯೇ ನಾವು ಸ್ಮೃತಿ ಮಂಧನಾ ಅವರ ಪ್ರತಿಭೆಯನ್ನು ಗುರುತಿಸಿ 'ಲೋಕಮತ್ ಮಹಾರಾಷ್ಟ್ರಿಯನ್ ವರ್ಷದ ವ್ಯಕ್ತಿ' ಪ್ರಶಸ್ತಿ ನೀಡಿದ್ದೆವು ಎಂಬುದು ನಿಜಕ್ಕೂ ನನಗೆ ಹೆಮ್ಮೆಯ ಸಂಗತಿ.

ಗಮನಾರ್ಹ ಸಂಗತಿಯೆಂದರೆ, ಜೈ ಶಾ ಬಿಸಿಸಿಐ ಅಧ್ಯಕ್ಷರಾದ ನಂತರ ಕೇವಲ ಪುರುಷರ ಕ್ರಿಕೆಟ್‌ಗೆ ಸೀಮಿತಗೊಳ್ಳದೆ, ದಯನೀಯ ಸ್ಥಿತಿಯಲ್ಲಿದ್ದ ಮಹಿಳಾ ಕ್ರಿಕೆಟ್ಟನ್ನು ರೂಪಾಂತರಗೊಳಿಸುವ ಕೆಲಸಕ್ಕೆ ಕೈಹಾಕಿದರು. ಮಹಿಳಾ ಕ್ರಿಕೆಟಿಗರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡಿದರು. ಅವರಿಗೂ ಪುರುಷ ಕ್ರಿಕೆಟಿಗರಿಗೆ ನೀಡುವ ಸೌಲಭ್ಯಗಳನ್ನೇ ಕೊಡಿಸಿದರು. ಇಂದು ನಮ್ಮ ಮಹಿಳಾ ಕ್ರಿಕೆಟಿಗರಿಗೂ ಪಂಚತಾರಾ ಸೌಲಭ್ಯಗಳು, ಹೆಚ್ಚುಕಮ್ಮಿ ಪುರುಷ ಕ್ರಿಕೆಟಿಗರಿಗೆ ಸಿಗುವಷ್ಟೇ ಪಂದ್ಯದ ವೇತನಗಳು ಸಿಗುತ್ತಿವೆ. ಆದರೆ, ವಾರ್ಷಿಕ ಗುತ್ತಿಗೆ ಮೊತ್ತದಲ್ಲಿ ಈಗಲೂ ಪುರುಷರ ಮತ್ತು ಮಹಿಳೆಯರ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ. ಏಕೆ ಆ ತಾರತಮ್ಯ ಇನ್ನೂ ಹಾಗೇ ಇದೆ? ಜೈ ಶಾ ಅದನ್ನು ಕೂಡ

ನಿವಾರಣೆ ಮಾಡಿ, ಇಬ್ಬರಿಗೂ ಸಮಾನ ವೇತನ ಸಿಗುವಂತೆ ಮಾಡುತ್ತಾರೆಂದು ಆಶಿಸೋಣ. ಭಾರತದಲ್ಲಿ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಆರಂಭಿಸಿದ್ದು ಜೈ ಶಾ. ಅದರಿಂದಾಗಿ ಮಹಿಳಾ ಕ್ರಿಕೆಟಿಗರಿಗೆ ತಮ್ಮ ಕೌಶಲಗಳನ್ನು ದೇಸಿ ಮಟ್ಟದಲ್ಲಿ ಪ್ರದರ್ಶಿಸಲು ವೇದಿಕೆ ದೊರೆಯಿತು. ಜೈ ಶಾ ಮಹಿಳಾ ಕ್ರಿಕೆಟ್‌ನ ಮೂಲಸೌಕರ್ಯವನ್ನು ಬಲಗೊಳಿಸಲು ಸಾಕಷ್ಟು ಆರ್ಥಿಕ ನೆರವು ನೀಡಿದರು. ಅವರಿಗಿರುವ ದೂರದೃಷ್ಟಿಯಿಂದಾಗಿಯೇ 2023ರ ಅಕ್ಟೋಬರ್‌ನಲ್ಲಿ ಭಾರತೀಯ ಮಹಿಳಾ ಕ್ರಿಕೆಟ್ ತಂಡಕ್ಕೆ ಅಮೋಲ್ ಮಜುಂದಾರ್ ಕೋಚ್ ಆಗಿ ನೇಮಕಗೊಂಡರು. ಆ ಸಮಯದಲ್ಲಿ ಸಾಕಷ್ಟು ಜನರು ಆಕ್ಷೇಪ ವ್ಯಕ್ತಪಡಿಸಿದ್ದರು. 'ಅಮೋಲ್ ಯಾವತ್ತೂ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯವನ್ನೇ ಆಡಿಲ್ಲ, ಅಂತಹವರನ್ನು ಕೋಚ್ ಹುದ್ದೆಗೆ ನೇಮಿಸಿದರೆ ಹೇಗೆ ಎಂದು ಪ್ರಶ್ನಿಸಿದ್ದರು. ಆದರೆ ಅದನ್ನೆಲ್ಲ ಜೈ ಶಾ ನಿರ್ಲಕ್ಷಿಸಿದರು. ಅಮೋಲ್ ಮಜುಂದಾರ್ ಬಗ್ಗೆ ಅವರಿಗೆ ಸಂಪೂರ್ಣ ವಿಶ್ವಾಸವಿತ್ತು. ಪರಿಣಾಮ ಏನಾಯಿತು ಎಂಬುದು ಇಂದು ನಮ್ಮ ಕಣ್ಮುಂದೆಯೇ ಇದೆ.

ಮಹಿಳಾ ವಿಶ್ವಕಪ್ ಗೆಲ್ಲುವುದರೊಂದಿಗೆ ಹರ್ಮನ್‌ಪ್ರೀತ್ ಕೌರ್ ಪಡೆ ಭಾರತೀಯ ಕ್ರೀಡಾಲೋಕದಲ್ಲಿ ನಮ್ಮ ಹೆಣ್ಣುಮಕ್ಕಳಿಗೆ ಹೊಸ ಅವಕಾಶಗಳ ದೊಡ್ಡದೊಂದು ಲೋಕದ ಬಾಗಿಲು ತೆರೆದಿದೆ. ಹಿಂದೆಲ್ಲ ಹಳ್ಳಿಗಳಲ್ಲಿ ಗಂಡುಮಕ್ಕಳಷ್ಟೇ ಕ್ರಿಕೆಟ್ ಆಡುತ್ತಿದ್ದರು. ಕೆಲ ವರ್ಷಗಳಿಂದ ನಮ್ಮ ದೇಶದ ಮಹಿಳಾ ಕ್ರಿಕೆಟ್ ತಂಡ ಜನಪ್ರಿಯತೆ ಗಳಿಸಿದ ಪರಿಣಾಮ ಇಂದು ಹಳ್ಳಿಗಳಲ್ಲಿ ಹೆಣ್ಣುಮಕ್ಕಳೂ ಕ್ರಿಕೆಟ್ ಆಡತೊಡಗಿದ್ದಾರೆ. ಯಾವುದೇ ಕ್ರೀಡೆಯಲ್ಲಿ ರಾಷ್ಟ್ರಮಟ್ಟದ ಆಟಗಾರರು ದೇಶದ ಯುವಕ ಯುವತಿಯರಲ್ಲಿ ಸ್ಫೂರ್ತಿ ತುಂಬುತ್ತಿದ್ದಾರೆಂಬುದು ಸಾಬೀತಾಗುವುದೇ ಹಳ್ಳಿಹಳ್ಳಿಗಳಲ್ಲಿ ಅವರಿಗೆ ಯುವಕರು ಅಭಿಮಾನಿಗಳಾದಾಗ ಮತ್ತು ಅವರೂ ಆ ಆಟವನ್ನು ಆಡತೊಡಗಿದಾಗ. ಮಹಿಳಾ ಕ್ರಿಕೆಟ್ ವಿಷಯದಲ್ಲಿ ಇಂದು ಈ ಗುರಿ ಸಾಧನೆಯಾಗಿದೆ.

ಈ ಅದ್ಭುತ ಜಯದ ಹೊಸ್ತಿಲಿನಲ್ಲಿ ನಾವು ಭಾರತೀಯ ಮಹಿಳಾ ಕ್ರಿಕೆಟ್‌ನ ಆರಂಭಿಕ ಆಟಗಾರರನ್ನು ಮರೆಯುವಂತಿಲ್ಲ. ಅವರೇ ಮಹಿಳಾ ಕ್ರಿಕೆಟ್‌ಗೆ ಬಲವಾದ ತಳಪಾಯ ಹಾಕಿಕೊಟ್ಟವರು. ಶಾಂತಾ ರಂಗಸ್ವಾಮಿ, ಡಯಾನಾ ಎಡುಲ್ಜಿ, ಅಂಜುಂ ಚೋಪ್ರಾ, ಮಿಥಾಲಿ ರಾಜ್, ಪೂರ್ಣಿಮಾ ರಾವ್, ಜೂಲನ್ ಗೋಸ್ವಾಮಿ, ನೀತು ಡೇವಿಡ್, ಶುಭಾಂಗಿ ಕುಲಕರ್ಣಿ, ವೇದಾ ಕೃಷ್ಣಮೂರ್ತಿ ಮತ್ತು ಶಿಖಾ ಪಾಂಡೆ ನೀಡಿದ ಕೊಡುಗೆಯನ್ನು ಹೇಗೆ ಮರೆಯಲಾದೀತು? ಅವರ ಹೋರಾಟದ ಪ್ರತಿಫಲವೇ ಇಂದು ನಮ್ಮ ಹೆಣ್ಣುಮಕ್ಕಳು ವಿಶ್ವಕಪ್ ಗೆದ್ದುಕೊಂಡು ಬರುವ ಮಟ್ಟಕ್ಕೆ ಬೆಳೆದಿದ್ದಾರೆ. ಅದರಲ್ಲಿ ಯಾವುದೇ ಅನುಮಾನ ಬೇಡ. ನಮ್ಮ ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ಯಾವುದರಲ್ಲಿ ಕಮ್ಮಿಯಿದ್ದಾರೆ ಎಂದು ನಾವೆಲ್ಲ ಇಂದು ಹೆಮ್ಮೆಯಿಂದ ಕೇಳುವಂತಾಗಿದೆ.

ಮಹಿಳಾ ಕ್ರಿಕೆಟಿಗರ ಸಾಧನೆಯನ್ನು ಇಂದು ಇಡೀ ದೇಶವೇ ಕೊಂಡಾಡುತ್ತಿದೆ. ಈ ಸಂತಸದ ಸಮಯದಲ್ಲೇ ದೇಶಕ್ಕೆ ನಾನೊಂದು ಮನವಿ ಮಾಡುತ್ತೇನೆ. ದಯವಿಟ್ಟು ನಿಮ್ಮ ಹೆಣ್ಣುಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ. ಅವರಿಗೆ ಅವರಿಷ್ಟದ ಕ್ಷೇತ್ರದಲ್ಲಿ ಬೆಳೆಯಲು ಬೇಕಾದ ಹಣಕಾಸಿನ ನೆರವು ಸಿಗುವಂತೆ ನೋಡಿಕೊಳ್ಳಿ. ನಾವೆಲ್ಲರೂ ಇದೊಂದು ಕೆಲಸ ಮಾಡಿದರೆ ನಮ್ಮ ಹೆಣ್ಣುಮಕ್ಕಳು ದೇಶಕ್ಕೇ ಹೆಮ್ಮೆ ತರುವಂತಹ ಸಾಧನೆಗಳನ್ನು ಮಾಡುತ್ತಾರೆ. ನಮ್ಮ ಹೆಣ್ಣುಮಕ್ಕಳೇನು ಕಮ್ಮಿ ಪ್ರತಿಭಾವಂತರು ಅಂದುಕೊಂಡಿರಾ? ಖಂಡಿತ ಇಲ್ಲ.

ಹೆಣ್ಣುಮಕ್ಕಳು
ನಮ್ಮ ಶಕ್ತಿಪುಂಜ,
ನಮ್ಮ ಗೌರವದ ಪ್ರತೀಕ,
ಅವರಿಗೆ ಮುಕ್ತ ಅವಕಾಶಗಳನ್ನು ಕೊಟ್ಟು ನೋಡಿ,
ಆಗಸದ ತಾರೆಗಳನ್ನೇ ತಂದು ಕೈಗೆ ಕೊಡುತ್ತಾರೆ,
ಏಕೆಂದರೆ ಅವರೇ ನೀಲಾಗಸದ ಪ್ರತೀಕವಾಗಿದ್ದಾರೆ!

ಭಟ್ಟರ್ ಸ್ಕಾಚ್

- **ಕಮ್ಮು, ಇಟ್ಟಮಡು**
  ಭಟ್ಟರು ದೇಶ ಬಿಟ್ಟು ಹೋದಾಗಲೆಲ್ಲ ಆಗಬಾರದ್ದೆಲ್ಲ ನಡೆದು ಹೋಗುತ್ತಲ್ಲ?
  – **ಅದಕ್ಕೆ ಭಟ್ಟರೇ ಕಾರಣ ಎಂದು ಯಾರೂ ಹೇಳುತ್ತಿಲ್ಲವಲ್ಲ, ಪುಣ್ಯ ?!**
- **ಮೀನಾಚಿ, ಶ್ರೀರಾಂಪುರ**
  ಭಟ್ಟರು ವಿದೇಶಕ್ಕೆ ಹೋದಾಗ ಅವರ ಸಿಬ್ಬಂದಿ ನಿಟ್ಟುಸಿರು ಬಿಡುವುದೇಕೆ?
  – **ಪೀಡೆ ತೊಲಗಿತು ಎಂಬ ಭಾವ?!**
- **ಮಧ್ವರಾಯ, ಉಡುಪಿ**
  ಭಟ್ರೇ, ಗೀತಾ ಶ್ಲೋಕಗಳನ್ನು ಪುಸ್ತಕ ನೋಡಿಕೊಂಡು ಪಟಪಟ ಹೇಳುವ ಮೋದಿ ಶ್ರೇಷ್ಠರೋ, ಇಲ್ಲ ಬಾಲ್ಯದಲ್ಲಿ ಕಲಿತ ಏಕಮೇವ ಶ್ಲೋಕ ಬಡಬಡಿಸುವ ಡಿಕೆಶಿನೋ?
  – **ನಿನ್ನ ಪ್ರಶ್ನೆಯಲ್ಲೇ ಉತ್ತರ ಇದೆಯಲ್ಲ!?**
- **ರುಕ್ಮಿಣಿ, ಚಾಮರಾಜಪೇಟೆ**
  ನಿಮ್ಮ ಇತ್ತೀಚಿನ ಸುಂದರ ಡಿಪಿ ನೋಡಿ ಭಟ್ಟರು ಯೌವನದ ದಿನಗಳಲ್ಲಿ ಹೇಗಿದ್ದಿರಬಹುದು ಅಂತ ನನ್ನ ಗೆಳತಿ ಲೆಕ್ಕಾಚಾರ ಹಾಕುತ್ತಿದ್ದಳಲ್ಲ?
  – **ಅದರಿಂದ ನನಗೇನು ಬಂತು?!**
- **ಕೋಮು, ಡಾಲರ್ಸ್ ಕಾಲೋನಿ**
  ಭಟ್ರೇ, ಪ್ಯಾಕ್ ಅಪ್ ಮಾಡಿಕೊಳ್ಳಿ ಪ್ಯಾರಿಸ್‌ಗೆ ಹೋಗಿ ಬರೋಣ ಅಂತ ಜಿಪುಣ ಗಂಡನ ಮುಂದೆ ಹೇಳಿದರೆ ಏನು ಹೇಳಿಯಾನು?
  – **ಕೆಲ ದಿನ ತಾಳು ಭಟ್ಟರು ಪ್ಯಾರಿಸ್ ಕುರಿತ ಲೇಖನಗಳನ್ನೇ ಬರೆಯುತ್ತಾರೆ!**
- **ರಾಜು, ಕೋರಮಂಗಲ**
  ಭಟ್ರೇ, ಮದುವೆಯ ನಂತರ ಒಬ್ಬ ವ್ಯಕ್ತಿಯ 'ವೈಯಕ್ತಿಕ ಸಮಯ' ಏನಾಗುತ್ತದೆ?
  – **ಅದು 'ಶೌಚಾಲಯದ ಸಮಯ' ಎಂದು ಕರೆಯಿಸಿಕೊಳ್ಳುತ್ತದೆ!**
- **ರಾಜೇಶ್ವರಿ, ಮಂಡ್ಯ**
  ಭಟ್ರೇ, ಗಂಡಸರು 'ಆಯ್ತು' ಎಂದು ಹೇಳಲು ಏಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ?
  – **'ಆಯ್ತು' ಪದದ ನಂತರ ಬರಬಹುದಾದ ಎಲ್ಲ ಜವಾಬ್ದಾರಿಗಳು ಮತ್ತು ಕೆಲಸಗಳ ಬಗ್ಗೆ ಅವರು ಮನಸ್ಸಿನಲ್ಲಿ ತ್ವರಿತವಾಗಿ ಲೆಕ್ಕಾಚಾರ ಮಾಡುತ್ತಿರುತ್ತಾರೆ!**
- **ರಮೇಶ ಗೌಡ, ಮಳವಳ್ಳಿ**
  ಭಟ್ರೇ, ನಿಮ್ಮ ದೃಷ್ಟಿಯಲ್ಲಿ ದಾಂಪತ್ಯ ಅಂದ್ರ ಏನು ?
  – **ಎರಡು ಜೀವಗಳನ್ನು ಒಂದೇ ನೆಟ್‌ಫ್ಲಿಕ್ಸ್ ಖಾತೆಯಲ್ಲಿ ವಿಲೀನಗೊಳಿಸುವುದು!**

ವಿದ್ಯಾವಂತರೇಕೆ ಕೇಡಿನ ಹಾದಿ ತುಳಿದಿದ್ದಾರೆ?



ಕಾಡುದಾರಿ

ಹರೀಶ್ ಕೇರ

vveditoped@gmail.com

ದಿಲ್ಲಿಯಲ್ಲಿ ನಡೆದ ಕಾರು ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ ಸದ್ಯದ ಮಟ್ಟಿಗೆ ಒಂಬತ್ತು. ಗಾಯಗೊಂಡವರ ಸಂಖ್ಯೆ ನೂರ ನಲುವತ್ತೈದು ಕೋಟಿ. ಇದರ ಹಿಂದಿರುವುದು ಇಸ್ಲಾಮಿಕ್ ಮೂಲಭೂತವಾದಿಗಳು ಎಂಬುದರಲ್ಲಿ ಈಗ ಸಂಶಯಕ್ಕೆ ಎಡೆಯಿಲ್ಲ. ಗಮನಿಸಬೇಕಾದ ಸಂಗತಿಯೆಂದರೆ ರೂವಾರಿಗಳೆಲ್ಲರೂ ಜೀವ ಉಳಿಸಬೇಕಾದ ವೈದ್ಯ ಸೇವೆಯಲ್ಲಿರುವವರು. ಕಾರನ್ನು ಸ್ಫೋಟಿಸಿದ ಡಾ.ಉಮರ್ ಉನ್ ನಬಿ ಕಾಶ್ಮೀರದ ಅನಂತನಾಗ್‌ನ ಸರಕಾರಿ ಮೆಡಿಕಲ್ ಕಾಲೇಜಿನಲ್ಲಿ ಸೇವೆ ಸಲ್ಲಿಸುವಾಗ ಒಬ್ಬ ರೋಗಿಯ ಸಾವಿಗೆ ಕಾರಣನಾದ. ತನಿಖೆಗೆ ಹಿರಿಯ ವೈದ್ಯಾಧಿಕಾರಿಗಳ ಸಮಿತಿ ರಚಿಸಲಾಯಿತು. ತನಿಖೆಗೆ ಎಷ್ಟು ಸಲ ಕರೆದರೂ ಬರಲಿಲ್ಲ. ವಜಾ ಮಾಡಲಾಯಿತು. ಅಲ್ಲಿಂದ ಫರೀದಾಬಾದ್‌ನ ಅಲ್-ಫಲಾಹ್ ಮೆಡಿಕಲ್ ಸ್ಕೂಲ್‌ಗೆ ಬಂದ. ಇವನ ಜೊತೆ ಸೇರಿಕೊಂಡ ಇನ್ನಿಬ್ಬರು ವೈದ್ಯರು ಡಾ.ಮುಜಮ್ಮಿಲ್ ಶಕೀಲ್ ಮತ್ತು ಡಾ. ಆದಿಲ್ ರತೇರ್. ಮೂವರೂ ಮನೆಯಲ್ಲಿ 2900 ಕಿಲೋ ಸ್ಫೋಟಕ ಇಟ್ಟುಕೊಂಡಿದ್ದರು. ಇವರಿಗೆ ಬೆಂಬಲವಾಗಿ ನಿಂತುಕೊಂಡು ಸಂಘಟನೆಗೆ ಇನ್ನಷ್ಟು ಹುಡುಗಿಯರನ್ನು ಸೆಳೆಯುತ್ತಿದ್ದವಳು ಡಾ.ಶಾಹೀನ್ ಸಯೀದ್.

ಬಹಳ ಹಿಂದೆಯೇ ಗಮನಿಸಿದ ಸಂಗತಿ ಇದು. ಭಯೋತ್ಪಾದಕ ಸಂಘಟನೆ ಐಸಿಸ್ ಚುರುಕಾಗಿದ್ದ ಕಾಲದಲ್ಲಿ ಬಹಳಷ್ಟು ಯುವಕ/ತಿಯರು ಅದನ್ನು ಸೇರಿಕೊಂಡಿದ್ದರು. ಈಗಲೂ ಆ ರೂಢಿ ಮುಂದುವರಿದಿದೆ ಎಂಬುದರಲ್ಲಿ ಸಂಶಯವಿಲ್ಲ. ಮತ್ತು ಅವರೆಲ್ಲ ವೈದ್ಯರೋ ಇಂಜಿನಿಯರ್‌ಗಳೋ ಐಟಿ ಉದ್ಯೋಗಿಗಳೋ ಆಗಿದ್ದರು. ಅಂದರೆ ವಿದ್ಯಾವಂತರು. ಇದಕ್ಕಾಗಿ ದುಬಾರಿ ಶಿಕ್ಷಣ ಕೊಡಿಸಿದ ಅವರ ಮನೆಯವರು ಇವರಷ್ಟು ಓದಿಕೊಂಡಿಲ್ಲದಿರಬಹುದು. ಆದರೆ ಮಕ್ಕಳು ಓದಿ ಉದ್ಧಾರವಾಗಲಿ, ಸಮಾಜಕ್ಕೂ ಕೊಡುಗೆಯಾಗಲಿ ಎಂಬ ಉದ್ದೇಶವಿಟ್ಟುಕೊಂಡಿರಬಹುದು. ಆದರೆ ಇವರ ವಕ್ರ ಬೆಳವಣಿಗೆ ಅವರ ಗಮನಕ್ಕೆ ಬಂದಿರಲಿಕ್ಕಿಲ್ಲ. ಹಿರಿಯರ ತಲೆಯನ್ನು ಪ್ರವೇಶಿಸದ ಮೂಲಭೂತವಾದ, ಉಗ್ರವಾದದ ವಿಷ ಕಿರಿಯರನ್ನು ಬಹು ಬೇಗ ಆಕ್ರಮಿಸಿದೆ. ಬಹುಶಃ ಹೊಸ ತಲೆಮಾರು ಬಳಸುವ ಆಧುನಿಕ ಮಾಧ್ಯಮಗಳೇ ಈ ವಿಷ ಹೆಚ್ಚಿನ ಪ್ರಮಾಣದಲ್ಲಿ ಹರಡಲೂ ನೆರವಾಗಿದೆ.

ಯಾಕಿಷ್ಟು ಪ್ರಮಾಣದಲ್ಲಿ ಈ ವಿದ್ಯಾವಂತ ಅನಿಸಿಕೊಂಡ ಜನ ಭಯೋತ್ಪಾದನೆಯತ್ತ ಆಕರ್ಷಿತರಾಗುತ್ತಿದ್ದಾರೆ? ಕೆನಡಿಯನ್ ನೆಟ್‌ವರ್ಕ್ ಫಾರ್ ರಿಸರ್ಚ್ ಆನ್ ಟೆರರಿಸಂನ ಸಹ ನಿರ್ದೇಶಕ ಲಾರ್ನೆ ಡಾಸನ್ ಎಂಬವರು ಕೆಲವು ಅಂಶಗಳನ್ನು ವಿವರಿಸುತ್ತಾರೆ. ಅದರಲ್ಲಿ ಖಲೀಫತ್ ಬಣ್ಣಿಸುವ 'ಶುದ್ಧ' 'ಪವಿತ್ರ' ಜೀವನದ ಭರವಸೆ ಒಂದು. ಶುದ್ಧ ಹಾಗೂ ಸಂಪೂರ್ಣ ಇಸ್ಲಾಂನಿಂದಲೇ ಜಗತ್ತನ್ನು ತುಂಬುವ ಪರಿಕಲ್ಪನೆ ಇಂಥ ಅವಿದ್ಯಾವಂತರಲ್ಲಿ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಜನಪ್ರಿಯ ಆಗುವಂತೆ ಬೆಳೆಸಲಾಗುತ್ತಿದೆ. ಶಿಕ್ಷಣ ಮತ್ತು ವಿಜ್ಞಾನಗಳು ಈ ತಿರುಚಿದ ಆದರ್ಶದ ವಿರುದ್ಧ ಯಾವುದೇ ಕೆಲಸ ಮಾಡುವುದಿಲ್ಲ. 'ವಿಲಾಸೀ, ನೀತಿಗೆಟ್ಟ ಪಾಶ್ಚಿಮಾತ್ಯ ಜೀವನ' ಇವರನ್ನು ಕ್ರುದ್ಧರನ್ನಾಗಿಸಿದೆ ಅಥವಾ ಹಾಗೆ ಚಿಂತಿಸುವಂತೆ ಅವರನ್ನು ಬೋಧನೆಗಳ ಮೂಲಕ ಬೆಳೆಸಲಾಗುತ್ತಿದೆ. ಒಂದು ಕಡೆ ಡಾಕ್ಟರಿಕೆ-ಇಂಜಿನಿಯರಿಂಗ್ ಕಲಿಯುತ್ತಲೇ ಇವರು ತದ್ವಿರುದ್ಧವಾದ ಮತಾಂಧತೆಯನ್ನೂ ಪೋಷಿಸಿಕೊಂಡು ಬರುವ ಜಾಲಗಳ ಭಾಗವಾಗಿರುತ್ತಾರೆ.

ಮೊದಮೊದಲಿಗೆ ಇವರನ್ನು ಸಮಾಜಸೇವೆ, ಆಧ್ಯಾತ್ಮಿಕತೆ, ಧಾರ್ಮಿಕತೆ ಮುಂತಾದ ಅಷ್ಟೇನೂ ಅಪಾಯಕಾರಿ ಅನಿಸದ ಬೋಧನೆಗಳ ಮೂಲಕ ಸಂಘಟನೆಗೆ ಸೆಳೆಯಲಾಗುತ್ತದೆ. ಐಸಿಸ್‌ಗೆ ಆರಂಭದಲ್ಲಿ ಹಲವು ಶಿಕ್ಷಿತರು ಸೇರಿಕೊಂಡಿದ್ದು ಹೀಗೆ. ಕೆಲವು ಗೆಳೆಯರ ಮೂಲಕ ಈ ಸಂಘಟನೆಗಳಿಗೆ ಪ್ರವೇಶ ಸುಲಭ. ಇವೂ ಆನ್‌ಲೈನ್‌ನಲ್ಲೇ ಆಗುತ್ತವೆ. ನಂತರ ಸಾವಿರಾರು ಮೈಲುಗಳ ದೂರದಲ್ಲಿ ಕುಳಿತ 'ಕ್ರಾಂತಿಕಾರಿ'ಗಳು ಇವರನ್ನು ಇನ್ನಷ್ಟು ಉಗ್ರತೆಯೆಡೆಗೆ ಪ್ರಚೋದಿಸುತ್ತಾರೆ. ಶಾಂತಿಯುತ ಜಗತ್ತು ಸ್ಥಾಪನೆಗೆ ಹಿಂಸೆ ಅನಿವಾರ್ಯ ಎನ್ನುತ್ತಾರೆ. ಹಿಂದೂ ಧರ್ಮದ ಮೂರ್ತಿಪೂಜೆ, ಕ್ರೈಸ್ತರ ದೇವಪುತ್ರನ ಪರಿಕಲ್ಪನೆಗಳು ನಮ್ಮ ನಿರಾಕಾರ



ಏಕದೇವ ಪರಿಕಲ್ಪನೆಯನ್ನು ಹೇಗೆ ಅಶಾಂತಗೊಳಿಸುತ್ತಿದೆ, ಭಗ್ನಗೊಳಿಸುತ್ತಿದೆ ಎಂದು ಬಣ್ಣಿಸುತ್ತಾರೆ. ಇದೆಲ್ಲ ದೊಡ್ಡದೊಂದು ಅಂತಾರಾಷ್ಟ್ರೀಯ ಜಾಲವಾಗಿ ವಿಸ್ತರಿಸುತ್ತದೆ. ಸಹಬಾಳ್ವೆಯಲ್ಲಿ ಬಂದ ಹಳೆಯ ತಲೆಮಾರು ಇದರ ಭಾಗವಾಗುವುದು ಕಡಿಮೆ, ಹೊಸಬರೇ ಹೀಗೆ ತಲೆತಿರುಕರಾಗುವುದು ಹೆಚ್ಚು.

ಇಂಥದನ್ನು ಮೊದಲೇ ಗುರುತಿಸುವುದು ಹೇಗೆ? ಇದೇ ಕಷ್ಟ. ಇದು ಇಬ್ಬಾಯಿಯ ಕತ್ತಿ. ಇಂಗ್ಲೆಂಡ್, ಅಮೆರಿಕಗಳಲ್ಲಿ ಇಂಥ ಪ್ರಯತ್ನಗಳು ಆಗಿವೆ, ಇದಕ್ಕಾಗಿ ಕಾನೂನಾತ್ಮಕ ಘಟಕಗಳೂ ಇವೆ. ಆದರೆ ಇದು ಬ್ಯಾಕ್‌ಫೈರ್ ಆಗುತ್ತದೆ. ' ಮುಸ್ಲಿಮರನ್ನು ವಿಲನ್ಸೈಸ್ ಮಾಡಲಾಗುತ್ತಿದೆ, ಖಳರಂತೆ ಚಿತ್ರಿಸಲಾಗುತ್ತಿದೆ' ಎಂಬ ಬೊಬ್ಬೆ ಪಕ್ಕನೆ ಏಳುತ್ತದೆ. ಡಾಸನ್ ಹೇಳುವ ಪ್ರಕಾರ, ಒಬ್ಬ ವ್ಯಕ್ತಿಯ ಗಡ್ಡ ಹೆಚ್ಚೆಚ್ಚು ಉದ್ದವಾಗುವುದು, ಇದ್ದಕ್ಕಿದ್ದಂತೆ ಮತೀಯ ಅಸಹನೆಯ ಮಾತುಗಳನ್ನು ಆಡುವುದು, ದಿರಿಸಿನ ರೀತಿ ಬದಲಾಗುವುದು- ಇವೆಲ್ಲ ಕೆಂಪು ಚಿಹ್ನೆಗಳು. ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೆದರಿಸುವ ವ್ಯಕ್ತಿಯ ಮೇಲೆ ನಿಗಾ ಇಡಬೇಕು ಎಂದು ವೈದ್ಯರು ಹೇಳುತ್ತಾರೆ. ಹಾಗೆ ಸದಾ ಹೇಳುವ ವ್ಯಕ್ತಿ ಒಂದಲ್ಲ ಒಂದು ಸಲ ಆತ್ಮಹತ್ಯೆಗೆ ಯತ್ನಿಸುವುದು ಖಚಿತ. ಹಾಗೇ ಇದೂ. ಒಂದು ಅಧ್ಯಯನದ ಪ್ರಕಾರ, ಏಕಾಂಗಿಯಾಗಿ ಭಯೋತ್ಪಾದನೆ ಕೃತ್ಯ ಎಸಗಿದ ವ್ಯಕ್ತಿಗಳಲ್ಲಿ 58% ಜನ ತಮ್ಮ ಯೋಜನೆ ಬಗ್ಗೆ ಮೊದಲೇ ಯಾರಿಗಾದರೂ ಸೂಚನೆ ಕೊಟ್ಟಿರುತ್ತಾರೆ. ಇದನ್ನು ಗುರುತಿಸುವುದನ್ನು ಸಮಾಜ ಕಲಿಯಬೇಕು.

ಇಂಥ ಕೃತ್ಯಗಳನ್ನು ಖಂಡಿಸುವ ಲಿಬರಲ್‌ಗಳಲ್ಲಿ ಸಾಮಾನ್ಯವಾಗಿರುವ ಮಾತುಗಳೆಂದರೆ, ಮುಸ್ಲಿಮರ ಮೇಲಿನ ದೌರ್ಜನ್ಯ, ಬಡತನ, ನಿರುದ್ಯೋಗ, ನಿರಕ್ಷರತೆ ಅವರನ್ನು ಉಗ್ರ ಕೃತ್ಯಗಳತ್ತ ನೂಕುತ್ತದೆ. ಈ ಮಾತುಗಳಲ್ಲಿ ಸ್ವಲ್ಪಾಂಶ ನಿಜವೂ ಇರಬಹುದು. ಆದರೆ ಡಾಕ್ಟರ್‌ಗಳೋ, ಇಂಜಿನಿಯರ್‌ಗಳೋ ಇಂಥ ಕೃತ್ಯ ಎಸಗಿದಾಗ ಈ ವಾದಗಳೆಲ್ಲ ಬಿದ್ದುಹೋಗುತ್ತವೆ. ಇನ್ನೂ ಅದೇ ಮಾತುಗಳನ್ನು ಆಡುವವರನ್ನು ನಾವು ಸಹಾನುಭೂತಿಯಿಂದ ನೋಡಬೇಕಷ್ಟೆ. ನಮಗೀಗ ಇರುವ ಸವಾಲು, ಇವರು ಈ ಕೃತ್ಯ ಎಸಗದಂತೆ ನೋಡಿಕೊಳ್ಳುವುದರ ಜೊತೆಗೆ, ನಮ್ಮ ಸುತ್ತಮುತ್ತಲೂ ಇಂಥ ಮನೋಭಾವ ಬೆಳೆಸುತ್ತಿರುವ ಪಂಥ- ಕಲ್ಟ್‌ಗಳು ಇರಬಹುದಾ ಎಂಬುದನ್ನು ಗುರುತಿಸುವುದು. ಜೊತೆಗೆ, ತಾನು ಇಂಥ ಕಲ್ಟ್‌ನೊಳಗೆ ಸೇರಿಕೊಳ್ಳುತ್ತಿದ್ದೇನಾ ಎಂಬುದನ್ನು ಗಮನಿಸುವುದು. ಸಮಾಜ ವಿಜ್ಞಾನಿಗಳು, ಅಪಾಯಕಾರಿ ಕಲ್ಟ್‌ಗಳನ್ನು ಗುರುತಿಸುವ ಹಲವು ಸೂತ್ರಗಳನ್ನು ರೂಪಿಸಿ ನಮಗೆ ಕೊಟ್ಟಿದ್ದಾರೆ.

ಕಲ್ಟ್‌ಗಳೆಂದರೆ ಸಮಾಜದಿಂದ ಪ್ರತ್ಯೇಕವಾಗಿರುವ ಕೆಲವು ಸಂಘಟನೆಗಳು. ಇವು ತಮ್ಮದೇ ಆದ ಅವೈಜ್ಞಾನಿಕ, ಅವೈಚಾರಿಕ, ಸಮಾಜದ ಒಟ್ಟು ಬಾಳುವೆಗೆ ಧಕ್ಕೆ ತರಬಲ್ಲ ಚಿಂತನೆಯನ್ನು ಹೊಂದಿರುತ್ತವೆ. ತಮ್ಮದೇ ಆದ ಶಿಷ್ಯ ಪರಂಪರೆಯನ್ನು ಹೊಂದಿರುತ್ತವೆ. ಈ ಶಿಷ್ಯರು ಇದಕ್ಕಾಗಿ ಜೀವ ಕೊಡುವ ಹಂತಕ್ಕೂ ಹೋಗುತ್ತಾರೆ. ಜೋನ್ಸ್‌ಟೌನ್, ಚಾರ್ಲ್ಸ್ ಮ್ಯಾನ್ಸನ್, ಹೆವನ್ಸ್ ಗೇಟ್ ಮುಂತಾದವೆಲ್ಲ ಇಂಥ ಕಲ್ಟ್‌ಗಳು. ಇಂಟರ್‌ನೆಟ್‌ನಲ್ಲಿ ಇವರ ಭೀಕರ ವಿವರಗಳು ಸಿಕ್ಕುತ್ತವೆ. ಇಂಥ ನಿಗೂಢ ಕಲ್ಟ್‌ಗಳು ಭೂಗತವಾಗಿ ಇನ್ನೂ ಸಾಕಷ್ಟಿವೆ ಎಂಬ ಗುಮಾನಿ ಇದೆ. ಸದ್ಯ ಇಂಥ ಕಲ್ಟ್‌ಗಳನ್ನು, ಅದರ ಸದಸ್ಯರನ್ನು ಗುರುತಿಸುವುದು ಹೇಗೆ ಕಲಿಯುವುದು ನಮಗೇ ಒಳ್ಳೆಯದು.

ಯಾವುದೇ ಹೊಣೆಗಾರಿಕೆಯಿಲ್ಲದೆ, ಕೆಲವೇ ಕೆಲವರಲ್ಲಿ ಸೇರಿಕೊಂಡ ಸರ್ವಾಧಿಕಾರ ಇದರ ಮೊದಲ ಗುಣ. ಇವರು ಪ್ರಶ್ನಾತೀತರು. ಇವರು ಹೇಳಿದ ಮಾತು ಆದರ್ಶ, ಆದೇಶ. ಇಲ್ಲಿ ಯಾವುದೇ ಪ್ರಶ್ನೆಗಳಿಗೆ, ಟೀಕೆಗೆ ಅವಕಾಶವಿರುವುದಿಲ್ಲ. ಪಂಥದ ಚಟುವಟಿಕೆಗಳಿಗೆ ಹಣ ಎಲ್ಲಿಂದ ಬರುತ್ತದೆ ಹೇಗೆ ವೆಚ್ಚವಾಗುತ್ತದೆ ಎಂಬುದರ ಅಕೌಂಟ್ ಇರುವುದಿಲ್ಲ. ಹೊರಗಿನ ಸಮಾಜದ ಬಗ್ಗೆ, ಸಮಾಜದಲ್ಲಿರುವ ಕೆಲವರ ಬಗ್ಗೆ ವಿನಾಕಾರಣ ಭಯ. ಯಾರೋ ತಮ್ಮ ವಿರುದ್ಧ ಸಂಚು ಹೂಡುತ್ತಾರೆ, ಮುಗಿಸಿಬಿಡುತ್ತಾರೆ ಅಥವಾ ತುಳಿದುಹಾಕುತ್ತಾರೆ ಎಂಬ ಆತಂಕ. ಅವರು ತಮ್ಮನ್ನು ಮುಟ್ಟುವ ಮೊದಲು ತಾವು ಅವರನ್ನು ಹಣಿಯಬೇಕು ಎಂಬ ರೊಚ್ಚು ಇರುತ್ತದೆ.

ಈ ಸಂಘಟನೆ ಸೇರಿ ಕಾಯಾ ವಾಚಾ ಮನಸಾ ಅದಕ್ಕೆ ಅರ್ಪಿಸಿಕೊಂಡವರು ಅದನ್ನು ಬಿಟ್ಟು ಹೊರಬರುವುದು ಕಡಿಮೆ. ಹಾಗೆ ಹೊರಬಂದವರನ್ನು ವಿಲನೀಕರಿಸಲಾಗುತ್ತದೆ. ಸಂಘಟನೆಯೊಳಗೆ ಸದಸ್ಯರ ಮೇಲಿನ ದೌರ್ಜನ್ಯ ನಿರಂತರ. ಇದು ದೌರ್ಜನ್ಯ ಎಂದೂ ಗುರುತಿಸಲಾಗದಂತೆ ಅದು ನಡೆಯುತ್ತದೆ. ಸಂಘಟನೆಯ ಅಧಿಕಾರಯುತರ ಅಂಥ ಕೃತ್ಯಗಳನ್ನು ಹೊರಬರದಂತೆ ಕಾಪಿಡಲಾಗುತ್ತದೆ. ಶಿಷ್ಯರಿಗೆ, ಭಿನೀವಿನ್ನೂ ಸಾಕಷ್ಟು ಸಾಧನೆ ಮಾಡಿಲ್ಲಭಿ ಎಂಬಂತೆ ಬಿಂಬಿಸಲಾಗುತ್ತದೆ. ಸಾಧನೆಗಾಗಿ, ಆತ್ಮಾರ್ಪಣೆಗಾಗಿ ಅವರನ್ನು ಪ್ರಚೋದಿಸಲಾಗುತ್ತದೆ.

ಸಾಮಾನ್ಯವಾಗಿ ಇಂಥ ಗುಂಪುಗಳಿಗೆ ಸೇರಿದವರು ಸಮಾಜದ ಇತರರ ಮುಂದೆ ಒಂಟಿಯಾಗುತ್ತಾರೆ. ಅಂತರ್ಮುಖಿಗಳೆಂದು ನಾವು ಭಾವಿಸಬಹುದು. ತಾವು ಒಂದು ಅಪಾಯಕಾರಿ ಕಲ್ಟನ್ನು ಸೇರಿದ್ದೇವೆ, ಮಾನಸಿಕವಾಗಿ ಕಟ್ಟಿಹಾಕಲ್ಪಟ್ಟಿದ್ದೇವೆ ಎಂಬುದು ಕೂಡ ಇದರ ಸದಸ್ಯರ ಅರಿವಿಗೆ ಬಂದಿರುವುದಿಲ್ಲ. ವಾಸ್ತವವಾಗಿ ಈ ಸದಸ್ಯರಲ್ಲಿಯೇ ಯಾವತ್ತೂ ಬಗೆಹರಿಯದ ಯಾವುದೋ ಅಭದ್ರತೆ, ಕೀಳರಿಮೆಗಳೆಲ್ಲ ಇರುತ್ತವೆ. ಕಾಲಾಂತರದಲ್ಲಿ ಇವರು ಎಲ್ಲದಕ್ಕೂ ಆ ಕಲ್ಟ್‌ನೊಳಗಿನ ಇತರರ ಮೇಲೆ ಅವಲಂಬಿತರಾಗುತ್ತಾರೆ. ಕಲ್ಟ್‌ನಿಂದ ಹೊರಗಿನ ವ್ಯಕ್ತಿಗಳೋ, ಕುಟುಂಬದವರೋ, ನಿಮ್ಮನ್ನು ಬ್ರೇನ್‌ವಾಶ್ ಮಾಡಿದ್ದಾರೆ ಎಂದು ಈ ಕಲ್ಟ್ ನಂಬಿಸಿರುತ್ತದೆ. ನಿಜವಾಗಿ ಬ್ರೇನ್‌ವಾಶ್ ಮಾಡುವವರು ಅವರೇ ಆಗಿರುತ್ತಾರೆ. ಇಂಥ ಕಲ್ಟ್‌ಗಳನ್ನು ಬಿಡಬೇಕೆಂದರೂ ಬಿಡುವುದು ಸುಲಭವಲ್ಲ. ಈ ಸಂಘಟನೆಗಳ ಒಳಗೆ ಮುಕ್ತ ಮನಸ್ಸು ಇಟ್ಟುಕೊಂಡ ಇತರರು ಪ್ರವೇಶಿಸುವುದು, ಅದನ್ನು ಅಧ್ಯಯನ ಮಾಡುವುದು ಕಡುಕಷ್ಟ.

ಕಲ್ಟ್‌ಗಳಿಗೂ ಇಸ್ಲಾಮಿಕ್ ಮೂಲಭೂತವಾದಕ್ಕೂ ತುಂಬಾ ಸಾಮೀಪ್ಯ ಇದೆ. ಸಾಕಷ್ಟು ವ್ಯತ್ಯಾಸಗಳೂ ಇವೆ. ಕಲ್ಟ್‌ಗಳಿಗಿಂತ ಈ ಕ್ಯಾಲಿಫೇಟ್ ಎಂಬುದು ಹೆಚ್ಚು ವ್ಯಾಪಕ ಮತ್ತು ಅಪಾಯಕಾರಿ. ಅದು ತನ್ನ ಬೇರುಗಳನ್ನು ಪ್ರಕಾಂಡವಾಗಿ ಎಲ್ಲೆಲ್ಲಿಗೋ ಚಾಚಿದೆ. ಅದರ ಸೌಮ್ಯ, ಅತಿಸೌಮ್ಯ, ಕಠೋರ, ಅತಿ ಕಠೋರ- ಹೀಗೆ ನಾನಾ ಆವೃತ್ತಿಗಳಿವೆ. ಎಲ್ಲವೂ ಸೌಮ್ಯವಾಗಿ ಶುರುವಾಗುತ್ತವೆ. ಇದಕ್ಕೆ ಉದಾಹರಣೆಗಳನ್ನು ನಮ್ಮ ನಡುವಿನಿಂದಲೇ ಹೆಕ್ಕಬಹುದು. ಅದಿರಲಿ. ಕೆಲವೊಮ್ಮೆ ಕಲ್ಟ್‌ನ ಸರ್ವಾಧಿಕಾರಿಗಳು ಹಿಂಸೆಯ ಮಾತನ್ನು ನೇರವಾಗಿ ಆಡದಿರಬಹುದು; ಆದರೆ ಅವರ ಧ್ವನಿ, ಇಂಗಿತಗಳು ಹಿಂಸೆಯನ್ನು ಪ್ರಚೋದಿಸುತ್ತವೆ. ಅಂಥ ಪಂಥಗಳಿಗೆ ಮನಸ್ಸು ತೆತ್ತವರು ಸಂಘಟನೆಯ ಒಳಗಿದ್ದವರ ಗಮನಕ್ಕೂ ಬಾರದೇ ಲೋನ್ ವೂಲ್ಫ್ ದಾಳಿಗಳನ್ನೂ ನಡೆಸುವುದುಂಟು. ಇವರೇನು ಮಾಡುತ್ತಾರೆಂದು ಮೊದಲೇ ಗುರುತಿಸುವುದು ಕಷ್ಟ. ಕೆಲವೊಮ್ಮೆ ನಾವೂ ಸಹ, ಎಷ್ಟೇ ವೈಚಾರಿಕವಾಗಿ ಚಿಂತಿಸುತ್ತೇವೆಂದು ಭಾವಿಸಿದರೂ, ನಮಗೇ ಅರಿವಿಲ್ಲದೆ, ಯಾವುದೋ ಕಲ್ಟ್‌ನ ಬೋಧನೆಗಳಿಗೆ ಮಾರು ಹೋಗಿ ಒಳಗೊಳಗೇ ಅದರ ಆರಾಧಕರಾಗಿರುವ ಸಾಧ್ಯತೆಯೂ ಇರುತ್ತದೆ!

ವೈದ್ಯಕೀಯ

ಡಾ. ಮಾದೇಶ್ ಮಂಡ್ಯ

ಕ್ಯಾನ್ಸರ್ ಚಿಕಿತ್ಸೆಯಲ್ಲಿ ಪ್ರೋಟಾನ್ ಕ್ರಾಂತಿ

ಬೆಂಗಳೂರು ಕಿದ್ವಾಯಿ ಮೆಮೋರಿಯಲ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ಪ್ರೋಟಾನ್ ಚಿಕಿತ್ಸಾ ಕೇಂದ್ರಕ್ಕೆ ಚಾಲನೆ ದೊರೆತಿದೆ. ಇದು ಭಾರತದ ಮೊದಲ ಸರ್ಕಾರಿ ಪ್ರೋಟಾನ್ ಚಿಕಿತ್ಸಾ ಕೇಂದ್ರ. ಈ ನೂತನ ತಂತ್ರಜ್ಞಾನವು ಕ್ಯಾನ್ಸರ್ ಚಿಕಿತ್ಸೆಯಲ್ಲಿ ಮಹತ್ವದ ಮೈಲಿಗಲ್ಲಾಗಿದ್ದು, ಸಾಮಾನ್ಯ ಕಿರಣ ಚಿಕಿತ್ಸೆಗಿಂತ ಹೆಚ್ಚು ನಿಖರವಾಗಿ ಕ್ಯಾನ್ಸರ್ ಕೋಶಗಳನ್ನು ಗುರಿಯಾಗಿಸುತ್ತದೆ. ಪರಿಣಾಮವಾಗಿ ಆರೋಗ್ಯಕರ ಅಂಗಾಂಗಗಳಿಗೆ ಹಾನಿ ಕಡಿಮೆ ಆಗಿ, ಮಕ್ಕಳಿಂದ ಹಿಡಿದು ವಯಸ್ಕರ ತನಕ ರೋಗಿಗಳಿಗೆ ಸುರಕ್ಷಿತ ಚಿಕಿತ್ಸೆ ದೊರೆಯುವ ಸಾಧ್ಯತೆ ಹೆಚ್ಚಲಿದೆ.ಈ ಮೂಲಕ ಕಿದ್ವಾಯಿ ಆಸ್ಪತ್ರೆ ಭಾರತದ ಕ್ಯಾನ್ಸರ್ ಚಿಕಿತ್ಸಾ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ.

ಪ್ರೋಟಾನ್ ಚಿಕಿತ್ಸೆ ವಿನೂತನ ವಿಕಿರಣ ಚಿಕಿತ್ಸಾ ವಿಧಾನ.
ಪ್ರೋಟಾನ್ ಚಿಕಿತ್ಸೆಯು ಗೆಡ್ಡೆಗಳಿಗೆ ಮುಂದುವರಿದ ಮತ್ತು ಅತ್ಯಂತ ನಿಖರವಾದ ವಿಕಿರಣ ಚಿಕಿತ್ಸೆಯಾಗಿದೆ. ಇತರ ವಿಧಾನಗಳಿಗೆ ಹೋಲಿಸಿದರೆ, ಇದು ಗೆಡ್ಡೆಯ ಮೇಲೆ ಹೆಚ್ಚಿನ ಶಕ್ತಿಯನ್ನು ಕೇಂದ್ರೀಕರಿಸುತ್ತದೆ ಮತ್ತು ಸುತ್ತಮುತ್ತಲಿನ ಆರೋಗ್ಯಕರ ಅಂಗಾಂಶಗಳಿಗೆ ಕಡಿಮೆ ವಿಕಿರಣವನ್ನು ನೀಡುತ್ತದೆ.

ಪ್ರೋಟಾನ್ ಚಿಕಿತ್ಸೆ ಎಂದರೇನು?
ಪ್ರೋಟಾನ್ ಕಿರಣ ಚಿಕಿತ್ಸೆ ಗೆಡ್ಡೆಯ ಕೋಶಗಳನ್ನು ನಾಶಮಾಡಲು ಪ್ರೋಟಾನ್‌ಗಳ ಕಿರಣವನ್ನು ನಿಖರವಾಗಿ ನೀಡುವ ವಿಕಿರಣ ಚಿಕಿತ್ಸೆಯಾಗಿದೆ. ಸಾಂಪ್ರದಾಯಿಕ ವಿಕಿರಣಕ್ಕೆ ಹೋಲಿಸಿದರೆ, ಪ್ರೋಟಾನ್‌ಗಳು ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿದ್ದು, ವೈದ್ಯರು ಗೆಡ್ಡೆಯ ಗಾತ್ರ ಮತ್ತು ಆಕಾರಕ್ಕೆ ವಿಕಿರಣವನ್ನು ಉತ್ತಮವಾಗಿ ಗುರಿಯಾಗಿಸಲು ಅನುವು ಮಾಡಿಕೊಡುತ್ತದೆ. ಪ್ರೋಟಾನ್ ಕಿರಣವು ಗೆಡ್ಡೆಯ ಕೋಶಗಳನ್ನು ಕೊಲ್ಲುತ್ತದೆ. ಸುತ್ತಮುತ್ತಲಿನ ಆರೋಗ್ಯಕರ ಅಂಗಾಂಶಗಳನ್ನು ಹಾನಿ ಮಾಡುವುದು ತೀರ ಕಡಿಮೆ. ಪ್ರೋಟಾನ್ ಚಿಕಿತ್ಸೆಯನ್ನು ಹೆಚ್ಚಾಗಿ ಕ್ಯಾನ್ಸರ್ ಚಿಕಿತ್ಸೆಗೆ ಬಳಸಲಾಗುತ್ತದೆಯಾದರೂ, ಮಕ್ಕಳು ಮತ್ತು ವಯಸ್ಕರಲ್ಲಿ ಕ್ಯಾನ್ಸರ್ ಅಲ್ಲದ (ಹಾನಿಕರವಲ್ಲದ) ಗೆಡ್ಡೆಗಳಿಗೆ ಚಿಕಿತ್ಸೆ ನೀಡಲು ಸಹ ಇದನ್ನು ಬಳಸಬಹುದು. ಪ್ರೋಟಾನ್ ಕಿರಣಗಳನ್ನು ದೇಹದ ವಿವಿಧ ಭಾಗಗಳಲ್ಲಿರುವ ವಿವಿಧ ರೀತಿಯ ಜೀವಕೋಶಗಳಿಂದ ಕೂಡಿದ ಗೆಡ್ಡೆಗಳಿಗೆ ಚಿಕಿತ್ಸೆ ನೀಡಲು ಬಳಸಬಹುದು. ಸ್ತನ ಕ್ಯಾನ್ಸರ್, ಅನ್ನನಾಳದ ಕ್ಯಾನ್ಸರ್, ಸ್ತ್ರೀ ರೋಗದ ಕ್ಯಾನ್ಸರ್‌ಗಳು, ತಲೆಮತ್ತು ಕುತ್ತಿಗೆ ಕ್ಯಾನ್ಸರ್, ಯಕೃತ್ತಿನ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಗುದನಾಳದ ಕ್ಯಾನ್ಸರ್ ಇನ್ನು ಹಲವು ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ನೀಡಲು ಬಳಸಬಹುದಾಗಿದೆ. ಪ್ರೋಟಾನ್ ಚಿಕಿತ್ಸೆಯು ಹೆಚ್ಚು ಮುಂದುವರಿದ ಮತ್ತು ನಿಖರವಾದ ವಿಕಿರಣ ಚಿಕಿತ್ಸೆಯ ಒಂದು ರೂಪವಾಗಿದೆ. ಪ್ರೋಟಾನ್‌ಗಳನ್ನು ಬಳಸುವ ಸಾಂಪ್ರದಾಯಿಕ ರೇಡಿಯೊ ಥೆರಪಿಗಿಂತ ಭಿನ್ನವಾಗಿ, ಪ್ರೋಟಾನ್ ಚಿಕಿತ್ಸೆಯು ಪ್ರೋಟಾನ್‌ಗಳನ್ನು ಬಳಸುತ್ತದೆ. ಧನಾತ್ಮಕ ಆವೇಶದ ಕಣಗಳು ಹೆಚ್ಚಿನ ವೇಗದಿಂದ ಗೆಡ್ಡೆಯ ಕಡೆಗೆ ನಿರ್ದೇಶಿಸಲ್ಪಡುತ್ತವೆ. ಪ್ರೋಟಾನ್‌ಗಳು ದ್ರವ್ಯರಾಶಿ ಮತ್ತು ಶಕ್ತಿಯನ್ನು ಹೊಂದಿರುತ್ತವೆ, ಇದು ಎಕ್ಸ್‌ರೇ ಕಿರಣಗಳಿಗಿಂತ ಹೆಚ್ಚು ನಿಖರವಾಗಿ ಗೆಡ್ಡೆಗಳಿಗೆ ವಿಕಿರಣವನ್ನು ತಲುಪಿಸಲು ಅನುವು ಮಾಡಿಕೊಡುತ್ತದೆ.

ಕಿದ್ವಾಯಿಯಲ್ಲಿ ಪ್ರೋಟಾನ್ ಚಿಕಿತ್ಸಾ ಕೇಂದ್ರ ಆರಂಭ

ಪ್ರೋಟಾನ್‌ಗಳು ದೇಹವನ್ನು ಪ್ರವೇಶಿಸಿದಾಗ, ಅವು ಗೆಡ್ಡೆಯನ್ನು ತಲುಪುವವರೆಗೆ ಚಲಿಸುತ್ತವೆ, ಆ ಸಮಯದಲ್ಲಿ ಅವು ತಮ್ಮ ಶಕ್ತಿಯನ್ನು ನೇರವಾಗಿ ಕ್ಯಾನ್ಸರ್ ಅಂಗಾಂಶಕ್ಕೆ ಬಿಡುಗಡೆ ಮಾಡುತ್ತವೆ. ಬ್ರಾಗ್ ಪೀಕ್ ಎಂದು ಕರೆಯಲ್ಪಡುವ ಈ ವಿದ್ಯಮಾನವು ಸುತ್ತಮುತ್ತಲಿನ ಆರೋಗ್ಯಕರ ಅಂಗಾಂಶಗಳಿಗೆ ಕನಿಷ್ಠ ವಿಕಿರಣದೊಂದಿಗೆ ಗೆಡ್ಡೆಗೆ ಹೆಚ್ಚಿನ ಸಾಂದ್ರತೆಯ ವಿಕಿರಣವನ್ನು ತಲುಪಿಸಲು ಅನುವು ಮಾಡಿಕೊಡುತ್ತದೆ. ಮಕ್ಕಳ ರೋಗಿಗಳಲ್ಲಿ ಗೆಡ್ಡೆಗಳಿಗೆ ಚಿಕಿತ್ಸೆ ನೀಡುವಲ್ಲಿ ಈ ನಿಖರತೆಯು ವಿಶೇಷವಾಗಿ ಪ್ರಯೋಜನಕಾರಿಯಾಗಿದೆ. ಇದರಿಂದ ಮುಂದೆ ಮಕ್ಕಳ ದೇಹದ ಬೆಳವಣಿಗೆಯಲ್ಲಿ ಯಾವುದೇ ರೀತಿಯ ತೊಂದರೆ ಇರುವುದಿಲ್ಲ.

ಪ್ರೋಟಾನ್ ಬೀಮ್ ಥೆರಪಿ ಹೇಗೆ ಕೆಲಸ ಮಾಡುತ್ತದೆ?
ಪ್ರೋಟಾನ್ ಕಿರಣ ಚಿಕಿತ್ಸೆಯು ಗೆಡ್ಡೆಯ ಡಿಎನ್‌ಎಯನ್ನು ನಾಶ ಮಾಡುವ ಮೂಲಕ ಕಾರ್ಯನಿರ್ವಹಿಸುತ್ತದೆ. ಪ್ರೋಟಾನ್‌ಗಳನ್ನು ಹೈಡ್ರೋಜನ್ ಪರಮಾಣುಗಳಿಂದ ಬೇರ್ಪಡಿಸಲಾಗುತ್ತದೆ. ಸಿಂಕ್ರೋಟ್ರಾನ್ ಅಥವಾ ಸೈಕ್ಲೋಟ್ರಾನ್‌ನಂತಹ ಕಣ ವೇಗವರ್ಧಕದಲ್ಲಿ ಭಾಗಿಯಾಗುತ್ತದೆ. ಸಾಮಾನ್ಯವಾಗಿ 360 ಡಿಗ್ರಿ ಕೋನದಲ್ಲಿ ತಿರುಗಿಸಬಹುದಾದ ಗ್ಯಾಂಟ್ರಿ ಎಂಬ ವಿಶೇಷ ಸಾಧನ ಪ್ರೋಟಾನ್‌ಗಳ ಹರಿವನ್ನು ಕೇವಲ 5 ಮಿಲಿಮೀಟರ್ ಅಗಲದ ತೆಳುವಾದ ಕಿರಣಕ್ಕೆ ಕೇಂದ್ರೀಕರಿಸಲು ದೊಡ್ಡ ಮ್ಯಾಗ್ನೆಟ್ ಅನ್ನು ಬಳಸುತ್ತದೆ. ನಂತರ ಮ್ಯಾಗ್ನೆಟ್ ಕಿರಣವನ್ನು ಮಾರ್ಗದರ್ಶಿಸುತ್ತದೆ. ಗ್ಯಾಂಟ್ರಿ ರೋಗಿಯ ಸುತ್ತ ತಿರುಗುತ್ತಿದ್ದಂತೆ ಅದನ್ನು ಬಹು ಕೋನಗಳಿಂದ ಗೆಡ್ಡೆಯ ಕಡೆಗೆ ನಿರ್ದೇಶಿಸಲಾಗುತ್ತದೆ. ಪ್ರೋಟಾನ್ ಕಿರಣದೊಳಗಿನ ಶಕ್ತಿಯನ್ನು ಗೆಡ್ಡೆಯ ಆಳವನ್ನು ಆಧರಿಸಿ ಸರಿಹೊಂದಿಸಬಹುದು. ಇದರಿಂದಾಗಿ ಗೆಡ್ಡೆಯ ವಿವಿಧ ಭಾಗಗಳಿಗೆ ವಿಭಿನ್ನ ಪ್ರಮಾಣದ ವಿಕಿರಣವನ್ನು ತಲುಪಿಸಬಹುದು.

ಪ್ರೋಟಾನ್ ಥೆರಪಿ ಮತ್ತು ರೇಡಿಯೋಥೆರಪಿ ವ್ಯತ್ಯಾಸಗಳೇನು ?
ನಿಖರತೆ: ಪ್ರೋಟಾನ್ ಚಿಕಿತ್ಸೆಯು ಹೆಚ್ಚು ನಿಖರವಾಗಿದ್ದು, ಸುತ್ತಮುತ್ತಲಿನ ಆರೋಗ್ಯಕರ ಅಂಗಾಂಶಗಳಿಗೆ ಕನಿಷ್ಠ ಹಾನಿಯೊಂದಿಗೆ ಗೆಡ್ಡೆಗೆ ವಿಕಿರಣವನ್ನು ನೀಡುತ್ತದೆ. ಮೆದುಳು, ಬೆನ್ನುಹುರಿ ಅಥವಾ ಕಣ್ಣುಗಳಂತಹ ನಿರ್ಣಾಯಕ ರಚನೆಗಳ ಬಳಿ ಇರುವ ಗೆಡ್ಡೆಗಳಿಗೆ ಇದು ವಿಶೇಷವಾಗಿ ಅನುಕೂಲಕರವಾಗಿದೆ.

ಅಡ್ಡ ಪರಿಣಾಮ ಕಡಿಮೆ: ಸಾಂಪ್ರದಾಯಿಕ ರೇಡಿಯೋಥೆರಪಿಯು ಚಿಕಿತ್ಸೆಗಳನ್ನು ಯೋಜಿಸಲು ಮತ್ತು ನೀಡಲು ಸಿ.ಟಿ. ಮತ್ತು ಎಂಆರ್‌ಐ ಸ್ಕ್ಯಾನ್‌ಗಳಂತಹ ಸುಧಾರಿತ ಇಮೇಜಿಂಗ್ ತಂತ್ರಗಳನ್ನು ಸಹ ಬಳಸುತ್ತದೆ. ಆದಾಗ್ಯೂ, ಪ್ರೋಟಾನ್ ವಿಕಿರಣದ ಚದುರುವಿಕೆ ಎಂದರೆ ಪ್ರೋಟಾನ್ ಚಿಕಿತ್ಸೆಗೆ ಹೋಲಿಸಿದರೆ ಹತ್ತಿರದ ಆರೋಗ್ಯಕರ ಅಂಗಾಂಶಗಳ ಮೇಲೆ ಪರಿಣಾಮ ಬೀರುವ ಅಪಾಯ ಸ್ವಲ್ಪ ಹೆಚ್ಚಾಗಿದೆ.

ವೆಚ್ಚ ಮತ್ತು ಲಭ್ಯತೆ: ಪ್ರೋಟಾನ್ ವೇಗವರ್ಧಕಗಳು ಮತ್ತು ವಿಶೇಷ ಚಿಕಿತ್ಸಾ ಕೇಂದ್ರಗಳ ವೆಚ್ಚದಿಂದಾಗಿ ಪ್ರೋಟಾನ್ ಚಿಕಿತ್ಸೆಯು ಸಾಮಾನ್ಯವಾಗಿ ಸಾಂಪ್ರದಾಯಿಕ ರೇಡಿಯೊಥೆರಪಿಗಿಂತ ಹೆಚ್ಚು ದುಬಾರಿಯಾಗಿದೆ.

ಅಡ್ಡಪರಿಣಾಮಗಳು
ಪ್ರೋಟಾನ್ ಚಿಕಿತ್ಸೆ: ಅದರ ನಿಖರತೆಯಿಂದಾಗಿ, ಪ್ರೋಟಾನ್ ಚಿಕಿತ್ಸೆಯು ಸಾಮಾನ್ಯವಾಗಿ ಸಾಂಪ್ರದಾಯಿಕ ರೇಡಿಯೊಥೆರಪಿಗೆ ಹೋಲಿಸಿದರೆ ಕಡಿಮೆ ಅಡ್ಡಪರಿಣಾಮಗಳನ್ನು ಉಂಟುಮಾಡುತ್ತದೆ. ಇದು ಮಕ್ಕಳ ರೋಗಿಗಳಲ್ಲಿ ಮತ್ತು ಸೂಕ್ಷ್ಮ ಅಂಗಗಳ ಬಳಿ ಇರುವ ಗೆಡ್ಡೆಗಳಿಗೆ ಚಿಕಿತ್ಸೆ ನೀಡಲು ಸೂಕ್ತ ಆಯ್ಕೆಯಾಗಿದೆ. ಸಾಂಪ್ರದಾಯಿಕ ರೇಡಿಯೊಥೆರಪಿ ಆರೋಗ್ಯಕರ ಅಂಗಾಂಶಗಳಿಗೆ ಹೆಚ್ಚಿನ ಹಾನಿಯನ್ನುಂಟುಮಾಡುತ್ತದೆ, ಇದು ಆಯಾಸ, ಚರ್ಮದ ಕಿರಿಕಿರಿ, ವಾಕರಿಕೆ ಮತ್ತು ದೀರ್ಘಕಾಲೀನ ತೊಡಕುಗಳಂತಹ ಅಡ್ಡಪರಿಣಾಮಗಳ ಹೆಚ್ಚಿನ ಅಪಾಯಕ್ಕೆ ಕಾರಣವಾಗುತ್ತದೆ.

ಪ್ರೋಟಾನ್ ಥೆರಪಿ ಮಿತಿಗಳು: ಪ್ರೋಟಾನ್ ಕಿರಣವು ದೇಹವನ್ನು ಪ್ರವೇಶಿಸಿದ ಪ್ರದೇಶದಲ್ಲಿ ಕೆಂಪಾಗಿರುವ ಚರ್ಮ. ಇದು ಬಿಸಿಲಿನಿಂದ ಸುಟ್ಟಂತೆ ಕಾಣಿಸಬಹುದು ಮತ್ತು ಚಿಕಿತ್ಸಾ ಪ್ರದೇಶದಲ್ಲಿ ಕೂದಲು ಉದುರುವುದು.

ಆಯಾಸ ಅಥವಾ ನಿಶ್ಯಕ್ತಿ ಕಾಣಿಸಿಕೊಳ್ಳಬಹುದು.
ವಿಕಿರಣ ಚಿಕಿತ್ಸೆಯ ಮುಂದುವರಿದ ರೂಪವಾದ ಪ್ರೋಟಾನ್ ಚಿಕಿತ್ಸೆ ಭವಿಷ್ಯದಲ್ಲಿ ದೇಶದ ಬಡ ಕ್ಯಾನ್ಸರ್ ರೋಗಿಗಳಿಗೆ ಕೈಗೆಟಕುವ ದರದಲ್ಲಿ ಸಿಗಲಿ ಎಂದು ಆಶಿಸೋಣ.

ಸುಸ್ಥಿರ ಜೀವನಶೈಲಿ ಎಂಬ ಮನೋಭಾವದ ನೈಜ ಬದುಕು

ಗಂಟಾಘೋಷ

ಗುರುರಾಜ್ ಗಂಟಿಹೊಳೆ

vveditoped@gmail.com

ಪರಿಸರ ಸಂರಕ್ಷಣೆ, ನೈತಿಕ ಜೀವನ ಮತ್ತು ರಾಷ್ಟ್ರಪ್ರೇಮ' ಈ ಮೂರು ಅಂಶಗಳು ಭಾರತದ ಸಾಂಸ್ಕೃತಿಕ ಪರಂಪರೆಯ ಮೂಲೆ ಮಾಪುಗಳು ಎನ್ನಬಹುದು. ಭಾರತೀಯ ಜೀವನಶೈಲಿಯು ಒಂದು ಉತ್ತಮ ಸುಸ್ಥಿರತೆಯ ಮಾದರಿ ಶೈಲಿಯಾಗಿ ಇಂದು ಪ್ರಪಂಚದ ಇತರೆ ರಾಷ್ಟ್ರದ ನಾಗರಿಕರೂ ಸಹ ತಮ್ಮ ಜೀವನದಲ್ಲಿ ಭಾರತೀಯ ಜೀವನ ಪದ್ಧತಿ ಅಳವಡಿಸಿಕೊಂಡು ಬದುಕಲು ಉತ್ಸುಕರಾಗಿದ್ದಾರೆ.

ಭಾರತದ ಸಂಸ್ಕೃತಿಯೇ 'ಪ್ರಕೃತಿಯ ಪೂಜೆ'ಯನ್ನು ಬೋಧಿಸಿದೆ. ನದಿಗಳು, ಗಿರಿಶಿಖರಗಳು, ವಟವೃಕ್ಷಗಳು, ಗೋಮಾತೆ ಇವನ್ನೆಲ್ಲ ದೇವತೆಯಂತೆ ಗೌರವಿಸುವುದು ನಮ್ಮ ಜನಮಾನಸದಲ್ಲೇ ಇದೆ. ಆದರೆ ಇಂದಿನ ಯಾಂತ್ರಿಕ ಬದುಕು ಆ ಮೌಲ್ಯಗಳಿಂದ ದೂರ ಸಾಗುತ್ತಿದೆ. ವಿಷಕಾರಿ ಸಾಮಗ್ರಿ, ರಾಸಾಯನಿಕ ಜೀವನ, ಅನೈತಿಕ ಉಪಭೋಗ ಸಂಸ್ಕೃತಿಗಳು ಭೂಮಿಯ ಸಮತೋಲನವನ್ನು ನಾಶ ಮಾಡುತ್ತಿವೆ. ಸುಸ್ಥಿರತೆ ಎಂಬ ಪದ ಹೊಸದಾದರೂ, ಇದರ ಅರ್ಥ ಪ್ರಾಚೀನ ಭಾರತದಲ್ಲೇ ಹಾಸುಹೊಕ್ಕಾಗಿತ್ತು. ಅಪರಿಮಿತ ಸಂಪನ್ಮೂಲ ಬಳಕೆಗೆ ಬದಲಾಗಿ ಸಂಯಮ, ಮಿತೋಪಭೋಗ, ಸಂರಕ್ಷಣಾ ಮನೋಭಾವ ಇವುಗಳು ನಮ್ಮ ಜೀವನಶೈಲಿಯ ಭಾಗವಾಗಿದ್ದವು. 'ಮಾತೃಭೂಮಿ ದೇವತಾ' ಎಂಬ ದೃಷ್ಟಿಕೋನದಿಂದ ನೋಡಿದರೆ, ಪರಿಸರ ರಕ್ಷಣೆಯೇ ರಾಷ್ಟ್ರ ರಕ್ಷಣೆಯ ಮೊದಲ ಹೆಜ್ಜೆಯಾಗಿದೆ.

ಹಸಿವಾದಾಗ, ನೂಕುನುಗ್ಗಲಿನಲ್ಲಿ ಅವಸರದಿಂದ ಊಟ ಮಾಡಿದಾಗ, ಅದು ಸುಸ್ಥಿರ ಅಥವಾ ನೆಮ್ಮದಿಯ ಊಟ ಎನಿಸುವುದಿಲ್ಲ. ಅದರಂತೆ ಅವಸರದ, ಅತಿಬಳಕೆಯ ಜೀವನ ಮಾಡಿದಾಗ ಅದೂ ಸಹ ಸುಸ್ಥಿರ ಬದುಕು ಎನಿಸುವುದಿಲ್ಲ. ಸರಕಾರದಲ್ಲಿ ಸುಸ್ಥಿರ, ದೇಶದ ಆರ್ಥಿಕತೆಯಲ್ಲಿ ಸುಸ್ಥಿರ ಇರಲು ಬಯಸುವಂತೆಯೇ ಬದುಕಿನಲ್ಲಿಯೂ ಸುಸ್ಥಿರ ಜೀವನಶೈಲಿ ಇರುವುದು ಬಹುಮುಖ್ಯವಾದುದಾಗಿದೆ.

ಮನೆಯಿಂದ ಮನುಕುಲದವರೆಗಿನ ಹೊಣೆಗಾರಿಕೆಯು ಸೇವಾ ಮನೋಭಾವದ ಒಂದು ಭಾಗವಾಗಿದ್ದು, 'ನಾನು ಬದಲಾದರೆ ಸಮಾಜ ಬದಲಾಗುತ್ತದೆ' ಎಂಬುದಾಗಿದೆ. ಅದು ಪರಿಸರದಲ್ಲಿಯೂ ಅನ್ವಯಿಸುತ್ತದೆ. ನಮ್ಮ ಮನೆ, ಬೀದಿ, ಶಾಲೆ, ದೇವಸ್ಥಾನಗಳ ಸುತ್ತಮುತ್ತ ಶುದ್ಧತೆ ಮತ್ತು ಸಂರಕ್ಷಣೆಯ ಅಭ್ಯಾಸ ಬೆಳೆಯಬೇಕು. ಉದಾಹರಣೆಗೆ, ಪ್ಲಾಸ್ಟಿಕ್ ಬದಲಾಗಿ ನಾರು ಮತ್ತು ಹತ್ತಿಚೀಲ, ಮನೆಯ ತ್ಯಾಜ್ಯದಿಂದ ಗೊಬ್ಬರ ತಯಾರಿಸುವ ಅಭ್ಯಾಸ, ಎಲ್‌ಇಡಿ ದೀಪಗಳು, ಸೌರಶಕ್ತಿ ಉಪಕರಣಗಳು, ಹಾಲು, ಧಾನ್ಯ, ತರಕಾರಿಗಳನ್ನು ಸ್ಥಳೀಯ ರೈತರಿಂದ ಖರೀದಿಸುವುದು ಇತ್ಯಾದಿ. ಇವು ಚಿಕ್ಕ ಹೆಜ್ಜೆಗಳಾಗಿದ್ದರೂ ರಾಷ್ಟ್ರ ನಿರ್ಮಾಣದ ದೊಡ್ಡ ಭಾಗವಾಗುತ್ತವೆ. ಸುಸ್ಥಿರತೆ (Sustainability) ಎಂದರೆ ನಿರಂತರತೆ ಎನ್ನಬಹುದು. ನನ್ನಿಂದ ಆರಂಭವೂ ಅಲ್ಲ, ನನ್ನಿಂದ ಅಂತ್ಯವೂ ಅಲ್ಲವೆಂದುಕೊಳ್ಳಬೇಕಾದ ಭಾವನೆಯಿದು. ಇದರರ್ಥ ಭವಿಷ್ಯದ ಪೀಳಿಗೆಯ ಅಗತ್ಯಗಳಿಗೆ ಧಕ್ಕೆ ಬಾರದಂತೆ ಪ್ರಸ್ತುತದ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯ. ಇದು ಕೇವಲ ಪರಿಸರವನ್ನು ಮಾತ್ರವಲ್ಲದೆ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳನ್ನೂ ಒಳಗೊಂಡಿರುತ್ತದೆ.

ಪರಿಸರ ಸುಸ್ಥಿರತೆ: ಪರಿಸರಕ್ಕೆ ಹಾನಿಯಾಗದಂತೆ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವ ವಿಧಾನ. ಇದು ಕನಿಷ್ಠ ತ್ಯಾಜ್ಯವನ್ನು ಉತ್ಪಾದಿಸುವುದು, ಮತ್ತೆ ಉತ್ಪಾದಿಸಬಹುದಾದ ಇಂಧನ ಮೂಲಗಳನ್ನು (ಸೂರ್ಯ, ಗಾಳಿ, ನೀರು) ಬಳಸುವುದೂ ಒಳಗೊಂಡಿದೆ.

ಆರ್ಥಿಕ ಸುಸ್ಥಿರತೆ: ದೀರ್ಘಕಾಲೀನ ಆರ್ಥಿಕ ಬೆಳವಣಿಗೆಯನ್ನು ಬೆಂಬಲಿಸುವುದು. ಇದು ಸಂಪನ್ಮೂಲಗಳ ಜವಾಬ್ದಾರಿಯುತ ಮತ್ತು ಪರಿಣಾಮಕಾರಿ ಬಳಕೆಯನ್ನು ಸೂಚಿಸುತ್ತದೆ.

ಸಾಮಾಜಿಕ ಸುಸ್ಥಿರತೆ: ಸಮುದಾಯದ ದೀರ್ಘಕಾಲೀನ ಕಾರ್ಯಸಾಧ್ಯತೆಯನ್ನು ಖಚಿತಪಡಿಸುವುದು. ಇದು ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸಮಾನತೆಯನ್ನು ಒಳಗೊಂಡಿರುತ್ತದೆ. ಈ ಮೂರು ಆಯಾಮಗಳಾದ ಪರಿಸರ, ಆರ್ಥಿಕತೆ ಮತ್ತು ಸಮಾಜದ ನಡುವೆ ಸಮತೋಲನವನ್ನು ಸಾಧಿಸುವ ಅಭಿವೃದ್ಧಿಯೇ ಸುಸ್ಥಿರವೆನಿಸಿಕೊಳ್ಳುತ್ತದೆ.

ಇಂದಿನ ಜಗತ್ತು ವೇಗವಾಗಿ ಬದಲಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಡೆದಿರುವ ವೇಗದ ಪ್ರಗತಿಯು ಮಾನವ ಜೀವನವನ್ನು ಸುಲಭಗೊಳಿಸಿದೆ. ಆದರೆ ಈ ಅಭಿವೃದ್ಧಿಯ ನಡುವೆಯೇ, ಪರಿಸರದ ಹಾನಿ ಮತ್ತು ತಂತ್ರಜ್ಞಾನ ದುರಪಯೋಗದಂತಹ ಸಮಸ್ಯೆಗಳು ಗಂಭೀರವಾಗುತ್ತಿವೆ. ಒಂದು ಕಡೆ ಮನುಷ್ಯ ಪರಿಸರಸ್ನೇಹಿ ಉತ್ಪನ್ನಗಳತ್ತ ತಿರುಗುತ್ತಿದ್ದರೆ, ಇನ್ನೊಂದು ಕಡೆ ಕೃತಕ ಬುದ್ಧಿಮತ್ತೆ (Artificial Intelligence–AI) ಮೂಲಕ ಹೊಸ ರೀತಿಯ ಅಪಾಯಗಳು ಎದುರಾಗುತ್ತಿವೆ. ಈ ಎರಡು ದಿಕ್ಕುಗಳ ನಡುವಿನ ಸಮತೋಲನವೇ ಭವಿಷ್ಯದ ಸವಾಲಾಗಿದೆ. ಪರಿಸರ ಮಾಲಿನ್ಯ, ಹವಾಮಾನ ಬದಲಾವಣೆ ಮತ್ತು ತ್ಯಾಜ್ಯ ಸಮಸ್ಯೆಗಳ ನಡುವೆ ಹಿಂದೆಂದಿಗಿಂತಲೂ ಇಂದು ಪರಿಸರಸ್ನೇಹಿ ಗ್ರಾಹಕ ಉತ್ಪನ್ನಗಳ ಅಗತ್ಯತೆ ಹೆಚ್ಚಿವೆ. ಈ ಹಿನ್ನೆಲೆಯಲ್ಲಿ ಪರಿಸರಸ್ನೇಹಿ ಉತ್ಪನ್ನಗಳು (Eco-friendly products) ಅತ್ಯಂತ ಮುಖ್ಯವಾದ ಪರ್ಯಾಯವಾಗಿ ಬೆಳೆಯುತ್ತಿವೆ. ಇವು ಪ್ರಕೃತಿಗೆ ಹಾನಿ ಮಾಡದೆ, ಮರುಬಳಕೆ ಮಾಡಬಹುದಾದ ಹಾಗೂ ಆರೋಗ್ಯಕ್ಕೆ ಸುರಕ್ಷಿತವಾದ ವಸ್ತುಗಳಾಗಿಯೂ ನಿರಂತರತೆ ಕಾಯ್ದುಕೊಳ್ಳುತ್ತವೆ ಎನ್ನಬಹುದು.

ಈ ರೀತಿಯ ತಂತ್ರಜ್ಞಾನಗಳು ಶಕ್ತಿ ಸಂರಕ್ಷಣೆಯ ಜೊತೆಗೆ ಪ್ಲಾಸ್ಟಿಕ್ ಮತ್ತು ಲೋಹದ ವ್ಯರ್ಥ ಬಳಕೆಯನ್ನು ತಡೆಯುತ್ತವೆ. ಇಂತಹ ಉತ್ಪನ್ನಗಳು ಕೇವಲ ವಸ್ತುಗಳಲ್ಲ, ಅವುಗಳು 'ಪರಿಸರವನ್ನು ಕಾಪಾಡಿ, ಪ್ರಕೃತಿಯೊಂದಿಗೆ ಸಹಜವಾಗಿ ಬಾಳು' ಎಂಬ ಸಂದೇಶವನ್ನು ನೀಡುತ್ತವೆ. ಇಂದು ಅನೇಕ ಕಂಪನಿಗಳು ''ಸಸ್ಟೈನಬಲ್ ಲೈಫ್‌ಸ್ಟೈಲ್'' ಅಥವಾ 'ಹಸಿರು ಜೀವನ ಶೈಲಿ' (Green lifestyle) ಎಂಬ ಆಲೋಚನೆಯತ್ತ ಸಾಗುತ್ತಿವೆ. ಜನರೂ ಸಹ ಈಗ ಪ್ಲಾಸ್ಟಿಕ್ ಮುಕ್ತ ಉತ್ಪನ್ನಗಳು, ಸೌರಶಕ್ತಿ ಉಪಕರಣಗಳು, ಬಯೋ-ಡಿಗ್ರೇಡಬಲ್ ಪ್ಯಾಕೇಜಿಂಗ್‌ಮತ್ತು ನೈಸರ್ಗಿಕ ಉತ್ಪನ್ನಗಳನ್ನು ಹೆಚ್ಚು ಆಯ್ಕೆ ಮಾಡುತ್ತಿದ್ದಾರೆ. ಪರಿಸರಸ್ನೇಹಿ ಉತ್ಪನ್ನಗಳು ಪರಿಸರವನ್ನು ಕಾಪಾಡುವುದಷ್ಟೇ ಅಲ್ಲ, ಭವಿಷ್ಯದ ಪೀಳಿಗೆಯು ಆರೋಗ್ಯಕರ ಜಗತ್ತಿನಲ್ಲಿ ಬದುಕುವಂತೆಯೂ ಮಾಡುತ್ತವೆ. ಇದು 'ವೈಯಕ್ತಿಕ ಹೊಣೆಗಾರಿಕೆ'ಯಿಂದ 'ಸಾಮೂಹಿಕ ಜವಾಬ್ದಾರಿ'ಯ ಕಡೆಗೆ ಸಾಗುವ ಒಂದು ಸಕಾರಾತ್ಮಕ ಹೆಜ್ಜೆಯಂದೇ ನಾವು ಪರಿಗಣಿಸಬಹುದು.

ಇದೆಲ್ಲದರ ಜೊತೆಗೆ ಕೃತಕ ಬುದ್ಧಿಮತ್ತೆ ಮತ್ತು ಅದರ ಹಾನಿಕಾರಕ ಚಟುವಟಿಕೆಗಳು ಮತ್ತೊಂದು ದಿಕ್ಕಿನಲ್ಲಿ ಸಾಗುತ್ತಿವೆ. ಕೃತಕ ಬುದ್ಧಿಮತ್ತೆ (Artificial Intelligence) ಎಂಬ ತಂತ್ರಜ್ಞಾನವು ಪ್ರಪಂಚದ ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಂಡಿದೆ. ವೈದ್ಯಕೀಯದಿಂದ ಆರಂಭಿಸಿ ಶಿಕ್ಷಣ, ಕೃಷಿ, ಸಾರಿಗೆ, ವಾಣಿಜ್ಯ, ಸಂವಹನ ಸೇರಿದಂತೆ ಎಲ್ಲೆಡೆ ಎ.ಐ ಇಂದು ಕಾರ್ಯನಿರ್ವಹಿಸುತ್ತಿದೆ. ಮಾನವ ಬುದ್ಧಿಮತ್ತೆಯನ್ನು ಅನುಕರಿಸುವ ಈ ತಂತ್ರಜ್ಞಾನವು ಅನೇಕ ಸಕಾರಾತ್ಮಕ ಬದಲಾವಣೆಗಳನ್ನು ತಂದಿದ್ದರೂ, ಇದರ ದುರುಪಯೋಗವೂ ಅಷ್ಟೇ ವೇಗವಾಗಿ ಬೆಳೆಯುತ್ತಿದೆ. ಎ.ಐ ಗೌಪ್ಯತೆಗೆ ದೊಡ್ಡ ಅಪಾಯವನ್ನು ಉಂಟುಮಾಡುತ್ತಿದೆ. ನಿಗಾ ವ್ಯವಸ್ಥೆಗಳು ಮತ್ತು ಡೇಟಾ ಸಂಗ್ರಹ ತಂತ್ರಜ್ಞಾನಗಳು ವ್ಯಕ್ತಿಗಳ ವೈಯಕ್ತಿಕ ಮಾಹಿತಿಯನ್ನು ಅವರ ಅನುಮತಿ ಇಲ್ಲದೆ ಸಂಗ್ರಹಿಸುತ್ತವೆ. ಇದರಿಂದ ಖಾಸಗಿ ಜೀವನದ ಗೌಪ್ಯತೆ ಕುಂಠಿತವಾಗುತ್ತದೆ. ತಪ್ಪುಮಾಹಿತಿ ಮತ್ತು ಡೀಪ್‌ಫೇಕ್‌ಗಳು (Deep Fake) ಸಾಮಾಜಿಕ ಅಶಾಂತಿಗೆ ಕಾರಣವಾಗುತ್ತಿವೆ. ಎ.ಐ ಬಳಸಿ ಹ್ಯಾಕಿಂಗ್, ಫಿಷಿಂಗ್, ಗುರುತು ಕಳವು, ಮತ್ತು ಆನ್‌ಲೈನ್ ಮೋಸಗಳು, ನಕಲಿ

ವಿಡಿಯೋಗಳು ಮತ್ತು ಚಿತ್ರಗಳನ್ನು ಸೃಷ್ಟಿಸಿ ಜನರನ್ನು ತಪ್ಪು ದಾರಿಗೆಳೆಯುವ ಘಟನೆಗಳು ಹೆಚ್ಚಾಗುತ್ತಿವೆ.

ದೊಡ್ಡ ಎ.ಐ ಮಾದರಿಗಳನ್ನು ತರಬೇತಿಗೊಳಿಸಲು ಅತ್ಯಧಿಕ ವಿದ್ಯುತ್ ಮತ್ತು ಗಣಕಶಕ್ತಿ ಬೇಕಾಗುತ್ತದೆ. ಇದರ ಪರಿಣಾಮವಾಗಿ ಪರಿಸರದ ಮೇಲೆ ಕಾರ್ಬನ್ ಉತ್ಪನ್ನ ಮತ್ತು ಶಕ್ತಿ ವ್ಯರ್ಥತೆ ಉಂಟಾಗುತ್ತದೆ. ಈ ರೀತಿಯಾಗಿ ಎ.ಐ ಕೂಡ ಪರಿಸರಹಾನಿಗೆ ಪರೋಕ್ಷವಾಗಿ ಕಾರಣವಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದರೆ, ಉತ್ತರದಾಯಿತೆಯಿಂದ ಮತ್ತು ನೈತಿಕತೆಯಿಂದ ಎ.ಐ ಬಳಕೆ ಮಾಡುವುದಾಗಿದೆ. ಸರಕಾರಗಳು, ಕಂಪನಿಗಳು ಮತ್ತು ನಾಗರಿಕರು ಎಐ ಬಳಕೆಯಲ್ಲಿ ಪಾರದರ್ಶಕತೆ, ಜವಾಬ್ದಾರಿ ಮತ್ತು ಮಾನವ ಹಿತದೃಷ್ಟಿ ಕಾಪಾಡಬೇಕು. 'ತಂತ್ರಜ್ಞಾನ ಮಾನವನ ಸೇವೆಗೆ, ಮಾನವ ತಂತ್ರಜ್ಞಾನಕ್ಕೆ ಅಲ್ಲ' ಎಂಬ ದೃಷ್ಟಿಕೋನ ಅತ್ಯಂತ ಅಗತ್ಯ. ತಂತ್ರಜ್ಞಾನ ಮತ್ತು ಪರಿಸರ ಸಮತೋಲನದ ಅಗತ್ಯ ಪರಿಸರಸ್ನೇಹಿ ಉತ್ಪನ್ನಗಳು ಮತ್ತು ಎ.ಐ ನಡುವಿನ ವ್ಯತ್ಯಾಸ ಅಷ್ಟೇನೂ ಹೆಚ್ಚಾಗಿಲ್ಲ. ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಪರಸ್ಪರ ಪೂರಕವಾಗಿರಬಹುದು. ಉದಾ, ಎ.ಐ ತಂತ್ರಜ್ಞಾನವನ್ನು ಪರಿಸರ ಸಂರಕ್ಷಣೆಗೆ, ಹವಾಮಾನ ವಿಶ್ಲೇಷಣೆ, ಶಕ್ತಿ ನಿರ್ವಹಣೆ ಮತ್ತು ನವೀಕರಿಸಬಹುದಾದ ಸಂಪನ್ಮೂಲಗಳ ಯೋಜನೆಗೆ ಬಳಸಬಹುದು. ಹೀಗಾಗಿ ತಂತ್ರಜ್ಞಾನವೇ ಪರಿಸರ ರಕ್ಷಣೆಯ ಸಾಧನವಾಗಬಹುದು. ಇದರ ಯಶಸ್ಸು ನಮ್ಮ ನೈತಿಕ ನಿಲುವಿನ ಮೇಲೆ ಅವಲಂಬಿತವಾಗಿದೆ. ಲಾಭಕ್ಕಿಂತ ಜವಾಬ್ದಾರಿ ಮುಖ್ಯ ಎಂಬ ಅರಿವು ಬೆಳೆಸಿದಾಗ ಮಾತ್ರ ಈ ಎರಡೂ ಕ್ಷೇತ್ರಗಳು ಮಾನವ ಕಲ್ಯಾಣದ ದಾರಿಯಲ್ಲಿ ಸಾಗಬಹುದಾಗಿದೆ.

ಪರಿಸರಸ್ನೇಹಿ ಉತ್ಪನ್ನಗಳು ನಮ್ಮ ಭೂಮಿಯನ್ನು ಆರೋಗ್ಯಕರವಾಗಿಡಲು ಸಹಕಾರಿಯಾಗುವಂತಹ ಹೊಸ ಜೀವನಶೈಲಿಯನ್ನು ಪರಿಚಯಿಸುತ್ತವೆ. ಕೃತಕ ಬುದ್ಧಿಮತ್ತೆ ಮಾನವ ಬುದ್ಧಿಯ ವಿಸ್ತಾರವಾಗಿದ್ದರೂ, ಅದರ ದುರುಪಯೋಗ ಮಾನವತೆಯ ನಾಶಕ್ಕೆ ದಾರಿ ಮಾಡಬಹುದು. ಹೀಗಾಗಿ ನಾವು ತಂತ್ರಜ್ಞಾನವನ್ನು ಅಂಧರಂತೆ ಅನುಸರಿಸದೆ, ಅದರ ನೈತಿಕ ಅಂಶಗಳನ್ನು ಅಳವಡಿಸಿಕೊಳ್ಳಬೇಕು.

'ತಂತ್ರಜ್ಞಾನ ಮತ್ತು ಪರಿಸರದ ಮಧ್ಯೆ ಸಮತೋಲನವೇ ಭವಿಷ್ಯದ ಉಳಿವು' ಎಂಬುದೇ ಇವತ್ತಿನ ನಮ್ಮ ಕಾಲದ ಅತ್ಯಂತ ದೊಡ್ಡ ಪಾಠವಾಗಿದೆ. ಮಾನವನು ತಂತ್ರಜ್ಞಾನವನ್ನು ನಿಯಂತ್ರಿಸಿದಾಗ ಅಭಿವೃದ್ಧಿ ಶಾಶ್ವತವಾಗುತ್ತದೆ. ಆದರೆ ತಂತ್ರಜ್ಞಾನವೇ ಮಾನವನನ್ನು ನಿಯಂತ್ರಿಸಿದರೆ ಅದು ವಿನಾಶದ ದಾರಿ. ನಾವು ಪರಿಸರಸ್ನೇಹಿ ಜೀವನಶೈಲಿ, ನೈತಿಕ ತಂತ್ರಜ್ಞಾನ ಬಳಕೆ ಮತ್ತು ಜವಾಬ್ದಾರಿಯುತ ನಾಗರಿಕತೆ ಎಂಬ ಮೂರು ತತ್ವಗಳನ್ನು ಅಳವಡಿಸಿಕೊಂಡರೆ ಮಾತ್ರ ಭವಿಷ್ಯವು ಹಸಿರು, ಸುರಕ್ಷಿತ ಮತ್ತು ಮಾನವೀಯತೆಯಿಂದ ಕೂಡಿರಬಲ್ಲದು.

ವಿದೇಶಿ ಆಮದು ವಸ್ತುಗಳ ಬಳಕೆಯನ್ನು ಕಡಿಮೆ ಮಾಡಿ, ಸ್ಥಳೀಯ ಗೃಹೋತ್ಪನ್ನ ಸಾಮಗ್ರಿಗಳನ್ನು ಬಳಸುವುದು, ಮನೆಯ, ರಸ್ತೆಬದಿಯ ಹಾಗೂ ಕೃಷಿ ಜಮೀನುಗಳಲ್ಲಿ ಕಸವನ್ನು ಬಯೋಡಿಗ್ರೇಡಬಲ್ ಮತ್ತು ನಾನ್-ಬಯೋ ಡಿಗ್ರೇಡಬಲ್ ವಸ್ತುಗಳನ್ನು ಬೇರ್ಪಡಿಸಿ ವಿಲೇವಾರಿ ಮಾಡುವುದು, ಹಾನಿಕಾರಕ ರಾಸಾಯನಿಕಗಳಿಲ್ಲದ ಸುಲಭವಾದ ಉತ್ಪನ್ನಗಳನ್ನು ಖರೀದಿಸುವುದು, ಪರಿಸರಪ್ರಿಯ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರಿಂದಾಗಿ, ಉತ್ತಮ ಆರೋಗ್ಯಕರ ಬದುಕಿನತ್ತ ನಮ್ಮನ್ನು ನಾವು ಮುನ್ನಡೆಸಲು ಪ್ರೇರಕವಾಗುತ್ತವೆ.

ಇಂತಹ ಉತ್ತಮ ನಡವಳಿಕೆಯಿಂದಾಗಿ, ಮುಂದಿನ ತಲೆಮಾರಿಗೆ ನಾವು ಉತ್ತಮ ಪರಿಸರ, ಉತ್ತಮ ಭೂಮಿಯ ಜೊತೆಗೆ ಉತ್ತಮ ಭವಿಷ್ಯತ್ತನ್ನು ಸಹ ಹಸ್ತಾಂತರಿಸುವ ಸುಯೋಗವನ್ನು ಪಡೆಯಬಲ್ಲವರಾಗಿರುತ್ತೇವೆ. ಪ್ರತಿ ವ್ಯಕ್ತಿಯೂ ತನ್ನ ಜೀವನದಲ್ಲಿ ಶುದ್ಧತೆ, ಶಿಸ್ತಿನ ಬಳಕೆ, ಮತ್ತು ನೈತಿಕ ಉಪಭೋಗ ರೂಢಿಸಿಕೊಂಡರೆ ಅದು ನೇರವಾಗಿ ರಾಷ್ಟ್ರದ ಶಕ್ತಿಯನ್ನು ಬಲಪಡಿಸುತ್ತದೆ. ಒಬ್ಬ ನಾಗರಿಕನ ಚಟುವಟಿಕೆಯು ರಾಷ್ಟ್ರದ ಭವಿಷ್ಯವನ್ನು ನಿರ್ಮಿಸುತ್ತದೆ ಎಂಬ ನಂಬಿಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಕೃತಿಯ ಹೃದಯದಲ್ಲಿದೆ. ಒಂದು ಸುಸ್ಥಿರ, ಸಹಜ ಮತ್ತು ನೈತಿಕ ಜೀವನಶೈಲಿ ನಮ್ಮ ಭಾರತೀಯ ಸಂಸ್ಕೃತಿಯ ಆಧುನಿಕ ರೂಪವಾಗಿದೆ. ಎಷ್ಟೋ ವಿದೇಶಿಗರು, ಕ್ರಿಕೆಟ್, ಸಿನಿಮಾ, ಕೈಗಾರಿಕಾ ಕ್ಷೇತ್ರಗಳಲ್ಲಿನ ದಿಗ್ಗಜರು ಭಾರತಕ್ಕೆ ಬಂದು, ಇಲ್ಲಿಯೇ ನೆಲೆಸಿ, ಇಲ್ಲಿನ ಆಚಾರ ವಿಚಾರಗಳನ್ನು ಅನುಸರಿಸುತ್ತಿದ್ದಾರೆ. ಕೆಲ ವಿದೇಶಿಗರು ಇಲ್ಲಿಗೆ ಬಂದು ಭಾರತೀಯ ಶೈಲಿಯಂತೆ ಮದುವೆಯಾಗಿ ತೆರಳುವ ಉದಾಹರಣೆಗಳು ಈಗ ಹೆಚ್ಚಾಗಿವೆ.

ಇಲ್ಲಿನ ಜೀವನ ಪದ್ಧತಿಗೆ ಮಾರು ಹೋಗದಿರುವವರೇ ಇಲ್ಲವೆಂಬಂತೆ ಸರಳತೆಯಿಂದ, ನಿಸರ್ಗದೊಂದಿಗೆ ನಂಟು ಹೊಂದಿರುವ ಸುಸ್ಥಿರ ಜೀವನಶೈಲಿಯು ಭಾರತೀಯ ಸಂಸ್ಕೃತಿಯಲ್ಲಿ ಎಷ್ಟೋ ಶತಮಾನಗಳಿಂದ ಆಚರಿಸುತ್ತ ಬಂದಿರುವಂಥದ್ದಾಗಿದೆ. ಈ ಸಂಸ್ಕೃತಿಯು ಪ್ರಪಂಚದಾದ್ಯಂತ ಇಂದು ಪ್ರಭಾವ ಬೀರುತ್ತಿದೆ. ಇದಕ್ಕೆ ಪೂರಕವಾಗಿ, ಆಧುನಿಕ ವಿಜ್ಞಾನವೂ ಸುಸ್ಥಿರತೆ ಬದುಕಿಗೆ ಪ್ರೇರೇಪಿಸುತ್ತಿದೆ. ಹಸಿರು ಭಾರತ ನಿರ್ಮಿಸುವ ಮೂಲಕ ಶಕ್ತಿಯುತ ಭಾರತ ನಿರ್ಮಾಣದತ್ತ ನಾವೆಲ್ಲರೂ ಹೆಜ್ಜೆ ಇಡೋಣ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:10, Issue:302

ಸಮಾಚಾರ ಸಣ್ಣದಲ್ಲ

ಟರ್ಕಿ ಸೇನೆ ವಿಮಾನ ಪತನ, 20 ಜನ ಬಲಿ



ಅಂಕಾರಾ: ಟರ್ಕಿಯಲ್ಲಿ ಸೇನಾಪಡೆಯ ಸರಕು ಸಾಗಣೆ ವಿಮಾನ 'ಸಿ-130' ಅಜರ್‌ಬೈಜಾನ್ ಗಡಿಗೆ ಸಮೀಪದಲ್ಲಿರುವ ಜಾರ್ಜಿಯಾದ ಸಿಂಘ್ನಾಗಿ ಎಂಬಲ್ಲಿ ಪತನವಾಗಿದೆ. ಪರಿಣಾಮ ವಿಮಾನದಲ್ಲಿದ್ದ ಎಲ್ಲಾ 20 ಮಂದಿಯೂ ಸಾವಿಗೀಡಾಗಿದ್ದಾರೆ.ವಿಮಾನ ಅಜರ್ ಬೈಜಾನ್‌ನಿಂದ ಟರ್ಕಿಯತ್ತ ಸಾಗುತ್ತಿದ್ದಾಗಲೇ ಮಂಗಳವಾರ ಜಾರ್ಜಿಯಾ ಗಡಿ ಭಾಗದಿಂದ 5 ಕಿಮೀ ದೂರದಲ್ಲಿದ್ದಾಗ ಅಪಘಾತಕ್ಕೀಡಾಗಿದೆ. ಜಾರ್ಜಿಯಾ ವಾಯುಪ್ರದೇಶವನ್ನು ಪ್ರವೇಶಿಸಿದ ತಕ್ಷಣದಲ್ಲೇ ವಿಮಾನದ ಸಂಪರ್ಕ ಕಡಿತಗೊಂಡಿದೆ ಎಂದು ಟರ್ಕಿ ರಕ್ಷಣಾ ಸಚಿವಾಲಯ ಹೇಳಿದೆ. ಅಜರ್‌ಬೈಜಾನ್ ಮತ್ತು ಜಾರ್ಜಿಯಾ ಸರಕಾರ ಗಳು ಕೂಡಾ ಟರ್ಕಿಯ ಸೇನಾಪಡೆ ವಿಮಾನ 'ಸಿ-130' ಪತನವಾಗಿರುವುದನ್ನು ದೃಢಪಡಿಸಿವೆ.

ಮನೆಗೆ ಮರಳಿದ ನಟ ಧರ್ಮೇಂದ್ರ

ಮುಂಬೈ: ಅನಾರೋಗ್ಯದ ಕಾರಣ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿದ್ದ ಬಾಲಿವುಡ್‌ನ ಹಿರಿಯ

ನಟ ಧರ್ಮೇಂದ್ರ(89) ಮಂಗಳವಾರ ಬೆಳಗ್ಗೆ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಮನೆಗೆ ತೆರಳಿದ್ದಾರೆ. ಸೋಮವಾರ ಉಸಿರಾಟದಲ್ಲಿ ಸಮಸ್ಯೆ ಉಂಟಾಗಿದ್ದರಿಂದ ಅವರನ್ನು ಬ್ರೀಚ್‌ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರನ್ನು 'ಐಸಿಯು'ನಲ್ಲಿರಿಸಿ ವೆಂಟಿಲೇಟರ್ ನೆರವಿನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. 2ನೇ ಪತ್ನಿ, ಖ್ಯಾತ ನಟಿ-ರಾಜಕಾರಣಿ ಹೇಮಾಮಾಲಿನಿ, ಪುತ್ರಿ ಇಶಾ ಡಿಯೋಲ್, ಪುತ್ರರಾದ ನಟ ಸನ್ನಿ ದೇವಲ್ ಮತ್ತು ಬಾಬಿ ದೇವಲ್ ಕೂಡಾ ಆಸ್ಪತ್ರೆಯಲ್ಲಿ ಧರ್ಮೇಂದ್ರ ಅವರ ಜತೆಗಿದ್ದರು. ಧರ್ಮೇಂದ್ರ ಅವರ ಆರೋಗ್ಯದಲ್ಲಿ ಚೇತರಿಕೆಯಾಗಿದ್ದು, ಮನೆಯಲ್ಲಿಯೇ ಅವರ ಆರೈಕೆ ಮಾಡುವುದಾಗಿ ಕುಟುಂಬವರ್ಗದವರು ತಿಳಿಸಿದ್ದಾರೆ.ಧರ್ಮೇಂದ್ರ ಅವರು ಪೂರ್ಣ ಚೇತರಿಸಿಕೊಂಡ ಬಳಿಕವಷ್ಟೇ ಅವರನ್ನು ಡಿಸ್‌ಚಾರ್ಜ್ ಮಾಡಿರುವುದಾಗಿ ಬ್ರೀಚ್‌ಕ್ಯಾಂಡಿ ಆಸ್ಪತ್ರೆ ವೈದ್ಯರು ಸುದ್ದಿಸಂಸ್ಥೆಗೆ ಸ್ಪಷ್ಟಪಡಿಸಿದ್ದಾರೆ

ಅಸ್ಸಾಂನಲ್ಲಿ 3.6 ತೀವ್ರತೆ ಭೂಕಂಪ

ದಿಮಾಹಸಾವ್: ಅಸ್ಸಾಂ ರಾಜ್ಯದ ದಿಮಾಹಸಾವ್ ಜಿಲ್ಲೆಯಲ್ಲಿ ಬುಧವಾರ ಮಧ್ಯಾಹ್ನ 12.40ರ ವೇಳೆ ರಿಕ್ಟರ್ ಮಾಪಕದಲ್ಲಿ 3.6ರಷ್ಟು ತೀವ್ರತೆಯ ಭೂಕಂಪವಾಗಿದೆ. ಕಂಪನದ ಕೇಂದ್ರ ಬಿಂದು 30 ಕಿಮೀ ಆಳದಲ್ಲಿದ್ದರಿಂದ ಹೆಚ್ಚು ತೀವ್ರತೆಯ ಪರಿಣಾಮಗಳು ಭೂಮಿಯ ಮೇಲ್ಮೈನಲ್ಲಿ ಕಾಣಬಂದಿಲ್ಲ. ಯಾವುದೇ ಸಾವು-ನೋವು ವರದಿಯಾಗಿಲ್ಲ.

ಪ್ರಾಣಿಜನ್ಯ ಸೋಂಕು ತಡೆಗಾಗಿ ಯೋಜನೆ

ದೆಹಲಿ: ಪ್ರಾಣಿ ಜನ್ಯ ಕಾಯಿಲೆಗಳು ಮನುಷ್ಯರಿಗೆ ಹರಡುವುದನ್ನು ತಡೆಯಲು ಹಾಗೂ ಪರಿಸರದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಬಗೆಯನ್ನು ಸಂಶೋಧಿಸಿ ಅಭಿವೃದ್ಧಿಪಡಿಸುವ ಸಲುವಾಗಿ ಕೇಂದ್ರ ಸರಕಾರ 'ನ್ಯಾಷನಲ್ ಒನ್ ಹೆಲ್ತ್ ಮಿಷನ್' ಆರಂಭಿಸಿದೆ. ಈ ವಿಶೇಷ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ 383 ಕೋಟಿ ರು.ಗಳ ಪ್ರತ್ಯೇಕ ನಿಧಿಯನ್ನೂ ಮೀಸಲಿರಿಸಿದೆ. ಈ ಯೋಜನೆಯಡಿ ಕೋವಿಡ್-19, ನಿಫಾ, ಸ್ಕ್ರಬ್ ಟೈಪಸ್, ಅವಿಯನ್ ಇನ್‌ಫ್ಲುಯೆಂಝಾ ಮೊದಲಾದ ಮಾರಣಾಂತಿಕ ಕಾಯಿಲೆಗಳು ಪ್ರಾಣಿಗಳಿಂದ ಮತ್ತು ಪರಿಸರದಿಂದ ಮಾನವರಿಗೆ ಹರಡುತ್ತಿವೆ. ಈ ರೋಗಗಳಿಗೆ ಸರಿಯಾದ ಚಿಕಿತ್ಸೆಯು ಸದ್ಯಕ್ಕೆ ಲಭ್ಯವಿಲ್ಲದೇ ಇರುವುದರಿಂದ ರೋಗ ಹರಡುವಿಕೆ ತಡೆಗೆ ಹೆಚ್ಚು ಗಮನ ನೀಡಬೇಕಿದೆ ಎಂಬ ಕಾರಣಕ್ಕಾಗಿಯೇ ಪ್ರಧಾನ ಮಂತ್ರಿಗಳ ಅಧೀನದಲ್ಲಿರುವ ಕೇಂದ್ರದ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ ಸಲಹಾ ಸಮಿತಿಯು ಈ ಹೊಸ ಯೋಜನೆ ಆರಂಭಿಸಿದೆ. ಈ ಯೋಜನೆಯ ಜಾರಿ ಹೊಣೆಗಾರಿಕೆಯನ್ನು 'ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್'(ಐಸಿಎಂಆರ್)ಗೆ ವಹಿಸಲಾಗಿದೆ.

ವಿರಾಮ
ಪ್ರತಿ ಭಾನುವಾರ

{ ತೇಜಸ್ವಿ ಯಾದವ್ } ಆರ್‌ಜೆಡಿ ನಾಯಕ

ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಮರಳಿ ಅಧಿಕಾರಕ್ಕೇರಲಿದೆ ಎಂಬ ಚುನಾವಣೋತ್ತರ ಸಮೀಕ್ಷೆಗಳೆಲ್ಲ ಸುಳ್ಳಿನಿಂದ ಕೂಡಿವೆ. ಈ ಸಮೀಕ್ಷೆಗಳನ್ನು ಬಿಜೆಪಿ ಉನ್ನತ ನಾಯಕರ ನಿರ್ದೇಶನದಡಿ ಊಹೆ ಮಾಡಿ ಮಾಡಲಾಗಿದೆ. ಮತದಾರರು ಮಹಾಘಟಬಂಧನ್‌ಗೇ ಮತ ನೀಡಿದ್ದಾರೆ. ನಮ್ಮ ಒಕ್ಕೂಟದ ಸರಕಾರ ನ.18ರಂದು ಪ್ರಮಾಣವಚನ ಸ್ವೀಕರಿಸಲಿದೆ.

ಧವೂಜ್‌ನ ಬಿಇ, ಮೆಡಿಕಲ್ ಕಾಲೇಜು-ಆಸ್ಪತ್ರೆ ಸಂಸ್ಥೆ | 76 ಎಕರೆಯಲ್ಲಿ 1997ರಲ್ಲಿ ಸ್ಥಾಪನೆ, 2014ಕ್ಕೆ ವಿಶ್ವವಿದ್ಯಾಲಯ ಸ್ಥಾನ

ಅಲ್ ಫಲಾಹ್ ವಿವಿ ಉಗ್ರರ ಕಾರಸ್ಥಾನವೇ?

ಫರೀದಾಬಾದ್: ದೆಹಲಿ ಕಾರ್ ಬಾಂಬ್ ಸ್ಫೋಟಕ್ಕೆ ಕಾರಣವಾದ ಡಾ.ಉಮರ್ ನಬಿ, ಫರೀದಾಬಾದ್‌ನ ಬಾಡಿಗೆ ಮನೆಯಲ್ಲಿ 2900 ಕಿಲೊ ಸ್ಫೋಟಕ ಪತ್ತೆ ಪ್ರಕರಣದ ಡಾ. ಮುಜಮ್ಮಿಲ್, ಆತನ ಸಹೋದ್ಯೋಗಿಗಳಾದ ಡಾ. ಆದಿಲ್ ಮತ್ತು ಡಾ. ಶಾಹೀನ್ ಮೂವರನ್ನೂ ಒಟ್ಟುಗೂಡಿಸಿರುವುದು ಧವೂಜ್ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಅಲ್ ಫಲಾಹ್ ವಿಶ್ವವಿದ್ಯಾಲಯ.

ಈಗ ಈ ವಿಶ್ವವಿದ್ಯಾಲಯದ ಪ್ರಯೋಗಾಲಯಗಳು, ಆಸ್ಪತ್ರೆ ಮತ್ತು ವಿದೇಶಿ ನಿಧಿಯ ಮೂಲದ ಬಗ್ಗೆ ಪ್ರಶ್ನೆಗಳು ಹುಟ್ಟಿಕೊಂಡಿವೆ. ಎನ್‌ಐಎ ತನಿಖೆ ಶುರುವಾಗಿದೆ.

ಇದೇ ವಿಶ್ವವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಸಹೋದ್ಯೋಗಿಗಳಾಗಿದ್ದ ಈ ನಾಲ್ವರೂ ಉಗ್ರರಲ್ಲಿ ಡಾ.ಮುಜಮ್ಮಿಲ್, ಡಾ.ಆದಿಲ್, ಡಾ.ಶಾಹೀನ್ ಬಂಧನವಾಗಿದೆ. ಆದರೆ, ದೆಹಲಿ ಸ್ಫೋಟದ ಸೂತ್ರಧಾರ, ಪ್ರಮುಖ ಆರೋಪಿ ಡಾ. ಉಮರ್ ನಬಿ ಕಾರು ಸ್ಫೋಟದಲ್ಲೇ ಮರಣ ಹೊಂದಿದನೇ ಅಥವಾ ಬೇರೆಡೆ ಅಡಗಿದ್ದಾನೆಯೇ? ಎಂಬುದು ಇನ್ನೂ ದೃಢಪಟ್ಟಿಲ್ಲ.

ಫರೀದಾಬಾದ್ ಜಿಲ್ಲೆಯ ಧವೂಜ್ ಗ್ರಾಮ ಮುಸ್ಲಿಂ ಬಹುಸಂಖ್ಯಾತ ಪ್ರದೇಶವಾಗಿದೆ. ಅಲ್ಲಿ 76 ಎಕರೆ ವಿಸ್ತೀರ್ಣದಲ್ಲಿ 1997ರಲ್ಲಿ ಸ್ಥಾಪಿಸಲಾದ ಅಲ್-ಫಲಾಹ್ ವಿಶ್ವವಿದ್ಯಾಲಯ ಈಗ 'ಭಯೋತ್ಪಾದಕರ' ಕಾರಣಕ್ಕೆ ಸುದ್ದಿಯ ಕೇಂದ್ರವಾಗಿದೆ.

2 ವರ್ಷಕ್ಕೂ ಹೆಚ್ಚು ಕಾಲದಿಂದ ನಾಲ್ವರು ವೈದ್ಯರು ಭಯೋತ್ಪಾದಕ ಸಂಚು ರೂಪಿಸುತ್ತಿದ್ದರೂ, 2900 ಕಿಲೊ ಸ್ಫೋಟಕ ಸಾಮಗ್ರಿಗಳನ್ನು ಸಂಗ್ರಹಿಸಿ ಟ್ಟುಕೊಂ ಡಿದ್ದರೂ ವಿಶ್ವವಿದ್ಯಾ ನಿಲಯ ಆಡಳಿತಕ್ಕಾಗಲೀ, ಬೇರೆ ಸಹೋದ್ಯೋಗಿಗಳಿಗಾಗಲೀ ತಿಳಿದಿರಲಿ ಲ್ಲವೇ ಎಂಬುದೇ ಈಗಿನ ದೊಡ್ಡ ಪ್ರಶ್ನೆಯಾಗಿದೆ.

ಅಲ್-ಫಲಾಹ್ ಪದದ ಅರ್ಥ ಅಲ್-ಫಲಾಹ್ ಎಂಬುದು ಅರೇಬಿಕ್ ಪದವಾಗಿದ್ದು, ಇದರ ಅರ್ಥ ಯಶಸ್ಸು, ವಿಮೋಚನೆ ಅಥವಾ ಮೋಕ್ಷ. ಇಸ್ಲಾಂನಲ್ಲಿ, ಅಲ್ಲಾಹನ ಮಾರ್ಗವನ್ನು ಅನುಸರಿಸುವ ಮೂಲಕ ಮೋಕ್ಷವನ್ನು ಪಡೆಯುವ ವ್ಯಕ್ತಿಯನ್ನು ವಿವರಿಸಲು ಈ ಪದವನ್ನು ಬಳಸಲಾಗುತ್ತದೆ.

ಅಲ್ ಫಲಾಹ್‌ನಲ್ಲಿ ಕಾಶ್ಮೀರದವರೇ ಅಧಿಕ

ಈ ವಿಶ್ವವಿದ್ಯಾಲಯದ ಮೂವರು ಎಂಬಿಬಿಎಸ್ ಪ್ರಾಧ್ಯಾಪಕರು ಮತ್ತು ಒಬ್ಬ ಸಹಾಯಕ ಪ್ರಾಧ್ಯಾಪಕ ಪಾಕ್ ಮೂಲದ ಜೈಶ್-ಎ-ಮೊಹಮ್ಮದ್ ಉಗ್ರ ಸಂಘಟನೆ ಜತೆ ಸಂಬಂಧ ಹೊಂದಿದ್ದಾರೆ ಎಂದು ತಿಳಿದುಬಂದಿದೆ. ಈ ವಿಶ್ವವಿದ್ಯಾಲಯದಲ್ಲಿರುವ ಶೇ. 40ರಷ್ಟು ವೈದ್ಯರು, ವಿದ್ಯಾರ್ಥಿಗಳು ಕಾಶ್ಮೀರದವರೇ ಆಗಿದ್ದಾರೆ ಎಂಬುದು ಉಲ್ಲೇಖಾರ್ಹ ಅಂಶವಾಗಿದೆ. ದೆಹಲಿ ಕೆಂಪುಕೋಟೆ ಬಳಿ ಐ20 ಕಾರು ಸ್ಫೋಟಿಸಿದ ಉಗ್ರ ಡಾ. ಉಮರ್ ಮೊಹಮ್ಮದ್ ನಬಿ ಇದೇ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಎಂಬುದು ಗಮನಾರ್ಹ. ದೆಹಲಿ ಕೆಂಪು ಕೋಟೆ ಬಳಿಯ ಸ್ಫೋಟಕ್ಕೆ ಸಂಬಂಧಿಸಿದಂತೆ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿನ ಅಧಿಕಾರಿಗಳು, ಉಪನ್ಯಾಸಕರು, ವಿದ್ಯಾರ್ಥಿಗಳು ಸೇರಿದಂತೆ 50ಕ್ಕೂ ಹೆಚ್ಚು ಜನರನ್ನು ದೆಹಲಿಯ ತನಿಖಾ ತಂಡದ ಅಧಿಕಾರಿಗಳು ಪ್ರಶ್ನಿಸಿದ್ದಾರೆ.

ಅಲ್ ಫಲಾಹ್ ವಸತಿ ಸಂಕೀರ್ಣ: ಮೌಲ್ವಿ ಸೆರೆ



ಫರಿದಾಬಾದ್: ಹರಿಯಾಣ ರಾಜ್ಯದ ಫರಿದಾಬಾದ್ ಜಿಲ್ಲೆಯ ಧವೂಜ್ ಗ್ರಾಮದಲ್ಲಿರುವ 'ಅಲ್ ಫಲಾಹ್ ವಿಶ್ವವಿದ್ಯಾ ಲಯ'ದಲ್ಲಿ ಉದ್ಯೋ ಗಿಗಳಾಗಿ ದ್ದುಕೊಂಡು ಪಾಕಿಸ್ತಾನದ ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆ ಜತೆಗೆ ಕೈಜೋಡಿಸಿ ಭಯೋತ್ಪಾದಕ ಚಟುವಟಿಕೆಗೆ ಸಂಚು ಹೂಡಿದ್ದ 'ವೈಟ್-ಕಾಲರ್ ಉಗ್ರ'ರ ಜಾಲಕ್ಕೆ ಸಂಬಂಧಿಸಿ ಹರಿಯಾಣದ ಮೇವಾತ್‌ನ ಒಬ್ಬ ಮುಸ್ಲಿಂ ಮೌಲ್ವಿಯನ್ನು ಜಮ್ಮು-ಕಾಶ್ಮೀರ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಂಧಿತನನ್ನು ಮೌಲ್ವಿ ಇಶ್ತಿಯಾಕ್ ಎಂದು ಗುರುತಿಸಲಾಗಿದೆ. ದೆಹಲಿ ಕಾರು ಸ್ಫೋಟ ಮತ್ತು ಫರಿದಾಬಾದ್‌ನಲ್ಲಿ 2900 ಕಿಲೋ ಸ್ಫೋಟಕ ವಶ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಂಧಿಸಲಾಗಿರುವ 9ನೇ ಪ್ರಮುಖ ಆರೋಪಿಯಾಗಿದ್ದಾನೆ.

ಇಶ್ತಿಯಾಕ್ ಅಲ್ ಫಲಾಹ್ ವಿಶ್ವವಿದ್ಯಾಲಯ ಸಂಕೀರ್ಣದಲ್ಲಿನ ಬಾಡಿಗೆ ವಸತಿಗೃಹದಲ್ಲಿ ವಾಸಿಸುತ್ತಿದ್ದ ಎಂಬುದು ತನಿಖೆ ವೇಳೆ ತಿಳಿದುಬಂದಿದೆ.

ಈತನ ಬಾಡಿಗೆ ನಿವಾಸದ ಮೇಲೆ ಬುಧವಾರ ದಾಳಿ ನಡೆಸಿದಾಗ ಅಮೋನಿಯಂ ನೈಟ್ರೇಟ್, ಪೊಟ್ಯಾಸಿಯಮ್ ಕ್ಲೋರೈಡ್ ಮತ್ತು ಸಲ್ಫರ್ ರಾಸಾಯನಿಕ ಸ್ಫೋಟಕ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ರಾಸಾಯನಿಕಗಳನ್ನು ಸ್ಫೋಟಕಗಳ ತಯಾರಿಕೆಗೆ ಬಳಸಲಾಗುತ್ತದೆ ಎಂಬುದು ಗಮನಾರ್ಹ. ಮೌಲ್ವಿ ಇಶ್ತಿಯಾಕ್‌ನನ್ನು ವಿಚಾರಣೆಗಾಗಿ ಶ್ರೀನಗರಕ್ಕೆ ಕರೆತರಲಾಗಿದೆ.

1997ರಲ್ಲಿ ಕಾರ್ಯಾರಂಭ

ಈ ವಿಶ್ವವಿದ್ಯಾನಿಲಯವನ್ನು ಹರಿಯಾಣ ಖಾಸಗಿ ವಿಶ್ವವಿದ್ಯಾಲಯಗಳ ಕಾಯ್ದೆಯಡಿಯಲ್ಲಿ ಹರಿಯಾಣ ಶಾಸಕಾಂಗ ಸಭೆ 1997 ರಲ್ಲಿ ಸ್ಥಾಪಿಸಿದೆ. ಅಲ್-ಫಲಾಹ್ ವಿಶ್ವವಿದ್ಯಾಲಯ ಮೊದಲಿಗೆ ಸಣ್ಣದಾಗಿ ಇಂಜಿನಿಯರಿಂಗ್ ಕಾಲೇಜಾಗಿ ಪ್ರಾರಂಭವಾಗಿದೆ. ಇದನ್ನು ದೆಹಲಿಯ ಓಖ್ಲಾದಲ್ಲಿರುವ ನೋಂದಾಯಿತ ಅಲ್-ಫಲಾಹ್ ಚಾರಿಟಬಲ್ ಟ್ರಸ್ಟ್ ನಿರ್ವಹಿಸುತ್ತಿದೆ. ಈ ಟ್ರಸ್ಟ್ ಅನ್ನು ಜವಾಹರ್ ಅಹ್ಮದ್ ಸಿದ್ದಿಕಿ ಮತ್ತು ವಿಶ್ವವಿದ್ಯಾಲಯದ ಕುಲಪತಿ ನೇತೃತ್ವ ವಹಿಸಿದ್ದಾರೆ. ಸದ್ಯ ಡಾ.ಭೂಪಿಂದರ್ ಕೌರ್ ಕುಲಪತಿಯಾಗಿದ್ದಾರೆ. 2014 ರಲ್ಲಿ, ಹರಿಯಾಣ ವಿಧಾನಸಭೆಯ ಕಾಯಿದೆಯ ಮೂಲಕ ಇದು ಪೂರ್ಣ ಪ್ರಮಾಣದ ವಿಶ್ವವಿದ್ಯಾಲ ಯವಾಯಿತು. ಇದನ್ನು 2015 ರಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಅನುಮೋದಿಸಿದೆ. 800ಕ್ಕೂ ಹೆಚ್ಚು ಹಾಸಿಗೆಗಳ ಸೂಪರ್ -ಸ್ಪೆಷಾಲಿಟಿ ಆಸ್ಪತ್ರೆಯಾಗಿ ಬೆಳೆದಿದೆ. ಪ್ರತಿ ವರ್ಷ ಅರಬ್ ದೇಶಗಳಿಂದ ನಿಧಿಸಂಗ್ರಹಣೆ ಮತ್ತು ದೇಣಿಗೆಗಳನ್ನು ಪಡೆಯಲಾಗುತ್ತದೆ.

ನಿಷೇಧಿತ ಜಮಾತೆ-ಇಸ್ಲಾಮಿ ವಿರುದ್ಧ ಬೃಹತ್ ಕಾರ್ಯಾಚರಣೆ

ಕುಲ್ಗಾಮ್‌ನ 200 ಕಡೆ ವ್ಯಾಪಕ ಶೋಧ ಕಾರ್ಯ

ಶ್ರೀನಗರ: ಕಾಶ್ಮೀರ ಮತ್ತು ಉತ್ತರ ಪ್ರದೇಶ ಮೂಲದ ನಾಲ್ವರು 'ಉಗ್ರ ವೈದ್ಯರು', ದೆಹಲಿಯ ಕೆಂಪುಕೋಟೆ ಬಳಿ ಲಾಲ್ ಖಿಲಾ ಮೆಟ್ರೊ ನಿಲ್ದಾಣದ ಬಳಿ ಹುಂಡೈ ಐ20 ಕಾರು ಸ್ಫೋಟಿಸಿ 12 ಜನರ ಸಾವಿಗೆ ಕಾರಣವಾಗಿರುವುದು ಮತ್ತು ಹರಿಯಾಣದ ಫರಿದಾಬಾದ್‌ನ ಬಾಡಿಗೆ ಮನೆಯಲ್ಲಿ 360 ಕಿಲೊ ಅಮೋನಿಯಂ ನೈಟ್ರೇಟ್ ಸೇರಿದಂತೆ 2900 ಕಿಲೊ ಸ್ಫೋಟಕ ಪದಾರ್ಥಗಳು, ಟೈಮರ್‌ಗಳು, ಎಕೆ-47 ಬಂದೂಕು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಸಂಗ್ರಹಿಸಿಟ್ಟು ದೊಡ್ಡ ಮಟ್ಟದ ವಿಧ್ವಂಸಕ ಕೃತ್ಯಕ್ಕೆ ಸಂಚು ಹೂಡಿದ್ದ ಹಿನ್ನೆಲೆಯಲ್ಲಿ ದೇಶದ ಗುಪ್ತಚರ ಮತ್ತು ಭದ್ರತಾ ಸಂಸ್ಥೆಗಳ ಕಣ್ಣೀಗ ಜಮ್ಮು-ಕಾಶ್ಮೀರದತ್ತಲೇ ನೆಟ್ಟಿದೆ.

ನಿಷೇಧಿತ 'ಜಮಾತೆ-ಇಸ್ಲಾಮಿ' (ಜೆಇಐ) ಉಗ್ರ ಸಂಘಟನೆ ವಿರುದ್ಧ ಜಮ್ಮು-ಕಾಶ್ಮೀರ ಪೊಲೀಸರು ಮತ್ತು ಕೇಂದ್ರದ ಭದ್ರತಾ ಸಂಸ್ಥೆಗಳ ಅಧಿಕಾರಿಗಳು ಕುಲ್ಗಾಮ್ ಜಿಲ್ಲೆಯಲ್ಲಿ ಬುಧವಾರ ಬೃಹತ್ ಕಾರ್ಯಾಚರಣೆ ನಡೆಸಿದ್ದಾರೆ. ಜೆಇಐಗೆ ಸೇರಿದ ಜಾಗಗಳೂ ಸೇರಿದಂತೆ ಕುಲ್ಗಾಮ್ ಜಿಲ್ಲೆಯ 200ಕ್ಕೂ ಹೆಚ್ಚು ಸ್ಥಳಗಳ ಮೇಲೆ ಸಂಘಟಿತ ದಾಳಿ ನಡೆಸಿ ವ್ಯಾಪಕ ಶೋಧ ನಡೆಸಿದರು. ಈ ವೇಳೆ ಡಿಜಿಟಲ್ ಸಾಧನಗಳು ಮತ್ತು ಸಂಶಯಾಸ್ಪದ ವಸ್ತುಗಳನ್ನು ವಶಪಡಿಸಿಕೊಂಡರು. ಇನ್ನೊಂದೆಡೆ, ಜಮ್ಮು-ಕಾಶ್ಮೀರ ಪೊಲೀಸರು, ಭಯೋತ್ಪಾದಕ ಕೃತ್ಯಗಳಿಗೆ ಯುವಕರನ್ನು ಉದ್ದೀಪಿಸುತ್ತಿದ್ದ ಮೂವರು ಮೌಲ್ವಿಗಳು, ಪಾಕ್ ಮೂಲದ ಉಗ್ರ ಸಂಘಟನೆ 'ಜೈಶ್ ಎ ಮೊಹಮ್ಮದ್'(ಜೆಇಎಂ)ಗೆ ಸೇರಿಕೊಂಡು ಕಾಶ್ಮೀರದಲ್ಲಿ 'ಆನ್ ಗ್ರೌಂಡ್ ವರ್ಕರ್ಸ್'(ಒಜಿಡಬ್ಲ್ಯು) ಆಗಿ ಕೆಲಸ ಮಾಡುತ್ತಿದ್ದವರನ್ನು ಬಂಧಿಸಿದ್ದಾರೆ. 'ಜಮಾತ್-ಎ-ಇಸ್ಲಾಮಿ' ಉಗ್ರ ಸಂಘಟನೆಗೆ ಕೇಂದ್ರ ಸರಕಾರ 2019ರಲ್ಲೇ ನಿಷೇಧ ಹೇರಿದೆ. ಆ ಬಳಿಕ 'ಜೆಇಐ'ನ ಅನೇಕ ಹಿರಿಯ ನಾಯಕರನ್ನು ಬಂಧಿಸಿ ಜೈಲಿನಲ್ಲಿರಿಸಲಾಗಿದೆ ಎಂಬುದು ಉಲ್ಲೇಖಾರ್ಹ.

ಜಮ್ಮು-ಕಾಶ್ಮೀರದ 200 ಸ್ಥಳಗಳಲ್ಲಿ ಬುಧವಾರ ವ್ಯಾಪಕ ಶೋಧ ನಡೆಸಿದ ಭದ್ರತಾ ಪಡೆ ಸಿಬ್ಬಂದಿ.

'ಜೆಇಐ', ಒಜಿಡಬ್ಲ್ಯು ವಿರುದ್ಧ ಕಾರ್ಯಾಚರಣೆ

ಕಳೆದ 4 ದಿನಗಳಲ್ಲಿ ಕುಲ್ಗಾಮ್ ಜಿಲ್ಲೆಯಲ್ಲಿ 'ಒಜಿಡಬ್ಲ್ಯು'ಗಳ ಮನೆಗಳು, ಈ ಹಿಂದೆ ಜಂಟಿ ಭದ್ರತಾ ಪಡೆಗಳು ಉಗ್ರರ ವಿರುದ್ಧ ಕಾರ್ಯಾಚರಣೆ ನಡೆಸಿದ ಸ್ಥಳಗಳು, ಈ ಹಿಂದೆ ಉಗ್ರರ ಅಡಗುತಾಣಗಳಾಗಿದ್ದ ಜಾಗಗಳು ಸೇರಿದಂತೆ 400ಕ್ಕೂ ಹೆಚ್ಚು ಕಡೆ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ಭಯೋತ್ಪಾದನೆಯನ್ನು ತಳಮಟ್ಟದಲ್ಲೇ ಹತ್ತಿಕ್ಕುವ ಕಾರ್ಯಾಚರಣೆಯ ಭಾಗವಾಗಿ ನಿಷೇಧಿತ 'ಜೆಇಐ'ನ ಸದಸ್ಯರು ಮತ್ತು ಸಹಚರರ ಮನೆಗಳು, ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ನಿಷೇಧಿತ ಜೆಇಐ ಸಂಘಟನೆ ಜತೆ ಸಂಬಂಧ ಹೊಂದಿದ್ದವರು, ಜೆಇಎಂನ 'ಒಜಿಡಬ್ಲ್ಯು'ಗಳು ಸೇರಿದಂತೆ 500ಕ್ಕೂ ಅಧಿಕ ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಕೆಲವರನ್ನು ಭಯೋತ್ಪಾದನಾ ನಿಗ್ರಹ ಕಾಯಿದೆಯಡಿ ಬಂಧಿಸಿ ಅನಂತನಾಗ್‌ನ ಜಿಲ್ಲಾ ಕಾರಾಗೃಹದಲ್ಲಿರಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಶ್ರೀನಗರದಲ್ಲಿ ಜೈಶೆ ಪರ ಭಿತ್ತಿಚಿತ್ರ ಅಂಟಿಸಿ ಸಿಕ್ಕಿಬಿದ್ದ

ಬಂಧಿತ ಡಾ.ಆದಿಲ್‌ಗೆ ಜೈಶೆ ಸಂಘಟನೆ ನಂಟು

ದೆಹಲಿ: ಶ್ರೀನಗರದಲ್ಲಿ ಅಕ್ಟೋಬರ್ 27ರಂದು ಜೈಶೆ-ಮೊಹಮ್ಮದ್ ಭಯೋತ್ಪಾದಕ ಸಂಘಟನೆಯನ್ನು ಬೆಂಬಲಿಸುವ ಪೋಸ್ಟರ್

ಗಳನ್ನು ಗೋಡೆಗಳಿಗೆ ಅಂಟಿಸಿದ ಕಾರಣಕ್ಕೆ ಮೊದಲಿಗೆ ಬಂಧನಕ್ಕೆ ಒಳಗಾದ ಕಾಶ್ಮೀರದ ವೈದ್ಯ ಡಾ.ಆದಿಲ್ ಅಹ್ಮದ್ ರಾಥರ್ ಓಂ ಪ್ರಥಮ ಎನ್ನುವಂತೆ ಫರಿದಾಬಾದ್ ಉಗ್ರರ ತಂಡದ ಬಗ್ಗೆ ಬಾಯಿ ಬಿಟ್ಟಿದ್ದ. ಈತ ನೀಡಿದ ಮಾಹಿತಿ ಯಿಂದಲೇ ಡಾ.ಮುಜಮ್ಮಿಲ್, ಡಾ.ಶಾಹೀನ್ ಬಂಧನಕ್ಕೆ ಅವಕಾಶವಾಯಿತು. ಅ.27ರ ರಾತ್ರಿ ಶ್ರೀನಗರದ ರೈನಾವರಿ ಮತ್ತು ಜಡಿಬಲ್ ಪ್ರದೇಶಗಳಲ್ಲಿನ ಗೋಡೆಗಳ ಮೇಲೆ ಜೈಶೆ--ಮೊಹಮ್ಮದ್ ಸಂಘಟನೆ ಯನ್ನು ಬೆಂಬಲಿಸುವ ಪೋಸ್ಟರ್‌ಗಳು ಕಾಣಿಸಿಕೊಂಡಿದ್ದವು. ಜಿಹಾದ್‌ಗೆ ಕರೆ ನೀಡುವ ಪೋಸ್ಟರ್ ಗಳು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಸ್ವೀಕರಿಸಿದ ಜಮ್ಮು-ಕಾಶ್ಮೀರ ಪೊಲೀಸರು ಸಿಸಿಟಿವಿ ಮತ್ತು ಮೊಬೈಲ್ ಡೇಟಾ ಆಧಾರ ತನಿಖೆ ನಡೆಸಿ ಮೆಡಿ ಕೇರ್ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ಡಾ.ಆದಿಲ್‌ನನ್ನು ನ.6 ರಂದು ಬಂಧಿಸಿದರು.

2019ರಲ್ಲಿ ಪುಲ್ವಾಮಾದಲ್ಲಿ ದಾಳಿ ನಡೆಸಿದ ಜೈಷ್-ಎ-ಮೊಹಮ್ಮದ್ ಮತ್ತು ಷರಿಯಾ ನಿಯಮ ಪ್ರತಿಪಾದಿಸುವ ಸ್ಥಳೀಯ ಶಾಖೆಯಾದ ಅನ್ಸರ್ ಘಜ್ವತ್-ಉಲ್-ಹಿಂದ್ ಸಂಘಟನೆಗಳ ಜತೆಗೆ ಈತ ಸಂಬಂಧ ಹೊಂದಿದ್ದಾನೆ. ಸಹರಾನ್‌ಪುರದಲ್ಲಿರುವ ಆಕ್ಸಿಸ್ ಬ್ಯಾಂಕ್ ಖಾತೆಯಿಂದ ಶ್ರೀನಗರದಲ್ಲಿರುವ ಸಹೋದರನ ಖಾತೆಗೆ 20 ಲಕ್ಷ ರು. ಹಣ ವರ್ಗಾಯಿಸಿದ್ದ. ಈ ಹಣವನ್ನು ಉಗ್ರ ಚಟುವಟಿಕೆ ನಡೆಸಲು ವರ್ಗಾವಣೆ ಮಾಡಲಾಗಿದೆಯೇ? ಎಂಬ ನಿಟ್ಟಿನಲ್ಲಿ ಈಗ ತನಿಖೆ ನಡೆಯುತ್ತಿದೆ.

ಹಿನ್ನೆಲೆ: ದಕ್ಷಿಣ ಕಾಶ್ಮೀರದ ಖಾಜಿಗುಂಡ್ ನಿವಾಸಿಯಾಗಿರುವ ಆದಿಲ್ ಅಹ್ಮದ್ ರಾಥರ್ 2024ರ ಅಕ್ಟೋಬರ್‌ವರೆಗೆ ಅನಂತನಾಗ್‌ನಲ್ಲಿರುವ ಸರಕಾರಿ ವೈದ್ಯ ಕಾಲೇಜಿನಲ್ಲಿ ಹಿರಿಯ ರೆಸಿಡೆಂಟ್ ಡಾಕ್ಟರ್ ಆಗಿದ್ದ. ಬಳಿಕ 2025ರ ಮಾರ್ಚ್‌ನಲ್ಲಿ ಉತ್ತರ ಪ್ರದೇಶದ ಸಹರಾನ್‌ಪುರಕ್ಕೆ ತೆರಳಿದ್ದ. ಮೊದಲು ವಿ-ಬ್ರಾಸ್ ಆಸ್ಪತ್ರೆಗೆ ಸೇರಿದ ನಂತರ ಪ್ರಸಿದ್ಧ ಮೆಡಿಕೇರ್ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದ. ಪೊಲೀಸ್ ದಾಖಲೆಗಳ ಪ್ರಕಾರ ಈತನಿಗೆ ಈ ಕೆಲಸಲ್ಲಿ ತಿಂಗಳಿಗೆ 5 ಲಕ್ಷ ರೂ. ಸಂಬಳ ಸಿಗುತ್ತಿತ್ತು. ಅಷ್ಟೇ ಅಲ್ಲದೇ ವಸತಿಗಾಗಿ 10 ಸಾವಿರ ರೂ. ಭತ್ಯೆ ಪ್ರತ್ಯೇಕವಾಗಿ ಸಿಗುತ್ತಿತ್ತು. ಬಾಪು ಬಿಹಾರ ಕಾಲೋನಿಯಲ್ಲಿ ಎರಡು ಕೊಠಡಿಗಳ ಮನೆಯಲ್ಲಿ ವಾಸವಿದ್ದ ಆದಿಲ್ ತಡರಾತ್ರಿ ಭೇಟಿ ನೀಡುವವರನ್ನು ಹೊರತು ಪಡಿಸಿ ನೆರೆಮನೆಯವರ ಜತೆ ಮಾತನಾಡುತ್ತಿರಲಿಲ್ಲ ಎನ್ನಲಾಗಿದೆ. ಸೆ.26ರಂದು ರಜೆ ಪಡೆದ ಆದಿಲ್ ಅ.4ರಂದು ಜಮ್ಮುವಿನ ವೈದ್ಯೆಯನ್ನು ಮದುವೆಯಾಗಿ ಸಹರಾನ್‌ಪುರಕ್ಕೆ ಮರಳಿದ್ದ.

ರೋಗಿ ಸಾವು ಕಾರಣಕ್ಕೆ ವಜಾಗೊಂಡಿದ್ದ ಉಮರ್

ದೆಹಲಿ: ದೆಹಲಿ ಕೆಂಪು ಕೋಟೆ ಬಳಿ ಐ 20 ಕಾರು ಸ್ಫೋಟಿಸಿದ ಪ್ರಮುಖ ಆರೋಪಿ ಡಾ.ಉಮರ್ ನಬಿ ಶ್ರೀನಗರದಲ್ಲಿ ಎಂಬಿಬಿಎಸ್ ಮತ್ತು ಎಂಡಿ ವ್ಯಾಸಂಗ ಮಾಡಿದ್ದ.



2023ರಲ್ಲಿ ಕಾಶ್ಮೀರದ ಅನಂತ ನಾಗ್ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದ. ಆದರೆ ನಿರ್ಲಕ್ಷ್ಯದ ಕಾರಣ ಒಂದು ಜೀವದ ಸಾವಿಗೆ ಕಾರಣವಾಗಿದ್ದ. ಆಗ ಕೆಲಸ ಕಳೆದುಕೊಂಡ. ಬಳಿ ಹರಿಯಾಣ ರಾಜ್ಯದ ಫರೀದಾಬಾದ್‌ನ ಧವೂಜ್ ಗ್ರಾಮದಲ್ಲಿನ ಅಲ್-ಪಲಾಹ್ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡ. ಅಲ್ಲಿದ್ದಾಗಲೇ ಡಾ.ಮುಜಮ್ಮಿಲ್, ಡಾ.ಆದಿಲ್, ಡಾ.ಶಾಹೀನ್‌ರನ್ನು ಸೇರಿಸಿಕೊಂಡು ದೊಡ್ಡ ಮಟ್ಟದಲ್ಲಿ ಭಯೋತ್ಮಾದಕ ದಾಳಿಗೆ ಸಂಚು ಹೂಡಿದ್ದ.

ಸಹ ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿ, ರೋಗಿಗಳು ಕೂಡ ಉಮರ್‌ನ ಅಸಭ್ಯ ವರ್ತನೆ ಹಾಗೂ ಅಜಾಗರೂಕ ಕೆಲಸ ವೈಖರಿ ಬಗ್ಗೆ ದೂರು ನೀಡಿದ್ದರು.ಉಮರ್ ಕೂಡ ಹೆಚ್ಚಿನ ಸಮಯ ಕೆಲಸಕ್ಕೆ ಗೈರಾಗಿರುತ್ತಿದ್ದ ಎಂದು ತನಿಖೆಯಿಂದ ತಿಳಿದುಬಂದಿದೆ.

ಉದ್ಘಾಟನೆ ಬೆನ್ನಿಗೇ ಕುಸಿದ ಚೀನಾ ಸೇತುವೆ

ಬೀಜಿಂಗ್: ಚೀನಾದಲ್ಲಿ ಇತ್ತೀಚೆಗಷ್ಟೇ ಉದ್ಘಾಟನೆಯಾಗಿದ್ದ ಬೃಹತ್ ಸೇತುವೆಯೊಂದು ಭೂಕುಸಿತದ ಕಾರಣದಿಂದಾಗಿ ಕುಸಿದುಬಿದ್ದಿದೆ.ನೈಋತ್ಯ ಚೀನಾದ ಸಿಚುವಾನ್ ಪ್ರಾಂತ್ಯದಲ್ಲಿ ಹಾಂಗ್‌ಕಿ ಸೇತುವೆ ಇತ್ತೀಚೆಗಷ್ಟೇ ಲೋಕಾರ್ಪಣೆಗೊಂಡಿತ್ತು. ಇದೀಗ ಕುಸಿದು ಬಿದ್ದಿದೆ. ಸೇತುವೆ ಕುಸಿಯುತ್ತಿರುವ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ.

ಈ ಸೇತುವೆಯು ಚೀನಾದ ಹೃದಯಭಾಗದ ನಗರಗಳನ್ನು ಟಿಬೆಟ್‌ಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯ ಭಾಗವಾಗಿತ್ತು. ಮಂಗಳವಾರ ಮಧ್ಯಾಹ್ನ ಭೂಕುಸಿತವಾದಾಗ ಸೇತುವೆ ಕುಸಿದಿದೆ. ಘಟನೆಯಲ್ಲಿ ಯಾವುದೇ ಸಾವುನೋವು ವರದಿಯಾಗಿಲ್ಲ.

ಸಿಚುವಾನ್ ರಸ್ತೆ ಸಂಪರ್ಕಿಸುವ ಈ ಹಾಂಗ್ಕಿ ಸೇತುವೆಯನ್ನು ವರ್ಷಾರಂಭದಲ್ಲಿ ಪೂರ್ಣಗೊಳಿಸಲಾಗಿತ್ತು. ಇತ್ತೀಚೆಗಷ್ಟೇ ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು.

ಗೆಲುವಿಗೆ ಮುನ್ನವೇ ಲಡ್ಡುಗೆ ಆರ್ಡರ್!

ಪಟನಾ: ಭಾರತೀಯ ಜನತಾ ಪಕ್ಷ(ಬಿಜೆಪಿ) ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ನಿರೀಕ್ಷೆಯಲ್ಲಿದೆ. ಚುನಾವಣೋತ್ತರ ಸಮೀಕ್ಷೆಗಳೂ ಎನ್‌ಡಿಎ ಮೈತ್ರಿಕೂಟದ ಭಾರೀ ಗೆಲುವಿನ ಸಾಧ್ಯತೆಯನ್ನು ಎತ್ತಿ ತೋರಿವೆ. ಶುಕ್ರವಾರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ. ಅದಕ್ಕೂ ಮುನ್ನವೇ ಬಿಜೆಪಿ ನಾಯಕರು ಒಟ್ಟು 501 ಕೆಜಿ ಲಡ್ಡು ಸಿಹಿ ಸಿದ್ಧಪಡಿಸುವುದಕ್ಕೆ ಆರ್ಡರ್ ಮಾಡಿದ್ದಾರೆ ಎಂದು ವರದಿಯಾಗಿದೆ.

1951ರ ನಂತರದಲ್ಲಿ ಬಿಹಾರದಲ್ಲಿ ಅತ್ಯಧಿಕ ಅಂದರೆ (2 ಹಂತಗಳ ಸರಾಸರಿ) ಶೇ. 66.91ರಷ್ಟು ಮತದಾನವಾಗಿದೆ. ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಎನ್‌ಡಿಎ ಸರಕಾರಕ್ಕೆ ಸ್ಪಷ್ಟ ಜನಾದೇಶ ಸಿಗಲಿದೆ ಎಂದು ಹೇಳಿವೆ. ಇದರಿಂದ ಉತ್ತೇಜಿತವಾಗಿರುವ ಕೇಸರಿ ಪಕ್ಷವು ಸಂಭ್ರಮಾಚರಣೆಗೆ ಸಿದ್ಧತೆ ಮಾಡಿಕೊಂಡಿದೆ. ಮತ ಎಣಿಕೆ ದಿನ ಹೋಳಿ, ದಸರಾ, ದೀಪಾವಳಿ ಆಚರಿಸಲಿದ್ದೇವೆ. ಬಿಹಾರ ಜನರು ಎನ್‌ಡಿಎ ಅಭಿವೃದ್ಧಿ ಕಾರ್ಯಗಳ ಪರವಾಗಿ ಮತ ಚಲಾಯಿಸಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತ ಕೃಷ್ಣ ಕುಮಾರ್ ಕಲ್ಲು ಸಂಭ್ರಮದಿಂದ ಹೇಳಿಕೊಂಡಿದ್ದಾರೆ. ಫಲಿತಾಂಶದ ದಿನ ಜನರಿಗೆ ವಿತರಿಸಲು ಪಕ್ಷದಿಂದಲೇ 501 ಕೆಜಿ ಲಡ್ಡು ಸಿಹಿಗೆ ಆರ್ಡರ್ ಮಾಡಲಾಗಿದೆ ಎಂದೂ ಅವರು ಹೇಳಿದ್ದಾರೆ.

ತ.ನಾಡಲ್ಲಿ ಎಸ್‌ಐಆರ್ ಅತ್ಯಗತ್ಯ: ಸಚಿವೆ ನಿರ್ಮಲಾ ಸೀತಾರಾಮನ್‌ಪ್ರತಿಪಾದನೆ

ಸಿಎಂ ಸ್ಟಾಲಿನ್ ಕ್ಷೇತ್ರದಲ್ಲೇ 4 ಸಾವಿರ ನಕಲಿ ಮತದಾರರು!

ಕೊಯಮತ್ತೂರು: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪ್ರತಿನಿಧಿಸುವ ಕೊಳತ್ತೂರು



ವಿಧಾನಸಭಾ ಕ್ಷೇತ್ರದಲ್ಲೇ 4,379 ನಕಲಿ ಮತದಾರರನ್ನು ಗುರುತಿಸಲಾಗಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮ ಲಾ ಸೀತಾರಾಮನ್ ಬುಧವಾರ ನೇರ ಆರೋಪ ಮಾಡಿದ್ದಾರೆ.

ಹಾಗಾ ಗಿಯೇ ರಾಜ್ಯದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರ ಣೆ'(ಎಸ್‌ಐಆರ್) ನಡೆಸಲಾಗುತ್ತಿದೆ ಎಂದಿದ್ದಾರೆ. ದೊಡ್ಡ ಸಂಖ್ಯೆಯ ನಕಲಿ ಮತದಾರರನ್ನು ಬಳಸಿ ಕೊಂಡೇ ಸ್ಟಾಲಿನ್ ಕೊಳ ತ್ತೂರು ಕ್ಷೇತ್ರದಲ್ಲಿ ಚುನಾವಣೆ ಗೆಲ್ಲುತ್ತಿದ್ದಾರೆ ಎಂದು ಹೇಳಿಕೊಳ್ಳ ಬಹುದಾಗಿದೆ. ಈ ನಕಲಿ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆಯಬೇಕಲ್ಲವೇ? ಎಂದೂ ಸಚಿವೆ ಪ್ರಶ್ನೆ ಮಾಡಿದ್ದಾರೆ. ಕೊಳತ್ತೂರು ಕ್ಷೇತ್ರದ ಬೂತ್ ಸಂಖ್ಯೆ 157ರಲ್ಲಿ ರಫಿವುಲ್ಲಾ ಎಂಬವನ ಹೆಸರು 3 ಸ್ಥಳಗಳಲ್ಲಿ 3 ಭಿನ್ನ ಎಪಿಕ್ ಸಂಖ್ಯೆಗಳಲ್ಲಿದೆ. ಇದೇ ರೀತಿ ಈ ಕ್ಷೇತ್ರದಲ್ಲೇ ನಕಲಿ ವಿಳಾಸ ನೀಡಿರುವ 9,133 ಮತದಾರರಿದ್ದಾರೆ ಎಂದರು.

ಬೂತ್ ಸಂಖ್ಯೆ 84ರ ಮನೆ ಸಂಖ್ಯೆ 11ರಲ್ಲೇ 30 ಮತದಾರರಿದ್ದಾರೆ. ವಿವಿಧ ಧರ್ಮ-ಜಾತಿಗೆ ಸೇರಿದ 62 ನಕಲಿ ಮತದಾರರು ಬೂತ್ ಸಂಖ್ಯೆ 187ರ ಮನೆ ಸಂಖ್ಯೆ 20ರಲ್ಲಿದ್ದಾರೆ.

ಬೂತ್ ಸಂಖ್ಯೆ 140ರ ಮನೆ ಸಂಖ್ಯೆ 10ರಲ್ಲಿ ಒಂದೇ ಮನೆಯಲ್ಲಿ ವಿವಿಧ ಧರ್ಮಗಳ 80 ಮತದಾರರ ಹೆಸರಿದೆ.

ಪರಸ್ಪರ ಸಂಬಂಧವೇ ಇಲ್ಲದ ಮಿಶ್ರ ಕುಟುಂಬಗಳ ಒಟ್ಟಾರೆ 5,964 ಮತದಾರರು ಕೊಳತ್ತೂರು ಕ್ಷೇತ್ರದಲ್ಲಿ ಒಂದೇ ವಿಳಾಸದಲ್ಲಿದ್ದಾರೆ. ಒಂದು ಕ್ಷೇತ್ರದಲ್ಲೇ ಇಷ್ಟು ನಕಲಿ ಮತದಾರರಿದ್ದರೆ ರಾಜ್ಯಾದ್ಯಂತ ಅದೆಷ್ಟು ನಕಲಿಗಳಿರಬಹುದು? ಎಂದು ಪ್ರಶ್ನಿಸಿದ ನಿರ್ಮಲಾ ಸೀತಾರಾಮನ್, ಈ ಅಕ್ರಮ ಹೆಸರುಗಳನ್ನು ತೆಗೆದುಹಾಕಿ ಮತಪಟ್ಟಿ ಶುದ್ಧೀಕರಿಸಬೇಕಲ್ಲವೇ? ಎಂದರು.

ಎಸ್‌ಐಆರ್ ಬಗ್ಗೆ ತಿಳಿಯದವರು!

'ಎಸ್‌ಐಆರ್' ಎಂಬುದೊಂದು 'ಪಿತೂರಿ' ಎಂಬ ಡಿಸಿಎಂ ಉದಯ ನಿಧಿ ಸ್ಟಾಲಿನ್ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಚಿವೆ ನಿರ್ಮಲಾ ಸೀತಾರಾಮನ್, 'ಎಸ್‌ಐಆರ್' ಎಂದರೇನು ಎಂಬುದೇ ಡಿಸಿಎಂಗೆ ತಿಳಿಯದು. ಏನೋ ಮಾತನಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.ಚುನಾವಣಾ ಆಯೋಗ ಪ್ರತಿ ಚುನಾವಣೆಗೂ ಮುನ್ನ 'ಎಸ್‌ಐಆರ್' ನಡೆಸಬೇಕೆಂದು ಸಂವಿಧಾನವೇ ಹೇಳುತ್ತದೆ. ಆದರೆ ಡಿಎಂಕೆ ಸಂವಿಧಾನದ ವಿರುದ್ಧವೇ ಪ್ರತಿಭಟಿಸುತ್ತಿದೆ ಎಂದು ಸಚಿವೆ ಟೀಕಿಸಿದರು.ರಾಜ್ಯದಲ್ಲಿ ಹಿಂದೆ 13 ಬಾರಿ ಎಸ್‌ಐಆರ್ ನಡೆದಿದೆ. ಆಗೆಲ್ಲಾ ಡಿಎಂಕೆ ವಿರೋಧಿಸಿಲ್ಲ. ಈಗ ಸರಕಾರದ ವೈಫಲ್ಯವನ್ನು ಜನರಿಂದ ಮರೆಮಾಡಲು ಮತ್ತು ಜನರ ಗಮನ ಬೇರೆಡೆ ಸೆಳೆಯಲು ಡಿಎಂಕೆ ನಾಯಕರು 'ಎಸ್‌ಐಆರ್' ವಿರೋಧಿಸುವ ನಾಟಕವಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಮತದಾರರ ಹಕ್ಕನ್ನು 'ಎಸ್‌ಐಆರ್' ಕಸಿಯಲ್ಲ. ಹಾಗೇನಾದರೂ ಆಗಿದ್ದು, ಅದಕ್ಕೆ ದಾಖಲೆಗಳಿದ್ದರೆ ಚುನಾವಣಾ ಆಯೋಗಕ್ಕೆ ನೀಡಲಿ, ಆಯೋಗ ಕ್ರಮ ಕೈಗೊಳ್ಳುತ್ತದೆ ಎಂದು ಸಚಿವೆ ಸ್ಪಷ್ಟಪಡಿಸಿದರು.

ಶುದ್ಧೀಕರಣ: ಚುನಾವಣಾ ಆಯೋಗ ಸದ್ಯ 9 ರಾಜ್ಯ-3 ಕೇಂದ್ರಾಡಳಿತ ಪ್ರದೇಶಗಳಲ್ಲಿ 'ಎಸ್‌ಐಆರ್' ಆರಂಭಿಸಿದೆ. ನಕಲಿ ಮತದಾರರ ಹೆಸರು ತೆಗೆದುಹಾಕಿ ಮತದಾರರ ಪಟ್ಟಿ ಶುದ್ಧೀಕರಿಸಲಿದೆ ಎಂದು ಸಚಿವೆ ಕೊಯಮತ್ತೂರಲ್ಲಿ ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದರು.

ಡಿಎಂಕೆ ಕಾರ್ಯಕರ್ತರ ಕೈಚಳಕ: ಪಿಎಂಕೆ ಆರೋಪ

ತಮಿಳುನಾಡಲ್ಲಿ ಸದ್ಯ ನಡೆಯುತ್ತಿರುವ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಸರಕಾರಿ ಅಧಿಕಾರಿಗಳು

ನಡೆಸಬೇಕಾದ ಕಾನೂನುಬದ್ಧ ಕಾರ್ಯ. ಆದರೆ, ಈ ಪ್ರಕ್ರಿಯೆಯಲ್ಲಿ ಡಿಎಂಕೆ ಸದಸ್ಯರೇ ನೇರ ಭಾಗಿಯಾಗಿದ್ದಾರೆ ಎಂದು ಪಟ್ಟಾಳಿ ಮಕ್ಕಳ್ ಕಚ್ಚಿ(ಪಿಎಂಕೆ) ಪಕ್ಷದ ನಾಯಕ ಅನ್ಬುಮಣಿ ರಾಮದಾಸ್ ಆರೋಪಿಸಿದ್ದಾರೆ. ಬೂತ್ ಮಟ್ಟದ ಅಧಿಕಾರಿಗಳಿಗೆ ಬದಲಾಗಿ 'ಡಿಎಂಕೆ' ಐಟಿ ವಿಭಾಗದ ಸದಸ್ಯರು, ಯುವ ಕಾರ್ಯಕರ್ತರು ಮತದಾರರ ಮನೆಗಳಿಗೇ ಭೇಟಿ ನೀಡಿ ಡಿಎಂಕೆ ಬೆಂಬಲಿಗರಿಗಷ್ಟೇ ಮತದಾರರ ಡೇಟಾ ಫಾರ್ಮ್ ವಿತರಿಸುತ್ತಿದ್ದಾರೆ ಎಂದು ಆರೋಪಿಸಿರುವ ಅನ್ಬುಮಣಿ, ಎಸ್‌ಐಆರ್ ನಿಷ್ಪಕ್ಷಪಾತ ಮೇಲ್ವಿಚಾರಣೆಗಾಗಿ ಬೇರೆ ರಾಜ್ಯಗಳ ಐಎಎಸ್ ಅಧಿಕಾರಿಗಳನ್ನು ವೀಕ್ಷಕರಾಗಿ ನೇಮಿಸಬೇಕು ಎಂದೂ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ರಾಜುನಾಯಕ ನಾಪತ್ತೆ

ಮೈಸೂರು: ಮೈಸೂರಿನ ಯರಗನಹಳ್ಳಿ ಬಡಾವಣೆ ನಿವಾಸಿ ರಾಜುನಾಯಕ (50) ನಾಪತ್ತೆಯಾಗಿದ್ದಾರೆ ಎಂದು ಅವರ ಮಗ ಚೇತನ್ ದೂರು ನೀಡಿದ್ದಾರೆ. ಈ ಕುರಿತು ನಗರದ ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿರುವ ಅವರು, ನನ್ನ ತಂದೆ ರಾಜುನಾಯಕ ಗಾರೆ ಕೆಲಸ ಮಾಡಿಕೊಂಡಿದ್ದು, ಅ.22ರಂದು ಬೆಳಗ್ಗೆ 8.30ರ ವೇಳೆಗೆ ಕೆಲಸಕ್ಕೆ ಹೋಗುತ್ತೇನೆ ಎಂದು ಮನೆಯಿಂದ ಹೋದವರು ಇದುವರೆವಿಗೂ ಬಂದಿಲ್ಲಎಂದು ತಿಳಿಸಿದ್ದಾರೆ. ಈ ಬಗ್ಗೆ ದೂರು ದಾಖಲಿಸಿಕೊಂಡಿರುವ ಪೊಲೀಸರು ರಾಜುನಾಯಕ ಅವರ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಠಾಣೆಯನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

ಮನೆಗೆ ನುಗ್ಗಿ ಕಳ್ಳತನಕ್ಕೆ ಯತ್ನಿಸಿದವನ ಬಂಧನ

ಮೈಸೂರು: ಮನೆಗೆ ನುಗ್ಗಿ ಕಳ್ಳತನ ಮಾಡಲು ಹೊಂಚು ಹಾಕುತ್ತಿದ್ದ ಕಳ್ಳ ಸಾರ್ವಜನಿಕರ ಕೈಗೆ ಸಿಕ್ಕಿಬಿದ್ದಿದ್ದಾನೆ. ನಂಜನಗೂಡಿನ ಎಂ.ಎಂ.ಬಡಾವಣೆಯಲ್ಲಿ ಘಟನೆ ನಡೆದಿದ್ದು, ಹುಲ್ಲಹಳ್ಳಿ ಸಮೀಪದ ನಂಜೀಪುರ ಗ್ರಾಮದ ಶಿವಪಾದ ಸಿಕ್ಕಿಬಿದ್ದ ಕಳ್ಳ. ರಾತ್ರಿ 9 ಗಂಟೆ ವೇಳೆ ವೀರಮಣಿ ಎಂಬುವರ ಮನೆ ಕಾಂಪೌಂಡ್ ಹಾರಿ ನುಗ್ಗಲು ಹೊಂಚು ಹಾಕುತ್ತಿದ್ದಾಗ ಗೃಹಿಣಿ ಸೆಲ್ವಿ ಕೂಗಾಡಿದ್ದಾರೆ. ಅಕ್ಕಪಕ್ಕದ ನಿವಾಸಿಗಳು ದೌಡಾಯಿಸಿ ಖದೀಮನನ್ನು ಹಿಡಿದು ಪೊಲೀಸರ ವಶಕ್ಕೆ ಕೊಟ್ಟಿದ್ದಾರೆ. ಇದು ಮೊದಲನೇ ಸಲ ಅಲ್ಲ, ಹಿಂದೆ ಒಂದು ಸಾರಿ ಬಂದು ಕುತ್ತಿಗೆಗೆ ಚಾಕು ಹಿಡಿದಿದ್ದ. ಎರಡನೇ ಬಾರಿ ಕಳ್ಳತನಕ್ಕೆ ಯತ್ನಿಸಿದ್ದಾನೆಂದು ಸೆಲ್ವಿ ಆರೋಪಿಸಿದ್ದಾರೆ.

ಪ್ರಾಯೋಜಕತ್ವದ ಸಮೀಕ್ಷೆ ತಡೆಯಿರಿ

ಮೈಸೂರು: ಪ್ರಜಾಪ್ರಭುತ್ವ ವ್ಯವಸ್ಥೆಯೇ ಈ ನೆಲದ ಅಸ್ಮಿತೆಯಾಗಿರುವ ಹೊತ್ತಿನಲ್ಲಿ ಕೆಲ ಖಾಸಗಿ ಸಂಸ್ಥೆಗಳು ಚುನಾವಣಾ ಪೂರ್ವದಲ್ಲಿ ಹಾಗೂ ನಂತರದಲ್ಲಿ ನಡೆಸುತ್ತಿರುವ ಸಮೀಕ್ಷೆ ಏಕಪಕ್ಷೀಯವಾಗಿವೆ ಎಂದು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ದೂರಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಾಧ್ಯಮಗಳ ಹೆಸರಿನಲ್ಲಿ ಕೆಲ ಖಾಸಗಿ ಸಂಸ್ಥೆಗಳು ನಡೆಸುತ್ತಿರುವ ಸಮೀಕ್ಷೆ ಚುನಾವಣಾ ಹೊಸ್ತಿಲಲ್ಲಿ ಸಾರ್ವಜನಿಕರನ್ನು ದಾರಿ ತಪ್ಪಿಸುವ ಹುನ್ನಾರವಾಗಿದೆ ಎಂದು ಆರೋಪಿಸಿದ್ದಾರೆ.ಒಬ್ಬ ವ್ಯಕ್ತಿ ಹಾಗೂ ಒಂದು ಪಕ್ಷದ ಪರ ಬಿಂಬಿತವಾಗುವ ಇತ್ತೀಚಿನ ಸಮೀಕ್ಷೆಗಳು ದೃಢೀಕರಿಸಿದ್ದು, ಕೇಂದ್ರ ಚುನಾವಣಾ ಆಯೋಗ ಈ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಬಿಹಾರ ಚುನಾವಣಾ ವಿಷಯದಲ್ಲೂ ಸಮೀಕ್ಷೆ ನಡೆದ ಸಂಸ್ಥೆಗಳು ಒಂದು ಪಕ್ಷದ ಪರವಾಗಿ ಫಲಿತಾಂಶ ಬರಲಿದೆ ಎಂದು ಹೇಳುವ ಮುಖೇನ ಸಾರ್ವಜನಿಕರ ಮನಸ್ಥಿತಿಯ ಮೇಲೆ ಸವಾರಿ ಮಾಡುವ ಕೆಲಸವನ್ನು ಮಾಡುತ್ತಿದ್ದುಈ ಕುರಿತು ಕೇಂದ್ರ ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಶಿವಶಂಕರ್‌ಗೆ ಪಿಎಚ್.ಡಿ

ಮೈಸೂರು: ಡಾ. ಯಶೋಧಾ ಬಿ.ಎನ್. ಅವರ ಮಾರ್ಗದರ್ಶನದಲ್ಲಿ ಜಿ. ಶಿವಶಂಕರ್‌ಅವರು 'ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್ಶಿಪ್ ಇನ್ ಸಾಲಿಡ್ ವೇಸ್ಟ್ ಮ್ಯಾನೇಜ್ಮೆಂಟ್ ಇನ್ ಕರ್ನಾಟಕ ವಿತ್ ಸ್ಪೆಷಲ್ ರೆಫರೆನ್ಸ್ ಟು ಮೈಸೂರು ಸಿಟಿ' ಎಂಬ ವಿಷಯದಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್ಡಿ ಪದವಿಗೆ ಅಂಗೀಕರಿಸಿದೆ.

ಮೃತದೇಹ ಪತ್ತೆ ನಿರ್ಲಕ್ಷ್ಯ: ಪ್ರತಿಭಟನೆ

ಚಾಮರಾಜನಗರ: ಸುವರ್ಣಾವತಿ ಜಲಾಶಯದಲ್ಲಿ ಮೀನು ಹಿಡಿಯಲು ಹೋಗಿ ನೀರಿನಲ್ಲಿ ಮುಳುಗಿದ್ದ ಯುವಕನ ಮೃತದೇಹವನ್ನು ಪತ್ತೆ ಮಾಡದ ಹಿನ್ನೆಲೆಯಲ್ಲಿ ಬುಧವಾರ ಅಟ್ಟುಗೂಳಿಪುರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ತಾಲೂಕಿನ ಅಟ್ಟುಗೂಳಿಪುರ ಗ್ರಾಮದ ಸಮೀಪದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಟೋಲ್ ಗೇಟ್ ಮುಂಭಾಗ ಜಮಾಯಿಸಿರುವ ಪ್ರತಿಭಟನಾಕಾರರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಪೊಲೀಸ್ ಇಲಾಖೆ ಮತ್ತು ಅಗ್ನಿಶಾಮಕ ದಳ ಸಿಬ್ಬಂದಿ 2 ದಿನವಾದರೂ ಮೃತದೇಹವನ್ನು ಹುಡುಕಲು ಆಗಿಲ್ಲ. ಅಧಿಕಾರಿಗಳು ಅಗತ್ಯವಾದ ಬೋಟ್ ಮತ್ತು ಇನ್ನಿತರೆ ಸಲಕರಣೆಗಳನ್ನು ಬಳಸದೇ ನಿರ್ಲಕ್ಷ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಟ್ಟುಗೂಳಿಪುರ ಗ್ರಾಮದ ನಿವಾಸಿ ಶಿವಸ್ವಾಮಿ(24) ಸೋಮವಾರ ರಾತ್ರಿ ಸುವರ್ಣಾವತಿ ಜಲಾಶಯದ ಹಿನ್ನೀರಿನಲ್ಲಿ ಮೀನು ಹಿಡಿಯುವ ಸಲುವಾಗಿ ತೆಪದಲ್ಲಿ ತೆರಳಿದ್ದಾಗ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದನು.

ವಿರಾಮ
ಪ್ರತಿ ಭಾನುವಾರ

{ ಸುನೀಲ್ ಕುಮಾರ್ } ಶಾಸಕ

ಕಾಂಗ್ರೆಸ್ ಈ ಅಕ್ರಮ ಗೋಹತ್ಯೆ ದಂಧೆಯ ಹಣವನ್ನು ಚುನಾವಣೆಗೆ ಬಳಸುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇದೆ ಎಂಬ ಕಾರಣದಿಂದ ಯಾವುದೇ ಭಯವಿಲ್ಲದೆ ದುಷ್ಕರ್ಮಿಗಳು ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇದೇ ಕಾರಣದಿಂದ ಮನೆಮನೆಗಳಲ್ಲಿ ಗೋ ಕಳ್ಳತನ, ಗೋವಧೆ ಹಾಗೂ ಪ್ರಾಣಿ ವಧೆ ಎಗ್ಗಿಲ್ಲದೇ ನಡೆಯುತ್ತಿದೆ.

ಕೆಡಿಪಿ ಸಭೆ | ಕುಡಿಯುವ ನೀರಿನ ಸಮಸ್ಯೆಗೆ ಕ್ರಮವಹಿಸಿ : ಸಚಿವ ಕೆ. ವೆಂಕಟೇಶ್ ಸೂಚನೆ

ಶಿಥಿಲಾವಸ್ಥೆಯ ಶಾಲಾ ಕಟ್ಟಡಗಳ ಪಟ್ಟಿ ಸಲ್ಲಿಸಿ

ಚಾಮರಾಜನಗರ: ಜಿಲ್ಲೆಯ ಯಾವುದೇ ಭಾಗದಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ಕ್ರಮ ವಹಿಸಲು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಸೂಚನೆ ನೀಡಿದರು.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆ ಇರುವ ಪಂಚಾಯಿತಿಗಳನ್ನು ಗುರುತಿಸಬೇಕು. ಎಲ್ಲೆಲ್ಲಿ ನೀರಿನ ಸಮಸ್ಯೆ ಕಂಡುಬರುವುದೋ ಅಲ್ಲಿನ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳ ಜೊತೆಗೆ ಸಂಪರ್ಕ ಸಾಧಿಸಬೇಕು. ಟ್ಯಾಂಕರ್‌ಮೂಲಕ ಕುಡಿಯುವ ನೀರು ಸರಬರಾಜು ಮಾಡಿ ಸಮಸ್ಯೆ ನಿಭಾಯಿಸಲು ಮುಂದಾಗುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಶಾಲೆಗಳ ಕಟ್ಟಡಗಳು ಸುಸ್ಥಿತಿಯಲ್ಲಿರುವ ಬಗ್ಗೆ ಅಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ದುರಸ್ತಿ ಬೇಕಿರುವ ಶಾಲಾ ಕಟ್ಟಡ ಪಟ್ಟಿ ಮಾಡಬೇಕು. ಶಿಥಿಲಾವಸ್ಥೆ ತಲುಪಿದ್ದರೆ ಹೊಸ ಶಾಲಾಕಟ್ಟಡಗಳಿಗೆ ಪ್ರಸ್ತಾವನೆ ಸಲ್ಲಿಸಬೇಕು. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದರೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರಲು ಅವಶ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ನಗರದ ಜಿಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೆದ್ದಾರಿ ಕಾಮಗಾರಿಗೆ ಭೂ ಸ್ವಾಧೀನ ಸಂಬಂಧ ಬದನಗುಪ್ಪೆ ಗ್ರಾಮದಲ್ಲಿ ಪ್ರತಿ ಗುಂಟೆಗೆ 7 ಲಕ್ಷ, ಬದನಗುಪ್ಪೆ ಪಕ್ಕದಲ್ಲಿರುವ ಮುತ್ತಿಗೆ ಗ್ರಾಮದಲ್ಲಿ ಗುಂಟೆಗೆ 1 ಲಕ್ಷ ನಿಗದಿಪಡಿಸಿರುವ ದರ ಕ್ರಮಬದ್ಧವಾಗಿಲ್ಲದಿರುವ ಬಗ್ಗೆ ದೂರು ಬಂದಿದ್ದು, ಈ ಬಗ್ಗೆ ಹೆದ್ದಾರಿ, ಭೂ ದಾಖಲೆಗಳ ಅಧಿಕಾರಿಗಳು ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಭೂ ದರ ಪರಿಶೀಲಿಸಿ ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು. ಇದೇ ವೇಳೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಮಾತನಾಡಿ, ಜಿಲ್ಲೆಯಲ್ಲಿ ತೆರೆಯಲಾಗಿರುವ ಕರ್ನಾಟಕ ಪಬ್ಲಿಕ್ ಶಾಲೆಗಳ ಫಲಿತಾಂಶ ಉತ್ತಮವಾಗಿದೆ. ಜಿಲ್ಲೆಗೆ ಇನ್ನೂ ಹೆಚ್ಚಿನ ಪಬ್ಲಿಕ್ ಶಾಲೆಗಳ ಅವಶ್ಯವಿದೆ. ಹಾಸ್ಟಲ್‌ಗಳ ಮೂಲಸೌಕರ್ಯಗಳ ಕೊರತೆ ಬಗೆಹರಿಸಬೇಕು. ದಿನನಿತ್ಯದ ಊಟದ ಮೆನು ಪ್ರದರ್ಶಿಸಬೇಕು. ಶನಿವಾರ, ಭಾನುವಾರ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಉಳಿಯುವಂತಾಗಬೇಕು ಎಂದರು.

ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ವಿಧಾನ ಪರಿಷತ್ ಶಾಸಕರಾದ ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಅಧಿಕಾರೇತರ ಕೆ.ಡಿ.ಪಿ ಸದಸ್ಯರಾದ ಸೈಯದ್ ಮುಸ್ಸೆಯೀಜ್, ಎಂ. ಶಂಕರಪ್ಪ, ಗ್ರಾಮೀಣ ಬ್ಯಾಂಕ್ ನಿರ್ದೇಶಕ ಎಂ. ಮಹದೇವಣ್ಣ, ಜಿಪಂ ಸಿಇಒ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಡೈರಿಯೊಂದಿಗೆ ಕೆಡಿಪಿ ಸಭೆಗೆ ಬನ್ನಿ ..!

ಅಧಿಕಾರಿಗಳು ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕು. ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಕ್ಷೇತ್ರ ಪ್ರವಾಸ ಮಾಡಬೇಕು. ಮುಂದಿನ ಸಭೆಗೆ (ಡೈರಿ) ಕಡ್ಡಾಯವಾಗಿ ದಿನಚರಿಯೊಂದಿಗೆ ಸಭೆಗೆ ಹಾಜರಾಗುವಂತೆ ಸಚಿವ ಕೆ. ವೆಂಕಟೇಶ ಸೂಚಿಸಿದರು.

ನ.14ರಿಂದ ಸಹಕಾರ ಸಪ್ತಾಹ

ಮಡಿಕೇರಿ: ಕೊಡಗು ಜಿಲ್ಲಾ ಸಹಕಾರ ಯೂನಿಯನ್ ವತಿಯಿಂದ ಜಿಲ್ಲೆಯ ವಿವಿಧ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಇದೇ ನ.14 ರಿಂದ 20ರವರೆಗೆ ಸಹಕಾರ ಸಪ್ತಾಹವನ್ನು ಆಯೋಜಿಸಲಾಗಿದೆ ಎಂದು ಯೂನಿಯನ್ ಜಿಲ್ಲಾಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ ಅವರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರ ಸಪ್ತಾಹದ ಉದ್ಘಾಟನಾ ಸಮಾರಂಭ ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನ.14 ರಂದು ನಡೆಯಲಿದ್ದು, ಸಮಾರೋಪ ಸಮಾರಂಭ ನ.20 ರಂದು ಮಡಿಕೇರಿಯ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ 'ಉನ್ನತಿ ಭವನ'ದಲ್ಲಿ ನಡೆಯಲಿದೆ ಎಂದು ಹೇಳಿದರು.

ಪ್ರಶಸ್ತಿ ಪ್ರದಾನ :

ಮಡಿಕೇರಿಯಲ್ಲಿ ನಡೆಯುವ ಸಮಾರೋಪ ಸಮಾರಂಭದಲ್ಲಿ 'ಕೊಡಗು ಸಹಕಾರ ರತ್ನ' ಪ್ರಶಸ್ತಿಯನ್ನು ಪೊನ್ನಂಪೇಟೆಯ ಹಿರಿಯ ಸಹಕಾರಿಗಳಾದ ಚಿರಿಯಂಡ ಕೆ.ಉತ್ತಪ್ಪಗೆ ಪ್ರದಾನ ಮಾಡಲಾಗುತ್ತದೆ. ಶ್ರೇಷ್ಠ ಸಹಕಾರಿ ಪ್ರಶಸ್ತಿ ಈ ಬಾರಿ ಸೋಮವಾರಪೇಟೆಯ ಶುಂಠಿ ಗ್ರಾಮದ ಎಚ್.ಎಸ್.ಮುದ್ದಪ್ಪ, ಅರುವತ್ತೊಕ್ಲು ಗ್ರಾಮದ ತಳೂರು ಎ.ಕಿಶೋರ್‌ಕುಮಾರ್, ಶನಿವಾರಸಂತೆಯ ದೇವಾಂಬಿಕ ಮಹೇಶ್ ಅವರಿಗೆ ಪ್ರದಾನ ಮಾಡಲಾಗುತ್ತದೆ. ಇದರೊಂದಿಗೆ ಉತ್ತಮ ಸಹಕಾರಿ ಸಿಬ್ಬಂದಿ ಪ್ರಶಸ್ತಿಯನ್ನು ಆಲೆಮಾಡ ಕಾವೇರಮ್ಮರಿಗೆ ಪ್ರದಾನ ಮಾಡಲಾಗುತ್ತದೆ ಎಂದರು.

14 ರಂದು ಉದ್ಘಾಟನೆ ಜೊತೆ ವಸ್ತು ಪ್ರದರ್ಶನ, ಆರೋಗ್ಯ ಶಿಬಿರ ಕೂಡ ಆಯೋಜಿಸಲಾಗಿದೆ. ನ.15 ರಂದು ಪಾಲಿಬೆಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ, ನ.16 ರಂದು ಸುಂಟಿಕೊಪ್ಪ ಸಹಕಾರ ಸಂಘದಲ್ಲಿ, ನ.17ರಂದು ಸೋಮವಾರಪೇಟೆ ಸಹಕಾರ ಸಂಘದಲ್ಲಿ, ನ.18ರಂದು ಕಾನೂರು ಸಹಕಾರ ಸಂಘದಲ್ಲಿ, ನ.19 ರಂದು ದೇವಣಗೇರಿ ಸಹಕಾರ ಸಮಘದಲ್ಲಿ ಸಪ್ತಾಹದ ಕಾರ್ಯಕ್ರಮಗಳು ನಡೆಯಲಿವೆಯೆಂದು ತಿಳಿಸಿದರು.

ತಲ್ತರೆಶೆಟ್ಟಳ್ಳಿಯಲ್ಲಿ ರಾಜ್ಯದ ದ್ವಿತೀಯ ಸಹಕಾರ ಸಂಘ:

ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ದಿವಂಗತ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರಿಂದ 1905ರ ಮೇ 8ರಂದು ಪ್ರಥಮ ಸಹಕಾರ ಸಂಘ ಸ್ಥಾಪಿಸಲ್ಪಟ್ಟಿತು. ನಂತರ ಅದೇ ತಿಂಗಳ 22ರಂದು ಸೋಮವಾರಪೇಟೆ ತಾಲೂಕಿನ ಶಾಂತಳ್ಳಿಯ ತಲ್ತರೆ ಶೆಟ್ಟಳ್ಳಿಯಲ್ಲಿ ಕೊಡಗು ಜಿಲ್ಲೆಯ ಪ್ರಥಮ ಸಹಕಾರ ಸಂಘ ಸ್ಥಾಪಿಸಲ್ಪಟ್ಟಿತೆಂದು ರಾಬಿನ್ ದೇವಯ್ಯ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾದ ಎಂ.ಎಲ್. ಶ್ಯಾಮಲಾ, ಬಲ್ಲಾರಂಡ ಮಣಿ ಉತ್ತಪ್ಪ, ಎಂ.ಟಿ.ಸುಬ್ಬಯ್ಯ, ವಿ.ಸಿ.ಅಮೃತ್, ಸಿಇಒ ಯೋಗೇಂದ್ರ ನಾಯಕ್ ಉಪಸ್ಥಿತರಿದ್ದರು.

ಭೀಮಾ ವ್ಯಾಪ್ತಿಗೆ ತಂಬಾಕು ಬೆಳೆ ಸೇರಿಸಿ

ಪಿರಿಯಾಪಟ್ಟಣ: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಫಸಲ್ ಬೀಮಾ ಯೋಜನೆ ವ್ಯಾಪ್ತಿಗೆ ತಂಬಾಕು ಬೆಳೆಯನ್ನು ಸೇರ್ಪಡೆ ಮಾಡಲು ಸಿದ್ದರಾಮಯ್ಯ ಅವರು ಮುಂದಾಗಬೇಕು ಎಂದು ಮೈಸೂರು-ಕೊಡಗು ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್‌ಸರ್ಕಾರವನ್ನು ಆಗ್ರಹಿಸಿದರು.

ತಾಲ್ಲೂಕಿನ ಕಗ್ಗುಂಡಿ ತಂಬಾಕು ಹರಾಜು ಮಾರುಕಟ್ಟೆಯ ಆವರಣದಲ್ಲಿ ಆಯೋಜಿಸಿದ್ದ ತಂಬಾಕು ಬೆಳೆಗಾರರ ಸಭೆಯಲ್ಲಿ ಮಾತನಾಡಿದರು.

ರೈತರಿಗೆ ಕೇಂದ್ರ ಸರಕಾರ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಮೂಲಕ ಬೆಳೆ ಯೋಜನೆಯನ್ನು ಜಾರಿಗೊಳಿಸಿದೆ ಆದರೆ ರಾಜ್ಯ ಸರ್ಕಾರ ತಂಬಾಕು ಬೆಳೆಯನ್ನು ಈ ಯೋಜನೆ ವ್ಯಾಪ್ತಿಗೆ ಸೇರ್ಪಡೆ ಮಾಡದೆ ರೈತರನ್ನು ವಂಚಿಸಿದೆ. ಹಾಗಾಗಿ ಕೂಡಲೇ ತಂಬಾಕು ಬೆಳೆಯನ್ನು ಫಸಲ್ ಭೀಮಾ ಯೋಜನೆ ವ್ಯಾಪ್ತಿಗೆ ಸೇರ್ಪಡೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಾಗಬೇಕು ಎಂದು ಒತ್ತಾಯಿಸಿದರು.

ತಂಬಾಕು ಹರಾಜು ನಿರ್ದೇಶಕ ಶ್ರೀನಿವಾಸ್ ಮಾತನಾಡಿ, ರೈತರ ಮರಣ ನಿಧಿ, ರೈತರ ಮಕ್ಕಳ ಉನ್ನತ ಶಿಕ್ಷಣ ಹಾಗೂ ಮದುವೆಗೆ ನೀಡುತ್ತಿರುವ ನೆರವನ್ನು ರೂ. 50 ಸಾವಿರದಿಂದ ರೂ.5 ಲಕ್ಷದ ವರೆಗೆ ಹೆಚ್ಚಿಸುವ ಕೇಂದ್ರ ವಾಣಿಜ್ಯ ಸಚಿವಾಲಯದ ಹಂತದಲ್ಲಿದ್ದು, ಶೀಘ್ರದಲ್ಲೇ ಈ ಬಗ್ಗೆ ಸಂಸದರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಜಾರಿಗೊಳಿಸಲಿದ್ದಾರೆ ಎಂದರು.



ಸಂಸದ ಯದುವೀರ್ ಒಡೆಯರ್ ಕಗ್ಗುಂಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ನಡೆದ ತಂಬಾಕು ಬೆಳೆಗಾರರ ಸಭೆಯಲ್ಲಿ ಮಾತನಾಡಿದರು.

ರೈತ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ತಂಬಾಕು ದರ ಕುಸಿತ ಹಾಗೂ ಸಮಸ್ಯೆಗಳ ಬಗ್ಗೆ ಕೇಂದ್ರದ ಮಂತ್ರಿಗಳು, ರಾಜ್ಯದ ಮಂತ್ರಿಗಳು, ಮುಂದಿನ 10 ದಿನಗಳ ಒಳಗಾಗಿ ತಂಬಾಕು ದರ ಹೆಚ್ಚಳ ಮಾಡದಿದ್ದಲ್ಲಿ ರೈತ ಸಂಘ ಹಾಗೂ ಕಬ್ಬು ಬೆಳೆಗಾರರ ಸಂಘ ಪ್ರತಿಭಟನೆ ನಡೆಸಿದ ಮಾದರಿಯಲ್ಲೇ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಚ್.ಸಿ.ಬಸವರಾಜ್, ತಂಬಾಕು ಮಂಡಳಿ ಪ್ರಾದೇಶಿಕ ವ್ಯವಸ್ಥಾಪಕರಾದ ಗೋಪಾಲ್, ಮಾರಣ್ಣ, ಅಧೀಕ್ಷಕರಾದ ಬ್ರಿಜು ಭೂಷಣ್, ಧನರಾಜ್, ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್,ತಂಬಾಕು ಮಂಡಳಿ ಮಾಜಿ ಸದಸ್ಯ ವಿಕ್ರಂ ರಾಜ್ ಗೌಡ, ರೈತ ಸಂಘದ ಯುವ ಘಟಕದ ಅಧ್ಯಕ್ಷ ಹರವೆ ಮಹದೇವ್, ಮುಖಂಡರಾದ ಎಂ.ಎಂ.ರಾಜೇಗೌಡ, ರಾಜೇಂದ್ರ, ಸ್ವಾಮಿಗೌಡ , ಹೆಮ್ಮಿಗೆ ಮಹೇಶ್, ಎ.ಜಿ.ಕಾವಲ್ ಕಾಮರಾಜ್ ಉಪಸ್ಥಿತರಿದ್ದರು.

ಎಂಡಿಸಿಸಿ ಬ್ಯಾಂಕ್ ನಿರ್ದೇಶಕರಿಗೆ ಸನ್ಮಾನ

ಕೆ.ಆರ್.ಪೇಟೆ : ಇತ್ತೀಚೆಗೆ ನಡೆದ ಮಂಡ್ಯ ಡಿಸಿಸಿ ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ಆಯ್ಕೆಯಾಗಿರುವ ಶೀಳನೆರೆ ಅಂಬರೀಷ್ ಅವರನ್ನು ಜಿಲ್ಲಾ ಹಾಲು ಒಕ್ಕೂಟದ ಉಪ ಕಚೇರಿಯ ಸಭಾಂಗಣದಲ್ಲಿ ಮನ್ಮುಲ್ ನೌಕರರ ವರ್ಗ ಹಾಗೂ ಬೆಂಬಲಿಗರು ಸನ್ಮಾನಿಸಿ ಅಭಿನಂದಿಸಿದರು.

ನಂತರ ಮಾತನಾಡಿದ ಶೀಳನೆರೆ ಅಂಬರೀಷ್, ಮೊದಲ ಬಾರಿಗೆ ಮಂಡ್ಯ ಜಿಲ್ಲಾ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆ ಮಾಡಿದ ತಾಲೂಕಿನ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮ ನಾಯಕರಾದ ಕೃಷಿ ಸಚಿವರೂ ಆದ ಎನ್. ಚಲುವರಾಯಸ್ವಾಮಿ ನೇತೃತ್ವದಲ್ಲಿ ಮನ್ ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ ಹರೀಶ್ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರ ಸಹಕಾರದಿಂದ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಸಹಕಾರ ಸಂಘಗಳ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಮಂಡ್ಯ ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾಗಿರುವ ಶೀಳನೆರೆ ಅಂಬರೀಷ್ ಅವರನ್ನು ಮನ್ಮುಲ್ ನೌಕರರ ವರ್ಗ ಹಾಗೂ ಬೆಂಬಲಿಗರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮನ್ ಮುಲ್ ನಿರ್ದೇಶಕ ಎಂ.ಬಿ ಹರೀಶ್ , ಮನ್ಮುಲ್ ಉಪ ವ್ಯವಸ್ಥಾಪಕ ಪ್ರಸಾದ್, ವಿಸ್ತರಣಾಧಿಕಾರಿ ನಾಗಪ್ಪ ಅಲ್ಲಿಬಾದಿ, ಬಿ ಸಿ ಮಧು, ರಾಘವೇಂದ್ರ, ಸಂಧ್ಯಾ, ಕಾಳಿ ಪತ್ತಿನ ಸಂಘದ ಮಾಜಿ ಅಧ್ಯಕ್ಷ ಜವರೇಗೌಡ, ರಾಮನಹಳ್ಳಿ ಡೈರಿ ಕಾರ್ಯದರ್ಶಿ ಕುಮಾರ್, ಮಾರ್ಗೋನಹಳ್ಳಿ ಜವರೇಗೌಡ, ತೇಗನಹಳ್ಳಿ ನಾಗೇಶ್, ಅಣ್ಣೇಚಾಕನಹಳ್ಳಿ ಡೈರಿ ಯೋಗೇಶ್, ಶೆಟ್ಟಹಳ್ಳಿ, ನಂಜಪ್ಪ ಉಪಸ್ಥಿತರಿದ್ದರು.

ಹೈದರಾಲಿ ಸೈನ್ಯದ ಎಡೆ ಮುರಿ ಕಟ್ಟಿದ ಓಬವ್ವ

ಮಂಡ್ಯ: ಚಿತ್ರದುರ್ಗದ ಕೋಟೆಯನ್ನು ಹೈದರಾಲಿ ಸೈನ್ಯ ಮುತ್ತಿಗೆ ಹಾಕಿದಾಗ ಹೈದರಾಲಿ ಸೈನ್ಯದ ವಿರುದ್ಧ ಏಕಾಂಗಿಯಾಗಿ ಹೋರಾಡಿ ಹೈದರಾಲಿ ಸನ್ಯದ ಎಡೆ ಮುರಿ ಕಟ್ಟಿದ್ದು ಓಬವ್ವ ಎಂದು ರಾಜ್ಯ ಸಣ್ಣ ಕೈಗಾರಿಕಾ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಂಡ್ಯ ಟೌನ್ ಘಟಕ-1 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಹೆಣ್ಣು ಮಕ್ಕಳು ಒನಕೆ ಓಬವ್ವ, ಕಿತ್ತೂರ ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ನಂತಹ ಮಹಾನ್ ವ್ಯಕ್ತಿಗಳ ಸ್ಫೂರ್ತಿಯಾಗಿ ತಿಳಿಯಬೇಕು, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಮಹಿಳೆಯರು ಇರಬೇಕು. ಅಂಬೇಡ್ಕರ್‌ಅವರು ಸಂವಿಧಾನದಲ್ಲಿ ಹೆಣ್ಣುಮಕ್ಕಳಿಗೆ ವಿಶೇಷ ಸ್ಥಾನಮಾನ ನೀಡಿದ್ದಾರೆ. ಅವರು ಕಾನೂನು ಬರೆಯದಿದ್ದರೆ ಹೆಣ್ಣುಮಕ್ಕಳು ಅಡುಗೆ ಮನೆಯಲ್ಲೇ ಇರಬೇಕಾಗಿತ್ತು ಎಂದರು.

ಬಿಸಿಎಂ ಇಲಾಖೆಯ ಉಪನಿರ್ದೇಶಕಿ ಮಂಜುಳಾ ಮಾತನಾಡಿ, ಎಲ್ಲಾ ಮಹಿಳೆಯರು ಒನಕೆ ಓಬವ್ವ ಆಗಲು ಸಾಧ್ಯವಿಲ್ಲ ಆದರೆ ನಮ್ಮ ಬದುಕಲ್ಲಿ ಬರುವ ಸಮಸ್ಯೆಗಳನ್ನು ವೀರವನಿತೆ ಒನಕೆ ಓಬವ್ವ ರೀತಿ ಎದುರಿಸಬಹುದು, ಇವತ್ತಿನ ದಿನಗಳಲ್ಲಿ ಹೆಣ್ಣುಮಕ್ಕಳಲ್ಲಿ ಆತ್ಮಸ್ಥೈರ್ಯ ಕೊರತೆ ಇದೆ, ಹೆಣ್ಣುಮಕ್ಕಳು ಯಾವುದಕ್ಕೂ ಎದೆಗುಂದದೆ ಎದುರಿಸಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಬಿ.ವಿ.ನಂದೀಶ್, ಹಾಸ್ಟೆಲ್ ವಾರ್ಡನ್ ಯೋಗಿತಾ, ನಿರೂಪಕಿ ಅನುಪಮ ಉಪಸ್ಥಿತರಿದ್ದರು.

ಜಿಂಕೆಗಳ ಭೇಟೆಯಾಡಿದ ಇಬ್ಬರ ಬಂಧನ, ಕಾರು ವಶ

ಹುಣಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹುಣಸೂರು ವನ್ಯಜೀವಿ ವಲಯಕ್ಕೆ ಅಕ್ರಮ ಪ್ರವೇಶ ಮಾಡಿ ಗಂಡು ಜಿಂಕೆ ಮತ್ತು ಕೂರ (ಮೌಸ್ಡೀರ್) ವನ್ಯಪ್ರಾಣಿಗಳನ್ನು ಭೇಟೆಯಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಬಂದೂಕು, ಕಾರು ಹಾಗೂ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಚೆನ್ನಾಪುರ ಗ್ರಾಮದ ಜಿ.ಜೆ.ರೂಪೇಶ್ ಹಾಗೂ ಗಂಧದಕೋಟಿ ಗ್ರಾಮದ ಅರುಣ್ ಬಂಧಿತ ಆರೋಪಿಗಳು, ಚಿಕ್ಕತೋಳೂರು ಗ್ರಾಮ ಜೀವಿತ್ ಪರಾರಿಯಾಗಿದ್ದಾನೆ.

ಆನೆಚೌಕೂರು ವಲಯದ ಉಪವಲಯ ಅರಣ್ಯಾಧಿಕಾರಿ ರಾಮಪ್ಪ ಹಾಗೂ ಸಿಬ್ಬಂದಿ ಬೂದಿತಿಟ್ಟು ಮುಖ್ಯ ರಸ್ತೆಯ ಬಂಗಲೆ ಕೂಪು ಆರಣ್ಯ ಪ್ರದೇಶದಲ್ಲಿ ರಾತ್ರಿ ಗಸ್ತು ನಡೆಸುತ್ತಿದ್ದ ವೇಳೆ ಗುಂಡಿನ ಶಬ್ದ ಕೇಳಿದ್ದರ ಜಾಡು ಹಿಡಿದು ಸ್ಥಳಕ್ಕೆ ತೆರಳುತ್ತಿದ್ದಂತೆ ಕಾರಿನಲ್ಲಿ ಪರಾರಿಯಾಗಲೆತ್ನಿಸಿದಾಗ ಬೆನ್ನತ್ತಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದಿದ್ದು, ಮತ್ತೊಬ್ಬ ಪರಾರಿಯಾಗಿದ್ದಾನೆ. ಕಾರಿನೊಳಗೆ ಕಾಡತೂಸುಗಳು, ಹೆಡ್ಟಾರ್ಚ್ ಲೈಟ್, ಎರಡು ಮೊಬೈಲ್‌ಗಳನ್ನು ವಶಕ್ಕೆ ಪಡೆದು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ ಎಂದು ಡಿಸಿಎಫ್ ಸೀಮಾ ತಿಳಿಸಿದ್ದಾರೆ.

ನಾಗರಹೊಳೆ ಉದ್ಯಾನದಲ್ಲಿ ವನ್ಯಪ್ರಾಣಿಗಳನ್ನು ಭೇಟೆಯಾಡಿದ್ದ ಆರೋಪಿಗಳನ್ನು ಬಂಧಿಸಿರುವುದು.

ಕಾರ್ಯಾಚರಣೆಯಲ್ಲಿ ಪ್ರೊಭೇಷನರ್‌ಎಸಿಎಫ್ ಲತಾಭಟ್, ಪ್ರಭಾರ ಆರ್‌ಎಫ್‌ಒ ದೇವರಾಜ್, ಡಿಆರ್‌ಎಫ್‌ಒಗಳಾದ ರಾಮಣ್ಣ, ರಾಜೇಶ್, ಸಿಬ್ಬಂದಿ ಗಿರೀಶ್, ಶಿವಕುಮಾರ್,ವೀರಭದ್ರ ಭಾಗವಹಿಸಿದ್ದರು.

ಅಹಿಂದ ವೇದಿಕೆ ಅಧ್ಯಕ್ಷ ಆಯ್ಕೆ

ಮದ್ದೂರು: ಅಹಿಂದ ಸಂರಕ್ಷಣಾ ವೇದಿಕೆಯ ತಾಲೂಕು ನೂತನ ಅಧ್ಯಕ್ಷರಾಗಿ ಮಾಲಗಾ ರನಹಳ್ಳಿ ಗ್ರಾಮದ ಮಲ್ಲರಾಜು ಹಾಗೂ ಸಂ ಚಾಲಕರಾಗಿ ಆಸಿಫ್ಪಾಷ ಅವರನ್ನು ಅವಿರೋ ಧವಾಗಿ ಆಯ್ಕೆ ಮಾಡಿರುವುದಾಗಿ ತಾಲೂಕು ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ಶೆಟ್ಟಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪದಾಧಿಕಾರಿಗಳ ಸಭೆ ವೇಳೆ ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಅವರು ಪ್ರತಿ ಹೋಬಳಿ ಹಾಗೂ ಬೂತ್ ಮಟ್ಟದಲ್ಲಿ ಅಹಿಂದ ಸಂಘಟನೆಯನ್ನು ಬಲಪಡಿಸಲು ಅಗತ್ಯ ಯೋಜನೆ ರೂಪಿಸಿದ್ದು ಅನ್ಯಾಯಕ್ಕೊಳಗಾದ ಎಲ್ಲಾ ವರ್ಗದ ಜನರಿಗೆ ನ್ಯಾಯ ದೊರಕಿಸುವುದಾಗಿ ತಿಳಿಸಿದರು.

ನೂತನ ಅಧ್ಯಕ್ಷ ಮಲ್ಲರಾಜು ಮಾತನಾಡಿ, ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿ ಅಹಿಂದ ವರ್ಗ ಬಲಪಡಿಸುವ ನಿಟ್ಟಿನಲ್ಲಿ ಸಂಘಟನೆಯನ್ನು ಸಕ್ರಿಯಗೊಳಿಸುವುದಾಗಿ ಹೇಳಿದರು.

ಈ ವೇಳೆ ನೂತನ ಸದಸ್ಯರಾದ ಬಸವರಾಜು, ಜೋಗಯ್ಯ, ರಾಚಯ್ಯ, ರುಕ್ಮಿಣಿಗೌಡ, ಗೌರವಾಧ್ಯಕ್ಷ ಮರಿಹೆಗಡೆ, ಖಜಾಂಚಿ ರಮೇಶ್, ಪದಾಧಿಕಾರಿಗಳಾದ ಡಿ.ಸಿ.ಮಹೇಂದ್ರ, ಪಿ.ಶಶಿಕುಮಾರ್,ಕೆ.ಟಿ.ಶಿವಕುಮಾರ್,ಮಹದೇವಯ್ಯ, ದಾಕ್ಷಾಯಿಣಿ ಇದ್ದರು.

ಗ್ರಾಮೀಣ ಭಾಗದ ಪತ್ರಕರ್ತರ ಸಮಸ್ಯೆ ನಿವಾರಣೆಗೆ ಪ್ರಯತ್ನ

ತಿ.ನರಸೀಪುರ: ಇತ್ತೀಚಿಗೆ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮೈಸೂರು ವಿಭಾಗದಿಂದ ಸ್ಪರ್ಧಿಸಿ ಜಯಶಾಲಿಯಾದ ಬಿ.ಟಿ.ವಿ ಮುಖ್ಯಸ್ಥ ಬಿ. ರಾಘವೇಂದ್ರ ಅವರಿಗೆ ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಪಟ್ಟಣದ ಹಳೇ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಬಿ.ರಾಘವೇಂದ್ರ, ಈ ಬಾರಿ ಗ್ರಾಮೀಣ ಭಾಗದ ಪತ್ರಕರ್ತರು ನನ್ನ ಗೆಲುವಿಗೆ ಹೆಚ್ಚಿನ ಸಹಕಾರ ನೀಡಿದ್ದು, ಗ್ರಾಮೀಣ ಪತ್ರಕರ್ತರ ಸಮಸ್ಯೆ ಬಗೆಹರಿಸುವ ಕಡೆ ಹೆಚ್ಚು ಗಮನ ನೀಡಲಾಗುವುದು ಎಂದರು.

ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ರವಿಕುಮಾರ್ ಮಾತನಾಡಿ, ಗ್ರಾಮೀಣ ಭಾಗದ ಪತ್ರಕರ್ತರ ಸಮಸ್ಯೆ ನಿವಾರಿಸುವ ಕಡೆ ರಾಜ್ಯ ಪತ್ರಕರ್ತರ ಸಂಘ ಹೆಚ್ಚಿನ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ವಿಜಯವಾಣಿ ಸ್ಥಾನಿಕ ಸಂಪಾದಕ ಸತ್ಯನಾರಾಯಣ್, ಪತ್ರಕರ್ತ ಕಿರಣ್ ಕುಮಾರ್ ,ವಿಜಯವಾಣಿ ಹಿರಿಯ ಉಪ ಸಂಪಾದಕ ಕೃಷ್ಣ ತಾ. ಪತ್ರಕರ್ತರ ಸಂಘದ ಕಾರ್ಯದರ್ಶಿ ಆನಂದಕುಮಾರ್ ,ಖಜಾಂಚಿ ಮಹದೇವ, ಕಾರ್ಯಕಾರಿಣಿ ಸದಸ್ಯರಾದ ಮಹದೇವ (ಮಾಧು) ನಾರಾಯಣ್, ಮೂಗೂರು ಸಿದ್ದರಾಜು, ಗೋವಿಂದರಾಜು, ನಿಕಟಪೂರ್ವ ಅಧ್ಯಕ್ಷ ಚನ್ನಬಸವಣ್ಣ ಸಂಘದ ಸದಸ್ಯರಾದ ಕುಮಾರ್, ಮಹೇಂದ್ರ ಇದ್ದರು.

ಪೌರಕಾರ್ಮಿಕರಿಗೆ 142 ಮನೆಗಳು : ಡಿಸಿ

ಮಂಡ್ಯ: ಜಿಲ್ಲೆಯಲ್ಲಿ ಪೌರಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿ 167 ಮನೆಗಳ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು ಇಲ್ಲಿಯವರೆಗೆ 142 ಮನೆಗಳನ್ನು ನಿರ್ಮಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪೌರಕಾರ್ಮಿಕ ಗೃಹ ಭಾಗ್ಯ ಯೋಜನೆಯಡಿ 7 ಮನೆಗಳ ಕಾಮಗಾರಿ ಪ್ರಾರಂಭವಾಗಿದೆ, 2 ಮನೆಗಳಿಗೆ ಫೌಂಡೇಶನ್ ಹಾಕಲಾಗಿದೆ, 5 ಲೆನ್ಟಲ್ ಹಾಗೂ 3 ರೂಫ್ ಹಂತದಲ್ಲಿದೆ ಎಂದು ಮಾಹಿತಿ ನೀಡಿದರು. ಕಾಲಕಾಲಕ್ಕೆ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಿಸಬೇಕು, ಜಿಲ್ಲೆಯಲ್ಲಿ 9 ಇಂದಿರಾ ಕ್ಯಾಂಟೀನ್ ಗಳು ಕಾರ್ಯ ನಿರ್ವಹಿಸುತ್ತಿವೆ, ಇಂದಿರಾ ಕ್ಯಾಂಟೀನ್ ಗಳಲ್ಲಿ ಆಹಾರದ ಗುಣಮಟ್ಟವನ್ನು ಕಾಪಾಡಬೇಕು, ಅಧಿಕಾರಿಗಳು ಕಾಲ ಕಾಲಕ್ಕೆ ಇಂದಿರಾ ಕ್ಯಾಂಟೀನ್ ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು. ಇ-ಖಾತಾ ಅಭಿಯಾನ ಮಾರ್ಚ್ 2025 ರವರೆಗೂ ಎ ಮತ್ತು ಬಿ ಖಾತಾ ಸೇರಿ ಒಟ್ಟು 47914 ಖಾತೆಗಳನ್ನು ನೀಡಲಾಗಿದೆ, ಮಾರ್ಚ್ 2025 ರಿಂದ ಇಲ್ಲಿಯವರೆಗೆ ಎ ಮತ್ತು ಬಿ ಖಾತಾ ಸೇರಿ ಒಟ್ಟು 11875 ಖಾತೆಗಳನ್ನು ನೀಡಲಾಗಿದೆ, ಇನ್ನೂ 26514 ಖಾತೆಗಳು ಬಾಕಿ ಉಳಿದಿದೆ ಎಂದು ಹೇಳಿದರು.

ಮಕ್ಕಳ ಸುಪ್ತ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಲು ಕಾರಂಜಿ ಅಗತ್ಯ

ಕೆ.ಆರ್.ನಗರ: ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಇಂತಹ ಪ್ರತಿಭಾ ಕಾರಂಜಿ ಕಾರ್ಯಕ್ರಮ ಆಯೋಜಿಸುವುದು ಶಿಕ್ಷಣ ಇಲಾಖೆಯ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿದೆ ಎಂದು ಶಾಸಕ ಡಿ.ರವಿಶಂಕರ್‌ಹೇಳಿದರು.

ತಾಲೂಕಿನ ಅಡುಗನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಬ್ಯಾಡರಹಳ್ಳಿ ಕ್ಲಸ್ಟರ್‌ಮಟ್ಟದ ಪ್ರತಿಭಾ ಕಾರಂಜಿ ಉದ್ದೇಶಿಸಿ ಮಾತನಾಡಿದರು.

ಪ್ರತಿಭಾ ಕಾರಂಜಿಗಳಿಂದ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ ಆ ಕ್ಷೇತ್ರದಲ್ಲಿ ಅವರು ಹೆಚ್ಚಿನ ಆಸಕ್ತಿ ವಹಿಸುವಂತೆ ಪ್ರೇರೇಪಿಸಿ, ಪ್ರೋತ್ಸಾಹ ನೀಡಿದಾಗ ಸಂಗೀತ, ಕಲೆ, ಸಾಹಿತ್ಯ, ಕ್ರೀಡೆ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ತಿಳಿಸಿದರು.

ನಂತರ ಕಾರಂಜಿಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಶಾಲೆ ಮತ್ತು ಗ್ರಾಮಸ್ಥರ ವತಿಯಿಂದ ಶಾಸಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್ಡಿಎಂಸಿ ಅಧ್ಯಕ್ಷ ಕೆ.ಬಿ.ಮಂಜುನಾಥ್, ಸದಸ್ಯರಾದ ರಾಜಪ್ಪ, ಶಿವಣ್ಣೇಗೌಡ್ರು, ಮಾದೇವ್, ಯೋಗೇಶ್, ನಾಗೇಶ್, ಪ್ರಭಾಕರ್,ಸಿಆರ್‌ಪಿ ಸತೀಶ್, ರಾಜ್ಯ ಪ್ರಶಸ್ತಿ ಶಿಕ್ಷಕ ಭಾಸ್ಕರ್‌ಇನ್ನಿತರರು ಹಾಜರಿದ್ದರು.

ಅಡುಗನಹಳ್ಳಿಯಲ್ಲಿ ಆಯೋಜಿಸಿದ್ದ ಬ್ಯಾಡರಹಳ್ಳಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್‌ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ದೇಶದಲ್ಲಿ ಕುತೂಹಲಕ್ಕೆ ಕಾರಣವಾಗಿರುವ ಬಿಹಾರ ಚುನಾವಣೆ ಫಲಿತಾಂಶ ನ.14ರಂದು ಬರಲಿದೆ. ಚುನಾವಣೆಯನ್ನು ವಿಸ್ತೃತವಾಗಿ ವರದಿ ಮಾಡಲು ವಿಶ್ವವಾಣಿಯ ಪರವಾಗಿ ಬಿಹಾರಕ್ಕೆ ತೆರಳಿದ್ದ ರಾಘವ ಶರ್ಮಾ ನಿಡ್ಲೆ ಅವರು ಅಲ್ಲಿನ ತಮ್ಮ ಅನುಭವವನ್ನು ಕ್ರೋಢೀಕರಿಸಿ ದಾಖಲಿಸಿದ್ದಾರೆ. ಹಾಜಿಪುರದ ಬಾಳೆಗೊನೆ ಪ್ರತಿಮೆಯಿಂದ ಹಿಡಿದು, ಯಾವುದೇ ಭದ್ರತೆಯಿಲ್ಲದೇ ನೇರವಾಗಿ ತಮ್ಮ ಮತಕ್ಷೇತ್ರಕ್ಕೆ ಹೋಗುತ್ತಿದ್ದ ಮಾಜಿ ರಕ್ಷಣಾ ಸಚಿವ, ದಿವಂಗತ ಜಾರ್ಜ್ ಫರ್ನಾಂಡಿಸ್, ಹಿಂದೂ-ಮುಸ್ಲಿಮ್ ಸಂಘರ್ಷದ ಚರ್ಚೆಯಿಲ್ಲದೇ ನಡೆದ ಪ್ರಚಾರದವರೆಗೆ ಹಲವು ಕುತೂಹಲಕಾರಿ ಸಂಗತಿಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

ಬಿಹಾರ ಸಮರಕಣದಲ್ಲಿ ನಾನು ಕಂಡದ್ದು... ಕೇಳಿದ್ದು...

ಅಸ್ವಚ್ಛತೆಯೊಂದಿಗೆ ಬದುಕು

ಬಿಹಾರದ ಯಾವುದೇ ನಗರ, ಪಟ್ಟಣಗಳಲ್ಲಿ ಸ್ವಚ್ಛತೆ ಬಗ್ಗೆ ಜನರಿಗೆ ಮತ್ತು ಆಡಳಿತ ವ್ಯವಸ್ಥೆಗೆ ಕಿಂಚಿತ್ತೂ ಕಾಳಜಿ ಇಲ್ಲ ಅನಿಸುತ್ತದೆ. ಎಲ್ಲೆಂದರಲ್ಲಿ, ಕಸ-ಕಡ್ಡಿ ಪ್ಲಾಸ್ಟಿಕ್‌ಗಳನ್ನು ಎಸೆಯುತ್ತಾರೆ. ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಸಂಸತ್ ಕ್ಷೇತ್ರ, ಅವರ ತಂದೆ ರಾಮ್ ವಿಲಾಸ್ ಪಾಸ್ವಾನ್ 9 ಬಾರಿ ಸಂಸದರಾಗಿದ್ದ ಹಾಜಿಪುರದಲ್ಲಿ ಕೂಡ ಕಸಗಳದ್ದೇ ಸಾಮ್ರಾಜ್ಯ. ತಾನು ಪ್ರಧಾನಿ ಮೋದಿಯ ಹನುಮಾನ್ ಎನ್ನುವ ಚಿರಾಗ್ ಪಾಸ್ವಾನ್‌ಗೆ ಪ್ರಧಾನಿಯವರ ಸ್ವಚ್ಛತೆ ಅಭಿಯಾನದ ಬಗ್ಗೆ ಎಳ್ಳಷ್ಟು ಕಾಳಜಿ ಇಲ್ಲ ಅನಿಸುತ್ತದೆ. ಇದು ಪಾಸ್ವಾನ್ ಮಾತ್ರವಲ್ಲ, ಇಲ್ಲಿರುವ ಜನಪ್ರತಿನಿಧಿಗಳೆಲ್ಲರೂ ಸ್ವಚ್ಛತೆ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಅನಿಸುತ್ತದೆ. ಹಾಗೆ ನೋಡಿದರೆ, ಬಿಹಾರದ ಹಳ್ಳಿಗಳೇ ಎಷ್ಟೋ ವಾಸಿ. ನಗರವಾಸಿಗಳ ಅಶಿಸ್ತು, ಸಂವೇದನಾಶೂನ್ಯತೆ ಅಲ್ಲಿ ಕಾಣುವುದಿಲ್ಲ.

ಲಾಲೂ ಪೋಸ್ಟರ್ ಯಾಕಿಲ್ಲ?

ಬಿಹಾರ ಚುನಾವಣೆಯುದ್ದಕ್ಕೂ ಆರ್‌ಜೆಡಿ ಪಕ್ಷ ಮಾಜಿ ಸಿಎಂ ಲಾಲೂ ಪ್ರಸಾದ್ ಯಾದವರ ಒಂದೇ ಒಂದು ಪೋಸ್ಟರ್ ಕಾಣಲಿಲ್ಲ. ಎಲ್ಲೆಡೆ ತೇಜಸ್ವಿ ಯಾದವ್ ಮುಖವೇ ರಾರಾಜಿಸುತ್ತಿತ್ತು. ಮೇವು ಹಗರಣದಲ್ಲಿ ಅಪರಾಧಿಯಾಗಿರುವ ಲಾಲೂ ಅವರ ಪೋಸ್ಟರ್ ಬಳಸಿ ಮತ ಕೇಳಿದರೆ, ಅಪರಾಧಿಗಳ ಹೆಸರು ಬಳಿ ಮತ ಕೇಳುತ್ತಿದ್ದಾರೆ ಎಂದು ಬಿಜೆಪಿ ಪ್ರಚಾರ ಮಾಡುವ ಆತಂಕ ಇತ್ತು ಮತ್ತು ಜಂಗಲ್‌ರಾಜ್ ವಿಚಾರವೂ ಆರ್‌ಜೆಡಿಗೆ ಅತಿದೊಡ್ಡ ಬ್ಯಾಗೇಜ್ ಆಗಿರುವುದರಿಂದ ಲಾಲೂ ಪೋಸ್ಟರ್‌ಗಳನ್ನು ಎಲ್ಲೂ ಹಾಕದಿರಲು ಪುತ್ರ ತೇಜಸ್ವಿ ಯಾದವ್ ನಿರ್ಧರಿಸಿದರು. ಹಾಗಿದ್ದರೂ, ಕೊನೆ ಹಂತದ ಒಂದೆರಡು ಪ್ರಚಾರಗಳ ವೇದಿಕೆಯಲ್ಲಿ ಲಾಲೂ ಕಾಣಿಸಿಕೊಂಡಿದ್ದರು.

ಲಿಕ್ಕರ್ ಹೋಮ್ ಡೆಲಿವರಿ

ಬಿಹಾರದಲ್ಲಿ ಮದ್ಯ ಮಾರಾಟ ನಿಷೇಧಗೊಂಡು ಅನೇಕ ವರ್ಷಗಳಾದವು. ಮದ್ಯ ಬೇಕಿದ್ದರೆ ಬೇರೆ ಡಬಲ್ ಹಣ ನೀಡಿ ಅಕ್ರಮ ಮಾರಾಟಗಾರರಿಂದ ಖರೀದಿ ಮಾಡಿ ತರಬೇಕು. ಮದ್ಯವಿಲ್ಲದೆ ಬದುಕು ಸಾಧ್ಯವೇ ಇಲ್ಲ ಎಂಬ ಕುಡುಕರು ನಿತ್ಯವೂ ಸಿಎಂ ನಿತೀಶ್ ಕುಮಾರ್‌ಗೆ ಶಾಪ ಹಾಕುತ್ತಿರುತ್ತಾರೆ. ಶರಾಬ್ ಬಂದ್ ಮಾಡಿ ಏನು ಪ್ರಯೋಜನ. ಇಲ್ಲಿ ಲಿಕ್ಕರ್ ಹೋಮ್ ಡೆಲಿವರಿ ಆಗುತ್ತದೆ. ನಿಮಗೆ ಬೇಕಿದ್ದರೆ ಈಗ ತಂದುಕೊಡುತ್ತೇನೆ ಎಂದು ನನಗೂ ಕೆಲವರು ಆಫರ್ ಮಾಡಿದರು. ನಾನು ಬೇಡ ಎಂದು ನಯವಾಗಿ ತಿರಸ್ಕರಿಸಿದೆ. ನಾವು 150 ರು. ಮದ್ಯವನ್ನು 500 ರು. ಕೊಟ್ಟು ಖರೀದಿ ಮಾಡಬೇಕು. ಇಲ್ಲಿ ಮದ್ಯ ನಿಷೇಧ ತೆಗೆಯಬೇಕು, ನಮ್ಮ ಕಷ್ಟಕ್ಕೂ ಸ್ಪಂದಿಸಬೇಕು ಎನ್ನುವುದು ಮದ್ಯಪ್ರಿಯರ ಡಿಮ್ಯಾಂಡ್. ಹಾಗಂತ, ಮಹಿಳಾಪರ ನಿಲುವಿನ ಸಿಎಂ ನಿತೀಶ್ ಕುಮಾರ್ ಇದಕ್ಕೆಲ್ಲಾ ತಲೆಕೆಡಿಸಿಕೊಂಡಂತಿಲ್ಲ.

ಜೆಡಿಯು ಮತ್ತು ಬಾಹುಬಲಿ

ಬಿಹಾರದಲ್ಲಿ ಬಾಹುಬಲಿಗಳನ್ನು ಮಟ್ಟ ಹಾಕಿದ್ದು ನಾವು ಎನ್ನುವ ಜೆಡಿಯು, ಮುಂಗೇರ್ ಜಿಲ್ಲೆಯ ಮೊಕಾಮ ವಿಧಾನಸಭೆಯಿಂದ ಡೆಡ್ಲಿ ಬಾಹುಬಲಿ ಅನಂತ್ ಕುಮಾರ್ ಸಿಂಗ್‌ಗೆ ಟಿಕೆಟ್ ನೀಡಿದ್ದು ಪಕ್ಷಗಳ ದ್ವಂದ್ವ ನಿಲುವಿಗೆ ಸಾಕ್ಷಿಯಾಗಿತ್ತು. ಅನಂತ್ ಕುಮಾರ್ ಸಿಂಗ್ ಅಲ್ಲಿಂದ 5 ಬಾರಿ ಶಾಸಕ ಮತ್ತು ಆ ಭಾಗದ ಅತಿದೊಡ್ಡ ಬಾಹುಬಲಿ. ಸೋನು-ಮೋನು ಗ್ಯಾಂಗ್ ಜತೆಗಿನ ಗ್ಯಾಂಗ್ ವಾರ್ ನಂತರ ಜೈಲಿನಲ್ಲಿದ್ದ ಅನಂತ್ ಸಿಂಗ್, ಆಗಸ್ಟ್‌ನಲ್ಲಿ ಜಾಮೀನು ಪಡೆದು ಹೊರಬಂದಿದ್ದರು. ಟಿಕೆಟ್ ಕೊಟ್ಟ ಸಿಎಂ ನಿತೀಶ್ ಕುಮಾರ್ ಬಿಹಾರದ ಮಹಾನ್ ನಾಯಕ ಎಂದು ಹೊಗಳುತ್ತಾರೆ ಅನಂತ್ ಸಿಂಗ್. ಮೊಕಾಮದಲ್ಲಿ ಅವರ ಪ್ರತಿಸ್ಪರ್ಧಿ ಆರ್‌ಜೆಡಿಯ ವೀಣಾ ದೇವಿ. ವೀಣಾ ಮತ್ತೋರ್ವ ದೊಡ್ಡ ಗ್ಯಾಂಗ್‌ಸ್ಟರ್ ಸೂರಜ್ ಭಾನ್ ಸಿಂಗ್ ಪತ್ನಿ. ಅನಂತ್ ಸಿಂಗ್-ಸೂರಜ್‌ಭಾನ್ ಪರಸ್ಪರ ವೈರಿಗಳು. ಜನ ಸುರಾಜ್ ಪಾರ್ಟಿ ಅಭ್ಯರ್ಥಿ ಪ್ರಿಯದರ್ಶಿ ಪೀಯೂಷ್ ಪರ ಪ್ರಚಾರ ಮಾಡುತ್ತಿದ್ದ ಡಾನ್, ಗ್ಯಾಂಗ್‌ಸ್ಟರ್ ಧುಲಾರ್‌ಚಂದ್ ಯಾದವ್‌ರನ್ನು ಪ್ರಚಾರದ ಸಂದರ್ಭದಲ್ಲೇ ಗುಂಡಿಕ್ಕಿ ಕೊಲ್ಲಲಾಯಿತು. ಹತ್ಯೆ ಆರೋಪದಡಿಯಲ್ಲಿ ಅನಂತ್ ಸಿಂಗ್ ಜೈಲು ಸೇರಿದ್ದಾರೆ. ಸಿಂಗ್‌ಗೆ ಜೈಲು ಮತ್ತೊಂದು ಮನೆ ಇದ್ದ ಹಾಗೆ. ಅಲ್ಲಿಯೂ ರಾಜಾತಿಥ್ಯ.

ಅಬ್ಬಬ್ಬಾ... ಬಾಳೆಗೊನೆ ಪ್ರತಿಮೆ!

ಚಿರಾಗ್ ಪಾಸ್ವಾನ್ ಸಂಸತ್ ಕ್ಷೇತ್ರವಾದ ಹಾಜಿಪುರ (ವೈಶಾಲಿ ಜಿಲ್ಲೆ) ಬಾಳೆಹಣ್ಣು ಕೃಷಿಗೆ ವಿಶ್ವಪ್ರಸಿದ್ಧಿ ಪಡೆದಿದೆ. ಇಲ್ಲಿನ ಬಾಳೆಹಣ್ಣನ್ನು ದೇಶವ್ಯಾಪಿ ಪೂರೈಸಲಾಗುತ್ತದೆ. ಹಾಜಿಪುರ ನಗರ ಪಟ್ಟಣ ಪ್ರವೇಶ ಮಾಡಿದರೆ ಎಲ್ಲೆಲ್ಲೂ ಬಾಳೆಹಣ್ಣುಗಳೇ ಕಾಣುತ್ತವೆ. ಬಾಳೆಕೃಷಿಯಲ್ಲಿ ನಗರದ ಖ್ಯಾತಿಯನ್ನು ಸಂಕೇತಿಸಲು, ಪ್ರತಿಬಿಂಬಿಸಲೆಂದೇ ಇಲ್ಲಿನ ರಾಮಶೀಷ್ ಚೌಕ್‌ನಲ್ಲಿ (ಸರ್ಕಲ್) ಬಾಳೆಗೊನೆಯ ಅತಿದೊಡ್ಡ ಪ್ರತಿಮೆಯನ್ನೇ ನಿರ್ಮಾಣ ಮಾಡಲಾಗಿದ್ದು, ಕಣ್ಮನ ಸೆಳೆಯುತ್ತದೆ. ಈ 21 ಅಡಿ ಎತ್ತರದ ಪ್ರತಿಮೆ ವಿಶ್ವದ ಅತಿದೊಡ್ಡ ಬಾಳೆ ಗೊಂಚಲಿನ ಪ್ರತಿಮೆಯಾಗಿದೆ. ಪ್ರವಾಸಿಗರಲ್ಲಿ ಕುತೂಹಲ ಹುಟ್ಟುಹಾಕುವ ಇದು, ನಗರದ ಪ್ರಮುಖ ಸೆಲ್ಫಿ ತಾಣವಾಗಿ ಬದಲಾಗಿದೆ. ಈ ಪ್ರತಿಮೆ ಬಾಳೆ ಕೃಷಿಯ ಶ್ರೇಷ್ಠತೆಯ ಹೆಗ್ಗುರುತು ಎಂದೇ ಸ್ಥಳೀಯರು ನಂಬಿದ್ದಾರೆ. ಹಾಜಿಪುರ ಚಿನಿಯಾ ಎಂಬ ಪ್ರಭೇದದ ಬಾಳೆಹಣ್ಣು ಇಲ್ಲಿ ಹೆಸರುವಾಸಿ. ಗಾತ್ರದಲ್ಲಿ ಸಣ್ಣದಾದರೂ ಇದು ಸಿಹಿ ಮತ್ತು ಪರಿಮಳಯುಕ್ತ ಬಾಳೆಹಣ್ಣು. ಬಾಳೆಗೊನೆ ಪ್ರತಿಮೆಯನ್ನು ಲಾರ್ಸೆನ್ ಟೂಬ್ರೊ ಲಿಮಿಟೆಡ್ ರು. 15 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದು, ಕೆಲ ತಿಂಗಳ ಹಿಂದಷ್ಟೇ ಉದ್ಘಾಟನೆಗೊಂಡಿತ್ತು.

ಕರ್ಪೂರಿ ಠಾಕೂರ್ ಮತ್ತು ಸಿದ್ದರಾಮಯ್ಯ

ಸಿದ್ದರಾಮಯ್ಯರನ್ನು ಆರಂಭದ ದಿನಗಳಲ್ಲಿ ಹತ್ತಿರದಿಂದ ನೋಡಿದ್ದ ಜೆಡಿಯು ನಾಯಕ, ಜಾರ್ಜ್ ಫರ್ನಾಂಡಿಸ್, ನಿತೀಶ್ ಕುಮಾರ್ ಆಪ್ತ ಅನಿಲ್ ಪ್ರಸಾದ್ ಹೆಗ್ಡೆ, ರಾಜ್ಯಸಭೆ ಸದಸ್ಯರಾದ ಮೇಲೆ ಸಂಸತ್ತಿನಲ್ಲಿ ಒಮ್ಮೆ ಸಿಎಂ ಸಿದ್ದರಾಮಯ್ಯರನ್ನು ಭೇಟಿಯಾಗಿದ್ದರಂತೆ. ಕರ್ನಾಟಕದಲ್ಲಿ 1983ರ ಚುನಾವಣೆ ವೇಳೆ ಬಂಗಾರಪ್ಪನವರ ಕ್ರಾಂತಿರಂಗ ಮತ್ತು ಸೋಷಿಯಲಿಸ್ಟ್ ನಾಯಕ ಚಂದ್ರಶೇಖರ್ ನೇತೃತ್ವದ ಜನತಾಪಾರ್ಟಿಯ ಮೈತ್ರಿಕೂಟವಿತ್ತು. 224 ಸೀಟುಗಳಲ್ಲಿ 223 ಕ್ಷೇತ್ರಗಳಿಂದ ಈ 2 ಪಕ್ಷಗಳ ಅಭ್ಯರ್ಥಿಗಳು ಕಣದಲ್ಲಿದ್ದರು. ಉಳಿದ 1 ಸೀಟಿನಿಂದ ಬಿಹಾರ ಮಾಜಿ ಸಿಎಂ ಕರ್ಪೂರಿ ಠಾಕೂರ್ ನೇತೃತ್ವದ ಲೋಕದಳ (ಕೆ) ಪಕ್ಷದಿಂದ ರಾಜ್ಯದ ಈಗಿನ ಸಿಎಂ ಸಿದ್ದರಾಮಯ್ಯರನ್ನು ನಿಲ್ಲಿಸಲು ತೀರ್ಮಾನವಾಗಿ, ಅಲ್ಲಿಂದ ಸ್ಪರ್ಧೆ ಮಾಡಿದ್ದರು. ಜಾರ್ಜ್ ಫರ್ನಾಂಡಿಸ್-ಸಿದ್ದರಾಮಯ್ಯ ಇಬ್ಬರೂ ಆಗ ಈ ಪಕ್ಷದಲ್ಲಿದ್ದರು ಮತ್ತು ಆಪ್ತರಾಗಿದ್ದರು ಎಂದು ಅನಿಲ್ ಹೆಗ್ಡೆ ಸ್ಮರಿಸಿಕೊಳ್ಳುತ್ತಾರೆ.

ಸದಾಕತ್ ಆಶ್ರಮವೇ ಕಾಂಗ್ರೆಸ್ ಕಚೇರಿ

ಬಿಹಾರ ರಾಜಧಾನಿ ಪಟನಾದಲ್ಲಿರುವ ಸದಾಕತ್ ಆಶ್ರಮ ಐತಿಹಾಸಿಕವಾಗಿ ಮಹತ್ವವುಳ್ಳ ಸ್ಥಳ. ಇದು ಸ್ವಾತಂತ್ರ್ಯ ಹೋರಾಟದ ಕೇಂದ್ರವಾಗಿ ಕಾರ್ಯನಿರ್ವಹಿಸಿತ್ತು. ಇದನ್ನು 1921ರಲ್ಲಿ ಮೌಲಾನಾ ಮಜರುಲ್ ಹಕ್ ಸ್ಥಾಪಿಸಿದರು. ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರು ತಮ್ಮ ಜೀವನದ ಕೊನೆ ದಿನಗಳನ್ನು ಇಲ್ಲೇ ಕಳೆದಿದ್ದರು ಮತ್ತು ಅವರ ನೆನಪಿಗಾಗಿ ಸ್ಥಾಪಿಸಿರುವ ಸಂಗ್ರಹಾಲಯ ಆಸಕ್ತರ ಗಮನಸೆಳೆಯುತ್ತದೆ. ರಾಜ್ಯ ಕಾಂಗ್ರೆಸ್ ಕಚೇರಿ ಕೂಡ ಇರುವುದು ಈ ಆಶ್ರಮದಲ್ಲೇ. ರಾಜೇಂದ್ರ ಪ್ರಸಾದ್ ಅವರು ಆಶ್ರಮದ ಈ ಆಸ್ತಿಯನ್ನು ಕಾಂಗ್ರೆಸ್ ಪಕ್ಷಕ್ಕೆ ದಾನ ಮಾಡಿದ್ದರಿಂದ ನಂತರ ಬಿಹಾರ ಕಾಂಗ್ರೆಸ್ ಕಾರ್ಯ ಚಟುವಟಿಕೆಗಳ ನೆಲೆಯಾಗಿ ಇದು ಬದಲಾಗಿದೆ. ಹಾಗಿದ್ದರೂ, ಐತಿಹಾಸಿಕ ಹೋರಾಟ, ನೆನಪುಗಳ ಗುರುತಾಗಿರುವ ಸದಾಕತ್ ಆಶ್ರಮವನ್ನು ಒಮ್ಮೆ ನೋಡಲೇಬೇಕು.

ಭಕ್ತಿಯಾರ್‌ಪುರ ಹೆಸರು ಬದಲಾಗುವುದೇ?

ಅಲಿ ನಗರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಪ್ರಸಿದ್ಧ ಯುವ ಗಾಯಕಿ ಮೈಥಿಲಿ ಠಾಕೂರ್ ತಾನು ಗೆದ್ದರೆ ಅಲಿ ನಗರದ ಹೆಸರನ್ನು ಸೀತಾ ನಗರ ಎಂದು ನಾಮಕರಣ ಮಾಡುವ ಬಗ್ಗೆ ಭರವಸೆ ನೀಡಿರುವುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು. ನಳಂದಾ ಜಿಲ್ಲೆಯ ಸನಿಹಕ್ಕೆ ಭಕ್ತಿಯಾರ್‌ಪುರ ಎಂಬ ಊರಿದೆ. ಈ ಊರಿನ ಹೆಸರನ್ನು ಬದಲಿಸಬೇಕು ಎನ್ನುವುದು ಸ್ಥಳೀಯ ಹಿಂದೂಗಳ ಒತ್ತಾಯ. ಪುರಾತನ ನಳಂದಾ ವಿಶ್ವವಿದ್ಯಾಲಯ ನಾಶಮಾಡಿದ್ದ ಆಕ್ರಮಣಕಾರ ಮುಹಮ್ಮದ್ ಬಿನ್ ಭಕ್ತಿಯಾರ್ ಖಿಲ್ಜಿಯ ಹೆಸರು ಈ ಊರಿಗೆ ಬೇಡ ಎಂಬ ವಾದ ಈ ಚುನಾವಣೆಯಲ್ಲೂ ಕೇಳಿಬಂತು. ಆ ಹೆಸರು ಕೇಳಿದರೆ ಅಂದಿನ ದಬ್ಬಾಳಿಕೆಯ ದಿನಗಳೇ ನೆನಪಾಗುತ್ತವೆ ಎನ್ನುವ ಕೂಗು ಜೋರಾಗಿದೆ. ಮೂಲತಃ ನಳಂದಾ ಎಂದು ಕರೆಯಲ್ಪಡುತ್ತಿದ್ದ ಈ ಊರಿಗೆ ಭಕ್ತಿಯಾರ್ ಖಿಲ್ಜಿ ನೆನಪಿಗಾಗಿ ಭಕ್ತಿಯಾರ್‌ಪುರ ಎಂದು ಹೆಸರಿಡಲಾಗಿತ್ತು. ಆತ ಕುತುಬ್ ಉದ್-ದಿನ್ ಐಬಕ್‌ನ ಸೇನಾನಾಯಕ ಆಗಿದ್ದ. 1203ರಲ್ಲಿ ಬಂಗಾಳವನ್ನು ವಶಪಡಿಸಿಕೊಂಡ ನಂತರ, ನಳಂದಾ ಮತ್ತು ವಿಕ್ರಮಶಿಲೆಯನ್ನೂ ನಾಶ ಮಾಡಿ, ನಂತರ ಭಕ್ತಿಯಾರ್ ನಗರ ಸ್ಥಾಪನೆ ಮಾಡಿದ್ದ. ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಮರು ಆಯ್ಕೆಯಾದರೆ ಈ ಬಾರಿ ಹೆಸರು ಬದಲಾವಣೆ ಖಚಿತ ಎಂಬ ಭರವಸೆಯಲ್ಲಿದ್ದಾರೆ ಸ್ಥಳೀಯರು.

ಹಿಂದೂ-ಮುಸ್ಲಿಂ ರಾಜಕೀಯ ಇಲ್ಲ

ಬಿಹಾರ ಪಕ್ಕದ ಉತ್ತರಪ್ರದೇಶದಲ್ಲಿ ಹಿಂದೂ- ಮುಸ್ಲಿಂ ರಾಜಕೀಯ ಸಂಘರ್ಷ ಜೋರಾಗಿ ಯೇ ನಡೆಯುತ್ತದೆ. ಆದರೆ, ಪಕ್ಕದ ಬಿಹಾರದಲ್ಲಿ ಹಿಂದೂ-ಮುಸ್ಲಿಂ ದ್ವೇಷ ಸಂಘರ್ಷದ ಘಟನೆಗಳು ಕೇಳಿಬರುವುದು ವಿರಳ. ಅಷ್ಟರಮಟ್ಟಿಗೆ ಕಾನೂನು-ಸುವ್ಯವಸ್ಥೆ ಕಾಪಾಡುವಲ್ಲಿ ಸಿಎಂ ನಿತೀಶ್ ಕುಮಾರ್ ಯಶಸ್ವಿಯಾಗಿದ್ದಾರೆ. ಈ ಕಾರಣಕ್ಕಾಗಿಯೇ ಎನ್‌ಡಿಎನಲ್ಲಿದ್ದು ಬಿಜೆಪಿ ಮಿತ್ರತ್ವ ಸಾಧಿಸಿದ ನಿತೀಶರನ್ನು ಬೆಂಬಲಿಸುವ ಮುಸ್ಲಿಂ ಮತದಾರರನ್ನು ಬಿಹಾರದಲ್ಲಿ ಕಾಣಬಹುದು. ಚುನಾವಣೆ ಪ್ರಚಾರದಲ್ಲೂ ಪ್ರಧಾನಿ ಮೋದಿ, ಗೃಹಸಚಿವ ಅಮಿತ್ ಶಾ ಸೇರಿ ಅನೇಕರು ಅಕ್ರಮ ನುಸುಳುಕೋರರ ಬಗ್ಗೆ ಮಾತನಾಡಿದರೆಯೇ ವಿನಃ ಹಿಂದೂ ಮತಗಳ ಕ್ರೋಢೀಕರಣಕ್ಕಾಗಿ ಅಲ್ಲಿನ ಮುಸ್ಲಿಂ ಧರ್ಮೀಯರನ್ನು ನೇರವಾಗಿ ಗುರಿ ಮಾಡುವ ಆರೋಪ ಮಾಡಲಿಲ್ಲ. ಬಿಹಾರ ಜನರ ರಾಜಕೀಯ ಚಿಂತನೆಗಳೇ ಬೇರೆ, ಉತ್ತರಪ್ರದೇಶ ಹಾಗೂ ಮತ್ತಿತರ ರಾಜ್ಯಗಳ ರಾಜಕೀಯ-ಸಾಮಾಜಿಕ ಸಮೀಕರಣಗಳೇ ಬೇರೆ ಎನ್ನುವುದಕ್ಕೆ ಇದೇ ಸಾಕ್ಷಿ.

ಎಷ್ಟೊಂದು ಖರ್ಚು ಸಾರ್!

ಜನರೊಂದಿಗೆ ನಾನು ಎಲ್ಲೆಲ್ಲಾ ಚುನಾವಣೆ ಚರ್ಚೆಗೆ ಕೂರುತ್ತಿದ್ದೆನೋ ಅಲ್ಲಿ ನಮ್ಮ ಕಾರಿನ ಚಾಲಕ ವಿಜಯ್ ಕುಮಾರ್ ಕೂಡ ಇರುತ್ತಿದ್ದ. ಭೋಜಪುರಿ ಮಿಶ್ರಿತ ಹಿಂದಿ ಅರ್ಥಮಾಡಿಸುತ್ತಿದ್ದದ್ದು ನನಗೆ ಅವನೇ. ಅದೇ ರೀತಿ ಮುಜಫರಪುರದ ಹಾರ್ಡ್‌ವೇರ್ ಅಂಗಡಿ ಮಾಲೀಕರಾಗಿದ್ದ ಮದನ್ ಮೋಹನ್ ಸಿಂಗ್ ಜತೆಗೆ ಮಾಜಿ ಕೇಂದ್ರ ಸಚಿವ ಜಾರ್ಜ್ ಫರ್ನಾಂಡಿಸ್ ಬಗ್ಗೆ ಮಾತನಾಡುತ್ತಿದ್ದಾಗ ಚಾಲಕ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ. ಜಾರ್ಜ್ ಅವರಿಗೆ ಯಾವುದೇ ಸೆಕ್ಯುರಿಟಿ ಗಾರ್ಡ್‌ಗಳೇ ಬೇಕಾಗುತ್ತಿರಲಿಲ್ಲ ಸರ್. ಹೇಳದೆ ಕೇಳದೆಯೇ ಹಳ್ಳಿಗಳೊಳಗೆ ಹೋಗಿಬಿಡುತ್ತಿದ್ದರು. ಆಗ ಇಲ್ಲಿ ಬಾಹುಬಲಿಗಳು (ಗ್ಯಾಂಗ್‌ಸ್ಟರ್‌ಗಳು) ಹೆಚ್ಚಿದ್ದರೂ, ಜಾರ್ಜ್‌ಜೀ ಯಾರಿಗೂ ಹೆದರುತ್ತಿರಲಿಲ್ಲ. ರಾತ್ರಿಯೂ ಒಬ್ಬರೇ ಹೋಗುತ್ತಿದ್ದರು ಎಂದರು ಮದನ್ ಮೋಹನ್. ದೂರದ ಗೋಪಾಲ್‌ಗಂಜ್‌ನಲ್ಲಿ ಅ.30ರ ರಾತ್ರಿ ಹೋಟೆಲ್ ಒಂದರಲ್ಲಿ ನಾನು, ಚಾಲಕ ಊಟ ಮಾಡುತ್ತಿದ್ದಾಗ ಅಲ್ಲಿಗೆ ಬಂದ ಹೋಮ್ ಗಾರ್ಡ್‌ಗಳ ತಂಡವೂ ಬಂತು. 3 ದಿನಗಳ ನಂತರ ಗೃಹ ಸಚಿವ ಅಮಿತ್ ಶಾ ಬರುವ ಹಿನ್ನೆಲೆಯಲ್ಲಿ ಅವರೂ ಬಂದಿದ್ದರು ಹೋಮ್ ಗಾರ್ಡ್‌ಗಳೂ ಬಂದಿದ್ದರು. ಇದನ್ನು ನೋಡಿ ನಮ್ಮ ಡ್ರೈವರ್, ನೋಡಿ ಮುಜಫರಪುರದಲ್ಲಿ ಜಾರ್ಜ್ ಸಾಬ್‌ಗೆ ಯಾವುದೇ ಸೆಕ್ಯುರಿಟಿ ಬೇಕಾಗುತ್ತಿರಲಿಲ್ಲ. ಅವರು ನಿಜ ಜನನಾಯಕ. ಈ ಅಮಿತ್ ಶಾ ಬರುವುದಕ್ಕೆ ಎಷ್ಟೊಂದು ಸೆಕ್ಯುರಿಟಿ, ಎಷ್ಟೊಂದು ಹಣ ಖರ್ಚು? ಹೀಗೆ ಅಲ್ಲವೇ ನೇತಾಗಳಿಗೆ ಹಣ ಪೋಲಾಗುವುದು? ಈ ಹಣವನ್ನೆಲ್ಲಾ ಸೇರಿಸಿ ನಮ್ಮ ಬಿಹಾರದ ಎಷ್ಟೋ ಯುವಕರಿಗೆ ಕೆಲಸ ಕೊಡಿಸಬಹುದು. ಕುಟುಂಬಕ್ಕೊಂದು ಉದ್ಯೋಗ ಕೊಡಿಸುತ್ತೇನೆ ಎಂದು ತೇಜಸ್ವಿ ಯಾದವ್ ಹೇಳುವ ಅಗತ್ಯವೇ ಬರುತ್ತಿರಲಿಲ್ಲ ಎನ್ನುತ್ತಲೇ ಗೊಣಗಿದ. ಅಂದಹಾಗೆ ಅವನು ತೇಜಸ್ವಿ ಯಾದವ್ ಕಟ್ಟಾ ಅಭಿಮಾನಿ.

ಮಿಗ್-21 ಮತ್ತು ಜಾರ್ಜ್ ಫೋಟೋ

1997-98ರಲ್ಲಿ ಮಾಜಿ ಕೇಂದ್ರ ಸಚಿವ ಜಾರ್ಜ್ ಫರ್ನಾಂಡಿಸ್ ಅವರು ತಮ್ಮ ಬಟ್ಟೆ ಒಗೆದು ಏಳುವಾಗ ನೀರಿನ ನಲ್ಲಿ ಅವರ ತಲೆಗೆ ಬಡಿದಿತ್ತು. ಇದರಿಂದ ತಲೆಯಲ್ಲಿ ರಕ್ತ ಹೆಪ್ಪುಗಟ್ಟಿ ನಂತರ ಬಾಂಬೇಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು. 2004ರಲ್ಲಿ ಕೇಂದ್ರ ರಕ್ಷಣಾ ಸಚಿವರಾಗಿದ್ದಾಗ ಅವರು ಮಿಗ್-21 ಹತ್ತಿದ್ದರು. 98ರಲ್ಲಿ ನಲ್ಲಿ ಬಡಿದಿದ್ದ ಹಿನ್ನೆಲೆ ಯಲ್ಲಿ ನೀವು ಮಿಗ್ ಏರುವುದು ಒಳ್ಳೆಯದಲ್ಲ ಎಂದು ವೈದ್ಯರು ಸಲಹೆ ನೀಡಿದ್ದರೂ ಜಾರ್ಜ್ ಮಿಗ್-21 ಏರಿದ್ದರು. ನಂತರದಲ್ಲಿ ಮತ್ತೆ ಅವರ ತಲೆ ಯಲ್ಲಿ ರಕ್ತಸ್ರಾವ ಉಂಟಾಗಿತ್ತು. ಅನಾರೋಗ್ಯದ ನಡುವೆಯೂ 2004ರ ಲೋಕಸಭೆ ಚುನಾವಣೆಯನ್ನು ಅವರು ಗೆದ್ದಿದ್ದರು. ಮಿಗ್-21 ಏರುವ ಮುನ್ನ ತೆಗೆದಿದ್ದ ಫೋಟೋವನ್ನು ಚುನಾವಣೆ ಪ್ರಚಾರಕ್ಕೆ ಬಳಸಲೂ ಜಾರ್ಜ್ ಮತ್ತವರ ಬೆಂಬಲಿಗರು ಮುಂದಾಗಿದ್ದರಂತೆ. ಆದರೆ, ರಕ್ಷಣಾ ಸಚಿವರಾಗಿ ಸೇನೆಯವರ ಸಮವಸ್ತ್ರ ಧರಿಸಿ ಮಿಗ್-21 ಏರುತ್ತಿರುವ ಚಿತ್ರವನ್ನು ಚುನಾವಣೆ ಪ್ರಚಾರಕ್ಕೆ ಬಳಸುವಂತಿಲ್ಲ ಎಂದು ಚುನಾವಣಾ ಆಯೋಗ ತಡೆದಿತ್ತಂತೆ. ಈ ವಿಷಯವನ್ನು ನನಗೆ ಹೇಳಿದ್ದು ಮುಜಫರಪುರದಲ್ಲಿ ಜಾರ್ಜ್ ಅತ್ಯಾಪ್ತರಾಗಿದ್ದ ಕಮಲೇಶ್ವರ್ ಪ್ರಸಾದ್ ಸಿನ್ಹಾ ಅವರ ಪುತ್ರ ಅಂಬರೀಷ್ ಕುಮಾರ್ ಸಿನ್ಹಾ.

ಕನ್ನಡ ಸಂಘ, ಹಾಂಗ್‌ಕಾಂಗ್

ಕನ್ನಡ ಸಮುದಾಯವನ್ನು ಪ್ರತಿನಿಧಿಸುವ ಒಂದು ಲಾಭರಹಿತ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆಯಾಗಿದೆ. ಈ ಸಂಸ್ಥೆಯ ಉದ್ದೇಶ ಕನ್ನಡಿಗರ ನಡುವೆ ಕರ್ನಾಟಕ ಸಂಸ್ಕೃತಿ, ಕನ್ನಡ ಭಾಷೆ ಮತ್ತು ಕಲಾಪ್ರಕಾರಗಳನ್ನು ಪ್ರಚಾರ ಮಾಡುವುದು. ಬಹುಶಃ ಕನ್ನಡ ಸಂಘ, ಹಾಂಗ್ ಕಾಂಗ್ ಗ್ರೇಟ್ ಚೀನಾ ಭೌಗೋಳಿಕದಲ್ಲೇ ಮೊದಲ ಕನ್ನಡ ಸಂಸ್ಥೆಯಾಗಿದೆ! ಕನ್ನಡ ಸಂಘ, ಹಾಂಗ್ ಕಾಂಗ್ ಈಗಾಗಲೇ 2006ರಿಂದ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ.

ಈ ಹಿಂದೆ ಚಟುವಟಿಕೆಗಳನ್ನು ರಚನಾತ್ಮಕವಾಗಿ ಮಾಡಲು ಯಾವುದೇ ಮೂಲಭೂತ ಸಂಸ್ಥೆಯಾಗಲಿ, ವೇದಿಕೆಯಾಗಲಿ ಇರಲಿಲ್ಲ. 2004ರಲ್ಲಿ ಒಂದು ಗುಂಪು ತೈಕೂ ಶಿಂಗ್ವೆಲು ನಿಲ್ದಾಣದಲ್ಲಿ ಕಾಫಿಗೆ ಭೇಟಿಯಾಗಿ, ಒಂದು ಕನ್ನಡ ಸಂಘ ಸ್ಥಾಪನೆಯ ಬಗ್ಗೆ ವಿಮರ್ಶಿಸಿತು. ಪರಿಣಾಮವಾಗಿ ಜನವರಿ 2005ರಲ್ಲಿ ಕನ್ನಡ ಸಂಘ ಹಾಂಗ್‌ಕಾಂಗ್ ಸ್ಥಾಪನೆಯಾಯಿತು. ಸಂಘದ ವಿನಮ್ರ ಪ್ರಾರಂಭದಲ್ಲಿ ಸಣ್ಣ ಸದಸ್ಯತ್ವ ಕಂಡಿತು. ಆದರೆ ಸಂಘ ಯಾವಾಗಲೂ, ಕನ್ನಡ ಸಂಸ್ಕೃತಿಯ ಹರಡುವಿಕೆ ಮತ್ತು ಬೆಳವಣಿಗೆಯನ್ನು ತಮ್ಮ ಧ್ಯೆಯವಾಗಿಟ್ಟುಕೊಂಡ ಅಮೋಘವಾದ ಸದಸ್ಯರನ್ನು ಹೊಂದಿತ್ತು. ಆದ್ದರಿಂದ ಸಂಘ ಯಾವಾಗಲೂ ಪ್ರತಿವರ್ಷ ಹೊಸ ಅಧ್ಯಕ್ಷರನ್ನು ಚುನಾಯಿಸುತ್ತಿರುವುದು ಆಶ್ಚರ್ಯವೇನಲ್ಲ.

ವರ್ಷಗಳಲ್ಲಿ ಕನ್ನಡಿಗರನ್ನು ಹುಡುಕುವ ಮತ್ತು ಒಟ್ಟಿಗೆ ತರುವ ಸವಾಲಿನಿಂದ ಆರಂಭಗೊಂಡು, ಸಂಘದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ದತ್ತಿ ಚಟುವಟಿಕೆಗಳು ಮತ್ತು ಸ್ಥಳೀಯ ಪ್ರತಿಭೆಗಳನ್ನು ಬೆಂಬಲಿಸುವವರೆಗೂ ಸಂಘದ ಸಾಧನೆಗಳು ಗಮನಾರ್ಹವಾಗಿವೆ. ಪ್ರತಿವರ್ಷವೂ ಸಂಘವು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ಪ್ರಮುಖವಾಗಿ ಯುಗಾದಿ ಹಾಗೂ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತದೆ. 20224ರಲ್ಲಿ ಡಾ.ರಾಜ್‌ಕುಮಾರ್ ಅವರ ಮೊಮ್ಮಗ ವಿನಯ್ ರಾಜ್ ಕುಮಾರ್ ಅಭಿನಯದ ಕನ್ನಡ ಚಲನಚಿತ್ರ ಒಂದು ಸರಳ ಪ್ರೇಮ ಕಥೆ ಯನ್ನು ಹಾಂಗ್ ಕಾಂಗ್‌ನಲ್ಲಿ ಪ್ರದರ್ಶಿಸಲಾಯಿತು.

ಕನ್ನಡ ಭಾಷೆ, ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಯನ್ನು ವರ್ಧಿಸಿ, ಪ್ರಚಾರಗೊಳಿಸಿ ಎಲ್ಲೆಡೆ ಪಸರಿಸುವ ಜತೆಜತೆಗೆ ದತ್ತಿ ಕಾರ್ಯಕ್ರಮಗಳು, ಉದಾಹರಣೆಗೆ ಬಡತನ ಪರಿಹಾರ, ಶೈಕ್ಷಣಿಕ ಪ್ರಗತಿ ಹಾಗೂ ಇತರೆ ಸಮುದಾಯ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದು. ವಿವಿಧ ಕ್ಷೇತ್ರಗಳಲ್ಲಿ ಮಹೋನ್ನತ ಹಾಗೂ ಸಮರ್ಥ ಸಾಧಕರನ್ನು ಗುರುತಿಸಿ ಸನ್ಮಾನಿಸುವುದು. ನಿಯತಕಾಲಿಕಗಳು, ಸುತ್ತೋಲೆಗಳು ಹಾಗೂ ಇತರೆ ಸಂಘದ ಆಸಕ್ತಿಗಳನ್ನು ಪ್ರಚಾರಿಸುವ ಸಾಹಿತ್ಯಗಳನ್ನು ತಯಾರಿಸಿ ಮುದ್ರಿಸಿ ಸಂಘದ ಸದಸ್ಯರಿಗೆ ಹಾಗೂ ಇನ್ನಿತರ ಆಸಕ್ತರಿಗೆ ತಲುಪಿಸುವುದು. ಸದೃಶ ಆಸಕ್ತಿ ಹೊಂದಿರುವ ಇತರ ಸಂಘಗಳೊಂದಿಗೆ ಮೈತ್ರಿ ಬೆಳೆಸಿ ಕಾರ್ಯ ನಿರ್ವಹಿಸು ವುದು. ಸದಸ್ಯತ್ವ ಶುಲ್ಕ ಹಾಗೂ ಇನ್ನಿತರ ಕೊಡುಗೆಕಳ ವಿವರಗಳನ್ನು ಸಂಗ್ರಹಿಸಿ ಖಾತೆಗಳನ್ನು ಪ್ರಾಮಾಣಿಕವಾಗಿ ಕಾಯ್ದುಕೊಳ್ಳುವುದು. ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಕನ್ನಡಿಗರಿಗೆ ವೇದಿಕೆಯನ್ನು ಒದಗಿಸುತ್ತಿದೆ.

ವಿಶ್ವದಲ್ಲಿರುವ 7 ಖಂಡಗಳಲ್ಲಿ ಅಂಟಾರ್ಟಿಕ ಹೊರತುಪಡಿಸಿ ಇನ್ನುಳಿದ ಆರು ಖಂಡಗಳಲ್ಲಿ ಕನ್ನಡ ಒಕ್ಕೂಟಗಳಿರುವುದು ಕನ್ನಡಿಗರ ಶಕ್ತಿಯನ್ನು ತೋರಿಸುತ್ತದೆ. ಅಮೆರಿಕ, ಆಸ್ಟ್ರೇಲಿಯಾ, ಆಫ್ರಿಕಾ ಖಂಡದಲ್ಲಿರುವ ಕನ್ನಡ ಸಂಘಟನೆಗಳ ಪರಿಚಯವಾಗಿದ್ದು, ಇದೀಗ ಏಷ್ಯಾದಲ್ಲಿರುವ ಕನ್ನಡ ಸಂಘಟನೆಗಳ ಸರಣಿ ಆರಂಭವಾಗಲಿದೆ. 70ನೇ ಕರ್ನಾಟಕ ರಾಜ್ಯೋತ್ಸವದ ಈ ಸಮಯದಲ್ಲಿ ವಿದೇಶಿ ನೆಲದಲ್ಲಿ ಕನ್ನಡ ಸೇವೆಯಲ್ಲಿ ತೊಡಗಿರುವ ಸಂಘಟನೆಗಳ ಮಾಹಿತಿ ಇಲ್ಲಿದೆ.

ಬೆಂಕಿ ಬಸಣ್ಣ, ನ್ಯೂಯಾರ್ಕ್

ಸ್ವಂತ ಕಟ್ಟಡ ಹೊಂದಿದ ಮೊದಲ ಕನ್ನಡ ಸಂಘ!

ಕನ್ನಡ ಸಂಘ ಬಹ್ರೈನ್

ಕನ್ನಡ ಸಂಘ ಬಹ್ರೈನ್, ಕರ್ನಾಟಕ ಸರಕಾರದ ಅನುದಾನ ಪಡೆದು ಭಾರತದಾಚೆಗೆ ಮೊತ್ತ ಮೊದಲ ಸ್ವಂತ ಕಟ್ಟಡ ನಿರ್ಮಿಸಿದ ಕೀರ್ತಿ ಬಹ್ರೈನ್‌ನಲ್ಲಿರುವ ಕನ್ನಡ ಸಂಘಕ್ಕೆ ಸಲ್ಲುತ್ತದೆ. 1977ರಲ್ಲಿ ಬೆರಳೆಣಿಕೆ ಜನರಿಗೆ ನಾಟಕ ಮಾಡಬೇಕೆಂಬ ಮನಸ್ಸಾಯಿತು. ಅದಕ್ಕೆ ಯಾರದ್ದೋ ಮನೆಯಲ್ಲಿ, ಹೋಟೇಲಿನಲ್ಲಿ ಕುಳಿತು ಚರ್ಚಿಸುತ್ತಿದ್ದರು. ಕ್ರಮೇಣ ಅದಕ್ಕೆ ನಿರ್ದಿಷ್ಟವಾದ ರೂಪ ನೀಡಲು ನಿರ್ಧರಿಸಿ, ಬಹ್ರೈನ್ ದೇಶದ ಕಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಚಿವಾಲಯದಿಂದ 'ಸಾಮಾಜಿಕ ಮತ್ತು ಸಾಂಸ್ಕೃತಿಕ' ಸಂಸ್ಥೆಯಾಗಿ ಅಧಿಕೃತವಾಗಿ ನೋಂದಾಯಿಸಲಾಯಿತು. ಅಂದಿನಿಂದ ಇಂದಿನವರೆಗೂ 'ಮುತ್ತಿನ ದ್ವೀಪ' ಎಂದೇ ಹೆಸರಾಗಿರುವ ಬಹ್ರೈನ್ ದೇಶದಲ್ಲಿ 'ಕನ್ನಡ ಸಂಘ ಬಹ್ರೈನ್' ಚಿರಪರಿಚಿತ ಹೆಸರು. ಕರ್ನಾಟಕದ ಭಾಷೆ, ಕಲೆ, ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಪಣತೊಟ್ಟಿರುವ ಕನ್ನಡ ಸಂಘ, ಭಾರತೀಯ ದೂತಾವಾಸಕ್ಕೂ ಅಚ್ಚು-ಮೆಚ್ಚು.

'ಸಂಘ ಜೀವನ ಸುಖ ಜೀವನ' ಎಂಬ ಘೋಷವಾಕ್ಯದೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಕನ್ನಡ ಸಂಘ ಬಹ್ರೈನ್, ಇಲ್ಲಿ ನೆಲೆಸಿರುವ ಕನ್ನಡಿಗರಿಗೆ 'ಹೋಮ್ ಅವೇ ಫ್ರಂ ಹೋಮ್'. ನಲವತ್ತೇಳು ವರ್ಷದ ಸಮೃದ್ಧ ಇತಿಹಾಸ ಹೊಂದಿರುವ ಇಲ್ಲಿಯ ಕನ್ನಡ ಸಂಘ, ಉದ್ಯೋಗ ನಿಮಿತ್ತ ತಾಯ್ನಾಡಿನಲ್ಲಿರುವ ತಮ್ಮ ಮನೆಯನ್ನು ಬಿಟ್ಟು ಬಂದವರಿಗೆ ಇನ್ನೊಂದು ಮನೆಯೇ ಆಗಿದೆ. ಈಗ, ಬಹುಕಾಲದಿಂದ ಇಲ್ಲಿ ನೆಲೆಸಿದ ಕನ್ನಡಿಗರ ಕನಸಿನ ಸೌಧ ನನಸಾಗಿ, 'ಕನ್ನಡ ಭವನ' ನಿರ್ಮಾಣಗೊಂಡ ನಂತರವಂತೂ ಇದು ಅಕ್ಷರಶಃ ಸತ್ಯವಾಗಿದೆ.

ಕನ್ನಡ ತರಗತಿ

ಸಂಘದಲ್ಲಿ ಕಳೆದ ನಾಲ್ಕು ದಶಕದಿಂದ ಉಚಿತವಾಗಿ ಕನ್ನಡ ತರಗತಿ ನಡೆಸಲಾಗುತ್ತಿದೆ. ಕನ್ನಡ ಭಾಷೆಯೊಂದಿಗೆ, ಕನ್ನಡದ ಸಂಸ್ಕೃತಿ, ಕರ್ನಾಟಕದ ಕಲೆ, ಪರಂಪರೆಯ ಜತೆಗೆ ನಮ್ಮ ನಾಡಿನ ತಿನಿಸುಗಳು, ತಾಣಗಳ ಕುರಿತೂ ತಿಳಿಸಿಕೊಡಲಾಗುತ್ತದೆ. ಹಾಡು, ಭಾಷಣ, ಬರಹ ಇತ್ಯಾದಿಗಳನ್ನು ಕಲಿಸುವುದರೊಂದಿಗೆ ಸ್ಪರ್ಧೆಯನ್ನೂ ಏರ್ಪಡಿಸಲಾಗುತ್ತದೆ. ಪ್ರತಿ ವರ್ಷ ಸುಮಾರು ಐವತ್ತು ಮಕ್ಕಳು ಇದರ ಲಾಭ ಪಡೆಯುತ್ತಿದ್ದಾರೆ. ವಿದೇಶದಲ್ಲಿ ಕನ್ನಡ ಸಂಘಗಳನ್ನು ನಿರ್ಮಿಸುವುದೇ ಕಷ್ಟ. ಹಾಗಿರುವಾಗ ಅಲ್ಲಿ ಕನ್ನಡ ಪುಸ್ತಕಗಳಿರುವ ವಾಚನಾಲಯ ಇರಲು ಸಾಧ್ಯವೇ? ಇದಕ್ಕೆ ಉತ್ತರ, ಕನ್ನಡ ಸಂಘ ಬಹ್ರೈನ್. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಪುಸ್ತಕ ಹೊಂದಿರುವ ಒಂದು ವಾಚನಾಲಯ ಕನ್ನಡ ಭವನದಲ್ಲಿದ್ದು, ಇಲ್ಲಿ ಕರ್ನಾಟಕದ ಪ್ರಮುಖ ದಿನಪತ್ರಿಕೆ, ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳು ಲಭ್ಯವಿದೆ. ಪ್ರತಿ ವರ್ಷವೂ ಸಂಘದ ಚಟುವಟಿಕೆಗಳ ದಾಖಲೆಗಳನ್ನೆಲ್ಲ ಹೊತ್ತು ಸಂಭ್ರಮಿಸುವ ವಾರ್ಷಿಕ ಸ್ಮರಣ ಸಂಚಿಕೆ 'ಕಾವೇರಿ'. ಕಳೆದ ನಾಲ್ಕು ದಶಕದಿಂದ ನಿರಂತರವಾಗಿ ಸಂಘದಲ್ಲಿ ನಡೆಯುವ ಸಾಂಸ್ಕೃತಿಕ, ಕ್ರೀಡಾ ಮತ್ತು ಸಮಾಜಮುಖಿ ಕಾರ್ಯಗಳನ್ನು ಚಿತ್ರ ಸಮೇತ 'ಕಾವೇರಿ' ಹೊತ್ತು ತರುತ್ತಿದೆ.

ಪ್ರಥಮ ಅಂತಾರಾಷ್ಟ್ರೀಯ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಪ್ರಪ್ರಥಮ ಅಂತಾರಾಷ್ಟ್ರೀಯ ಸಾಹಿತ್ಯ ಸಮ್ಮೇಳನ ನಡೆದದ್ದು ಬಹ್ರೈನ್‌ನಲ್ಲಿ. ಸ್ವಂತ ಕಟ್ಟಡ ಬಿಡಿ. ಕಟ್ಟಡವೇ ಇರದಿದ್ದ ಸಂದರ್ಭದಲ್ಲಿ, ಮನಾಮದಲ್ಲಿರುವ 'ಇಂಡಿಯನ್ ಕ್ಲಬ್'ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಂಘ ಬಹ್ರೈನ್ ಜಂಟಿಯಾಗಿ ಪ್ರಥಮ ಅಂತಾರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನ'ವನ್ನು ಆಯೋಜಿಸಿತ್ತು. 103 ವರ್ಷದ ಸಂಭ್ರಮದಲ್ಲಿದ್ದ ಸಾಹಿತ್ಯ ಪರಿಷತ್ತಿನ ನೆನಪಿಗಾಗಿ ನೂರ ಮೂರು ಜನ ಕರ್ನಾಟಕದ ಸಾಹಿತಿಗಳು, ಜಿಲ್ಲಾಧ್ಯಕ್ಷರು, ಮಂತ್ರಿಗಳು, ಗಣ್ಯರು ಬಹ್ರೈನ್‌ಗೆ ಆಗಮಿಸಿದ್ದರು. ಎರಡು ದಿನ ಅದ್ದೂರಿಯಾಗಿ ನಡೆದ ಕಾರ್ಯಕ್ರಮದಲ್ಲಿ ಗೋಷ್ಠಿಗಳು, ಸಂಗೀತ, ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಯಕ್ಷಗಾನ ತರಬೇತಿ

ಕರ್ನಾಟಕದ ಗಂಡು ಕಲೆ ಎಂದೇ ಖ್ಯಾತವಾದ ಯಕ್ಷಗಾನ ತರಬೇತಿಯನ್ನು ಕಳೆದ ಮೂರು ದಶಕದಿಂದ ಸಂಘ ಉಚಿತವಾಗಿ ನೀಡುತ್ತಿದೆ. ಸುಮಾರು ನಲವತ್ತು ಆಸಕ್ತರು ಇದರ ಪ್ರಯೋಜನ ಪಡೆಯುತ್ತಿದ್ದು, ಪ್ರತಿವರ್ಷ ಬಹ್ರೈನ್‌ನಲ್ಲಿ ಕನಿಷ್ಠ ಎರಡು ಯಕ್ಷಗಾನ ಪ್ರದರ್ಶನ ನಡೆಯುತ್ತದೆ. ಅದರೊಂದಿಗೆ, ತಾಳ-ಮದ್ದಲೆ, ಪೂರ್ವರಂಗದಂತಹ ಕಾರ್ಯಕ್ರಮಗಳೂ ನಡೆಯುತ್ತವೆ. ಎಂಬತ್ತರ ದಶಕದಲ್ಲಿಯೇ ಕೊಲ್ಲಿ ರಾಷ್ಟ್ರಗಳಲ್ಲಿಯೇ ಪ್ರಥಮವಾಗಿ ಯಕ್ಷಗಾನ ನಡೆದದ್ದು ಬಹ್ರೈನ್‌ನಲ್ಲಿ. 2016ರಲ್ಲಿ ಪ್ರಥಮ 'ಗಲ್ಫ್ ಯಕ್ಷ ವೈಭವ' ಆಯೋಜಿಸಿದ್ದೂ ಕನ್ನಡ ಸಂಘ ಬಹ್ರೈನ್. ತೆಂಕು ತಿಟ್ಟು, ಬಡಗು ತಿಟ್ಟಿನ ಆಟದೊಂದಿಗೆ, ತೆಂಕು-ಬಡಗಿನ ಕೂಡಾಟಗಳೂ ಇಲ್ಲಿ ನಡೆದ ದಾಖಲೆಯಿದೆ. ಈಗಂತೂ ಸ್ವಂತ ಹಿಮ್ಮೇಳ-ಮುಮ್ಮೇಳ, ಸಂಪೂರ್ಣ ವೇಷ-ಭೂಷಣಗಳನ್ನು ಹೊಂದಿದೆ. ಯಾವುದೇ ವೃತ್ತಿಪರ ಮೇಳಕ್ಕೂ ಕಮ್ಮಿ ಇಲ್ಲದ ಸುಸಜ್ಜಿತ ಯಕ್ಷಗಾನ ತಂಡವೇ ಇಲ್ಲಿ ತಯಾರಾಗಿ ನಿಂತಿದೆ.

ಸಂಘ ಪ್ರತಿವರ್ಷ ನಡೆಸಿಕೊಂಡು ಬರುವ ಕಾರ್ಯಕ್ರಮಗಳಲ್ಲಿ ಪ್ರಮುಖವಾದದ್ದು 'ಕನ್ನಡ ವೈಭವ'. ಅದರೊಂದಿಗೆ 'ಅಮರ ಮಧುರ ಗೀತೆ' 'ನಾಟಕ'ಗಳನ್ನೂ ಪ್ರತಿ ವರ್ಷ ಯೋಜಿಸಲಾಗುತ್ತದೆ. ಉಳಿದಂತೆ 'ನೃತ್ಯ, ಸಂಗೀತ, ಚರ್ಚೆ, ಚಿತ್ರಕಲೆ, ಇತ್ಯಾದಿ ಪ್ರದರ್ಶನಗಳು, ಸ್ಪರ್ಧೆಗಳು ಸಂಘದಲ್ಲಿ ನಿರಂತರವಾಗಿ ನಡೆಯುತ್ತಿರುತ್ತವೆ. ಧಾರ್ಮಿಕ ಕಾರ್ಯಕ್ರಮಗಳಾದ 'ಸತ್ಯನಾರಾಯಣ ಪೂಜೆ', 'ಇಫ್ತಾರ್ ಕೂಟ', ಕ್ರಿಸ್ಮಸ್ ಆಚರಣೆ'ಗಳೂ ಸಂಘದಲ್ಲಿ ವರ್ಷಪ್ರತಿ ನಡೆಯುವ ಕಾರ್ಯಕ್ರಮಗಳು.

ಇದರೊಂದಿಗೆ ಪ್ರತಿವರ್ಷ ವಾರ್ಷಿಕ 'ಒಳಾಂಗಣ-ಹೊರಾಂಗಣ ಕ್ರೀಡಾಕೂಟ', 'ಬೇಸಿಗೆ ಒಳಾಂಗಣ ಕ್ರೀಡಾಕೂಟ'ಗಳನ್ನು ಆಯೋಜಿಸಲಾಗುತ್ತದೆ. ಮಾಸಿಕವಾಗಿ ಕೇರಂ, ಡಾರ್ಟ್ಸ್ ಮತ್ತು ಮೆಂಡಿಕೋಟ್' ಆಯೋಜಿಸಿಲಾಗುತ್ತದೆ. ಸಂಘದಲ್ಲಿ ಕ್ರಿಕೆಟ್, ವಾಲಿಬಾಲ್, ಥ್ರೋಬಾಲ್ ಇತ್ಯಾದಿ ತಂಡಗಳಿದ್ದು, ಸಂಘವು ಬಹ್ರೈನ್ನಲ್ಲಿ ನಡೆಯುವ ಹಲವು ಪ್ರತಿಷ್ಠಿತ ಕ್ರಿಕೆಟ್, ಥ್ರೋಬಾಲ್, ಡಾರ್ಟ್ಸ್ ಪಂದ್ಯಗಳಲ್ಲಿ ಜಯ ಗಳಿಸಿದೆ. ಸಂಘ ತನ್ನ ಅವಿರತವಾದ ಚಟುವಟಿಕೆಯಿಂದಾಗಿ 2002ರಲ್ಲಿ ಕರ್ನಾಟಕ ಸರಕಾರ ನೀಡುವ 'ರಾಜ್ಯಪ್ರಶಸ್ತಿ'ಗೆ ಭಾಜನವಾಗಿದೆ. ಜತೆಗೆ, 'ಆಳ್ವಾಸ್ ನುಡಿಸಿರಿ ಪ್ರಶಸ್ತಿ', 'ಯಕ್ಷಧ್ರುವ ಪಟ್ಲ ಫೌಂಡೇಷನ್' ಪ್ರಶಸ್ತಿ, 'ಕರ್ನಾಟಕ ರತ್ನ' ಪ್ರಶಸ್ತಿಯೂ ಸೇರಿದಂತೆ ಹಲವು ಪ್ರಶಸ್ತಿ, ಸನ್ಮಾನಗಳನ್ನು ಸಂಘ ತನ್ನ ಮುಡಿಗೇರಿಸಿಕೊಂಡಿದೆ.

ಚಿತ್ರವಿಹಾರ

ಕರ್ತವ್ಯದ ಹಿರಿಮೆ

• ಮಾಯಾ ಬಾಲಚಂದ್ರ

ಪುರಾತತ್ವ ಶಾಸ್ತ್ರಜ್ಞರು, ಜ್ವಾಲಾಮುಖಿಗಳಿಂದ ನಿರ್ಮಿತ ಗುಡ್ಡವನ್ನು ಅಗೆದು ಉತ್ಖನನ ನಡೆಸುತ್ತಿದ್ದರು. ಅಚ್ಚರಿಯೆಂಬಂತೆ ಪ್ರಾಚೀನ ವೈಭವ ಸಾರುವ ಒಂದು ಭವ್ಯ ನಗರ ತೆರೆದುಕೊಂಡಿತು. 2250 ವರ್ಷಗಳ ಹಿಂದೆ ರೋಮ್ ಸಾಮ್ರಾಜ್ಯದ ಪಾಂಪೇ ನಗರವನ್ನು ಅಪೋಶನ ತೆಗೆದುಕೊಂಡ ಜ್ವಾಲಾಮುಖಿಯ ದಿವ್ಯವನ್ನು ಅವರು ಅಗೆದಿದ್ದರು. ಅತ್ಯಂತ ಪ್ರಬಲವಾದ ಜ್ವಾಲಾಮುಖಿಯದು, ಆ ಜ್ವಾಲಾಮುಖಿಯ ತೀವ್ರತೆ, ಅದರಿಂದ ಉಂಟಾದ

ಪರಿಣಾಮಗಳು ಎಲ್ಲವೂ ಕೇವಲ ಪತ್ರವಾಗಿ ಇತಿಹಾಸದಲ್ಲಿ ಉಳಿದುಬಿಟ್ಟಿತ್ತು. ಆಗ ಕಣ್ಮರೆಯಾದ ನಗರ, ಸಂಪೂರ್ಣ ನಾಶವಾಗಿದೆ ಎಂದೇ ಎಲ್ಲರ ನಂಬಿಕೆಯಾಗಿತ್ತು. ಭಗ್ನಾವಶೇಷಗಳ ನಗರ, ಭೂಮಿಯ ಒಳಭಾಗದಲ್ಲಿ ಎಂಬ ಕಲ್ಪನೆ ಸಹ ಜನರಲ್ಲಿರಲಿಲ್ಲ.

ಇಡೀ ನಗರ ಭೂಗತವಾದಾಗ ಕೆಲವರು ರಕ್ಷಿಸಲ್ಪಟ್ಟರು. ಹಾಗೆ ಉಳಿದವರು ದಾಖಲಿಸಿದ್ದ ಸ್ಮೃತಿಗಳು ಇನ್ನೂ ಸುರಕ್ಷಿತವಾಗಿಯೇ ಇದ್ದವು. ಅವುಗಳಲ್ಲಿ ಹೀಗೆ ನಮೂದಿಸಲಾಗಿತ್ತು 'ಭೂಕಂಪದ ಮೊದಲ ಕಂಪನ ತಿಳಿಯುತ್ತಲೇ ಜನ ದಿಕ್ಕಾಪಾಲಾಗಿ ಓಡತೊಡಗಿದರು. ಕೆಲವರು ನಾಶವಾದರು. ಕೆಲವರು ಬದುಕುಳಿದರು. ಓಡುತ್ತಿದ್ದ ಕೆಲವರು ರಾಜದ್ವಾರದಲ್ಲಿ ದಂಡವನ್ನು ಹಿಡಿದು ನಿಂತ ದ್ವಾರಪಾಲಕನಿಗೆ ಕಿರುಚಿ ಹೇಳಿದರು ನಿನ್ನ ಪ್ರಾಣವನ್ನು ಉಳಿಸಿಕೊಳ್ಳಲು ಓಡು ಎಂದು. ಆದರೆ ಆ ಸಿಪಾಯಿ ಉತ್ತರಿಸಿದನು ನನ್ನ ಕರ್ತವ್ಯ, ನನ್ನನ್ನು ಇಲ್ಲಿಂದ ಅಲುಗಲು ಬಿಡುತ್ತಿಲ್ಲ ಎಂದು ಅವನು ಅಲ್ಲೇ ದೃಢವಾಗಿ ನಿಂತು ಬಿಟ್ಟ. ಇಡೀ ನಗರದೊಂದಿಗೆ ಅವನು ಭೂಗರ್ಭದಲ್ಲಿ ಸೇರಿಕೊಂಡನು' ಎಂದು.

ಉತ್ಖನನ ನಡೆಸುತ್ತಿದ್ದ ತಂಡ ರಾಜದ್ವಾರವನ್ನು ತಲುಪಿದಾಗ, ಅಲ್ಲಿ ದಂಡವನ್ನು ಹಿಡಿದ ಅಸ್ಥಿಪಂಜರವೊಂದು ಹಾಗೆಯೇ ನಿಂತಿರುವುದನ್ನು ಕಂಡು, ಅವರೆಲ್ಲರೂ ಮೂಕ ವಿಸ್ಮಿತರಾದರು. ಆ ದ್ವಾರಪಾಲಕ ಎಲ್ಲರಂತೆ ಓಡಿಹೋಗಿ ತನ್ನ ಪ್ರಾಣ ಉಳಿಸಿಕೊಳ್ಳಬಹುದಿತ್ತು. ಅಂತಹ ಕೋಲಾಹಲದಲ್ಲೂ ಸಹ ಸ್ಥಿರತೆ ಕಳೆದುಕೊಳ್ಳದ ಸ್ಥೈರ್ಯ ಮೆರೆದಿದ್ದ ಆತ. ಜನರೆಲ್ಲಾ ದಿಕ್ಕಾಪಾಲಾಗಿ ಓಡುತ್ತಿದ್ದರೂ, ತನ್ನನ್ನು ಓಡು ಎಂದು ಪ್ರೇರೇಪಿಸುತ್ತಿದ್ದರೂ ಕದಲದೆ ದೃಢತೆ ತೋರಿದ್ದನು. ತಾನು ಪಹರೆ ರಕ್ಷಿಸುತ್ತಿದ್ದ, ಯಾರೂ ತನ್ನನ್ನು ಪ್ರಶ್ನಿಸಲಾಗದ ಸಂದರ್ಭ ಅದಾಗಿತ್ತು. ಆದರೂ ಆತನ ಕರ್ತವ್ಯ ಪ್ರಜ್ಞೆ ಆತನನ್ನು ಸ್ವಲ್ಪವೂ ವಿಚಲಿತನಾಗಲು ಬಿಟ್ಟಿರಲಿಲ್ಲ. ಆತನ ಆತ್ಮಶಕ್ತಿ ಆತನನ್ನು ಕರ್ತವ್ಯ ವಿಮುಖನನ್ನಾಗಿ ಒಂದಿಷ್ಟೂ ಕದಲದಂತೆ ತಡೆದಿತ್ತು.

ರೋಮ್ ನಗರ ಆ ಸಿಪಾಯಿಗೆ ಶ್ರದ್ಧಾಂಜಲಿ ಅರ್ಪಿಸಿ ಸ್ಮರಿಸಿತು. ಸಾವಿರಾರು ವರ್ಷಗಳ ನಂತರವೂ, ಅಸ್ಥಿಪಂಜರದ ರೂಪದಲ್ಲಿ, ದಂಡವನ್ನು ಹಿಡಿದು ನಿಂತು ದರ್ಶಿಸುವವರಿಗೆ 'ಹೆದರದಿರಿ, ನಿಮ್ಮ ಕರ್ತವ್ಯ ಮಾರ್ಗದಲ್ಲಿ ದೃಢವಾಗಿ ನಿಲ್ಲಿರಿ. ಮಾನವನ ಹಿರಿಮೆ ಅದರಲ್ಲಿಯೇ ಇದೆ' ಎಂಬ ಸಂದೇಶವನ್ನು ಸಾರುತ್ತಿದ್ದಾನೆ.

ಜೀವನದಲ್ಲಿ ಕ್ಷಮಾ ಗುಣಕ್ಕೂ ಇದೆ ಮಹತ್ವ

ಇನ್ನೊಬ್ಬರ ತಪ್ಪನ್ನು ಎತ್ತಿಹಿಡಿದು ಸಂಬಂಧವನ್ನು ಕೆಡಿಸುವ ಬದಲು, ತಪ್ಪನ್ನು ತಿದ್ದಿ ಮನ್ನಿಸಿ ಬಿಡುವುದು, ಮುನಿಯುವ ಬದಲು ಮನ್ನಿಸುವ, ಶಿಕ್ಷಿಸುವ ಬದಲು ತಿದ್ದಿ ಕ್ಷಮಿಸುವುದು ಅತ್ಯಂತ ಪ್ರಯೋಜನಕಾರಿಯಾದದ್ದು. ಇದು ಮನ್ನಿಸುವವನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ. ಇಂದು ವಿಶ್ವ ಕ್ಷಮಾದಿನ, ಆ ಕುರಿತಂತೆ ಇದೊಂದು ಸಕಾಲಿಕ ಲೇಖನ.

• ಡಾ. ಗಾಯತ್ರಿ ಜೈಪ್ರಕಾಶ, ಜಮಖಂಡಿ

ಈ ಸೃಷ್ಟಿಯಲ್ಲಿ ಮಾನವನ ಹುಟ್ಟು ಅತ್ಯಂತ ಶ್ರೇಷ್ಠ. ಸಂಘಜೀವಿಗಳಾದ ನಾವು ವಿಶ್ವವೇ ಒಂದು ಎಂಬ ಭಾವನೆಯಿಂದ ಬದುಕಬೇಕಿದೆ. ಹೀಗಿರುವಾಗ ನಮಗೆ ಪರಸ್ಪರ ಸಹಕಾರ, ಹೊಂದಾಣಿಕೆ, ಸಹಯೋಗ, ತಂಡಕಾರ್ಯ, ಗೌರವ, ಕರುಣೆ, ಸಮಭಾವ ಇರಬೇಕಾಗುತ್ತದೆ.

ಯಶಸ್ಸನ್ನು ಕಾಣಬೇಕಾಗುವ ಹಾದಿಯಲ್ಲಿ ಇವೆಲ್ಲವೂ ಅನಿವಾರ್ಯವಾದರೂ ಯಾವುದೋ ಒಂದು ಹೆಜ್ಜೆಯಲ್ಲಿ ನಮ್ಮ ಆತ್ಮೀಯರಿಂದ ತಪ್ಪುಗಳು ನಡೆಯುವುದು, ಕೋಪ, ವೈಮನಸ್ಸು, ಪೈಪೋಟಿ, ಅಸೂಯೆ, ಅಹಂಕಾರ ಇವೆಲ್ಲಾ ಎದುರಾಗಿ ಸಂಘರ್ಷ ಉಂಟಾಗಿ ಕಂದಕ ಏರ್ಪಡುವುದು ಸಹಜವೆ. ಈ ತರಹದ ವೈರುಧ್ಯಗಳು ನಮ್ಮ ಪ್ರಗತಿಯನ್ನು ಧಮನಿಸಿ ಮನಸ್ಸನ್ನು ಹಿಂಡಿ ಬಿಡುತ್ತವೆ.

ಕುಟುಂಬದಲ್ಲಾಗಲೀ, ಕಾರ್ಯಸ್ಥಳದಲ್ಲಾಗಲಿ ಮನಸ್ತಾಪಗಳು ಬರುವುದು ಸಹಜ. ಆದರೆ ಅವುಗಳನ್ನು ಕ್ಷಮಿಸದೇ ಉರಿಯುವ ಜ್ವಾಲೆಗೆ ತುಪ್ಪ ಸುರಿಯುತ್ತಾ ಇದ್ದರೆ ನಮ್ಮ ಬದುಕು ಸುಟ್ಟು ಬೂದಿಯಾಗುತ್ತದೆ. ಆದ್ದರಿಂದ ನಾವು ನೆಮ್ಮದಿಯಿಂದ, ಗೌರವದಿಂದ ಯಶಸ್ವಿಯಾಗಿ ಬಾಳಬೇಕೆಂದರೆ ಪ್ರತಿಯೊಬ್ಬರಲ್ಲಿಯೂ ಕ್ಷಮಾ ಗುಣ ಇರಬೇಕು. ಇಲ್ಲದಿದ್ದರೆ ಅದನ್ನು ಅನಿವಾರ್ಯವಾಗಿ ರೂಢಿಸಿಕೊಳ್ಳಬೇಕು, ಏಕೆಂದರೆ ಕ್ಷಮಾಗುಣ ಜೀವನದಲ್ಲಿ ಪವಾಡವನ್ನೇ ಸೃಷ್ಟಿಸಬಲ್ಲುದು.

ಪ್ರಪಂಚದ ಹಾಗೂ ನಮ್ಮ ಸಮಾಜದಲ್ಲಿ ಎಷ್ಟೆಲ್ಲಾ ಅವಾಂತರಗಳು ನಮ್ಮ ಕಣ್ಣ ಮುಂದೆ ಸಾಲು ಸಾಲಾಗಿ ಹಾದುಹೋಗುತ್ತಿದೆ. ಇವುಗಳಲ್ಲಿ ಹೆಚ್ಚಿನವು ಅಸಹಿಷ್ಣುತೆಯಿಂದಲೇ ನಡೆಯುವುವಂತದ್ದಾಗಿವೆ. ಕುಟುಂಬದಲ್ಲಿ ಗಂಡ-ಹೆಂಡತಿ ನಡುವೆ ವಿವಾಹ ವಿಚ್ಛೇದನೆ, ಕೊಲೆ, ಆತ್ಮಹತ್ಯೆ, ಮರ್ಯಾದಾ ಹತ್ಯೆ, ಏನೋ ತಪ್ಪು ಮಾಡಿದರೆಂದು ಹೆತ್ತ ಮಕ್ಕಳನ್ನೇ ದೂರ ಮಾಡುವುದು, ದ್ವೇಷಿಸುವುದು, ದಾಯಾದಿಗಳ ನಡುವೆ ಆಸ್ತಿಕಲಹ ಇಂದಿನ ದಿನಗಳಲ್ಲಿ ಯಥೇಚ್ಛವಾಗಿ ಕಂಡುಬರುತ್ತಿದೆ. ನೆರೆಹೊರೆ ಗಲಾಟೆಗಳು, ಬುದ್ಧಿವಾದದ ಮಾತು ಹೇಳಿದರೂ ತಪ್ಪಾಗಿ ತಿಳಿದು ಅಟ್ಟಾಡಿಸಿ ಕೊಲೆ ಮಾಡುವುದು, ಹೊಡೆದಾಡುವುದು ಇಂತಹವುಗಳಿಗೆ ಅಂಕುಶವೇ ಇಲ್ಲದಾಗಿದೆ. ಕಾರಣವಲ್ಲದ ಘಟನೆಗಳಿಗೆ ದೊಂಬಿ ಏಳುವುದು, ಸಾರ್ವಜನಿಕ ಸಂಪತ್ತು ನಾಶ ಮಾಡುವುದು ಕಾಣುತ್ತಿರುತ್ತೇವೆ. ರಾಜಕೀಯದಲ್ಲಂತೂ ಮಾತಿನ ಕೆಸರಾಟ, ಕೊಚ್ಚೆಯಾಟ ಎದುರಾಳಿಯ ಮಾನ-ಮರ್ಯಾದೆ ಎಲ್ಲಾ ತೆಗೆದು ದಮ್ಮಿಕ್ಕಿಸುವುದು ಜಗಜ್ಜಾಹೀರಾಗಿದೆ.

ಕುಟುಂಬ, ನೆರೆಹೊರೆ, ಸಮಾಜ, ರಾಜಕೀಯ ಇಲ್ಲೆಲ್ಲಾ ನೆಮ್ಮದಿ ಹಾಳಾಗಿದೆ ಎಂದು ಅನಿಸುವುದು ಸಹಜ. ಹಾಗಾದರೆ ಇದಕ್ಕೆ ಮದ್ದಿಲ್ಲವೇ? ಖಂಡಿತಾ ಇದೆ, ಅದೇ ಕ್ಷಮಾಗುಣ. ಇನ್ನೊಬ್ಬರ ತಪ್ಪನ್ನು ಎತ್ತಿಹಿಡಿದು ಸಂಬಂಧವನ್ನು ಕೆಡಿಸುವ ಬದಲು, ತಪ್ಪನ್ನು ತಿದ್ದಿ ಮನ್ನಿಸಿ ಬಿಡುವುದು, ಮುನಿಯುವ ಬದಲು ಮನ್ನಿಸುವ, ಶಿಕ್ಷಿಸುವ ಬದಲು ತಿದ್ದಿ ಕ್ಷಮಿಸುವುದು ಅತ್ಯಂತ ಪ್ರಯೋಜನಕಾರಿಯಾದದ್ದು. ಇದು ಮನ್ನಿಸುವವನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ.

ಈ ಕ್ಷಮಾಗುಣ ಪ್ರತಿಯೊಬ್ಬ ಮಾನವರಲ್ಲಿಯೂ ಇರಲೇ ಬೇಕಾದ ಮಹತ್ವದ ಗುಣ. ಸಂತರು, ಋಷಿಮುನಿಗಳು ಕ್ಷಮೆಯನ್ನು ನೀಡಿದ್ದನ್ನು ಕಥೆ-ಪುರಾಣಗಳಲ್ಲಿ ನಾವು ಸಾಕಷ್ಟು ಕೇಳಿದ್ದೇವೆ. ಕ್ಷಮಾಗುಣವಿದ್ದರೆ ಶಾಂತಿಯಿಂದ, ಆನಂದದಿಂದ ಬಾಳಬಹುದು.

ಹಾಗಾದರೆ ಈ ಕ್ಷಮಾಗುಣವನ್ನು ನಾವು ಹೇಗೆ ರೂಢಿಸಿಕೊಳ್ಳಬಹುದು?-ನಾವ್ಯಾರೂ ಇಲ್ಲಿ ಶಾಶ್ವತ ಅಲ್ಲ ಎಂಬುದು ಮೊದಲು ಪ್ರತಿಯೊಬ್ಬರಿಗೆ ಅರ್ಥ ಆಗಬೇಕು. ಈ ಜೀವನ ಇರುವುದು ಒಂದೇ ಸಲ, ಏನಿದ್ದರೂ ಇಲ್ಲೇ ಜೀವಿಸಿ ಹೋಗಬೇಕೆಂದು ಮನವರಿಕೆ ಆಗಬೇಕು. ಏನೋ ಒಂದು ತಪ್ಪು ನಡೆದಿದೆ ಎಂದು ಸಂಬಂಧವನ್ನು ಮುರಿದು ಬಿಡುವುದು ಕ್ಷೇಮವಲ್ಲ. ಬದುಕು ಇರುವುದು ಕಟ್ಟಿಕೊಳ್ಳಲು ವಿನಃ ಮುರಿದು ಹಾಕಲು ಅಲ್ಲ. ಸಮಾಜದ ಟೊಳ್ಳು ಸ್ಥಾನ-ಮಾನ-ಮರ್ಯಾದೆಗೆ ನಾವು ನಮ್ಮವರನ್ನು, ನಮ್ಮತನವನ್ನು ಬಿಟ್ಟುಕೊಡಬಾರದು, ನಾವೇ ಬಲಿತೆಗೆದುಕೊಳ್ಳಬಾರದು. ಜಗವೇನೇ ಅಂದರೂ ನಾವು ಮಾತ್ರ ಸಹನೆಯಿಂದ ನಡೆದುಕೊಂಡು ಆಗಲಿ ಬಿಡು, ಹೋಗಲಿ ಬಿಡು, ಪಾಲಿಗೆ ಬಂದದ್ದು ಪಂಚಾಮೃತ, ನಮ್ಮ ಹಣೆಬರಹ ಎಂದು ಎಲ್ಲವನ್ನೂ ಕ್ಷಮಿಸಿ ಸ್ವೀಕರಿಸಬೇಕು.

ಅತಿಯಾದ ಲಾಲಸೆ ಬಿಟ್ಟು ಬದುಕುವುದು ಕಲಿಯಬೇಕು. ಏನಿದ್ದರೂ, ಎಷ್ಟಿದ್ದರೂ ಒಂದು ದಿನ ಬರಿಕೈಯಲ್ಲೇ ಹೋಗುವುದು, ಇಲ್ಲಿ ಯಾವುದೂ-ಯಾರೂ ಯಾವಾಗ ಬೇಕಾದರೂ ಇಲ್ಲವಾಗಬಹುದು ಎಂಬ ಸತ್ಯವನ್ನರಿತು ಎಲ್ಲರೂ ನಮ್ಮವರೇ, ಏನೋ ಆಗಿದೆ ಹೋಗಲಿ ಎಂದು ಕ್ಷಮಿಸಿ ಬಿಡಬೇಕು. ಈ ಪರಿಸ್ಥಿತಿ ತನಗೆ ಬಂದರೆ ಹೇಗೆ ಎಂಬ ಸಹಾನುಭೂತಿ ರೂಢಿಸಿಕೊಂಡು ಹೇಗೆ ನಿಭಾಯಿಸಬೇಕೆಂದು ಅವಿತುಕೊಳ್ಳಬೇಕು, ಅದರ ಹೊರತು ನಾನು ಇರುವುದೇ ಹೀಗೆ, ನಾನು ಹೇಳಿದಂತೆ ಆಗಬೇಕು, ತಪ್ಪಾದರೆ ಎಲ್ಲಾ ಹೋಯಿತು, ಎಲ್ಲವೂ ನನ್ನದಾಗಬೇಕು ಎಂಬ ಸ್ವಾರ್ಥಭಾವನೆ ಕ್ಷಮಾಗುಣವನ್ನು ಕುಂದಿಸಿ ಬಿಡುತ್ತದೆ.

ಪ್ರಸ್ತುತದ ದಿನಮಾನದಲ್ಲಿ ಕ್ಷಮಾಗುಣ ಬಹಳ ಅನಿವಾರ್ಯ, ಏಕೆಂದರೆ ಅದು ಬಹಳ ಮಹತ್ವ ಹೊಂದಿದೆ. ಸಮಾಜದಲ್ಲಿ ನಾವೆಲ್ಲರೂ ಪರಸ್ಪರ ತಪ್ಪುಗಳನ್ನು ಮುಂದೆ ಸಹಬಾಳ್ವೆ ನಡೆಸಲು ಮಾದರಿಯಾಗೋಣ.

ಕ್ರಿಯಾಶೀಲ ಬದುಕು: ನೆಮ್ಮದಿಯ ತಳಹದಿ

ಒಬ್ಬ ಶ್ರಮಜೀವಿ ನಿಟ್ಟುಸಿರು ಬಿಟ್ಟರೂ ಹೃದಯದಿಂದ ನಗುತ್ತಿರುತ್ತಾನೆ, ಅದಕ್ಕೆ ಕಾರಣವೇನೆಂದರೆ ಅವನ ಬದುಕು ಸದಾ ಚಟುವಟಿಕೆಯಿಂದ ತುಂಬಿರುವುದಾಗಿದೆ, ಹಾಗಾಗಿಯೇ ಅವನಿಗೆ ಬದುಕಿನ ಬಗ್ಗೆ ಬೇಸರವಿರುವುದಿಲ್ಲ, ಅರ್ಥಬದ್ಧ ಬದುಕನ್ನು ತಾನು ಕಳೆಯುತ್ತಿದ್ದಾನೆ ಎಂದು ಮನಸಾರೆ ಖುಷಿಪಡುತ್ತಿರುತ್ತಾನೆ.

• ಸರಸ್ವತಿ ಕೆ ನಾಗರಾಜ್, ಹಿರಿಯೂರು

ಇಂದು ನಾವು ಎಲ್ಲೆಡೆ ಕಾಣುತ್ತಿರುವುದು ಅತ್ಯಂತ ವೇಗದ ಜಗತ್ತು. ಹಾಗಾಗಿ ಪತ್ರಿಯೊಬ್ಬರೂ ಅವರವರ ಕೆಲಸ-ಕಾರ್ಯಗಳಲ್ಲಿ, ತಮ್ಮ ಭವಿಷ್ಯದ ಯೋಚನೆಗಳಲ್ಲಿ, ಸದಾ ನಿರತರಾಗುವುದು ಸಹಜ.

ನಮ್ಮ ಸುತ್ತಮುತ್ತ ಹಲವರು ಕೆಲವೊಮ್ಮೆ ಗೊಣಗಾಡುವುದು ನಮ್ಮ ಗಮನಕ್ಕೆ ಬರುತ್ತಿರುತ್ತದೆ, ಅದೇನೆಂದರೆ ಸಮಯದ ಕೊರತೆ ಮತ್ತು ತಾವು ಎದುರಿಸುತ್ತಿರುವ ಅಶಾಂತಿಯ ಪರಿಸ್ಥಿತಿ. ಆದರೆ ನಿಜವಾಗಿಯೂ ನೋಡಿದರೆ, ಯಾರ್‍ಯಾರು ಸದಾ ಹೆಚ್ಚೆಚ್ಚು ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೋ, ಅಂತವರೇ ಹೆಚ್ಚು ನೆಮ್ಮದಿಯಾಗಿರುವುದನ್ನು ನಾವು ಸೂಕ್ಷ್ಮವಾಗಿ ಗುರುತಿಸಲು ಸಾಧ್ಯ. ಅದೇಕೆಂದು ಊಹಿಸಬಲ್ಲಿರಾ? ಅಂತವರಿಗೆ ತಮ್ಮ ಪಾಲಿನ ಋಣಾತ್ಮಕ ವಿಷಯಗಳನ್ನು ಯೋಚನೆ ಮಾಡಲು ಸಮಯವೇ ಸಿಗುವುದಿಲ್ಲ ಎಂಬುದು ವಾಸ್ತವ. ಅಂತವರ ಮನಸ್ಸು ಎಂದಿಗೂ ಖಾಲಿ ಇರುವುದಿಲ್ಲ.

ಯಾರದ್ದೇ ಆಗಲಿ, ಖಾಲಿ ಮನಸ್ಸು ಕೆಲವೊಮ್ಮೆ ನೋವಿನ, ಚಿಂತೆಗಳ, ಅಸಹನೆಯ ಗೂಡಾಗುತ್ತದೆ, ಆದರೆ ಸದಾ ಕೆಲಸದಲ್ಲಿರುವವನು ಜೀವನದ ನಿಜವಾದ ಅರ್ಥ ಏನೆಂದು ಅರಿಯುತ್ತಾನೆ, ಹಾಗಾಗಿಯೇ ಅವನಿಗೆ ಪ್ರತಿಯೊಂದು ಕ್ಷಣವೂ ಮೌಲ್ಯವಾದುದ್ದೆನಿಸುತ್ತದೆ.

ನಾವು ಮಾಡುವ ವೃತ್ತಿಯೇ ಆಗಲಿ, ಚಟುವಟಿಕೆಗಳೇ ಆಗಲಿ ಅದು ಕೇವಲ ಗಳಿಕೆಗಾಗಿ ಮಾತ್ರ ಅಲ್ಲ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಯವುದೂ ಕೂಡಾ ಉತ್ತಮ, ಏಕೆಂದರೆ ಅದು ಆತ್ಮಕ್ಕೆ ಶಾಂತಿ ನೀಡುವ ಒಂದು ರೀತಿಯ ಧ್ಯಾನ. ಹೌದು, ಸದಾ ಚಟುವಟಿಕೆಯಲ್ಲಿರುವ ಮನುಷ್ಯ ನಿದ್ರೆ ಮಾಡುವಾಗ ಸಂತೃಪ್ತಿಯಿಂದ ಉಸಿರೆಳೆಯುತ್ತಾನೆ. ತಾನಿಂದು ಏನೋ ಪ್ರಯೋಜನಕಾರಿ ದಾರಿಯಲ್ಲಿ ಸಾಗಿದ್ದೆ ಎಂಬ ಭಾವನೆ ಅವನಿಗೆ ಆಳವಾದ ನೆಮ್ಮದಿ ಕೊಡುತ್ತದೆ.

ನೀವೇ ಯೋಚಿಸಿ ನೋಡಿ, ಒಬ್ಬ ನಿರುದ್ಯೋಗಿ ತನ್ನ ಬದುಕಿನ ಅಮೂಲ್ಯವಾದ ಸಮಯವನ್ನು ಪೋಲು ಮಾಡುತ್ತಾನೆ, ಹಾಗಾಗಿ ಸದಾ ಅಶಾಂತಿ ಅವನ್ನಲ್ಲಿರುವುದು ಸಹಜವೂ ಅಲ್ಲವೇ? ಆದರೆ ಒಬ್ಬ ಶ್ರಮಜೀವಿ ನಿಟ್ಟುಸಿರು ಬಿಟ್ಟರೂ ಹೃದಯದಿಂದ ನಗುತ್ತಿರುತ್ತಾನೆ, ಅದಕ್ಕೆ ಕಾರಣ ಏನೆಂದರೆ ಅವನ ಬದುಕು ಸದಾ ಚಟುವಟಿಕೆಯಿಂದ ತುಂಬಿರುವುದಾಗಿದೆ. ಹಾಗಾಗಿಯೇ ಅವನಿಗೆ ಬದುಕಿನ ಬಗ್ಗೆ ಬೇಸರವಿರುವುದಿಲ್ಲ, ಅರ್ಥಬದ್ಧ ಬದುಕನ್ನು ತಾನು ಕಳೆಯುತ್ತಿದ್ದಾನೆ ಎಂದು ಮನಸಾರೆ ಖುಷಿಪಡುತ್ತಿರುತ್ತಾನೆ. ಆ ಮೂಲಕ ಬದುಕಿನ ಹೊಸ ಅನುಭವ ಪಡೆಯುತ್ತಿರುತ್ತಾನೆ. ಅಂತವರ ಜೀವನವು ನಾಳೆಯ ದಾರಿಗೆ ಹೆಜ್ಜೆಯಾಗುತ್ತದೆ. ಆ ರೀತಿ ಯೋಚಿಸುವವರ ಮನಸ್ಸು ಎಂದಿಗೂ ಕುಸಿಯುವುದಿಲ್ಲ, ಆಲೋಚನೆ ದುಃಖದ ಕಡೆ ಹೊರಳುವುದಿಲ್ಲ. ಸದಾ ಗುರಿಯತ್ತ ಸಾಗುತ್ತಿದ್ದೇನೆಂಬ ಅರಿವು ಮನಸ್ಸಿಗೆ ಸದಾ ಶಾಂತಿ ನೀಡುತ್ತದೆ.

ಆದರೆ ಮತ್ತೊಂದೆಡೆ ಸೋಮಾರಿತನ ತುಂಬಿದವನಿಗೆ ಸಮಯ ತುಂಬಾ ಸಿಗುವುದೇನೋ ನಿಜ, ಹಾಗಾಗಿಯೇ ಅದೇ ಸಮಯ ಅವನ ಮನಸ್ಸನ್ನು ಸದಾ ತಿನ್ನುತ್ತಿರುತ್ತದೆ, ಆ ಮೂಲಕ ಹಳೆಯ ನೋವುಗಳನ್ನು ಮೆಲುಕು ಹಾಕುತ್ತಾ, ಇತರರ ಜೊತೆ ಅವನನ್ನು ಹೋಲಿಕೆ ಮಾಡುತ್ತಾ ಮನ:ಶಾಂತಿಯನ್ನು ಕಳೆದುಕೊಳ್ಳುವಂತೆಯೂ ಮಾಡುತ್ತದೆ.

ಆದರೆ ಸದಾ ಕ್ರಿಯಾಶೀಲ ವ್ಯಕ್ತಿತ್ವದ ಮನುಷ್ಯನ ಮನಸ್ಸು ಬೇರೆ ಯಾವುದೇ ಅನಗತ್ಯ ವಿಷಯಗಳಿಗೆ ಒಗ್ಗಿಕೊಳ್ಳುವುದಿಲ್ಲ. ಅವನಿಗೆ ದೂರು ಕೊಡುವ ಸಮಯವಿರುವುದಿಲ್ಲ, ಕೋಪ ಆವರಿಸಲು ಕಾರಣವಿರುವುದಿಲ್ಲ, ತನ್ನ ಬಗ್ಗೆ ಬೇಸರವನ್ನಂತೂ ಪಡುವುದೇ ಇಲ್ಲ. ಅವನಲ್ಲಿ ಇರುವ ದೂರದೃಷ್ಟಿಯ ಯೋಚನೆ ಸತತ ಪ್ರಯತ್ನ, ಪ್ರಗತಿ, ಮತ್ತು ಹೊಸ ಹೊಸ ಅನುಭವದ ಕಲಿಕೆ.

ದಿನವಿಡೀ ಕೆಲಸದ ಬಳಿಕ, ಹಾಸಿಗೆಯ ಮೇಲೆ ಬಿದ್ದಾಗ ನಿಶ್ಶಬ್ದವಾಗಿ ನಗುವುದು ಮುಖ್ಯ, ಏಕೆಂದರೆ ಬದುಕಿನ ಶ್ರಮ ಶಾಂತಿಗೆ ಕಾರಣವಾಗುತ್ತದೆ. ಹಾಗಾಗಿ ಸದಾ ಕ್ರಿಯಾಶೀಲವಾಗುವ ಅವಕಾಶವನ್ನು ತಪ್ಪಿಸಿಕೊಳ್ಳದಿರುವುದು ಉತ್ತಮ. ಆಗ ಮನಸ್ಸಿನ ಶಾಂತಿ ಪೂರ್ತಿ ಆವರಿಸಿದಂತಾಗುತ್ತದೆ, ಬದುಕಿಗೂ ಒಂದು ಪರಿಪೂರ್ಣ ಅರ್ಥ ಇದೆ ಎಂದನಿಸುತ್ತದೆ. ಆಗ ಅಲ್ಲಿ ನೆಮ್ಮದಿಯ ನಿಜವಾದ ತಾಣವಿರುವ ಅರಿವನ್ನು ಗುರುತಿಸಲು ಸಾಧ್ಯ.

ಜೀವನ ಮೊಬೈಲ್‌ಮಯ ಆಗಬಾರದು

• ಡಾ. ಮೈತ್ರಿ ಭಟ್, ವಿಟ್ಲ

ಇತ್ತೀಚೆಗೆ ಒಂದು ದಿನ ಹಾಗೇ ಸಮಯವನ್ನು ಕೊಲ್ಲಲು ಮೊಬೈಲ್ ಹಿಡಿದು ಸ್ಟೇಟಸ್ ನೋಡುತ್ತಾ ಕುಳಿತಿದ್ದೆ. ಗೆಳತಿಯೊಬ್ಬಳು ಅವಳ ಸಂಬಂಧಿಕರ ಮದುವೆಯ ವಿಡಿಯೋ ಸ್ಟೇಟಸ್ ಹಾಕಿದ್ದಳು. ವರ ವಧುವಿನ ಕೊರಳಿಗೆ ಕರಿಮಣಿ ಕಟ್ಟುತ್ತಿರುವ ದೃಶ್ಯ ಅದಾಗಿತ್ತು. ಆದರೆ ಅದನ್ನು ನೋಡುತ್ತಿದ್ದ ಹಾಗೇ ಮನಸು ಅದೆಲ್ಲೋ ಯೋಚನೆಯ ಗೂಡೊಳಗೆ ಸಿಲುಕಿಕೊಂಡಿತು, ಏಕೆಂದರೆ ಆ ಸಂದರ್ಭದಲ್ಲಿ ಅಲ್ಲಿದ್ದ ಪ್ರತಿಯೊಬ್ಬರೂ ಆ ಕ್ಷಣವನ್ನು ತಮ್ಮ ತಮ್ಮ ಮೊಬೈಲಿನಲ್ಲಿ ಸೆರೆ ಹಿಡಿಯುವುದರಲ್ಲಿ ಮಗ್ನರಾಗಿದ್ದರು.



ಯಾವಾಗ ಈ ಮೊಬೈಲ್ ಎನ್ನುವ ಮಾಯಜಾಲ ನಮ್ಮ ಅಂಗೈಯೊಳಗೆ ಸ್ಥಾನ ಪಡೆಯಿತೋ ಅಂದೇ ನಮ್ಮ ವರ್ತಮಾನದ ಕ್ಷಣ ಕಳೆದುಹೋಯಿತು. ನಾವು ಬದುಕಿನ ಪ್ರತೀ ಕ್ಷಣವ ಜೀವಿಸುವುದನ್ನು ಮರೆತು ಆ ಕ್ಷಣವ ನಾಳೆಗೆ ಕಾಪಿಡುವ ಭರದಲ್ಲಿ ಮೊಬೈಲ್ ಒಳಗೆ ತುರುಕಲು ಆರಂಭಿಸಿದೆವು. ಆದರೆ ನಿಜವಾಗಿ ಒಂದು ಕ್ಷಣ ಈ ಬಗ್ಗೆ ಯೋಚಿಸಿದರೆ ನಮ್ಮ ಖುಷಿ ಯಾವುದು ಎಂಬುದನ್ನು ನಾವು ಅರಿತುಕೊಳ್ಳಬಹುದಾಗಿದೆ.

'ನಿನ್ನೆ ನಿನ್ನೆಗೆ ನಾಳೆ ನಾಳೆಗೆ ಇಂದು ನಮ್ಮದೇ ಚಿಂತೆ ಏತಕೆ?' ಎನ್ನುತ್ತಿದ್ದ ನಾವು ನಿನ್ನೆಯ ನಾಳೆಗಾಗಿ ತೆಗೆದಿಡುವ ಭರದಲ್ಲಿ ಇಂದಿನ ಖುಷಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಈ ನಿಜ ನಮಗೆ ಅರಿವಾಗುವುದೆಂದು?

ನಮ್ಮದು ಕ್ಷಣ ಕ್ಷಣದ ಜೀವನ. ಈ ಕ್ಷಣ ಸುಂದರವಾದರೆ ನಮ್ಮ ಬದುಕು ಸುಂದರವಾಗುತ್ತದೆ. ಈ ಕ್ಷಣ ಕೆಟ್ಟರೆ ಬದುಕು ಕೆಡುತ್ತದೆ. ಬದುಕಿನ ಕ್ಷಣ ಕ್ಷಣಗಳ ಸಂಭ್ರಮಿಸುತ್ತಾ ಈ ಕ್ಷಣ ಬಾಳಬೇಕಿದೆ. ಕೈಯಲ್ಲಿ ಮೊಬೈಲ್ ಹಿಡಿದು ಎಲ್ಲವನ್ನೂ ಸೆರೆ ಹಿಡಿದು ಅದನ್ನು ಸ್ಟೇಟಸ್, ಇನ್ಸ್ಟಾಗ್ರಾಮ್, ಫೇಸ್ಬುಕ್ ಹೀಗೆ ಎಲ್ಲೆಲ್ಲೋ ತುರುಕಿ ಅದಕ್ಕೆ ಬರುವ ಲೈಕು, ಕಾಮೆಂಟ್ಸ್ ಇವುಗಳೇ ನಮ್ಮ ಸಂಭ್ರಮವಾದರೆ ಹೇಗೆ? ನಾವೆಂದು ನಮ್ಮ ಬಳಿಯಿರುವ ಜೀವದ ಭಾವಕ್ಕೆ ಸ್ಪಂದಿಸುತ್ತಾ ಜೀವಿಸುವುದು? ಆ ಹಿಂದಿನ ದಿನಗಳ ಹರಟೆ, ಮಾತು, ನಗೆ ಮರುಕಳಿಸುವುದು ಎಂದು?

ಇನ್ನಾದರೂ ನಾವು ವರ್ತಮಾನದಲ್ಲಿ ಬದುಕುವುದನ್ನು ಕಲಿಯೋಣ. ವರ್ತಮಾನದಲ್ಲಿ ಇರುವುದು ಎಂದರೆ ನಿನ್ನೆಯ ನೆನಪುಗಳ ಹೊರೆಯನ್ನು ಇಳಿಸಿ, ನಾಳೆಯ ಕನಸುಗಳ ಹೊರೆಯನ್ನು ಹೊತ್ತುಕೊಳ್ಳದೆ, ಹಗುರಾಗಿ ಬದುಕು ಬೀಸಿದತ್ತ ಸಾಗುವುದಾಗಿದೆ. ಹಾಗಾಗಿ ಇಂದನ್ನು ಒಪ್ಪಿ ಅಪ್ಪಿಕೊಳ್ಳೋಣ. ಬದುಕಿನ ಹೆಜ್ಜೆಯಿಡುತ್ತಾ ಸಾಗೋಣ...

ಬುದ್ಧಿ ಎಂಬ ಸಾರಥಿ

• ವಿದ್ಯಾಶಂಕರ ಶರ್ಮ

ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳು ನಮ್ಮಿಂದ ಆಯ್ಕೆಯಾಗಲು ನಮ್ಮ ಬುದ್ಧಿಯೇ ಕಾರಣ. ಬುದ್ಧಿಯು ನಮ್ಮ ಅಂತ:ಕರಣದ ನಿಶ್ಚಯಾತ್ಮಕ ಭಾಗವಾಗಿದೆ, ಅಂದರೆ ನಮ್ಮ ಸಂಕಲ್ಪಗಳು ಚಿಗುರೊಡೆಯುವುದು ಬುದ್ಧಿಯ ಗುಹೆಯೊಳಗೆ. ಸುಪ್ರಸಿದ್ಧ 'ಕಠೋಪನಿಷತ್'ನಲ್ಲಿ ನಮ್ಮ ದೇಹವನ್ನು ರಥಕ್ಕೆ, ಇಂದ್ರಿಯಗಳನ್ನು ಕುದುರೆಗಳಿಗೆ, ಬುದ್ಧಿಯನ್ನು ಸಾರಥಿಗೆ ಹೋಲಿಸಿ ಹೇಳಿದ ಮಾತುಗಳಿವೆ. ಇಂತಹದನ್ನು ಮಾಡಬೇಕು, ಇಂತಹ ಕಡೆಗೆ ಹೋಗಬೇಕು ಹೀಗೆ ಮಾತನಾಡ ಬೇಕು ಎಂಬ ನಿರ್ಧಾರಗಳು ಬುದ್ಧಿಯ ಗೂಡೊಳಗೆ ಆಗುತ್ತವೆ. ಆದ್ದರಿಂದ ಸಾರಥಿಯ ಪಾತ್ರ ಬಹು ಮುಖ್ಯವಾಗುತ್ತದೆ. ನಮ್ಮ ಬುದ್ಧಿಯ ಆಯ್ಕೆಗಳಿಗ ನುಸಾರವಾಗಿ ಪರಿಣಾಮಗಳು. ಅವುಗಳಿಂದ ನಮಗೆ ಸಂತಸ ಹಾಗೂ ನಿರಾಶೆಯ ಭಾವದ ಅನುಭವ. ಎಷ್ಟೋ ಬಾರಿ ಹೃದಯದ ಸಂದೇಶ ಮತ್ತು ಬುದ್ಧಿಯ ಸಂದೇಶಗಳ ನಡುವೆ ತಾಕಲಾಟವು ನಡೆಯುವುದುಂಟು. ಸಹಜ ದೃಷ್ಟಿಯಿಂದ ನೋಡಿದರೆ, ಬುದ್ಧಿಯ ಮಾತನ್ನು ಕೇಳುವುದು ಬಹುತೇಕ ಸನ್ನಿವೇಶಗಳಲ್ಲಿ ನಮಗೆ ಅನುಕೂಲಕರವಾಗುತ್ತದೆ. ವಸ್ತುನಿಷ್ಠ ಅಭಿಪ್ರಾಯಗಳು ಭಾವುಕತೆಯ ಸೋಂಕಿಗಿಂತ ಹೆಚ್ಚು ಅರ್ಥಪೂರ್ಣವಾಗಿರುತ್ತವೆ. ಸಾರಥಿ ಎಂದಾಗ ನಮಗೆ ನೆನಪಾಗುವುದು 'ಪಾರ್ಥಸಾರಥಿ' ಎನಿಸಿಕೊಂಡ ಶ್ರೀಕೃಷ್ಣನು. ಯದುಕುಲನಂದನನು ಅರ್ಜುನನಿಗೆ ಸಾರಥಿಯಾದ ಸನ್ನಿವೇಶದಲ್ಲಿ ಹುಟ್ಟಿದ 'ಭಗವದ್ಗೀತೆ' ಸರ್ವಶ್ರೇಷ್ಠ ಜೀವನ ಮಾರ್ಗದರ್ಶಿಕೆಯಾಗಿದೆ. ಕೃಷ್ಣನು ಸಾರಥಿಯ ರೂಪದಲ್ಲಿ ಗೋಚರಿಸಿ, ಬದುಕೆಂಬ ರಥಕ್ಕೆ ಸರಿಯಾದ ಚಾಲಕನು ಎಷ್ಟು ಮುಖ್ಯ ಎಂದು ಹೇಳಿದಂತಿದೆ. ಕಠೋಪನಿಷತ್ ನಲ್ಲಿ ಹೇಳಿದ ರಥ ರೂಪಕವನ್ನು ಭಗವಂತನ ಸಾರಥಿಯ ರೂಪಕ್ಕೆ ಜೋಡಿಸಿದಾಗ ಅದು ನೀಡುವ ಅರ್ಥ ಬಹು ವಿಶಾಲವಾದುದು. ನಮ್ಮ ಒಳಿತು ಕೆಡುಕುಗಳಿಗೆ ಬಹು ಪಾಲು ನಾವು ಆರಿಸಿಕೊಂಡ ಮಾರ್ಗಗಳು ಕಾರಣವಾಗಿರುತ್ತವೆ. ಹಾಗಾದರೆ ಬುದ್ಧಿಗೆ ಇಂತಹುದೇ ನಿರ್ಧಾರವನ್ನು ತೆಗೆದುಕೊಳ್ಳಲು ಪ್ರೇರಣೆ ಎಲ್ಲಿಂದ ಬಂದಿತು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಅದಕ್ಕೆ ಮನಸ್ಸೇ ಪ್ರೇರಕವು. ಉತ್ತಮ ಸಂಸ್ಕಾರಗಳಿಂದ, ಸ್ವಪ್ರಯತ್ನಗಳಿಂದ ಶುಚಿಯಾದ ಮನಸ್ಸು ಒಳ್ಳೆಯ ಬುದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತದೆ. ನಮ್ಮ ನಿರ್ಣಯಗಳು ಅಂತಿಮವಾಗಿ ಕಾರ್ಯರೂಪಕ್ಕೆ ಬರುವುದು ಬುದ್ಧಿಯ ಮೂಲಕವೇ ಆದರೂ, ಅದರ ಮೂಲಾಧಾರ ಇರುವುದು ನಮ್ಮ ಮನದ ಕುಹರ ದಲ್ಲಿ. ಶುದ್ಧವಾದ ಮನದಿಂದ ಉತ್ತಮ ಆಲೋಚನೆ ಗಳು, ಅವುಗಳಿಂದ ಸತ್ವಪೂರ್ಣ ಪ್ರತಿಫಲಗಳು ದೊರೆಯುತ್ತವೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮೋಸಗಾರ ಅಥವಾ ಮಂತ್ರಗಾರ (3)
4. ಪಂಡಿತ ಅಥವಾ ವಿದ್ವಾಂಸ ನಮ್ಮ ಮಾಜಿ ರಾಷ್ಟ್ರಪತಿಯೊಬ್ಬರನ್ನು ನೆನಪಿಸುತ್ತದೆ (3)
6. ದೊಡ್ಡಮಟ್ಟದ ನಾಶ ಅಥವಾ ಅಳಿವು (5)
7. ಜನರ ನಡುವೆ ಇರುವ ಸೇವಕ (3)
8. ಅಸ್ತವ್ಯಸ್ತವಾಗಿ ಬಂದಿರುವ ತಾವರೆ (3)
10. ಯಮನಿಗೆ ಮತ್ತೊಂದು ಹೆಸರು (3)
12. ಒಂದು ಜಾತಿಯ ಬಳ್ಳಿ ಮತ್ತದರ ಬೀಜವು ಅಂಜಿ ಬಂದಿದೆ (4)
14. ಸಾಕ್ಷ್ಯ ಅಥವಾ ದೃಢಪಡಿಸುವ ಸಾಧನ (4)
16. ಕೋಪಗೊಳ್ಳು ಅಥವಾ ರೇಗು (3)
18. ಮತ್ತೊಂದು ಅಪಹಾಸ್ಯ (3)
20. ಹತ್ತಿಯ ಮೇಲುಹೊದಿಕೆ (3)
21. ಪರಿಣಯದ ದಿನದ ವಧು (5)
22. ಹೆಂಗಳೆಯರಿಗೆ ಆಗಾಗ ನೆನಪಾಗುವ ಹುಟ್ಟಿದ ಮನೆ (3)
23. ಮಜವಾಗಿರುವ ಹಂತ (3)

ಮೇಲಿಂದ ಕೆಳಕ್ಕೆ

2. ಆಕಾಶದಲ್ಲಿ ಪ್ರಯಾಣಿಸಲು ಬಳಸುವ ವಾಹನ (3)
3. ಸಾಕಷ್ಟು ಧನವಿರುವಾತ (4)
4. ಸುಕುಮಾರವಾದ ಎಂದರ್ಥ (3)
5. ಮೊದಲನೆಯದ್ದಲ್ಲ, ಹತ್ತನೆಯ (3)
7. ಪಕ್ಕಕ್ಕೆ ಸರಿ ಎನ್ನುವ (3)
9. ಓದುಗ ತಲೆಕೆಳಗಾಗಿದ್ದಾನೆ (3)
10. ಆಕೆಗೆ ಹೆದರಿಕೆ (3)
11. ಅಂತಃಕರಣವನ್ನು ಸೂಚಿಸುವ ಜೀರ್ಣಾಂಗ (3)
13. ರಾಮನೊಂದಿಗೆ ಕಾಡಿಗೆ ಹೋದ ಸಹೋದರ (3)
15. ನವಿಲು, ಕೋಳಿ ಮೊದಲಾದ ಹಕ್ಕಿಗಳ ಜುಟ್ಟು (3)
17. ಶಿವನಿಗೆ ಪ್ರಿಯವಾದ ದಿನ ತಲೆಕೆಳಗಾಗಿದೆ (4)
18. ಸೋತುಹೋಗದ ಎಂಬರ್ಥದ ಎರಡನೆಯ ಜೈನ ತೀರ್ಥಂಕರ (3)
19. ಬಾಡು ಎಂಬರ್ಥ ಹಸುವಿನ ಕಂದನ ನಡುವೆ ಬಂದಿದೆ (3)
20. ಅಸ್ತವ್ಯಸ್ತವಾಗಿ ಬಂದಿರುವ ಹೊಯಿಗೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಮಾಯಾವಿ 4. ಕೋವಿದ 6. ಮಾರಣಹೋಮ 7. ಜವಾನ 8. ಲಕಮ 10. ಅಂತಕ 12. ಗುಲಗಂಜಿ 14. ರುಜುವಾತು 16. ಕೆರಳು 18. ಅಣಕ 20. ರಜಾಯಿ 21. ಮದುಮಗಳು 22. ತವರು 23. ಮಜಲು

ಮೇಲಿಂದ ಕೆಳಕ್ಕೆ: 2. ವಿಮಾನ 3. ಹಣವಂತ 4. ಕೋಮಲ 5. ದಶಮ 7. ಜರುಗು 9. ಕಚವಾ 10. ಅಂಜಿಕೆ 11. ಕರುಳು 13. ಲಕ್ಷ್ಮಣ 15. ತುರಾಯಿ 17. ರವಾಮಸೋ 18. ಅಜಿತ 19. ಕಮರು 20. ರಳುಮ

ದುಡುಕಿ ಜನ್ಮ ಹಾಳು ಮಾಡಿಕೊಂಡ ಜಯ-ವಿಜಯರು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ತೃಣಬಿಂದುವೆಂಬ ಮಹರ್ಷಿಯ ಮಗಳು ದೇವಹೂತಿ. ಆಕೆಗೆ ಕರ್ದಮ ಪ್ರಜಾಪತಿಯಿಂದ ಇಬ್ಬರು ಪುತ್ರರು ಜನಿಸಿದರು. ಅವರಲ್ಲಿ ಹಿರಿಯನನ್ನು ಜಯ, ಎರಡನೇಯವನನ್ನು ವಿಜಯನೆಂದು ಕರೆದರು. ಅವರಿಬ್ಬರೂ ವಿಷ್ಣುವಿನ ಮಹಾ ಭಕ್ತರು. ಯಾವಾಗಲೂ ನಾರಾಯಣ ಅಷ್ಟಾಕ್ಷರಿ ಮಂತ್ರವನ್ನು ಜಪಿಸಿದ್ದರ ಫಲವಾಗಿ ವೇದ ವಿದ್ಯೆಯನ್ನೂ, ವಿಷ್ಣು ಸಾಕ್ಷಾತ್ಕಾರವನ್ನೂ ಬಹುಬೇಗ ಗಳಿಸಿದರು. ದೊಡ್ಡ ದೊಡ್ಡ ಯಜ್ಞ ಯಾಗಾದಿಗಳನ್ನು ನಿರ್ವಹಿಸುವುದರಲ್ಲಿ ಪರಿಣತಿಯನ್ನು ಪಡೆದರು. ಹೀಗಿರುವಾಗ ಮರುತ್ ಎಂಬ ರಾಜನು ಇವರಿಬ್ಬರಿಂದ ಒಂದು ಮಹಾಯಜ್ಞವನ್ನು ಮಾಡಿಸಿದನು. ಯಜ್ಞ ಯಶಸ್ವಿಯಾಗಿ ನಡೆದಾಗ ಸಂತುಷ್ಟನಾದ ರಾಜನು ಅವರಿಗೆ ಹೇರಳವಾದ ಹಣವನ್ನು ದಕ್ಷಿಣೆಯಾಗಿ ನೀಡಿದನು.

ಆದರೆ ಅದನ್ನು ಹಂಚಿಕೊಳ್ಳುವ ಬಗ್ಗೆ ಅಣ್ಣ-ತಮ್ಮಂದಿರಲ್ಲಿ ವಿವಾದ ಉಂಟಾಯಿತು. ತನಗೆ ಸರಿಯಾಗಿ ಅರ್ಧ ಪಾಲು ಸಿಗಬೇಕೆಂದು, ಜಯನು ವಾದಿಸಿದನು, ವಿಜಯನು ತನಗೆ ಹೆಚ್ಚು ಪಾಲು ಸಿಗಬೇಕೆಂದು ಕೋರಿದನು. ಈ ಜಗಳದಲ್ಲಿ ಜಯನು ಕೋಪದಿಂದ ವಿಜಯನನ್ನು 'ನೀನು ನೀರಿನಲ್ಲಿ ಮೊಸಳೆಯಾಗು' ಎಂದು ಶಪಿಸಿದನು. ಅದಕ್ಕೆ ಪ್ರತಿ ಶಾಪವಾಗಿ ವಿಜಯನು, 'ನೀನು ಅರಣ್ಯದಲ್ಲಿ ಮದವೇರಿದ ಆನೆಯಾಗು' ಎಂದನು.

ಹೀಗೆ ಪರಸ್ಪರ ಶಪಿತರಾದ ಅವರು ದಿಕ್ಕು ತೋಚದೆ ಭಗವಂತನ ಮೊರೆ ಹೊಕ್ಕರು. ತಾವು ಮಾಡಿದ ತಪ್ಪಿನ ಅರಿವು ಅವರಿಗಾಗಿತ್ತು. ಅವರ ಮಾತನ್ನು ಕೇಳಿದ ಶ್ರೀಹರಿಯು, 'ನನ್ನ ಭಕ್ತರಾದವರ ಮಾತನ್ನು ನಾನು ಎಂದೂ ಸುಳ್ಳು ಮಾಡಲಾರೆ. ಇದು ನನಗೆ ನಾನೇ ಹಾಕಿಕೊಂಡ ನಿಯಮ. ಹಿಂದೆ ಪ್ರಹ್ಲಾದ ರಾಜಕುಮಾರನಿಗಾಗಿ ಕಂಬವನ್ನು ಸೀಳಿಕೊಂಡು ನಾನು ಹೊರ ಬಂದೆ, ಪ್ರಾಣಿಗಳ ರೂಪಗಳನ್ನು ದಶಾವತಾರಿಯಾಗಿ ತಾಳಿದೆ. ಆದ್ದರಿಂದ ನೀವು ನಿಮ್ಮ ನಿಮ್ಮ ಶಾಪವನ್ನು ಪಾಲಿಸದೇ ವಿಧಿ ಇಲ್ಲ. ಶಾಪದ ಕೊನೆಯಲ್ಲಿ ನೀವು ವೈಕುಂಠಕ್ಕೆ ಬರುತ್ತೀರಿ' ಎಂದು ಭರವಸೆ ನೀಡಿ ಅದೃಶ್ಯನಾದನು.

ಜಯ-ವಿಜಯರು ಗಂಡಕೀ ನದಿ ತೀರದಲ್ಲಿ ಮೊಸಳೆ ಹಾಗೂ ಸಮೀಪದ ಅರಣ್ಯದಲ್ಲಿ ಆನೆಯಾಗಿ ಜನಿಸಿದರು. ಆದರೆ ಪೂರ್ವಜನ್ಮದ ಜ್ಞಾನ ಅವರಿಗಿತ್ತು. ಪ್ರಾಣಿಗಳಾಗಿ ಜನಿಸಿದರೂ ಸಹ ಅವರು ಸದಾ ವಿಷ್ಣು ಧ್ಯಾನಾಸಕ್ತರಾಗಿದ್ದರು. ಹೀಗಿರುವಾಗ ಒಂದು ಕಾರ್ತೀಕ ಮಾಸವು ಬಂದಿತು. ಆನೆಯ ಜನ್ಮದಲ್ಲಿದ್ದ ಜಯನು ಸ್ನಾನಕ್ಕಾಗಿ ಗಂಡಕೀ ನದಿಗೆ ಇಳಿದನು. ಆನೆಯು ನೀರಿಗಿಳಿದ ತಕ್ಷಣ ಮೊಸಳೆಯಾಗಿದ್ದ ವಿಜಯನು ಅದರ ಕಾಲನ್ನು ಬಲವಾಗಿ ಹಿಡಿದೆಳೆದನು. ತನ್ನ ಕಾಲನ್ನು ಮೊಸಳೆಯಿಂದ ಬಿಡಿಸಿಕೊಳ್ಳಲಾಗದೆ, ಆನೆಯು ತನ್ನ ಪೂರ್ವ ಜನ್ಮ ಸಂಸ್ಕಾರದಿಂದ ಶ್ರೀಮನ್ನಾರಾಯಣನನ್ನು, 'ಹೇ ಭಗವಂತ ! ನನ್ನನ್ನು ಈ ಆಪತ್ತಿನಿಂದ ಕಾಪಾಡು ಅನಾಥರಕ್ಷಕನಾದ ನೀನು ನನ್ನನ್ನು ರಕ್ಷಿಸು' ಎಂದು ವಿಷ್ಣುವನ್ನು ಪ್ರಾರ್ಥಿಸುತ್ತ ನಿಂತನು. ಭಕ್ತನ ಮೊರೆಯನ್ನು ಆಲಿಸಿದ ಭಗವಂತನು ಗರುಡನ ಹೆಗಲೇರಿ ಬಂದು ತನ್ನ ಸುದರ್ಶನ ಚಕ್ರವನ್ನು ಮೊಸಳೆಯ ಮೇಲೆ ಪ್ರಯೋಗಿಸಿದನು. ಈ ರೀತಿಯಾಗಿ ಗಜೇಂದ್ರನಿಗೆ ಮೋಕ್ಷ ಪ್ರಾಪ್ತಿಯಾಯಿತು. ಅಂದಿನಿಂದ 'ಗಂಡಕಿ' ನದಿ ಕ್ಷೇತ್ರವು ಪರಮ ಪಾವನವಾದ ವಿಷ್ಣುಕ್ಷೇತ್ರವಾಯಿತು. ಈ ಗಂಡಕೀ ನದಿಯಲ್ಲಿ ಸಿಗುವ ಶಿಲೆಗಳ ಮೇಲೆ ಚಕ್ರದ ಚಿಹ್ನೆ ಮೂಡಿರುತ್ತದೆ ಅದು ಸಾಲಿಗ್ರಾಮವಾಗಿ ಪೂಜಿಸಲ್ಪಡುತ್ತದೆ.

ಹೀಗೆ ಅಪಾರವಿದ್ಯೆಗಳಿಸಿದ್ದರೂ, ಜ್ಞಾನಿಗಳಾಗಿದ್ದರೂ ಕೆಲವೊಮ್ಮೆ ಅನುಚಿತವಾಗಿ ವರ್ತಿಸುತ್ತೇವೆ. ವಿದ್ಯೆಯ ಅಹಂಕಾರ ಹೆಚ್ಚಾದಾಗ ನಾವು ನಮ್ಮವರು ಎನ್ನುವ ಪರಿಜ್ಞಾನವಿಲ್ಲದೆ ಉದ್ಧಟತನದಿಂದ ಅಧಿಕಾರದ ಮದದಿಂದ, ಮತ್ತೊಬ್ಬರಿಗೆ ನೋವು ಉಂಟಾಗುವಂತೆ ವರ್ತಿಸಿದಾಗ ಆ ಕ್ಷಣಕ್ಕೆ ಅದಕ್ಕೆ ಯಾರೂ ಎದುರಾಡದೆ ಇರಬಹುದು, ಆದರೆ ಕರ್ಮ ಸದಾ ನಮ್ಮ ಬೆನ್ನತ್ತಿ ಬರುತ್ತದೆ. ಮತ್ತೊಬ್ಬರ ಜೊತೆಗೆ ಅನುಚಿತವಾಗಿ ನಡೆದುಕೊಂಡಾಗ, ಅಹಂಕಾರದಿಂದ ಮೆರೆದಾಗ ಅದಕ್ಕೆ ತಕ್ಕ ಪ್ರತಿಫಲ ಸಿಕ್ಕೆ ಸಿಗುತ್ತದೆ, ಆಗ ಚಿಂತಿಸಿ ಪ್ರಯೋಜನವಿಲ್ಲ. ವಿದ್ಯೆಗೆ ವಿನಯವೇ ಭೂಷಣ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಟೆಸ್ಟ್ ಚಾಂಪಿಯನ್‌ಶಿಪ್: 12 ತಂಡಗಳಾಗಿ ಏರಿಕೆ

ದೆಹಲಿ: ಟೆಸ್ಟ್ ಕ್ರಿಕೆಟ್ ಅನ್ನು ಜನಪ್ರಿಯಗೊಳಿಸಲು ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿ ಇದೀಗ ಹೊಸ ಕ್ರಮಕ್ಕೆ ಮುಂದಾಗಿದೆ. ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್‌ನ 2027-2029ರ ಆವೃತ್ತಿಗೆ ಭಾಗವಹಿಸಲಿರುವ ತಂಡಗಳ ಸಂಖ್ಯೆಯನ್ನು 9ರಿಂದ 12ಕ್ಕೆ ಏರಿಸಲು ನಿರ್ಧರಿಸಿವೆ. ಜಿಂಬಾಬ್ವೆ, ಐರ್ಲೆಂಡ್ ಮತ್ತು ಅಫ್ಘಾನಿಸ್ತಾನ ತಂಡಗಳು ಹೊಸದಾಗಿ ಸೇರ್ಪಡೆಯಾಗಲಿರುವ 3 ತಂಡಗಳು. ಈ ಮೊದಲು 12 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ, ಪ್ರಮೋಷನ್ (ಮುಂಬಡ್ತಿ) ಮತ್ತು ಡಿಮೋಷನ್ (ಹಿಂಬಡ್ತಿ) ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಮಾತುಕತೆ ನಡೆದಿತ್ತು. ಆದರೆ ಈಗ ಆ ಯೋಜನೆಯನ್ನೇ ಕೈಬಿಡಲಾಗಿದೆ. ಬದಲಾಗಿ ತಂಡಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬದಲು ಹೆಚ್ಚಿಸಲಾಗುತ್ತಿದೆ. ಮುಂದಿನ ಆವೃತ್ತಿಯಿಂದ ಅಂದರೆ 2027ರಿಂದ 2029ರ ಆವೃತ್ತಿಯಲ್ಲಿ ಇದು ಜಾರಿಗೆ ಬರಲಿದೆ. ಹೀಗಾಗಿ ಡಬ್ಲ್ಯುಟಿಸಿ ಅಂಕಪಟ್ಟಿಯಲ್ಲಿ 9ಕ್ಕೆ ಬದಲಾಗಿ 12 ತಂಡಗಳಿರಲಿವೆ.

ಹಜಾರೆ ಟ್ರೋಫಿಯಲ್ಲಿ ಆಡಲು ಬಿಸಿಸಿಐ ಸಂದೇಶ

ದೆಹಲಿ: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಭಾರತಕ್ಕಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಆಡುವುದನ್ನು ಮುಂದುವರಿಸಲು ಬಯಸಿದರೆ ವಿಜಯ್ ಹಜಾರೆ ಟ್ರೋಫಿ ಪಂದ್ಯಗಳಲ್ಲಿ ಭಾಗವಹಿಸಬೇಕಾಗುತ್ತದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸೂಚನೆ ನೀಡಿದೆ. ಅವರಿಬ್ಬರೂ ಏಕದಿನ ಪಂದ್ಯಗಳಲ್ಲಿ ಮಾತ್ರ ಸಕ್ರಿಯರಾಗಿದ್ದಾರೆ. ಕೊನೆಯ ಬಾರಿಗೆ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಆಡಿದ್ದರು. ಆದರೆ ಸರಣಿಯಲ್ಲಿ ಭಾರತ 1-2 ಅಂತರದಲ್ಲಿ ಸೋಲು ಕಂಡಿತ್ತು. ಮೂರು ಪಂದ್ಯಗಳ ಈ ಸರಣಿಯಲ್ಲಿ, ರೋಹಿತ್ ಎರಡನೇ ಪಂದ್ಯದಲ್ಲಿ ಅರ್ಧಶತಕ ಮತ್ತು ಮೂರನೇ ಪಂದ್ಯದಲ್ಲಿ ಅಜೇಯ ಶತಕ ಗಳಿಸಿದ್ದರು. ಆದರೆ ಕೊಹ್ಲಿ ಮೂರನೇ ಪಂದ್ಯದಲ್ಲಿ 50 ರನ್‌ಗಳ ಗಡಿ ದಾಟಿದ್ದರೂ ಮೊದಲ ಎರಡು ಪಂದ್ಯಗಳಲ್ಲಿ ರನ್‌ಗಳಿಸಿರಲಿಲ್ಲ. 2027ರ ಏಕದಿನ ವಿಶ್ವಕಪ್ ತನಕ ಭಾರತಕ್ಕೆ ಸೀಮಿತ ಏಕದಿನ ಸರಣಿ ಮಾತ್ರ ಬಾಕಿ ಇದೆ. ರೋಹಿತ್ ಮತ್ತು ಕೊಹ್ಲಿ ಭಾರತ ಪರ ಆಡಲು ಬಯಸಿದರೆ, ದೇಶೀಯ ಕ್ರಿಕೆಟ್ ಆಡಲೇಬೇಕು ಎಂದು ಮಂಡಳಿ ಇಬ್ಬರಿಗೂ ತಿಳಿಸಿದೆ. ಅವರಿಬ್ಬರೂ ಎರಡು ಸ್ವರೂಪಗಳಿಂದ ನಿವೃತ್ತರಾಗಿರುವುದರಿಂದ, ಫಿಟ್‌ನೆಸ್ ಕಾಯ್ದುಕೊಳ್ಳಲು ದೇಶೀಯ ಕ್ರಿಕೆಟ್ ಆಡಲೇಬೇಕು ಎಂದು ಬಿಸಿಸಿಐ ಒತ್ತಿ ಹೇಳಿದೆ.

ಶುಕ್ರವಾರದಿಂದ ಈಡನ್ ಗಾರ್ಡನ್ಸ್‌ನಲ್ಲಿ ಟೀಮ್ ಇಂಡಿಯಾ-ದ.ಆಫ್ರಿಕಾ ಮೊದಲ ಟೆಸ್ಟ್

ನಾಳಿನ ಟೆಸ್ಟ್‌ಗೆ ಕಠಿಣಾಭ್ಯಾಸ

ಕೋಲ್ಕತಾ: ಇದೇ ಶುಕ್ರವಾರದಂದು ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಪ್ರಾರಂಭವಾಗಲಿರುವ ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯಕ್ಕೆ ಸಿದ್ಧತೆ ನಡೆಸಲು ಭಾರತ ಟೆಸ್ಟ್ ತಂಡವು ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಬುಧವಾರದಿಂದ ಕಠಿಣ ಸಮರಾಭ್ಯಾಸದಲ್ಲಿ ತಲ್ಲೀನವಾಗಿದೆ.

ನಾಯಕ ಶುಭಮನ್ ಗಿಲ್, ವೇಗಿ ಜಸ್ಪ್ರೀತ್ ಬುಮ್ರಾ ಸೇರಿದಂತೆ ಬಹುತೇಕ ಎಲ್ಲಾ ಕ್ರಿಕೆಟಿಗರೂ ಸಕ್ರಿಯ ಸಮರಾಭ್ಯಾಸವನ್ನು ನಡೆಸುತ್ತಿದ್ದಾರೆ. ಟೀಮ್ ಇಂಡಿಯಾವನ್ನು ಗಿಲ್ ಮುನ್ನಡೆಸಲಿದ್ದು, ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಅವರು ಉಪನಾಯಕನರಾಗಿದ್ದಾರೆ.

ರವೀಂದ್ರ ಜಡೇಜಾ ಮತ್ತು ಮೊಹಮ್ಮದ್ ಸಿರಾಜ್‌ರಂತಹ ಅನುಭವಿ ಆಟಗಾರರ ಜೊತೆಗೆ, ಆಯ್ಕೆದಾರರು ಸಾಯಿ ಸುದರ್ಶನ್, ದೇವದತ್ ಪಡಿಕ್ಕಲ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಅವರಂತಹ ಭರವಸೆಯ ಪ್ರತಿಭೆಗಳನ್ನು ಈ ಸರಣಿಗೆ ಆಯ್ಕೆ ಮಾಡಲಾಗಿದೆ.

ಅಕ್ಟೋಬರ್ ಆರಂಭದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆದ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಗಿಲ್ ಅವರು ಅರ್ಧ ಶತಕ, ಮತ್ತೊಂದು ಅಜೇಯ ಶತಕ ಗಳಿಸಿದ್ದರು. ಈಡನ್ ಗಾರ್ಡನ್ಸ್‌ನ ನೆಟ್ಸ್‌ನಲ್ಲಿ ತೊಡಗುವ ಮುನ್ನ ಗಿಲ್, ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು

ಸಹಾಯಕ ಕೋಚ್ ಸಿತಾಂಶು ಕೊಟಕ್ ಜೊತೆ ದೀರ್ಘ ಸಮಾಲೋಚನೆ ಮಾಡಿದ್ದಾರೆ. ಬಳಿಕ ಕೆಲಕಾಲ ಸ್ಲಿಪ್ ಫೀಲ್ಡಿಂಗ್ ಅಭ್ಯಾಸದಲ್ಲಿ ತೊಡಗಿಸಿಕೊಂಡರು. ಯಶಸ್ವಿ ಜೈಸ್ವಾಲ್ ಅವರೊಂದಿಗೆ ಪ್ಯಾಡ್ ಕಟ್ಟಿಕೊಂಡು ದೀರ್ಘಕಾಲ ಬ್ಯಾಟಿಂಗ್ ತಾಲೀಮಿನಲ್ಲೂ ಅವರು ಭಾಗವಹಿಸಿದ್ದಾರೆ.

ಭಾರತವು ಪ್ರಸ್ತುತ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಋತುವನ್ನು ಇಂಗ್ಲೆಂಡ್ ವಿರುದ್ಧ 2-2 ಡ್ರಾ ಮತ್ತು ಅಕ್ಟೋಬರ್‌ನಲ್ಲಿ ವಿಂಡೀಸ್ ವಿರುದ್ಧ ಕ್ಲೀನ್ ಸ್ವೀಪ್ ಮಾಡುವ ಮೂಲಕ ಪ್ರಾರಂಭಿಸಿತ್ತು.

ಪಾಕಿಸ್ತಾನ ವಿರುದ್ಧ ಹೋದ ತಿಂಗಳು ಸವಾಲಿನ ನಡುವೆಯೂ ಟೆಸ್ಟ್ ಸರಣಿಯನ್ನು 1-1 ಡ್ರಾ ಮಾಡಿಕೊಂಡ ವಿಶ್ವಾಸದಲ್ಲಿರುವ ದಕ್ಷಿಣ ಆಫ್ರಿಕಾ ತಂಡ ಕೂಡ ತಾಲೀಮಿನಲ್ಲಿ ತೊಡಗಿದ್ದು ಭಾರತಕ್ಕೆ ಪ್ರಬಲ ಪೈಪೋಟಿ ನೀಡುವ ನಿಟ್ಟಿನಲ್ಲಿ ಕಾತರವಾಗಿದೆ.

ಟೆಸ್ಟ್‌ಗೆ ಸ್ಪಿನ್ ಪಿಚ್

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಬಹುನಿರೀಕ್ಷಿತ ಮೊದಲ ಟೆಸ್ಟ್ ಪಂದ್ಯದ ಪಿಚ್ ಎಲ್ಲರಿಗೂ ಏನನ್ನಾದರೂ ನೀಡುತ್ತದೆ ಎಂದು ಈಡನ್ ಗಾರ್ಡನ್ಸ್ ಕ್ಯುರೇಟರ್ ಸುಜನ್ ಮುಖರ್ಜಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕೋಲ್ಕತ್ತಾದಲ್ಲಿ ಪತ್ರಿಕಾ ಸಂದರ್ಶನದಲ್ಲಿ ಮಾತನಾಡಿದ ಅವರು, ಕೋಚ್ ಗೌತಮ್ ಗಂಭೀರ್‌ನೇತೃತ್ವದ ತಂಡದ ಆಡಳಿತ ಮಂಡಳಿಯು ಸ್ವಲ್ಪ ತಿರುವು ನೀಡುವ ಪಿಚ್ ಕೇಳಿದೆ ಎಂದು ಹೇಳಿದರು. 'ಈ ಬಾರಿ ಪಿಚ್ ಚೆನ್ನಾಗಿರುತ್ತದೆ. ಇದು ಉತ್ತಮ ವಿಕೆಟ್ ಆಗಿರುತ್ತದೆ. ದಿನಗಳು ಮುಂದುವರೆದಂತೆ, ತಿರುವು ಇರುತ್ತದೆ, ಬೌನ್ಸ್ ಇರುತ್ತದೆ. ಹೀಗಿದ್ದರೂ ಬ್ಯಾಟರ್ ಮತ್ತು ಬೌಲರ್ ಗಳಿಗೆ ಈ ಪಿಚ್‌ನಲ್ಲಿ ಏನಾದರೂ ಇರುತ್ತದೆ ಎಂದು ಸುಜನ್ ಮುಖರ್ಜಿ ಹೇಳಿದರು.

ದ.ಆಫ್ರಿಕಾ ತಂಡದ ಪ್ರಮುಖ ಸ್ಪಿನ್ನರ್ ಕೇಶವ್ ಮಹಾರಾಜ್ ಹೇಳಿಕೆ

ಭಾರತವನ್ನು ಸೋಲಿಸುವ ಹಸಿವಿದೆ

ಕೋಲ್ಕತ್ತಾ: ದಕ್ಷಿಣ ಆಫ್ರಿಕಾ ತಂಡವು 15 ವರ್ಷಗಳಿಂದ ಭಾರತದಲ್ಲಿ ಟೆಸ್ಟ್ ಪಂದ್ಯವನ್ನು ಗೆದ್ದಿಲ್ಲ. ಹೀಗಾಗಿ ಈ ಪ್ರವಾಸವನ್ನು ಗೆಲುವಿನೊಂದಿಗೆ ಆರಂಭಿಸಬೇಕೆಂಬ ಇರಾದೆಯಲ್ಲಿರುವ ದಕ್ಷಿಣ ಆಫ್ರಿಕಾ ತಂಡಕ್ಕೆ ಪ್ರಮುಖ ಸ್ಪಿನ್ನರ್ ಕೇಶವ್ ಮಹಾರಾಜ್ ತಮ್ಮ ಹೇಳಿಕೆ ಮೂಲಕ ಮತ್ತಷ್ಟು ಬಲ ತುಂಬಿದ್ದಾರೆ. ಈ ಸರಣಿಯ ಬಗ್ಗೆ ಮಾತನಾಡಿರುವ ಮಹಾರಾಜ್, 'ನಮ್ಮ ತಂಡವು ಭಾರತದಲ್ಲಿ ಅತಿಥೇಯರನ್ನು ಸೋಲಿಸಲು ನಿಜವಾಗಿಯೂ ಎದುರು ನೋಡುತ್ತಿದೆ. ಇದು ಬಹುಶಃ ಅತ್ಯಂತ ಕಠಿಣ ಪ್ರವಾಸಗಳಲ್ಲಿ ಒಂದಾಗಿದೆ. ನಮ್ಮ ಅತಿದೊಡ್ಡ ಟೆಸ್ಟ್ ಸರಣಿಗಳಲ್ಲಿ ಇದೂ ಒಂದಾಗಿದೆ ಎಂದು ನಾವು ಭಾವಿಸುತ್ತೇವೆ. ನಮ್ಮನ್ನು ನಾವು ನಿರ್ಣಯಿಸಿಕೊಳ್ಳಲು ಇದು ಉತ್ತಮ ಅವಕಾಶವಾಗಿರುತ್ತದೆ. ನಾವು ಎಲ್ಲಿದ್ದೇವೆ ಎಂಬುದನ್ನು ಕಂಡುಹಿಡಿಯಲು ಇದು ನಮಗೆ ಅವಕಾಶವನ್ನು ನೀಡುತ್ತದೆ' ಎಂದಿದ್ದಾರೆ.

'ನಾವು ಉಪಖಂಡದ ಇತರ ಭಾಗಗಳಲ್ಲಿ ಗೆಲ್ಲಲು ಪ್ರಾರಂಭಿಸಿದ್ದೇವೆ ಮತ್ತು ನಮ್ಮ ತಂಡವು ಭಾರತದಲ್ಲಿ ನಿಜವಾಗಿಯೂ ಗೆಲ್ಲಬೇಕೆಂಬ ಬಲವಾದ ಹಸಿವು ಮತ್ತು ಬಯಕೆಯನ್ನು ಹೊಂದಿದೆ. ಇಲ್ಲಿನ ಪರಿಸ್ಥಿತಿಗಳು ಸ್ಪಿನ್ನರ್‌ಗಳಿಗೆ ಅನುಕೂಲಕರವಾಗಿರುತ್ತವೆ ಎಂದು ನಾನು ಭಾವಿಸುವುದಿಲ್ಲ. ವಿಕೆಟ್‌ಗಳು ಉತ್ತಮವಾಗಿರುತ್ತವೆ ಮತ್ತು ಆಟ ಮುಂದುವರಿದಂತೆ ಸ್ಪಿನ್

ಬೌಲರ್‌ಗಳಿಗೆ ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ನಾವು ನೋಡಬಹುದಾದಂತೆ, ಭಾರತವು ಬಹುಶಃ ಸಾಂಪ್ರದಾಯಿಕ ಟೆಸ್ಟ್ ವಿಕೆಟ್‌ಗೆ ಆದ್ಯತೆ ನೀಡುತ್ತದೆ' ಎಂದು ಮಹಾರಾಜ್ ಹೇಳಿದ್ದಾರೆ.

'ಭಾರತ ತಂಡ ಕೂಡ ಪರಿವರ್ತನೆಯ ಅವಧಿಯಲ್ಲಿ ಉತ್ತಮ ಪ್ರಗತಿ ಸಾಧಿಸಿದೆ. ವೆಸ್ಟ್ ಇಂಡೀಸ್ ಸರಣಿಯಲ್ಲಿ ನಾವು ನೋಡಿದಂತೆ ಅವರು ಉತ್ತಮ ವಿಕೆಟ್‌ಗಳಲ್ಲಿ ಆಡುವುದನ್ನು ಆನಂದಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಪಾಕಿಸ್ತಾನದಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿ ನಾವು ಉತ್ತಮ ಪ್ರದರ್ಶನ ನೀಡಿದ್ದೇವೆ. ಆ ವೇಗವನ್ನು ಕಾಯ್ದುಕೊಳ್ಳಲು ನಾವು ಪ್ರಯತ್ನಿಸುತ್ತೇವೆ. ಟಾಸ್‌ನ ಫಲಿತಾಂಶ ಏನೇ ಇರಲಿ, ಪಂದ್ಯವನ್ನು ನಮ್ಮ ಪರವಾಗಿ ಪಡೆಯಲು ನಾವು ಯಾವುದೇ ಅವಕಾಶವನ್ನು ಬಿಡುವುದಿಲ್ಲ' ಎಂದು ದ.ಆಫ್ರಿಕಾ ಸ್ಪಿನ್ನರ್ ಕೇಶವ್ ಮಹಾರಾಜ್ ತಮ್ಮ ಹಂಬಲ ತೋಡಿಕೊಂಡಿದ್ದಾರೆ.

ಆ್ಯಶಸ್ ಸರಣಿಯ ಮೊದಲ ಪಂದ್ಯದಿಂದ ಹೊರಬಿದ್ದ ಆಸೀಸ್ ವೇಗಿ

ಆಸ್ಟ್ರೇಲಿಯಾ ತಂಡಕ್ಕೆ ಸೀನ್ ಅಬಾಟ್ ಅಲಭ್ಯ

ಸಿಡ್ನಿ: 2025-26ರ ಆ್ಯಶಸ್ ಸರಣಿಯಲ್ಲಿ ಇಂಗ್ಲೆಂಡ್-ಆಸ್ಟ್ರೇಲಿಯಾ ತಂಡಗಳು ಪರಸ್ಪರ ಸೆಣಸಾಡಲು ಸಜ್ಜಾಗಿದೆ. ಎರಡೂ ತಂಡಗಳು ಸರಣಿಗೆ ಸಿದ್ಧತೆ ನಡೆಸುತ್ತಿವೆ. ನವೆಂಬರ್ 21ರಂದು ಆಸ್ಟ್ರೇಲಿಯಾದ ಪರ್ತ್‌ನಲ್ಲಿ ಮೊದಲ ಟೆಸ್ಟ್ ಪಂದ್ಯ ಆರಂಭವಾಗಲಿದ್ದು, ಆತಿಥೇಯ ತಂಡವು ಗಾಯದ ಭೀತಿಯಲ್ಲಿದೆ, ಹಾಗಾಗಿ ವೇಗಿ ಸೀನ್ ಅಬಾಟ್ ಮೊದಲ ಪಂದ್ಯದಿಂದ ಹೊರಬಿದಿದ್ದಾರೆ, ಆದರೆ ಜೋಶ್ ಹೇಜಲ್‌ವುಡ್ ಲಭ್ಯರಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಎಸ್‌ಸಿಜಿಯಲ್ಲಿ ನ್ಯೂ ಸೌತ್ ವೇಲ್ಸ್ ಮತ್ತು ವಿಕ್ಟೋರಿಯಾ ನಡುವಿನ ಪಂದ್ಯದ ಸಮಯದಲ್ಲಿ ಹೇಜಲ್ ವುಡ್ ಮತ್ತು ಅಬಾಟ್ ಗಾಯದ ಸಮಸ್ಯೆಯಿಂದ ಬಳಲಿದ್ದರು. ಮೈದಾನವನ್ನು ತೊರೆದಿದ್ದ ಈ ಜೋಡಿ ಆ ನಂತರ ಕಾಣಿಸಿಕೊಳ್ಳಲಿಲ್ಲ. ಹೀಗಾಗಿ ಆ್ಯಶಸ್ ಸರಣಿಯಲ್ಲಿ ಪಾಲ್ಗೊಳ್ಳುವುದು ಅನುಮಾನ ಎನ್ನಲಾಗಿತ್ತು.

ಪರ್ತ್ ಟೆಸ್ಟ್‌ನಲ್ಲಿ ಯೋಜಿಸಿದಂತೆ ಜೋಶ್ ಹೇಲ್‌ವುಡ್ ಆಸ್ಟ್ರೇಲಿಯಾ ತಂಡವನ್ನು ಸೇರಿಕೊಳ್ಳಲಿದ್ದಾರೆ. ಆದರೆ ಮತ್ತೋರ್ವ ವೇಗಿ ಸೀನ್ ಅಬಾಟ್ ಎಡ ಮಂಡಿರಜ್ಜು ನೋವಿನಿಂದ ಬಳಲುತ್ತಿದ್ದಾರೆ. ಅವರು ಆಯ್ಕೆಗೆ ಲಭ್ಯವಿರುವುದಿಲ್ಲ ಮತ್ತು ಆಟಕ್ಕೆ ಮರಳುವ ಯೋಜನೆಯನ್ನು ಮುಂಬರುವ ವಾರಗಳಲ್ಲಿ ತಿಳಿಸಲಾಗುವುದು ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಮಾಧ್ಯಮ ಪ್ರಕಟಣೆ ಮೂಲಕ ಬುಧವಾರ ದೃಢಪಡಿಸಿದೆ.

ಈ ಮಧ್ಯೆ ನಾಯಕ ಪ್ಯಾಟ್ ಕಮ್ಮಿನ್ಸ್ ಡಿಸೆಂಬರ್ 4ರಂದು ಗಬ್ಬಾದಲ್ಲಿ ಪ್ರಾರಂಭವಾಗುವ ಎರಡನೇ ಟೆಸ್ಟ್‌ಗೆ ಲಭ್ಯವಾಗುವ ಪ್ರಯತ್ನದಲ್ಲಿ ತಮ್ಮ ಫಿಟ್‌ನೆಸ್ ಕಾರ್ಯ ಮುಂದುವರಿಸಿದ್ದಾರೆ.

ಕರ್ನಾಟಕ ಕ್ರಿಕೆಟ್ ಸಂಕಷ್ಟದಲ್ಲಿದ್ದು ಸುಧಾರಿಸಲೆತ್ನಿಸುವೆ: ಕುಂಬ್ಳೆ

ವೆಂಕಿಗೆ ಕುಂಬ್ಳೆ, ಶ್ರೀನಾಥ್ ಬೆಂಬಲ

ಬೆಂಗಳೂರು: ಭಾರತದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ಅವರು ನವೆಂಬರ್ 30ರಂದು ನಡೆಯಲಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವುದನ್ನು ಮಂಗಳವಾರ ಅಧಿಕೃತವಾಗಿ ಘೋಷಿಸಿದ್ದರು. ಇದರ ಬೆನ್ನಲ್ಲೇ ಭಾರತೀಯ ಕ್ರಿಕೆಟ್ ದಿಗ್ಗಜ ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಅವರು ವೆಂಕಟೇಶ್ ಪ್ರಸಾದ್‌ಗೆ ಬಲವಾದ ಬೆಂಬಲ ವ್ಯಕ್ತಪಡಿಸಿದ್ದಾರೆ.

ವೆಂಕಟೇಶ್ ಪ್ರಸಾದ್ ಅವರು ಟೀಮ್ 'ಗೇಮ್ ಚಾರ್ಜರ್ಸ್' ಎಂಬ ಹೆಸರಿನ ಸಮಿತಿಯನ್ನು ರಚಿಸಿದ್ದಾರೆ. ಇದರಲ್ಲಿ ಸುಜಿತ್ ಸೋಮಸುಂದರ್ (ಉಪಾಧ್ಯಕ್ಷ), ವಿನಯ್ ಮೃತ್ಯುಂಜಯ (ಕಾರ್ಯದರ್ಶಿ), ಎ.ವಿ. ಶಶಿಧರ್ (ಜಂಟಿ ಕಾರ್ಯದರ್ಶಿ) ಮತ್ತು ಬಿ.ಎನ್. ಮಧುಕರ್ (ಖಜಾಂಚಿ) ಇದ್ದಾರೆ.

'ಕರ್ನಾಟಕ ಕ್ರಿಕೆಟ್ ಸಂಕಷ್ಟದಲ್ಲಿದೆ ಮತ್ತು ಬದಲಾವಣೆ ತರಲು ವೆಂಕಿ ಇಲ್ಲಿದ್ದಾರೆ. ನಮ್ಮ ಮೂರು ವರ್ಷಗಳ ಅವಧಿಯಲ್ಲಿ (2010-2013) ನಾವು ಮಾಡಿದ ಎಲ್ಲಾ ಕೆಲಸಗಳು ಕಳೆದ ಹಲವು ವರ್ಷಗಳಿಂದ ನಡೆಯುತ್ತಿಲ್ಲ. ಕಳೆದ ವಾರ ನಾವು ಮಹಿಳಾ ವಿಶ್ವಕಪ್ ಗೆದ್ದಿದ್ದೇವೆ ಮತ್ತು ಅದು ಒಂದು ಹೆಗ್ಗುರುತಿನ ಸಂದರ್ಭವಾಗಿತ್ತು. ಆದರೆ ನಮಗೆ ರಾಜ್ಯಕ್ಕೆ ಒಂದೇ ಒಂದು ಪ್ರಾತಿನಿಧ್ಯವಿರಲಿಲ್ಲ. ಅದು ಬದಲಾಗಬೇಕು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಸಂಪೂರ್ಣವಾಗಿ ನಿಂತು ಹೋಗಿದೆ. ಅದರ ಗತವೈಭವ ಮರಳಬೇಕು, ಅದಕ್ಕಾಗಿ ಪ್ರಸಾದ್‌ರ ತಂಡ ಅಧಿಕಾರಕ್ಕೆ ಬರಬೇಕು' ಎಂದು ಕುಂಬ್ಳೆ ಹೇಳಿದರು.

ಉದ್ದೀಪನ ಮದ್ದು ಸೇವಿಸಿದ್ದ ಭಾರತದ ಹ್ಯಾಮರ್ ಎಸೆತಗಾರ್ತಿ

ಮಂಜು ಬಾಲಾ 5 ವರ್ಷ ಅಮಾನತು



ದೆಹಲಿ: ಈ ವರ್ಷದ ಆರಂಭದಲ್ಲಿ ನಿಷೇಧಿತ ಉದ್ದೀಪನ ಮದ್ದು ಸೇವಿಸಿರುವುದು ಕಂಡುಬಂದ ನಂತರ, ಏಷ್ಯನ್ ಕ್ರೀಡಾಕೂಟದ ಕಂಚಿನ ಪದಕ ವಿಜೇತೆ, ಹ್ಯಾಮರ್ ಎಸೆತಗಾರ್ತಿ ಮಂಜು ಬಾಲಾ ಅವರನ್ನು ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆಯ ಡೋಪಿಂಗ್ ವಿರೋಧಿ ಶಿಸ್ತು ಸಮಿತಿ (ಎಡಿಡಿಪಿ) ಐದು ವರ್ಷಗಳ ಅಮಾನತುಗೊಳಿಸಿದೆ. ಭಾರತದ ಕ್ರೀಡಾ ಇತಿಹಾಸದಲ್ಲಿ ಉದ್ದೀಪನ ಮದ್ದು ಸೇವನೆಗಾಗಿ ಪ್ರಕಟಿಸಲಾದ ದೀರ್ಘ ಅವಧಿಯ ಶಿಕ್ಷೆ ಪ್ರಕರಣಗಳಲ್ಲಿ ಇದೂ ಒಂದಾಗಿದೆ.

2014ರ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದಿದ್ದ ಮಂಜು ಬಾಲಾ, ಉದ್ದೀಪನಾ ಮದ್ದು ಸೇವಿಸಿರುವುದು ದೃಢಪಟ್ಟಿದೆ. ಇತ್ತೀಚಿನ ದಿನಗಳಲ್ಲಿ ಡೋಪಿಂಗ್ ವಿರೋಧಿ ಸಂಸ್ಥೆಯು ವಿಧಿಸಿರುವ ಕಠಿಣ ನಿರ್ಬಂಧಗಳಲ್ಲಿ ಐದು ವರ್ಷಗಳ ನಿಷೇಧವೂ ಒಂದಾಗಿದೆ. ಈ ತೀರ್ಪಿನ ಪ್ರಕಾರ ಬಾಲಾ ಅವರ ಅಮಾನತು ಅವಧಿಯಲ್ಲಿ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ (ಎಎಫ್‌ಐ) ಅಥವಾ ಇತರ ಅಂಗಸಂಸ್ಥೆಗಳು ಅನುಮೋದಿಸುವ ಯಾವುದೇ ಸ್ಪರ್ಧೆಯಲ್ಲಿ ಸ್ಪರ್ಧೆ, ಆಯ್ಕೆ ಅಥವಾ ಭಾಗವಹಿಸುವಿಕೆಯಿಂದ ಅವರನ್ನು ನಿಷೇಧಿಸಲಾಗುವುದು. ಅಧಿಕೃತ ಶ್ರೇಯಾಂಕ ಮತ್ತು ರಾಷ್ಟ್ರೀಯ ತಂಡದ ಪರಿಗಣನೆಗೆ ಅರ್ಹತೆಯನ್ನು ಸಹ ಅವರು ಕಳೆದುಕೊಳ್ಳುತ್ತಾರೆ.

ಕಡಲತಡಿಯಲಿ ಕೊರಗಜ್ಜ ಗಾನ

ಸುಧೀರ್ ಅತ್ತಾವರ್ ನಿರ್ದೇಶನದಲ್ಲಿ ಸಿದ್ಧವಾಗಿರುವ ಕೊರಗಜ್ಜ ಚಿತ್ರ ಆರಂಭದಿಂದಲೂ ಕುತೂಹಲ ಮೂಡಿಸಿದೆ. ತ್ರಿವಿಕ್ರಮ ಸಾಪಲ್ಯ ನಿರ್ಮಾಣದ ಸಕ್ಸಸ್ ಫಿಲಂಸ್ ಮತ್ತು ತ್ರಿವಿಕ್ರಮ ಸಿನಿಮಾಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಕೊರಗಜ್ಜ ಅದ್ದೂರಿಯಾಗಿ ಮೂಡಿಬಂದಿದ್ದು, ಹೊಸ ಗುಳಿಗಾ ಗುಳಿಗಾ.ಗುಳಿಗಾ..ಗುಳಿಗಾ... ಘೋರ ಗುಳಿಗಾ.. ಹಾಡು ದೃಶ್ಯ ವೈಭವದ ಮೂಲಕ ಸಿನಿಪ್ರಿಯರ ಹೃದಯ ಗೆದ್ದಿತು. ನಿರ್ದೇಶಕ ಸುಧೀರ್ ಅತ್ತಾವರ್ ಸಾಹಿತ್ಯ ಬರೆದಿರುವ ಚಿತ್ರದ ಹಾಡುಗಳಿಗೆ ದಕ್ಷಿಣ ಭಾರತದ ಖ್ಯಾತ

ಮೈಲಿಗಲ್ಲು ಸ್ಥಾಪಿಸಿದೆ. ಕೊರಗಜ್ಜ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ನಿರ್ಮಾಣವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಿನಿಮಾಗಳ ಆಡಿಯೊ ಕೊಂಡುಕೊಳ್ಳಲು ಹಿಂದೇಟು ಹಾಕುತ್ತಿದ್ದ ಜ಼ೀ ಮ್ಯೂಸಿಕ್ ಸಂಸ್ಥೆ ಕೊರಗಜ್ಜ ಸಿನಿಮಾದ ಎಲ್ಲಾ ಭಾಷೆಗಳ ಹಾಡುಗಳ ಹಕ್ಕನ್ನು ಪಡೆದುಕೊಂಡಿದೆ

ಕಡಲತಡಿಯಲಿ ಬಣ್ಣ ಬಣ್ಣದ ಬೆಳಕಿನ ಹಿನ್ನೆಲೆಯಲ್ಲಿ ಕೊರಗಜ್ಜ ಚಿತ್ರದ ಹಾಡುಗಳು ಬಿಡುಗಡೆಯಾದವು. ಗಾಳಿ ಗಂಧ.. ಹಾಡು ನೆರೆದಿರುವವರನ್ನು ಸೂಜಿಗಲ್ಲಿನಂತೆ ಸೆಳೆಯಿತು. ಜತೆಗೆ ಸಂಗೀತ ನಿರ್ದೇಶಕ ಗೋಪಿ ಸುಂದರ್

ಸಂಗೀತ ಸಂಯೋಜಿಸಿದ್ದಾರೆ. ಶ್ರುತಿ, ಭವ್ಯಾ ಸೇರಿದಂತೆ ಬಾಲಿವುಡ್ ನಟರೂ ಕೂಡ ಕೊಗಜ್ಜನ ಸಿನಿಮಾದಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ಬಿಡುಗಡೆಯಾಗಿರುವ ನಮ್ಮ ಚಿತ್ರದ 3ಡಿ ಮೋಷನ್ ಪೋಸ್ಟರ್ ಲಕ್ಷಾಂತರ ವೀಕ್ಷಣೆ ಕಂಡಿದೆ. ಕೊರಗಜ್ಜನ ಆಶೀರ್ವಾದಿಂದ ಈ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಎಂದು ನಿರ್ಮಾಪಕ ತ್ರಿವಿಕ್ರಮ ಸಾಪಲ್ಯ ತಿಳಿಸಿದರು. ಒಟ್ಟಾರೆ ಕೊಗಜ್ಜ ಸಿನಿಮಾ ಭಾರತ್ಯಿಯ ಚಿತ್ರರಂಗದ ಇತಿಹಾಸದಲ್ಲಿ ಹೊಸ ದಾಖಲೆ ಬರೆಯಲಿದೆ.

ಜಿಎಸ್‌ಟಿ ಮೆಚ್ಚಿದ ರಿಯಲ್ ಸ್ಟಾರ್

ನಟ ಸೃಜನ್ ಲೋಕೇಶ್ ನಟನಾಗಿ, ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದಾರೆ. ಈಗ ಜಿಎಸ್‌ಟಿ ಚಿತ್ರದ ಮೂಲಕ ನಿರ್ದೇಶಕನ ಕ್ಯಾಪ್ ತೊಟ್ಟಿದ್ದಾರೆ. ಈ ಚಿತ್ರವನ್ನು ಸಂದೇಶ್ ಪ್ರೊಡಕ್ಷನ್ಸ್ ಸಂಸ್ಥೆ ಲಾಂಛನದಲ್ಲಿ ಎನ್. ಸಂದೇಶ್ ನಿರ್ಮಾಣ ಮಾಡಿದ್ದಾರೆ. ಇದೇ 28ರಂದು ಜಿಎಸ್‌ಟಿ ತೆರೆಗೆ ಬರಲಿದೆ. ಸದ್ಯ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ರಿಯಲ್ ಸ್ಟಾರ್ ಉಪೇಂದ್ರ, ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಹಾರರ್ ಜತೆಗೆ ಕಾಮಿಡಿ ಕೂಡ ಬೆರೆತಿದೆ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ.

ಜಿಎಸ್‌ಟಿ ಎಂದರೆ ಘೋಸ್ಟ್ ಇನ್ ಟ್ರಬಲ್ ಎಂದರ್ಥ. ನಾನು ಈ ಚಿತ್ರದ ಮೂಲಕ ನಿರ್ದೇಶಕನಾಗಿಯೂ ಗುರುತಿಸಿಕೊಳ್ಳುತ್ತಿದ್ದೇನೆ. ಚಿತ್ರದ ಮತ್ತೊಂದು ವಿಶೇಷ ಅಂದರೆ ನಮ್ಮ ತಾತಾ ಸುಬ್ಬಯ್ಯ ನಾಯ್ಡು ಅವರು ಭಕ್ತ ಪ್ರಹ್ಲಾದ ಚಿತ್ರದಲ್ಲಿ ನಮ್ಮ ತಂದೆ ಲೋಕೇಶ್ ಅವರನ್ನು ಬಾಲನಟನಾಗಿ ತೆರೆಗೆ ತಂದರು. ಆನಂತರ ನಮ್ಮ ತಂದೆ ನಿರ್ದೇಶನದ ಬುಜಂಗಯ್ಯನ ದಶಾವತಾರದ ಮೂಲಕ ಬಾಲನಟನಾಗಿ ನಾನು ಚಿತ್ರರಂಗಕ್ಕೆ ಬಂದೆ. ಈಗ ನನ್ನ ಮಗ ಸುಕೃತ್ ನನ್ನ ಮೊದಲ

ನಿರ್ದೇಶನದ ಚಿತ್ರದಲ್ಲಿ ಬೆಳ್ಳಿತೆರೆ ಪ್ರವೇಶಿಸಿದ್ದಾನೆ. ಇದು ಭಾರತೀಯ ಚಿತ್ರರಂಗದಲ್ಲೇ ಪ್ರಥಮ ಎನ್ನಬಹುದು. ಇನ್ನು, ಇದರಲ್ಲಿ ನಮ್ಮ ತಾಯಿ, ನಾನು ಹಾಗೂ ನನ್ನ ಮಗ ಮೂರು ಜನ ನಟಿಸಿದ್ದೇವೆ. ಇದು ಹಾರಾರ್ ಚಿತ್ರವಾಗಿದ್ದರೂ, ಕಾಮಿಡಿಯೇ ಪ್ರಮುಖವಾಗಿದೆ. ಚಿತ್ರದಲ್ಲಿ ಯಾರು ಊಹಿಸಲಾಗದ ಕ್ಲೈಮ್ಯಾಕ್ಸ್ ಇದೆ ಎಂದು ಸೃಜನ್ ಲೋಕೇಶ್ ತಿಳಿಸಿದರು.

ಸೃಜನ್ ನನ್ನ ಆತ್ಮೀಯ ಗೆಳೆಯ, ಅವರು ಒಳ್ಳೆಯ ಸಿನಿಮಾ ನಿರ್ದೇಶನ ಮಾಡುತ್ತಾರೆ ಎಂಬ ನಂಬಿಕೆ ಇದೆ, ಹಾಗಾಗಿ ಕಥೆ ಕೇಳದೆ ನಿರ್ಮಾಣಕ್ಕೆ ಸಮ್ಮತಿಸಿದೆ.

ಇದು ನಮ್ಮ ಸಂಸ್ಥೆ ನಿರ್ಮಾಣದ ಮೂವತ್ತ ನಾಲ್ಕನೇ ಸಿನಿಮಾ ಎಂದು ನಿರ್ಮಾಪಕ ಸಂದೇಶ್ ಹೇಳಿದರು.

ಕನ್ನಡ ಚಿತ್ರರಂಗದ ಹಲವು ಪ್ರಥಮಗಳು ಸುಬ್ಬಯ್ಯ ನಾಯ್ಡು ಅವರ ಕುಟುಂಬದ್ದೆ ಆಗಿರುವುದು ನಮಗೆ ಹೆಮ್ಮೆ ಇದೆ. ಇದೇ ಮೊದಲ ಬಾರಿಗೆ ನನ್ನ ಮಗ ಸೃಜನ್ ಲೋಕೇಶ್ ನಿರ್ದೇಶನ ಮಾಡಿದ್ದಾನೆ. ನಾನು ಹಾಗೂ ನನ್ನ ಮೊಮ್ಮಗ ಸುಕೃತ್ ಈ ಚಿತ್ರದಲ್ಲಿ ನಟಿಸಿದ್ದೇವೆ ಎಂದರು ನಟಿ ಗಿರಿಜಾ ಲೋಕೇಶ್ ಸಂತಸ ಹಂಚಿಕೊಂಡರು. ಹಿರಿಯ ನಟ ಅಶೋಕ್, ರಜನಿ ಭಾರದ್ವಾಜ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಲವ್ ಕೇಸ್‌ಗೆ ಮುಹೂರ್ತ

ಎಂ.ಬಿ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಮೋಹನ್ ಬಾಬು ನಿರ್ಮಾಣ ಮಾಡುತ್ತಿರುವ ಲವ್ ಕೇಸ್ ಸಿನಿಮಾದ ಮುಹೂರ್ತ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನೆರವೇರಿತು. ಜೈಶ್ ಕಥೆ, ಚಿತ್ರಕಥೆ ಬರೆದಿದ್ದು, ನಿರ್ದೇಶನದ ಸಾರಥ್ಯ ವಹಿಸಿಕೊಂಡಿದ್ದಾರೆ. ಲವ್ ಕೇಸ್ ಶೀರ್ಷಿಕೆಯೇ ಹೇಳುವಂತೆ ಚಿತ್ರದಲ್ಲಿ ನವಿರಾದ ಪ್ರೇಮಕಥೆಯೂ ಇದೆ. ಇದರ ಜತೆಗೆ ಕಾಮಿಡಿಯೂ ಬೆರೆತಿದೆ. ಲವ್ ಕೇಸ್‌ಗೆ ಪ್ಯೂರ್ ಲವ್ ಸ್ಟೋರಿ ಎಂಬ ಅಡಿ ಬರಹವಿದೆ. ಹಾಗಾಗಿ ಸಿನಿಮಾದಲ್ಲಿ ಭರಪೂರ ಮನರಂಜನೆ ಇರುವುದು ಇದರಿಂದ ತಿಳಿಯುತ್ತದೆ. ಶ್ರೀನಗರ ಕಿಟ್ಟಿ, ಟಗರು ಪಲ್ಯ ಖ್ಯಾತಿಯ ನಾಗಭೂಷಣ್, ಸಾಯಿಕುಮಾರ್, ಸುಧಾರಾಣಿ, ಪ್ರಮೋದ್ ಶೆಟ್ಟಿ, ರಂಜನ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಪುತ್ರ ಆದಿ ಹರಿಕೃಷ್ಣ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿಸುತ್ತಿದ್ದಾರೆ. ಮಾಸ್ತಿ ಸಂಭಾಷಣೆ ಸಂಭಾಷಣೆ ಬರೆದಿದ್ದು, ಕೆ.ಎಸ್ ಚಂದ್ರಶೇಖರ್ ಛಾಯಾಗ್ರಹಣ, ಅನುಕೃಷ್ಣ ಸಂಕಲನದ ಜವಾಬ್ದಾರಿ ಹೊತ್ತಿದೆ. ಬೆಂಗಳೂರು ಹಾಗೂ ರಾಜ್ಯದ ಸುಚಿದರ ತಾಣಗಳಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಆದಷ್ಟು ಬೇಗ ಚಿತ್ರೀಕರಣ ಮುಗಿಸಿ ಚಿತ್ರವನ್ನು ತೆರೆಗೆ ತರುವುದಾಗಿ ನಿರ್ದೇಶಕರು ಹೇಳಿದ್ದಾರೆ.



ಕೆಡಿಗೆ ಜೋಡಿಯಾದ ಕೀರ್ತಿ

ಮಹಾನಟಿ ಖ್ಯಾತಿಯ ಕೀರ್ತಿ ಸುರೇಶ್ ತಮಿಳು, ತೆಲುಗು, ಹಾಗೂ ಹಿಂದಿ ಸಿನಿಮಾಗಳಲ್ಲಿಯೂ ನಟಿಸಿ ಪ್ರಸಿದ್ಧಿ ಪಡೆದಿದ್ದಾರೆ. ಈಗ ಅದೇ ಕೀರ್ತಿ ಚಂದನವನಕ್ಕೂ ಎಂಟ್ರಿಕೊಡಲು ಸಜ್ಜಾಗಿದ್ದಾರೆ. ಹೌದು ಧ್ರುವ ಸರ್ಜಾ ಅಭಿನಯದ ಹೊಸ ಚಿತ್ರದಲ್ಲಿ ಕೀರ್ತಿ ಸುರೇಶ್ ನಾಯಕಿಯಾಗಿ ಅಭಿನಯಿಸಲಿದ್ದಾರೆ ಎನ್ನಲಾಗುತ್ತಿದೆ. ಕೆಡಿ ಚಿತ್ರದ ಚಿತ್ರೀಕರಣ ಮುಗಿಸಿರುವ ಧ್ರುವ ಸರ್ಜಾ ಹೊಸ ಚಿತ್ರದಲ್ಲಿ ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ. ಈ ಹಿಂದೆ ಕೆರೆಬೇಟೆ ಚಿತ್ರವನ್ನು ನಿರ್ದೇಶಿಸಿದ್ದ ರಾಜ್‌ಗುರು ಈ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಈ ತಿಂಗಳಲಿನಲ್ಲಿಯೇ ಬೆಂಗಳೂರಿನಲ್ಲಿ ಹೊಸ ಸಿನಿಮಾ ಮೂಹೂರ್ತ ಸಮಾರಂಭ ನೆರವೇರಿಲಿದೆ. ಈ ಸಿನಿಮಾದಲ್ಲಿಯೂ ಭರ್ಜರಿ ಆ್ಯಕ್ಷನ್ ನಿರೀಕ್ಷಿಸಬಹುದಾಗಿದೆ.

ಇತ್ತ ಕೆಡಿ ಚಿತ್ರೀಕರಣ ಮುಗಿಸಿರುವ ಧ್ರುವ ಸರ್ಜಾ ಈ ಸಿನಿಮಾದ ತೆರೆಗೆ ಎದಿರು ನೋಡುತ್ತಿದ್ದಾರೆ. ಜೋಗಿ ಪ್ರೇಮ್ ನಿರ್ದೇಶನದಲ್ಲಿ ಮೂಡಿಬಂದಿರುವ ಕೆಡಿ

ಬಲು ಅದ್ದೂರಿಯಾಗಿ ಮೂಡಿಬಂದಿದೆ. ಇದು ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ಧ್ರುವ ಅಂಡರ್‌ವರ್ಲ್ಡ್ ಡಾನ್ ಆಗಿ ಕಾಣಿಸಿಕೊಂಡಿದ್ದಾರೆ. ಅವರ ಲುಕ್ ಕೂಡ ಈ ಹಿಂದಿನ ಚಿತ್ರಗಳಿಗಿಂತ ವಿಭಿನ್ನವಾಗಿದೆ. ಕ್ರೇಜಿಸ್ಟಾರ್ ರವಿಚಂದ್ರನ್, ಸಂಜಯ್ ದತ್, ರಮೇಶ್ ಅರವಿಂದ್, ಶಿಲ್ಪಾ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ. ಈ ಸಿನಿಮಾ ತೆರೆಗೆ ಬರುವ ಮೊದಲೇ ಧ್ರುವ ಮತ್ತೊಂದು ಚಿತ್ರದಲ್ಲಿ ನಟಿಸುತ್ತಿರುವುದು ಸಿನಿಪ್ರಿಯರಲ್ಲಿ ಖುಷಿ ತಂದಿದೆ.

ಚಿತ್ತವಿಹಾರ

ಕರ್ತವ್ಯದ ಹಿರಿಮೆ

● ಮಾಯಾ ಬಾಲಚಂದ್ರ

ಪುರಾತತ್ವ ಶಾಸ್ತ್ರಜ್ಞರು, ಜ್ವಾಲಾಮುಖಿಗಳಿಂದ ನಿರ್ಮಿತ ಗುಡ್ಡವನ್ನು ಅಗೆದು ಉತ್ಖನನ ನಡೆಸುತ್ತಿದ್ದರು. ಅಳ್ಳೆಕ್ಕಿದಂತೆ ಪ್ರಾಚೀನ ವೈಭವ ಸಾರುವ ಒಂದು ಭವ್ಯ ನಗರ ತೆರೆದುಕೊಂಡಿತು. 2250 ವರ್ಷಗಳ ಹಿಂದೆ ರೋಮ್ ಸಾಮ್ರಾಜ್ಯದ ಪಾಂಪೇ ನಗರವನ್ನು ಅಪ್ಪಳಿಸಿದ ಜ್ವಾಲಾಮುಖಿಯ ದಿವ್ಯವನ್ನು ಅವರು ಅಗೆದಿದ್ದರು. ಅತ್ಯಂತ ಪ್ರಬಲವಾದ ಜ್ವಾಲಾಮುಖಿಯದು, ಆ ಜ್ವಾಲಾಮುಖಿಯ ತೀವ್ರತೆ, ಆದರಿಂದ ಉಂಟಾದ

ಪರಿಣಾಮಗಳು ಎಲ್ಲವೂ ಕೇವಲ ಪತ್ರವಾಗಿ ಇತಿಹಾಸದಲ್ಲಿ ಉಳಿದುಬಿಟ್ಟಿತು. ಆಗ ಕಣ್ಮರೆಯಾದ ನಗರ, ಸಂಪೂರ್ಣ ನಾಶವಾಗಿದೆ ಎಂದೇ ಎಲ್ಲರ ನಂಬಿಕೆಯಾಗಿತ್ತು. ಭಗ್ನಾವಶೇಷಗಳ ನಗರ, ಭೂಮಿಯ ಒಳಭಾಗದಲ್ಲಿ ಎಂಬ ಕಲ್ಪನೆ ಸಹ ಜನರಲ್ಲಿರಲಿಲ್ಲ.

ಇಡೀ ನಗರ ಭೂಗತವಾದಾಗ ಕೆಲವರು ರಕ್ಷಿಸಲ್ಪಟ್ಟರು. ಹಾಗೆ ಉಳಿದವರು ದಾಖಲಿಸಿದ್ದ ಸ್ಮೃತಿಗಳು ಇನ್ನೂ ಸುರಕ್ಷಿತವಾಗಿಯೇ ಇದ್ದವು. ಅವುಗಳಲ್ಲಿ ಹೀಗೆ ನಮೂದಿಸಲಾಗಿತ್ತು 'ಭೂಕಂಪದ ಮೊದಲ ಕಂಪನ ತಿಳಿಯುತ್ತಲೇ ಜನ ದಿಕ್ಕೆಟ್ಟು ಓಡತೊಡಗಿದರು. ಕೆಲವರು ನಾಶವಾದರು. ಕೆಲವರು ಬದುಕುಳಿದರು. ಓಡುತ್ತಿದ್ದ ಕೆಲವರು ರಾಜದ್ವಾರದಲ್ಲಿ ದಂಡವನ್ನು ಹಿಡಿದು ನಿಂತ ದ್ವಾರಪಾಲಕನಿಗೆ ಕಿರುಚಿ ಹೇಳಿದರು ನಿನ್ನ ಪ್ರಾಣವನ್ನು ಉಳಿಸಿಕೊಳ್ಳಲು ಓಡು ಎಂದು, ಆದರೆ ಆ ಸಿಪಾಯಿ ಉತ್ತರಿಸಿದನು ನನ್ನ ಕರ್ತವ್ಯ ನನ್ನನ್ನು ಇಲ್ಲಿಂದ ಅಲುಗಲು ಬಿಡುತ್ತಿಲ್ಲ ಎಂದು ಅವನು ಅಲ್ಲೇ ದೃಢವಾಗಿ ನಿಂತು ಬಿಟ್ಟ. ಇಡೀ ನಗರದೊಂದಿಗೆ ಅವನು ಭೂಗರ್ಭದಲ್ಲಿ ಸೇರಿಕೊಂಡನು' ಎಂದು.

ಉತ್ಖನನ ನಡೆಸುತ್ತಿದ್ದ ತಂಡ ರಾಜದ್ವಾರವನ್ನು ತಲುಪಿದಾಗ, ಅಲ್ಲಿ ದಂಡವನ್ನು ಹಿಡಿದ ಅಸ್ಥಿಪಂಜರವೊಂದು ಹಾಗೆಯೇ ನಿಂತಿರುವುದನ್ನು ಕಂಡು, ಅವರೆಲ್ಲರೂ ಮೂಕ ವಿಸ್ಮಿತರಾದರು. ಆ ದ್ವಾರಪಾಲಕ ಎಲ್ಲರಂತೆ ಓಡಿಹೋಗಿ ತನ್ನ ಪ್ರಾಣ ಉಳಿಸಿಕೊಳ್ಳಬಹುದಿತ್ತು. ಅಂತಹ ಕೋಲಾಹಲದಲ್ಲೂ ಸಹ ಸ್ಥಿರತೆ ಕಳೆದುಕೊಳ್ಳದ ಸ್ಥೈರ್ಯ ಮೆರೆದಿದ್ದ ಆತ. ಜನರೆಲ್ಲ ದಿಕ್ಕಾಪಾಲಾಗಿ ಓಡುತ್ತಿದ್ದರೂ, ತನ್ನನ್ನು ಓಡಲು ಪ್ರೇರೇಪಿಸಿದರೂ ಕದಲದ ದೃಢತೆ ಆತನದ್ದು. ತಾನು ಪಾರಾಗಿ ರಕ್ಷಿಸಿಕೊಂಡರೂ, ಯಾರೂ ತನ್ನನ್ನು ಪ್ರಶ್ನಿಸಲಾಗದ ಸಂದರ್ಭ ಅದಾಗಿತ್ತು. ಆದರೂ ಆತನ ಕರ್ತವ್ಯ ಪ್ರಜ್ಞೆ ಆತನನ್ನು ಸ್ವಲ್ಪವೂ ವಿಚಲಿತನಾಗಲು ಬಿಟ್ಟಿರಲಿಲ್ಲ. ಆತನ ಆತ್ಮಸಾಕ್ಷಿ ಆತನನ್ನು ಕರ್ತವ್ಯ ವಿಮುಖನಾಗಿ ಓಡಿ ಹೋಗದಂತೆ ತಡೆದಿತ್ತು.

ರೋಮ್ ನಗರ ಆ ಸಿಪಾಯಿಗೆ ಶ್ರದ್ಧಾಂಜಲಿ ಅರ್ಪಿಸಿ ಸ್ಮರಿಸಿತು. ಸಾವಿರಾರು ವರ್ಷಗಳ ನಂತರವೂ, ಅಸ್ಥಿಪಂಜರದ ರೂಪದಲ್ಲಿ, ದಂಡವನ್ನು ಹಿಡಿದು ನಿಂತು ದರ್ಶಿಸುವವರಿಗೆ 'ಹೆದರಿದಿರಿ, ನಿಮ್ಮ ಕರ್ತವ್ಯ ಮಾರ್ಗದಲ್ಲಿ ದೃಢವಾಗಿ ನಿಲ್ಲಿರಿ. ಮಾನವನ ಹಿರಿಮೆ ಅದರಲ್ಲಿಯೇ ಇದೆ' ಎಂಬ ಸಂದೇಶವನ್ನು ಸಾರುತ್ತಿದ್ದಾನೆ.

ವಿಶ್ವವಾಣಿ
ಆರಾಮ
@vishwavaninews
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 13-11-2025 ಗುರುವಾರ

ಜೀವನದಲ್ಲಿ ಕ್ಷಮಾ ಗುಣಕ್ಕೂ ಇದೆ ಮಹತ್ವ

ಇನ್ನೊಬ್ಬರ ತಪ್ಪನ್ನು ಎತ್ತಿಹಿಡಿದು ಸಂಬಂಧವನ್ನು ಕೆಡಿಸುವ ಬದಲು, ತಪ್ಪನ್ನು ತಿದ್ದಿ ಮನ್ನಿಸಿ ಬಿಡುವುದು, ಮುನಿಯುವ ಬದಲು ಮನ್ನಿಸುವ, ಶಿಕ್ಷಿಸುವ ಬದಲು ತಿದ್ದಿ ಕ್ಷಮಿಸುವುದು ಅತ್ಯಂತ ಪ್ರಯೋಜನಕಾರಿಯಾದದ್ದು. ಇದು ಮನ್ನಿಸುವವನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ. ಇಂದು ವಿಶ್ವ ಕ್ಷಮಾದಿನ, ಆ ಕುರಿತಂತೆ ಇದೊಂದು ಸಕಾಲಿಕ ಲೇಖನ.

● ಡಾ. ಗಾಯತ್ರಿ ಜೈಪ್ರಕಾಶ, ಜಮಖಂಡಿ

ಈ ಸೃಷ್ಟಿಯಲ್ಲಿ ಮಾನವನ ಹುಟ್ಟು ಅತ್ಯಂತ ಶ್ರೇಷ್ಠ. ಸಂಘಜೀವಿಯಾಗಿರುವ ನಾವು ವಿಶ್ವವೇ ಒಂದು ಎಂಬ ಭಾವನೆಯಿಂದ ಬದುಕಬೇಕಿದೆ. ಹೀಗಿರುವಾಗ ನಮಗೆ ಪರಸ್ಪರ ಸಹಕಾರ, ಹೊಂದಾಣಿಕೆ, ಸಹನೆ, ತಂಡಕಾರ್ಯ, ಗೌರವ, ಕರುಣೆ, ಸಮಭಾವ ಇರಬೇಕಾಗುತ್ತದೆ.

ಯಶಸ್ಸನ್ನು ಕಾಣಬೇಕಾಗುವ ಹಾದಿಯಲ್ಲಿ ಇವೆಲ್ಲವೂ ಅನಿವಾರ್ಯವಾದರೂ ಯಾವುದೇ ಒಂದು ಹೆಜ್ಜೆಯಲ್ಲಿ ನಮ್ಮ ಅಜ್ಞಾನದಿಂದ ತಪ್ಪುಗಳು ನಡೆಯುವುದು, ಕೋಪ, ವೈಮನಸ್ಸು, ಪೈಪೋಟಿ, ಅಸೂಯೆ, ಅಹಂಕಾರ ಇವೆಲ್ಲಾ ಎದುರಾಗಿ ಸಂಘರ್ಷ ಉಂಟಾಗಿ ಕಂದಕ ಏರ್ಪಡುವುದು ಸಹಜವೇ. ಈ ತರಹದ ವೈರುಧ್ಯಗಳು ನಮ್ಮ ಪ್ರಗತಿಯನ್ನು ಧಮನಿಸಿ ಮನಸ್ಸನ್ನು ಹಿಂಡಿ ಬಿಡುತ್ತವೆ.

ಕುಟುಂಬದಲ್ಲಾಗಲೀ, ಕಾರ್ಯಸ್ಥಳದಲ್ಲಾಗಲೀ ಮನಸ್ತಾಪಗಳು ಬರುವುದು ಸಹಜ. ಆದರೆ ಅವುಗಳನ್ನು ಕ್ಷಮಿಸದೇ ಉರಿಯುವ ಜ್ವಾಲೆಗೆ ತುಪ್ಪ ಸುರಿಯುತ್ತಾ ಇದ್ದರೆ ನಮ್ಮ ಬದುಕು ಸುಟ್ಟು ಬೂದಿಯಾಗುತ್ತದೆ. ಆದ್ದರಿಂದ ನಾವು ನೆಮ್ಮದಿಯಿಂದ, ಗೌರವದಿಂದ ಯಶಸ್ವಿಯಾಗಿ ಬಾಳಬೇಕೆಂದರೆ ಪ್ರತಿಯೊಬ್ಬರಲ್ಲಿಯೂ

ಕ್ಷಮಾ ಗುಣ ಇರಬೇಕು. ಇಲ್ಲದಿದ್ದರೆ ಅದನ್ನು ಅನಿವಾರ್ಯವಾಗಿ ರೂಢಿಸಿಕೊಳ್ಳಬೇಕು, ಏಕೆಂದರೆ ಕ್ಷಮಾಗುಣ ಜೀವನದಲ್ಲಿ ಪವಾಡವನ್ನೇ ಸೃಷ್ಟಿಸಬಲ್ಲುದು.

ಪ್ರಪಂಚದ ಹಾಗೂ ನಮ್ಮ ಸಮಾಜದಲ್ಲಿ ಎಷ್ಟೆಲ್ಲಾ ಅವಾಂತರಗಳು ನಮ್ಮ ಕಣ್ಣ ಮುಂದೆ ಸಾಲು ಸಾಲಾಗಿ ಹಾದುಹೋಗುತ್ತಿದೆ. ಇವುಗಳಲ್ಲಿ ಹೆಚ್ಚಿನವು ಅಸಹಿಷ್ಣುತೆಯಿಂದಲೇ ನಡೆಯುವವುಗಳಾಗಿವೆ. ಕುಟುಂಬದಲ್ಲಿ ಗಂಡ-ಹೆಂಡತಿ ನಡುವೆ ವಿವಾಹ ವಿಚ್ಛೇದನೆ, ಕೊಲೆ, ಆತ್ಮಹತ್ಯೆ, ಮರ್ಯಾದಾ ಹತ್ಯೆ, ಏನೋ ತಪ್ಪು ಮಾಡಿದರೆಂದು ಹೆತ್ತ ಮಕ್ಕಳನ್ನೇ ದೂರ ಮಾಡುವುದು, ದ್ವೇಷಿಸುವುದು, ದಾಯಾದಿಗಳ ನಡುವೆ ಆಸ್ತಿಕಲಹ ಇಂದಿನ ದಿನಗಳಲ್ಲಿ ಯಥೇಚ್ಛವಾಗಿ ಕಂಡುಬರುತ್ತಿದೆ. ನೆರೆಹೊರೆ ಗಲಾಟೆಗಳು, ಬುದ್ಧಿವಾದದ ಮಾತು ಹೇಳಿದರೂ ತಪ್ಪಾಗಿ ತಿಳಿದು ಅಟ್ಟಾಡಿಸಿ ಕೊಲೆ ಮಾಡುವುದು, ಹೊಡೆದಾಡುವುದು ಇಂತಹವುಗಳಿಗೆ ಅಂಕಿಅಂಶವೇ ಇಲ್ಲದಾಗಿದೆ. ಕಾರಣವಿಲ್ಲದ ಘಟನೆಗಳಿಗೆ ದೊಂಬಿ ಎಬ್ಬಿಸುವುದು, ಸಾರ್ವಜನಿಕ ಸಂಪತ್ತು ನಾಶ ಮಾಡುವುದು ಕಾಣುತ್ತಿರುತ್ತೇವೆ. ರಾಜಕೀಯದಲ್ಲಂತೂ ಮಾತಿನ ಕೆಸರಾಟ, ಕೆಟ್ಟದಾಟ ಎದುರಾಳಿಯ ಮಾನ-ಮರ್ಯಾದೆ ಎಲ್ಲಾ ತೆಗೆದು ದಮ್ಮಿಕ್ಕಿಸುವುದು ಜಗಜ್ಜಾಹೀರಾಗಿದೆ.

ಕುಟುಂಬ, ನೆರೆಹೊರೆ, ಸಮಾಜ, ರಾಜಕೀಯ ಇಲ್ಲೆಲ್ಲಾ ನೆಮ್ಮದಿ ಹಾಳಾಗಿದೆ ಎಂದು ಅನಿಸುವುದು ಸಹಜ. ಹಾಗಾದರೆ ಇದಕ್ಕೆ ಮದ್ದಿಲ್ಲವೇ? ಖಂಡಿತಾ ಇದೆ, ಅದೇ ಕ್ಷಮಾಗುಣ. ಇನ್ನೊಬ್ಬರ ತಪ್ಪನ್ನು ಎತ್ತಿಹಿಡಿದು ಸಂಬಂಧವನ್ನು ಕೆಡಿಸುವ ಬದಲು, ತಪ್ಪನ್ನು ತಿದ್ದಿ ಮನ್ನಿಸಿ ಬಿಡುವುದು, ಮುನಿಯುವ ಬದಲು ಮನ್ನಿಸುವ, ಶಿಕ್ಷಿಸುವ ಬದಲು ತಿದ್ದಿ ಕ್ಷಮಿಸುವುದು ಅತ್ಯಂತ ಪ್ರಯೋಜನಕಾರಿಯಾದದ್ದು. ಇದು ಮನ್ನಿಸುವವನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ.

ಈ ಕ್ಷಮಾಗುಣ ಪ್ರತಿಯೊಬ್ಬ ಮಾನವರಲ್ಲಿಯೂ ಇರಲೇ ಬೇಕಾದ ಮಹತ್ತರ ಗುಣ. ಸಂತರು, ಋಷಿಮುನಿಗಳು ಕ್ಷಮೆಯನ್ನು ನೀಡಿದ್ದನ್ನು ಕಥೆ-ಪುರಾಣಗಳಲ್ಲಿ ನಾವು ಸಾಕಷ್ಟು ಕೇಳಿದ್ದೇವೆ. ಕ್ಷಮಾಗುಣವಿದ್ದರೆ ಶಾಂತಿಯಿಂದ, ಆನಂದದಿಂದ ಬಾಳಬಹುದು.

ಹಾಗಾದರೆ ಈ ಕ್ಷಮಾಗುಣವನ್ನು ನಾವು ಹೇಗೆ ರೂಢಿಸಿಕೊಳ್ಳಬಹುದು?-ನಾವ್ಯಾರೂ ಇಲ್ಲಿ ಶಾಶ್ವತ ಅಲ್ಲ ಎಂಬುದು ಮೊದಲು ಪ್ರತಿಯೊಬ್ಬರಿಗೆ ಅರ್ಥ ಆಗಬೇಕು. ಈ ಜೀವನ ಇರುವುದು ಒಂದೇ ಸಲ, ಏನಿದ್ದರೂ ಇಲ್ಲೇ ಜೀವಿಸಿ ಹೋಗಬೇಕೆಂದು ಮನವರಿಕೆ ಆಗಬೇಕು. ಏನೋ ಒಂದು ತಪ್ಪು ನಡೆದಿದೆ ಎಂದು ಸಂಬಂಧವನ್ನು ಮುರಿದು ಬಿಡುವುದು ಕ್ಷೇಮವಲ್ಲ, ಬದುಕು ಇರುವುದು ಕಟ್ಟಿಕೊಳ್ಳಲು ವಿನಃ ಮುರಿದು ಹಾಕಲು ಅಲ್ಲ. ಸಮಾಜದ ಜೊತೆ ಸ್ಥಾನ-ಮಾನ-ಮರ್ಯಾದೆಗೆ ನಾವು ನಮ್ಮವರನ್ನು, ನಮ್ಮತನವನ್ನು ಬಿಟ್ಟುಕೊಡಬಾರದು, ನಾವೇ ಬಲಿತೆಗೆದುಕೊಳ್ಳಬಾರದು. ಜೀವನೇ ಅಂದರೂ ನಾವು ಮಾತ್ರ ಸಹನೆಯಿಂದ ನಡೆದುಕೊಂಡು ಆಗಲಿ ಬಿಡು, ಹೋಗಲಿ ಬಿಡು, ಪಾಲಿಗೆ ಬಂದದ್ದು ಪಂಚಾಮೃತ, ನಮ್ಮ ಹಣೆಬರಹ ಎಂದು ಎಲ್ಲವನ್ನೂ ಕ್ಷಮಿಸಿ ಸ್ವೀಕರಿಸಬೇಕು.

ಅತಿಯಾದ ಲಾಲಸೆ ಬಿಟ್ಟು ಬದುಕುವುದು ಕಲಿಯಬೇಕು. ಏನಿದ್ದರೂ, ಎಷ್ಟಿದ್ದರೂ ಎಲ್ಲರೂ ಒಂದು ದಿನ ಬರಿಗೈಯಲ್ಲೇ ಹೋಗುವುದು, ಇಲ್ಲಿ ಯಾವುದೂ-ಯಾರೂ ಯಾವಾಗ ಬೇಕಾದರೂ ಇಲ್ಲವಾಗಬಹುದು ಎಂಬ ಸತ್ಯವನ್ನರಿತು ಎಲ್ಲರೂ ನಮ್ಮವರೇ, ಏನೋ ಆಗಿದೆ ಹೋಗಲಿ ಎಂದು ಕ್ಷಮಿಸಿ ಬಿಡಬೇಕು. ಈ ಪರಿಸ್ಥಿತಿ ತನಗೆ ಬಂದರೆ ಹೇಗೆ ಎಂಬ ಸಹಾನುಭೂತಿ ರೂಢಿಸಿಕೊಂಡು ಹೇಗೆ ನಿಭಾಯಿಸಬೇಕೆಂದು ಅರಿತುಕೊಳ್ಳಬೇಕು, ಅದರ ಹೊರತು ನಾನು ಇರುವುದೇ ಹೀಗೆ, ನಾನು ಹೇಳಿದಂತೆ ಆಗಬೇಕು, ತಪ್ಪಾದರೆ ಎಲ್ಲಾ ಹೋಯಿತು, ಎಲ್ಲವೂ ನನ್ನದಾಗಬೇಕು ಎಂಬ ಸ್ವಾರ್ಥಭಾವನೆ ಕ್ಷಮಾಗುಣವನ್ನು ಕುಂದಿಸಿ ಬಿಡುತ್ತದೆ.

ಪ್ರಸ್ತುತದ ದಿನಮಾನದಲ್ಲಿ ಕ್ಷಮಾಗುಣ ಬಹಳ ಅನಿವಾರ್ಯ, ಏಕೆಂದರೆ ಅದು ಬಹಳ ಮಹತ್ವ ಹೊಂದಿದೆ. ಸಮಾಜದಲ್ಲಿ ನಾವೆಲ್ಲರೂ ಪರಸ್ಪರ ತಪ್ಪುಗಳನ್ನು ಮುಂದೆ ಸಹಬಾಳ್ವೆ ನಡೆಸಲು ಮಾದರಿಯಾಗೋಣ.

ಕ್ರಿಯಾಶೀಲ ಬದುಕು: ನೆಮ್ಮದಿಯ ತಳಹದಿ

ಒಬ್ಬ ಶ್ರಮಜೀವಿ ನಿಟ್ಟುಸಿರು ಬಿಟ್ಟರೂ ಹೃದಯದಿಂದ ನಗುತ್ತಿರುತ್ತಾನೆ, ಅದಕ್ಕೆ ಕಾರಣವೇನೆಂದರೆ ಅವನ ಬದುಕು ಸದಾ ಚಟುವಟಿಕೆಯಿಂದ ತುಂಬಿರುವುದಾಗಿದೆ, ಹಾಗಾಗಿಯೇ ಅವನಿಗೆ ಬದುಕಿನ ಬಗ್ಗೆ ಬೇಸರವಿರುವುದಿಲ್ಲ, ಅರ್ಥಬದ್ಧ ಬದುಕನ್ನು ತಾನು ಕಳೆಯುತ್ತಿದ್ದಾನೆ ಎಂದು ಮನಸಾರೆ ಖುಷಿಪಡುತ್ತಿರುತ್ತಾನೆ.

● ಸರಸ್ವತಿ ಕೆ ನಾಗರಾಜ್, ಹಿರಿಯೂರು

ಇಂದು ನಾವು ಎಲ್ಲೆಡೆ ಕಾಣುತ್ತಿರುವುದು ಅತ್ಯಂತ ವೇಗದ ಜಗತ್ತು. ಹಾಗಾಗಿ ಪ್ರತಿಯೊಬ್ಬರೂ ಅವರವರ ಕೆಲಸ-ಕಾರ್ಯಗಳಲ್ಲಿ, ತಮ್ಮ ಭವಿಷ್ಯದ ಯೋಚನೆಗಳಲ್ಲಿ, ಸದಾ ನಿರತರಾಗುವುದು ಸಹಜ.

ನಮ್ಮ ಸುತ್ತಮುತ್ತ ಹಲವರು ಕೆಲವೊಮ್ಮೆ ಗೊಣಗಾಡುವುದು ನಮ್ಮ ಗಮನಕ್ಕೆ ಬರುತ್ತಿರುತ್ತದೆ, ಅದೇನೆಂದರೆ ಸಮಯದ ಕೊರತೆ ಮತ್ತು ತಾವು ಎದುರಿಸುತ್ತಿರುವ ಅಶಾಂತಿಯ ಪರಿಸ್ಥಿತಿ. ಆದರೆ ನಿಜವಾಗಿಯೂ ನೋಡಿದರೆ, ಯಾರ್‍ಯಾರು ಸದಾ ಹೆಚ್ಚೆಚ್ಚು ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೋ, ಅಂತವರೇ ಹೆಚ್ಚು ನೆಮ್ಮದಿಯಾಗಿರುವುದನ್ನು ನಾವು ಸೂಕ್ಷ್ಮವಾಗಿ ಗುರುತಿಸಲು ಸಾಧ್ಯ. ಅದೇಕೆಂದು ಊಹಿಸಬಲ್ಲಿರಾ? ಅಂತವರಿಗೆ ತಮ್ಮ ಪಾಲಿನ ಋಣಾತ್ಮಕ ವಿಷಯಗಳನ್ನು ಯೋಚನೆ ಮಾಡಲು ಸಮಯವೇ ಸಿಗುವುದಿಲ್ಲ ಎಂಬುದು ವಾಸ್ತವ. ಅಂತವರ ಮನಸ್ಸು ಎಂದಿಗೂ ಖಾಲಿ ಇರುವುದಿಲ್ಲ.

ಯಾರದ್ದೇ ಆಗಲಿ, ಖಾಲಿ ಮನಸ್ಸು ಕೆಲವೊಮ್ಮೆ ನೋವಿನ, ಚಿಂತೆಗಳ, ಅಸಹನೆಯ ಗೂಡಾಗುತ್ತದೆ, ಆದರೆ ಸದಾ ಕೆಲಸದಲ್ಲಿರುವವನು ಜೀವನದ ನಿಜವಾದ ಅರ್ಥ ಏನೆಂದು ಅರಿಯುತ್ತಾನೆ, ಹಾಗಾಗಿಯೇ ಅವನಿಗೆ ಪ್ರತಿಯೊಂದು ಕ್ಷಣವೂ ಮೌಲ್ಯವಾದುದ್ದೆನಿಸುತ್ತದೆ.

ನಾವು ಮಾಡುವ ವೃತ್ತಿಯೇ ಆಗಲಿ, ಚಟುವಟಿಕೆಗಳೇ ಆಗಲಿ ಅದು ಕೇವಲ ಗಳಿಕೆಗಾಗಿ ಮಾತ್ರ ಅಲ್ಲ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುವುದೂ ಕೂಡಾ ಉತ್ತಮ, ಏಕೆಂದರೆ ಅದು ಆತ್ಮಕ್ಕೆ ಶಾಂತಿ ನೀಡುವ ಒಂದು ರೀತಿಯ ಧ್ಯಾನ. ಹೌದು, ಸದಾ ಚಟುವಟಿಕೆಯಲ್ಲಿರುವ ಮನುಷ್ಯ ನಿದ್ರೆ ಮಾಡುವಾಗ ಸಂತೃಪ್ತಿಯಿಂದ ಉಸಿರೆಳೆಯುತ್ತಾನೆ. ತಾನಿಂದು ಏನೋ ಪ್ರಯೋಜನಕಾರಿ ದಾರಿಯಲ್ಲಿ ಸಾಗಿದ್ದೆ ಎಂಬ ಭಾವನೆ ಅವನಿಗೆ ಆಳವಾದ ನೆಮ್ಮದಿ ಕೊಡುತ್ತದೆ.

ನೀವೇ ಯೋಚಿಸಿ ನೋಡಿ, ಒಬ್ಬ ನಿರುದ್ಯೋಗಿ ತನ್ನ ಬದುಕಿನ ಅಮೂಲ್ಯವಾದ ಸಮಯವನ್ನು ಪೋಲು ಮಾಡುತ್ತಾನೆ, ಹಾಗಾಗಿ ಸದಾ ಅಶಾಂತಿ ಅವನ್ನಲ್ಲಿರುವುದು ಸಹಜವೂ ಅಲ್ಲವೇ? ಆದರೆ ಒಬ್ಬ ಶ್ರಮಜೀವಿ ನಿಟ್ಟುಸಿರು ಬಿಟ್ಟರೂ ಹೃದಯದಿಂದ ನಗುತ್ತಿರುತ್ತಾನೆ, ಅದಕ್ಕೆ ಕಾರಣ ಏನೆಂದರೆ ಅವನ ಬದುಕು ಸದಾ ಚಟುವಟಿಕೆಯಿಂದ ತುಂಬಿರುವುದಾಗಿದೆ. ಹಾಗಾಗಿಯೇ ಅವನಿಗೆ ಬದುಕಿನ ಬಗ್ಗೆ ಬೇಸರವಿರುವುದಿಲ್ಲ, ಅರ್ಥಬದ್ಧ ಬದುಕನ್ನು ತಾನು ಕಳೆಯುತ್ತಿದ್ದಾನೆ ಎಂದು ಮನಸಾರೆ ಖುಷಿಪಡುತ್ತಿರುತ್ತಾನೆ. ಆ ಮೂಲಕ ಬದುಕಿನ ಹೊಸ ಅನುಭವ ಪಡೆಯುತ್ತಿರುತ್ತಾನೆ. ಅಂತವರ ಜೀವನವು ನಾಳೆಯ ದಾರಿಗೆ ಹೆಜ್ಜೆಯಾಗುತ್ತದೆ. ಆ ರೀತಿ ಯೋಚಿಸುವವರ ಮನಸ್ಸು ಎಂದಿಗೂ ಕುಸಿಯುವುದಿಲ್ಲ, ಆಲೋಚನೆ ದುಃಖದ ಕಡೆ ಹೊರಳುವುದಿಲ್ಲ. ಸದಾ ಗುರಿಯತ್ತ ಸಾಗುತ್ತಿದ್ದೇನೆಂಬ ಅರಿವು ಮನಸ್ಸಿಗೆ ಸದಾ ಶಾಂತಿ ನೀಡುತ್ತದೆ.

ಆದರೆ ಮತ್ತೊಂದೆಡೆ ಸೋಮಾರಿತನ ತುಂಬಿದವನಿಗೆ ಸಮಯ ತುಂಬಾ ಸಿಗುವುದೇನೋ ನಿಜ, ಹಾಗಾಗಿಯೇ ಅದೇ ಸಮಯ ಅವನ ಮನಸ್ಸನ್ನು ಸದಾ ತಿನ್ನುತ್ತಿರುತ್ತದೆ, ಆ ಮೂಲಕ ಹಳೆಯ ನೋವುಗಳನ್ನು ಮೆಲುಕು ಹಾಕುತ್ತಾ, ಇತರರ ಜೊತೆ ಅವನನ್ನು ಹೋಲಿಕೆ ಮಾಡುತ್ತಾ ಮನ:ಶಾಂತಿಯನ್ನು ಕಳೆದುಕೊಳ್ಳುವಂತೆಯೂ ಮಾಡುತ್ತದೆ.

ಆದರೆ ಸದಾ ಕ್ರಿಯಾಶೀಲ ವ್ಯಕ್ತಿತ್ವದ ಮನುಷ್ಯನ ಮನಸ್ಸು ಬೇರೆ ಯಾವುದೇ ಅನಗತ್ಯ ವಿಷಯಗಳಿಗೆ ಒಗ್ಗಿಕೊಳ್ಳುವುದಿಲ್ಲ. ಅವನಿಗೆ ದೂರು ಕೊಡುವ ಸಮಯವಿರುವುದಿಲ್ಲ, ಕೋಪ ಆವರಿಸಲು ಕಾರಣವಿರುವುದಿಲ್ಲ, ತನ್ನ ಬಗ್ಗೆ ಬೇಸರವನ್ನಂತೂ ಪಡುವುದೇ ಇಲ್ಲ. ಅವನಲ್ಲಿ ಇರುವ ದೂರದೃಷ್ಟಿಯ ಯೋಚನೆ ಸತತ ಪ್ರಯತ್ನ, ಪ್ರಗತಿ, ಮತ್ತು ಹೊಸ ಹೊಸ ಅನುಭವದ ಕಲಿಕೆ.

ದಿನವಿಡೀ ಕೆಲಸದ ಬಳಿಕ, ಹಾಸಿಗೆಯ ಮೇಲೆ ಬಿದ್ದಾಗ ನಿಶ್ಶಬ್ದವಾಗಿ ನಗುವುದು ಮುಖ್ಯ, ಏಕೆಂದರೆ ಬದುಕಿನ ಶ್ರಮ ಶಾಂತಿಗೆ ಕಾರಣವಾಗುತ್ತದೆ. ಹಾಗಾಗಿ ಸದಾ ಕ್ರಿಯಾಶೀಲವಾಗುವ ಅವಕಾಶವನ್ನು ತಪ್ಪಿಸಿಕೊಳ್ಳದಿರುವುದು ಉತ್ತಮ. ಆಗ ಮನಸ್ಸಿನ ಶಾಂತಿ ಪೂರ್ತಿ ಆವರಿಸಿದಂತಾಗುತ್ತದೆ, ಬದುಕಿಗೂ ಒಂದು ಪರಿಪೂರ್ಣ ಅರ್ಥ ಇದೆ ಎಂದನಿಸುತ್ತದೆ. ಆಗ ಅಲ್ಲಿ ನೆಮ್ಮದಿಯ ನಿಜವಾದ ತಾಣವಿರುವ ಅರಿವನ್ನು ಗುರುತಿಸಲು ಸಾಧ್ಯ.

ಜೀವನ ಮೊಬೈಲ್‌ಮಯ ಆಗಬಾರದು

● ಡಾ. ಮೈತ್ರಿ ಭಟ್, ವಿಟ್ಲ

ಇತ್ತೀಚೆಗೆ ಒಂದು ದಿನ ಹಾಗೇ ಸಮಯವನ್ನು ಕೊಲ್ಲಲು ಮೊಬೈಲ್ ಹಿಡಿದು ಸ್ಟೇಟಸ್ ನೋಡುತ್ತಾ ಕುಳಿತಿದ್ದೆ. ಗೆಳತಿಯೊಬ್ಬಳು ಅವಳ ಸಂಬಂಧಿಕರ ಮದುವೆಯ ವಿಡಿಯೋ ಸ್ಟೇಟಸ್ ಹಾಕಿದ್ದಳು. ವರ ವಧುವಿನ ಕೊರಳಿಗೆ ಕರಿಮಣಿ ಕಟ್ಟುತ್ತಿರುವ ದೃಶ್ಯ ಅದಾಗಿತ್ತು. ಆದರೆ ಅದನ್ನು ನೋಡುತ್ತಿದ್ದ ಹಾಗೇ ಮನಸು ಅದೆಲ್ಲೋ ಯೋಚನೆಯ ಗೂಡೊಳಗೆ ಸಿಲುಕಿಕೊಂಡಿತು, ಏಕೆಂದರೆ ಆ ಸಂದರ್ಭದಲ್ಲಿ ಅಲ್ಲಿದ್ದ ಪ್ರತಿಯೊಬ್ಬರೂ ಆ ಕ್ಷಣವನ್ನು ತಮ್ಮ ತಮ್ಮ ಮೊಬೈಲಿನಲ್ಲಿ ಸೆರೆ ಹಿಡಿಯುವುದರಲ್ಲಿ ಮಗ್ನರಾಗಿದ್ದರು.

ಯಾವಾಗ ಈ ಮೊಬೈಲ್ ಎನ್ನುವ ಮಾಯಜಾಲ ನಮ್ಮ ಅಂಗೈಯೊಳಗೆ ಸ್ಥಾನ ಪಡೆಯಿತೋ ಅಂದೇ ನಮ್ಮ ವರ್ತಮಾನದ ಕ್ಷಣ ಕಳೆದುಹೋಯಿತು. ನಾವು ಬದುಕಿನ ಪ್ರತೀ ಕ್ಷಣವ ಜೀವಿಸುವುದನ್ನು ಮರೆತು ಆ ಕ್ಷಣವ ನಾಳೆಗೆ ಕಾಪಿಡುವ ಭರದಲ್ಲಿ ಮೊಬೈಲ್ ಒಳಗೆ ತುರುಕಲು ಆರಂಭಿಸಿದೆವು. ಆದರೆ ನಿಜವಾಗಿ ಒಂದು ಕ್ಷಣ ಈ ಬಗ್ಗೆ



ಯೋಚಿಸಿದರೆ ನಮ್ಮ ಖುಷಿ ಯಾವುದು ಎಂಬುದನ್ನು ನಾವು ಅರಿತುಕೊಳ್ಳಬಹುದಾಗಿದೆ.

'ನಿನ್ನೆ ನಿನ್ನೆಗೆ ನಾಳೆ ನಾಳೆಗೆ ಇಂದು ನಮ್ಮದೇ ಚಿಂತೆ ಏತಕೆ?' ಎನ್ನುತ್ತಿದ್ದ ನಾವು ನಿನ್ನೆಯ ನಾಳೆಗಾಗಿ ತೆಗೆದಿಡುವ ಭರದಲ್ಲಿ ಇಂದಿನ ಖುಷಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಈ ನಿಜ ನಮಗೆ ಅರಿವಾಗುವುದೆಂದು?

ನಮ್ಮದು ಕ್ಷಣ ಕ್ಷಣದ ಜೀವನ. ಈ ಕ್ಷಣ ಸುಂದರವಾದರೆ ನಮ್ಮ ಬದುಕು ಸುಂದರವಾಗುತ್ತದೆ. ಈ ಕ್ಷಣ ಕೆಟ್ಟರೆ ಬದುಕು ಕೆಡುತ್ತದೆ. ಬದುಕಿನ ಕ್ಷಣ ಕ್ಷಣಗಳ ಸಂಭ್ರಮಿಸುತ್ತಾ ಈ ಕ್ಷಣ ಬಾಳಬೇಕಿದೆ. ಕೈಯಲ್ಲಿ ಮೊಬೈಲ್ ಹಿಡಿದು ಎಲ್ಲವನ್ನೂ ಸೆರೆ ಹಿಡಿದು ಅದನ್ನು ಸ್ಟೇಟಸ್, ಇನ್ಸ್ಟಾಗ್ರಾಮ್, ಫೇಸ್ಬುಕ್ ಹೀಗೆ ಎಲ್ಲೆಲ್ಲೋ ತುರುಕಿ ಅದಕ್ಕೆ ಬರುವ ಲೈಕು, ಕಾಮೆಂಟ್ಸ್ ಇವುಗಳೇ ನಮ್ಮ ಸಂಭ್ರಮವಾದರೆ ಹೇಗೆ? ನಾವೆಂದು ನಮ್ಮ ಬಳಿಯಿರುವ ಜೀವದ ಭಾವಕ್ಕೆ ಸ್ಪಂದಿಸುತ್ತಾ ಜೀವಿಸುವುದು? ಆ ಹಿಂದಿನ ದಿನಗಳ ಹರಟೆ, ಮಾತು, ನಗೆ ಮರುಕಳಿಸುವುದು ಎಂದು?

ಇನ್ನಾದರೂ ನಾವು ವರ್ತಮಾನದಲ್ಲಿ ಬದುಕುವುದನ್ನು ಕಲಿಯೋಣ. ವರ್ತಮಾನದಲ್ಲಿ ಇರುವುದು ಎಂದರೆ ನಿನ್ನೆಯ ನೆನಪುಗಳ ಹೊರೆಯನ್ನು ಇಳಿಸಿ, ನಾಳೆಯ ಕನಸುಗಳ ಹೊರೆಯನ್ನು ಹೊತ್ತುಕೊಳ್ಳದೆ, ಹಗುರಾಗಿ ಬದುಕು ಬೀಸಿದತ್ತ ಸಾಗುವುದಾಗಿದೆ. ಹಾಗಾಗಿ ಇಂದನ್ನು ಒಪ್ಪಿ ಅಪ್ಪಿಕೊಳ್ಳೋಣ. ಬದುಕಿನ ಹೆಜ್ಜೆಯಿಡುತ್ತಾ ಸಾಗೋಣ...

ಬುದ್ಧಿ ಎಂಬ ಸಾರಥಿ

● ವಿದ್ಯಾಶಂಕರ ಶರ್ಮ

ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳು ನಮ್ಮಿಂದ ಆಯ್ಕೆಯಾಗಲು ನಮ್ಮ ಬುದ್ಧಿಯೇ ಕಾರಣ. ಬುದ್ಧಿಯು ನಮ್ಮ ಅಂತ:ಕರಣದ ನಿಶ್ಚಯಾತ್ಮಕ ಭಾಗವಾಗಿದೆ, ಅಂದರೆ ನಮ್ಮ ಸಂಕಲ್ಪಗಳು ಚಿಗುರೊಡೆಯುವುದು ಬುದ್ಧಿಯ ಗುಹೆಯೊಳಗೆ. ಸುಪ್ರಸಿದ್ಧ 'ಕಠೋಪನಿಷತ್'ನಲ್ಲಿ ನಮ್ಮ ದೇಹವನ್ನು ರಥಕ್ಕೆ, ಇಂದ್ರಿಯಗಳನ್ನು ಕುದುರೆಗಳಿಗೆ, ಬುದ್ಧಿಯನ್ನು ಸಾರಥಿಗೆ ಹೋಲಿಸಿ ಹೇಳಿದ ಮಾತುಗಳಿವೆ. ಇಂತಹದುನ್ನು ಮಾಡಬೇಕು, ಇಂತಹ ಕಡೆಗೆ ಹೋಗಬೇಕು ಹೀಗೆ ಮಾತನಾಡ ಬೇಕು ಎಂಬ ನಿರ್ಧಾರಗಳು ಬುದ್ಧಿಯ ಗೂಡೊಳಗೆ ಆಗುತ್ತವೆ. ಆದ್ದರಿಂದ ಸಾರಥಿಯ ಪಾತ್ರ ಬಹು ಮುಖ್ಯವಾಗುತ್ತದೆ. ನಮ್ಮ ಬುದ್ಧಿಯ ಆಯ್ಕೆಗಳಿಗ ನುಸಾರವಾಗಿ ಪರಿಣಾಮಗಳು. ಅವುಗಳಿಂದ ನಮಗೆ ಸಂತಸ ಹಾಗೂ ನಿರಾಶೆಯ ಭಾವದ ಅನುಭವ. ಎಷ್ಟೋ ಬಾರಿ ಹೃದಯದ ಸಂದೇಶ ಮತ್ತು ಬುದ್ಧಿಯ ಸಂದೇಶಗಳ ನಡುವೆ ತಾಕಲಾಟವು ನಡೆಯುವುದುಂಟು. ಸಹಜ ದೃಷ್ಟಿಯಿಂದ ನೋಡಿದರೆ, ಬುದ್ಧಿಯ ಮಾತನ್ನು ಕೇಳುವುದು ಬಹುತೇಕ ಸನ್ನಿವೇಶಗಳಲ್ಲಿ ನಮಗೆ ಅನುಕೂಲಕ ರವಾಗುತ್ತದೆ. ವಸ್ತುನಿಷ್ಠ ಅಭಿಪ್ರಾಯಗಳು ಭಾವುಕತೆಯ ಸೋಂಕಿಗಿಂತ ಹೆಚ್ಚು ಅರ್ಥಪೂರ್ಣವಾಗಿರುತ್ತವೆ. ಸಾರಥಿ ಎಂದಾಗ ನಮಗೆ ನೆನಪಾಗುವುದು 'ಪಾರ್ಥಸಾರಥಿ' ಎನಿಸಿಕೊಂಡ ಶ್ರೀಕೃಷ್ಣನು. ಯದುಕುಲನಂದನನು ಅರ್ಜುನನಿಗೆ ಸಾರಥಿಯಾದ ಸನ್ನಿವೇಶದಲ್ಲಿ ಹುಟ್ಟಿದ 'ಭಗವದ್ಗೀತೆ' ಸರ್ವಶ್ರೇಷ್ಠ ಜೀವನ ಮಾರ್ಗದರ್ಶಿಕೆಯಾಗಿದೆ. ಕೃಷ್ಣನು ಸಾರಥಿಯ ರೂಪದಲ್ಲಿ ಗೋಚರಿಸಿ, ಬದುಕೆಂಬ ರಥಕ್ಕೆ ಸರಿಯಾದ ಚಾಲಕನು ಎಷ್ಟು ಮುಖ್ಯ ಎಂದು ಹೇಳಿದಂತಿದೆ. ಕಠೋಪನಿಷತ್ ನಲ್ಲಿ ಹೇಳಿದ ರಥ ರೂಪಕವನ್ನು ಭಗವಂತನ ಸಾರಥಿಯ ರೂಪಕ್ಕೆ ಜೋಡಿಸಿದಾಗ ಅದು ನೀಡುವ ಅರ್ಥ ಬಹು ವಿಶಾಲವಾದುದು. ನಮ್ಮ ಒಳಿತು ಕೆಡುಕುಗಳಿಗೆ ಬಹು ಪಾಲು ನಾವು ಆರಿಸಿಕೊಂಡ ಮಾರ್ಗಗಳು ಕಾರಣವಾಗಿರುತ್ತವೆ. ಹಾಗಾದರೆ ಬುದ್ಧಿಗೆ ಇಂತಹುದೇ ನಿರ್ಧಾರವನ್ನು ತೆಗೆದುಕೊಳ್ಳಲು ಪ್ರೇರಣೆ ಎಲ್ಲಿಂದ ಬಂದಿತು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಅದಕ್ಕೆ ಮನಸ್ಸೇ ಪ್ರೇರಕವು. ಉತ್ತಮ ಸಂಸ್ಕಾರಗಳಿಂದ, ಸ್ವಪ್ರಯತ್ನಗಳಿಂದ ಶುಚಿಯಾದ ಮನಸ್ಸು ಒಳ್ಳೆಯ ಬುದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತದೆ. ನಮ್ಮ ನಿರ್ಣಯಗಳು ಅಂತಿಮವಾಗಿ ಕಾರ್ಯರೂಪಕ್ಕೆ ಬರುವುದು ಬುದ್ಧಿಯ ಮೂಲಕವೇ ಆದರೂ, ಅದರ ಮೂಲಾಧಾರ ಇರುವುದು ನಮ್ಮ ಮನದ ಕುಹರ ದಲ್ಲಿ. ಶುದ್ಧವಾದ ಮನದಿಂದ ಉತ್ತಮ ಆಲೋಚನೆ ಗಳು, ಅವುಗಳಿಂದ ಸತ್ವಪೂರ್ಣ ಪ್ರತಿಫಲಗಳು ದೊರೆಯುತ್ತವೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮೋಸಗಾರ ಅಥವಾ ಮಂತ್ರಗಾರ (3)
4. ಪಂಡಿತ ಅಥವಾ ವಿದ್ವಾಂಸ ನಮ್ಮ ಮಾಜಿ ರಾಷ್ಟ್ರಪತಿಯೊಬ್ಬರನ್ನು ನೆನಪಿಸುತ್ತದೆ (3)
6. ದೊಡ್ಡಮಟ್ಟದ ನಾಶ ಅಥವಾ ಅಳಿವು (5)
7. ಜನರ ನಡುವೆ ಇರುವ ಸೇವಕ (3)
8. ಅಸ್ತವ್ಯಸ್ತವಾಗಿ ಬಂದಿರುವ ತಾವರೆ (3)
10. ಯಮನಿಗೆ ಮತ್ತೊಂದು ಹೆಸರು (3)
12. ಒಂದು ಜಾತಿಯ ಬಳ್ಳಿ ಮತ್ತದರ ಬೀಜವು ಅಂಜಿ ಬಂದಿದೆ (4)
14. ಸಾಕ್ಷ್ಯ ಅಥವಾ ದೃಢಪಡಿಸುವ ಸಾಧನ (4)
16. ಕೋಪಗೊಳ್ಳು ಅಥವಾ ರೇಗು (3)
18. ಮತ್ತೊಂದು ಅಪಹಾಸ್ಯ (3)
20. ಹತ್ತಿಯ ಮೇಲುಹೊದಿಕೆ (3)
21. ಪರಿಣಯದ ದಿನದ ವಧು (5)
22. ಹೆಂಗಳೆಯರಿಗೆ ಆಗಾಗ ನೆನಪಾಗುವ ಹುಟ್ಟಿದ ಮನೆ (3)
23. ಮಜವಾಗಿರುವ ಹಂತ (3)

ಮೇಲಿಂದ ಕೆಳಕ್ಕೆ

2. ಆಕಾಶದಲ್ಲಿ ಪ್ರಯಾಣಿಸಲು ಬಳಸುವ ವಾಹನ (3)
3. ಸಾಕಷ್ಟು ಧನವಿರುವಾತ (4)
4. ಸುಕುಮಾರವಾದ ಎಂದರ್ಥ (3)
5. ಮೊದಲನೆಯದ್ದಲ್ಲ, ಹತ್ತನೆಯ (3)
7. ಪಕ್ಕಕೆ ಸರಿ ಎನ್ನುವ (3)
9. ಓದುಗ ತಲೆಕೆಳಗಾಗಿದ್ದಾನೆ (3)
10. ಆಕೆಗೆ ಹೆದರಿಕೆ (3)
11. ಅಂತಃಕರಣವನ್ನು ಸೂಚಿಸುವ ಜೀರ್ಣಾಂಗ (3)
13. ರಾಮನೊಂದಿಗೆ ಕಾಡಿಗೆ ಹೋದ ಸಹೋದರ (3)
15. ನವಿಲು, ಕೋಳಿ ಮೊದಲಾದ ಹಕ್ಕಿಗಳ ಜುಟ್ಟು (3)
17. ಶಿವನಿಗೆ ಪ್ರಿಯವಾದ ದಿನ ತಲೆಕೆಳಗಾಗಿದೆ (4)
18. ಸೋತುಹೋಗದ ಎಂಬರ್ಥದ ಎರಡನೆಯ ಜೈನ ತೀರ್ಥಂಕರ (3)
19. ಬಾಡು ಎಂಬರ್ಥ ಹಸುವಿನ ಕಂದನ ನಡುವೆ ಬಂದಿದೆ (3)
20. ಅಸ್ತವ್ಯಸ್ತವಾಗಿ ಬಂದಿರುವ ಹೊಯಿಗೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಮಾಯಾವಿ 4. ಕೋವಿದ 6. ಮಾರಣಹೋಮ 7. ಜವಾನ 8. ಲಕಮ 10. ಅಂತಕ 12. ಗುಲಗಂಜಿ 14. ರುಜುವಾತು 16. ಕೆರಳು 18. ಅಣಕ 20. ರಜಾಯಿ 21. ಮದುಮಗಳು 22. ತವರು 23. ಮಜಲು

ಮೇಲಿಂದ ಕೆಳಕ್ಕೆ: 2. ವಿಮಾನ 3. ಹಣವಂತ 4. ಕೋಮಲ 5. ದಶಮ 7. ಜರುಗು 9. ಕಚವಾ 10. ಅಂಜಿಕೆ 11. ಕರುಳು 13. ಲಕ್ಷ್ಮಣ 15. ತುರಾಯಿ 17. ರವಾಮಸೋ 18. ಅಜಿತ 19. ಕಮರು 20. ರಳುಮ

ದುಡುಕಿ ಜನ್ಮ ಹಾಳು ಮಾಡಿಕೊಂಡ ಜಯ-ವಿಜಯರು

ತೃಣಬಿಂದುವೆಂಬ ಮಹರ್ಷಿಯ ಮಗಳು ದೇವಹೂತಿ. ಆಕೆಗೆ ಕರ್ದಮ ಪ್ರಜಾಪತಿಯಿಂದ ಇಬ್ಬರು ಪುತ್ರರು ಜನಿಸಿದರು. ಅವರಲ್ಲಿ ಹಿರಿಯನನ್ನು ಜಯ, ಎರಡನೇಯವನನ್ನು ವಿಜಯನೆಂದು ಕರೆದರು. ಅವರಿಬ್ಬರೂ ವಿಷ್ಣುವಿನ ಮಹಾ ಭಕ್ತರು. ಯಾವಾಗಲೂ ನಾರಾಯಣ ಅಷ್ಟಾಕ್ಷರಿ ಮಂತ್ರವನ್ನು ಜಪಿಸಿದ್ದರ ಫಲವಾಗಿ ವೇದ ವಿದ್ಯೆಯನ್ನೂ, ವಿಷ್ಣು ಸಾಕ್ಷಾತ್ಕಾರವನ್ನೂ ಬಹುಬೇಗ ಗಳಿಸಿದರು. ದೊಡ್ಡ ದೊಡ್ಡ ಯಜ್ಞ ಯಾಗಾದಿಗಳನ್ನು ನಿರ್ವಹಿಸುವುದರಲ್ಲಿ ಪರಿಣತಿಯನ್ನು ಪಡೆದರು. ಹೀಗಿರುವಾಗ ಮರುತ್ ಎಂಬ ರಾಜನು ಇವರಿಬ್ಬರಿಂದ ಒಂದು ಮಹಾಯಜ್ಞವನ್ನು ಮಾಡಿಸಿದನು. ಯಜ್ಞ ಯಶಸ್ವಿಯಾಗಿ ನಡೆದಾಗ ಸಂತುಷ್ಟನಾದ ರಾಜನು ಅವರಿಗೆ ಹೇರಳವಾದ ಹಣವನ್ನು ದಕ್ಷಿಣೆಯಾಗಿ ನೀಡಿದನು.

ಆದರೆ ಅದನ್ನು ಹಂಚಿಕೊಳ್ಳುವ ಬಗ್ಗೆ ಅಣ್ಣ-ತಮ್ಮಂದಿರಲ್ಲಿ ವಿವಾದ ಉಂಟಾಯಿತು. ತನಗೆ ಸರಿಯಾಗಿ ಅರ್ಧ ಪಾಲು ಸಿಗಬೇಕೆಂದು,

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಜಯನು ವಾದಿಸಿದನು, ವಿಜಯನು ತನಗೆ ಹೆಚ್ಚು ಪಾಲು ಸಿಗಬೇಕೆಂದು ಕೋರಿದನು. ಈ ಜಗಳದಲ್ಲಿ ಜಯನು ಕೋಪದಿಂದ ವಿಜಯನನ್ನು 'ನೀನು ನೀರಿನಲ್ಲಿ ಮೊಸಳೆಯಾಗು' ಎಂದು ಶಪಿಸಿದನು. ಅದಕ್ಕೆ ಪ್ರತಿ ಶಾಪವಾಗಿ ವಿಜಯನು, 'ನೀನು ಅರಣ್ಯದಲ್ಲಿ ಮದವೇರಿದ ಆನೆಯಾಗು' ಎಂದನು.

ಹೀಗೆ ಪರಸ್ಪರ ಶಪಿತರಾದ ಅವರು ದಿಕ್ಕು ತೋಚದೆ ಭಗವಂತನ ಮೊರೆ ಹೊಕ್ಕರು. ತಾವು ಮಾಡಿದ ತಪ್ಪಿನ ಅರಿವು ಅವರಿಗಾಗಿತ್ತು. ಅವರ ಮಾತನ್ನು ಕೇಳಿದ ಶ್ರೀಹರಿಯು, 'ನನ್ನ ಭಕ್ತರಾದವರ ಮಾತನ್ನು ನಾನು ಎಂದೂ ಸುಳ್ಳು ಮಾಡಲಾರೆ. ಇದು ನನಗೆ ನಾನೇ ಹಾಕಿಕೊಂಡ ನಿಯಮ. ಹಿಂದೆ ಪ್ರಹ್ಲಾದ ರಾಜಕುಮಾರನಿಗಾಗಿ ಕಂಬವನ್ನು ಸೀಳಿಕೊಂಡು ನಾನು ಹೊರ ಬಂದೆ, ಪ್ರಾಣಿಗಳ ರೂಪಗಳನ್ನು ದಶಾವತಾರಿಯಾಗಿ ತಾಳಿದೆ. ಆದ್ದರಿಂದ ನೀವು ನಿಮ್ಮ ನಿಮ್ಮ ಶಾಪವನ್ನು ಪಾಲಿಸದೇ ವಿಧಿ ಇಲ್ಲ. ಶಾಪದ ಕೊನೆಯಲ್ಲಿ ನೀವು ವೈಕುಂಠಕ್ಕೆ ಬರುತ್ತೀರಿ' ಎಂದು ಭರವಸೆ ನೀಡಿ ಅದೃಶ್ಯನಾದನು.

ಜಯ-ವಿಜಯರು ಗಂಡಕೀ ನದಿ ತೀರದಲ್ಲಿ ಮೊಸಳೆ ಹಾಗೂ ಸಮೀಪದ ಅರಣ್ಯದಲ್ಲಿ ಆನೆಯಾಗಿ ಜನಿಸಿದರು. ಆದರೆ ಪೂರ್ವಜನ್ಮದ ಜ್ಞಾನ ಅವರಿಗಿತ್ತು. ಪ್ರಾಣಿಗಳಾಗಿ ಜನಿಸಿದರೂ ಸಹ ಅವರು ಸದಾ ವಿಷ್ಣು ಧ್ಯಾನಾಸಕ್ತರಾಗಿದ್ದರು. ಹೀಗಿರುವಾಗ ಒಂದು ಕಾರ್ತೀಕ ಮಾಸವು ಬಂದಿತು. ಆನೆಯ ಜನ್ಮದಲ್ಲಿದ್ದ ಜಯನು ಸ್ನಾನಕ್ಕಾಗಿ ಗಂಡಕೀ ನದಿಗೆ ಇಳಿದನು. ಆನೆಯು ನೀರಿಗಿಳಿದ ತಕ್ಷಣ ಮೊಸಳೆಯಾಗಿದ್ದ ವಿಜಯನು ಅದರ ಕಾಲನ್ನು ಬಲವಾಗಿ ಹಿಡಿದೆಳೆದನು. ತನ್ನ ಕಾಲನ್ನು ಮೊಸಳೆಯಿಂದ ಬಿಡಿಸಿಕೊಳ್ಳಲಾಗದೆ, ಆನೆಯು ತನ್ನ ಪೂರ್ವ ಜನ್ಮ ಸಂಸ್ಕಾರದಿಂದ ಶ್ರೀಮನ್ನಾರಾಯಣನನ್ನು, 'ಹೇ ಭಗವಂತ ! ನನ್ನನ್ನು ಈ ಆಪತ್ತಿನಿಂದ ಕಾಪಾಡು ಅನಾಥರಕ್ಷಕನಾದ ನೀನು ನನ್ನನ್ನು ರಕ್ಷಿಸು' ಎಂದು ವಿಷ್ಣುವನ್ನು ಪ್ರಾರ್ಥಿಸುತ್ತ ನಿಂತನು. ಭಕ್ತನ ಮೊರೆಯನ್ನು ಆಲಿಸಿದ ಭಗವಂತನು ಗರುಡನ ಹೆಗಲೇರಿ ಬಂದು ತನ್ನ ಸುದರ್ಶನ ಚಕ್ರವನ್ನು ಮೊಸಳೆಯ ಮೇಲೆ ಪ್ರಯೋಗಿಸಿದನು. ಈ ರೀತಿಯಾಗಿ ಗಜೇಂದ್ರನಿಗೆ ಮೋಕ್ಷ ಪ್ರಾಪ್ತಿಯಾಯಿತು. ಅಂದಿನಿಂದ 'ಗಂಡಕಿ' ನದಿ ಕ್ಷೇತ್ರವು ಪರಮ ಪಾವನವಾದ ವಿಷ್ಣು ಕ್ಷೇತ್ರವಾಯಿತು. ಈ ಗಂಡಕೀ ನದಿಯಲ್ಲಿ ಸಿಗುವ ಶಿಲೆಗಳ ಮೇಲೆ ಚಕ್ರದ ಚಿಹ್ನೆ ಮೂಡಿರುತ್ತದೆ ಅದು ಸಾಲಿಗ್ರಾಮವಾಗಿ ಪೂಜಿಸಲ್ಪಡುತ್ತದೆ.

ಹೀಗೆ ಅಪಾರವಿದ್ಯೆಗಳಿಸಿದ್ದರೂ, ಜ್ಞಾನಿಗಳಾಗಿದ್ದರೂ ಕೆಲವೊಮ್ಮೆ ಅನುಚಿತವಾಗಿ ವರ್ತಿಸುತ್ತೇವೆ. ವಿದ್ಯೆಯ ಅಹಂಕಾರ ಹೆಚ್ಚಾದಾಗ ನಾವು ನಮ್ಮವರು ಎನ್ನುವ ಪರಿಜ್ಞಾನವಿಲ್ಲದೆ ಉದ್ಧಟತನದಿಂದ ಅಧಿಕಾರದ ಮದದಿಂದ, ಮತ್ತೊಬ್ಬರಿಗೆ ನೋವು ಉಂಟಾಗುವಂತೆ ವರ್ತಿಸಿದಾಗ ಆ ಕ್ಷಣಕ್ಕೆ ಅದಕ್ಕೆ ಯಾರೂ ಎದುರಾಡದೆ ಇರಬಹುದು, ಆದರೆ ಕರ್ಮ ಸದಾ ನಮ್ಮ ಬೆನ್ನತ್ತಿ ಬರುತ್ತದೆ. ಮತ್ತೊಬ್ಬರ ಜೊತೆಗೆ ಅನುಚಿತವಾಗಿ ನಡೆದುಕೊಂಡಾಗ, ಅಹಂಕಾರದಿಂದ ಮೆರೆದಾಗ ಅದಕ್ಕೆ ತಕ್ಕ ಪ್ರತಿಫಲ ಸಿಕ್ಕೆ ಸಿಗುತ್ತದೆ, ಆಗ ಚಿಂತಿಸಿ ಪ್ರಯೋಜನವಿಲ್ಲ. ವಿದ್ಯೆಗೆ ವಿನಯವೇ ಭೂಷಣ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಟೆಸ್ಟ್ ಚಾಂಪಿಯನ್‌ಶಿಪ್: 12 ತಂಡಗಳಾಗಿ ಏರಿಕೆ

ದೆಹಲಿ: ಟೆಸ್ಟ್ ಕ್ರಿಕೆಟ್ ಅನ್ನು ಜನಪ್ರಿಯಗೊಳಿಸಲು ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿ ಇದೀಗ ಹೊಸ ಕ್ರಮಕ್ಕೆ ಮುಂದಾಗಿದೆ. ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್‌ನ 2027-2029ರ ಆವೃತ್ತಿಗೆ ಭಾಗವಹಿಸಲಿರುವ ತಂಡಗಳ ಸಂಖ್ಯೆಯನ್ನು 9ರಿಂದ 12ಕ್ಕೆ ಏರಿಸಲು ನಿರ್ಧರಿಸಿವೆ. ಜಿಂಬಾಬ್ವೆ, ಐರ್ಲೆಂಡ್ ಮತ್ತು ಅಫ್ಘಾನಿಸ್ತಾನ ತಂಡಗಳು ಹೊಸದಾಗಿ ಸೇರ್ಪಡೆಯಾಗಲಿರುವ 3 ತಂಡಗಳು. ಈ ಮೊದಲು 12 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ, ಪ್ರಮೋಷನ್ (ಮುಂಬಡ್ತಿ) ಮತ್ತು ಡಿಮೋಷನ್ (ಹಿಂಬಡ್ತಿ) ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಮಾತುಕತೆ ನಡೆದಿತ್ತು. ಆದರೆ ಈಗ ಆ ಯೋಜನೆಯನ್ನೇ ಕೈಬಿಡಲಾಗಿದೆ. ಬದಲಾಗಿ ತಂಡಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬದಲು ಹೆಚ್ಚಿಸಲಾಗುತ್ತಿದೆ. ಮುಂದಿನ ಆವೃತ್ತಿಯಿಂದ ಅಂದರೆ 2027ರಿಂದ 2029ರ ಆವೃತ್ತಿಯಲ್ಲಿ ಇದು ಜಾರಿಗೆ ಬರಲಿದೆ. ಹೀಗಾಗಿ ಡಬ್ಲ್ಯುಟಿಸಿ ಅಂಕಪಟ್ಟಿಯಲ್ಲಿ 9ಕ್ಕೆ ಬದಲಾಗಿ 12 ತಂಡಗಳಿರಲಿವೆ.

ಹಜಾರೆ ಟ್ರೋಫಿಯಲ್ಲಿ ಆಡಲು ಬಿಸಿಸಿಐ ಸಂದೇಶ

ದೆಹಲಿ: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಭಾರತಕ್ಕಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಆಡುವುದನ್ನು ಮುಂದುವರಿಸಲು ಬಯಸಿದರೆ ವಿಜಯ್ ಹಜಾರೆ ಟ್ರೋಫಿ ಪಂದ್ಯಗಳಲ್ಲಿ ಭಾಗವಹಿಸಬೇಕಾಗುತ್ತದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸೂಚನೆ ನೀಡಿದೆ. ಅವರಿಬ್ಬರೂ ಏಕದಿನ ಪಂದ್ಯಗಳಲ್ಲಿ ಮಾತ್ರ ಸಕ್ರಿಯರಾಗಿದ್ದಾರೆ. ಕೊನೆಯ ಬಾರಿಗೆ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಆಡಿದ್ದರು. ಆದರೆ ಸರಣಿಯಲ್ಲಿ ಭಾರತ 1-2 ಅಂತರದಲ್ಲಿ ಸೋಲು ಕಂಡಿತ್ತು. ಮೂರು ಪಂದ್ಯಗಳ ಈ ಸರಣಿಯಲ್ಲಿ, ರೋಹಿತ್ ಎರಡನೇ ಪಂದ್ಯದಲ್ಲಿ ಅರ್ಧಶತಕ ಮತ್ತು ಮೂರನೇ ಪಂದ್ಯದಲ್ಲಿ ಅಜೇಯ ಶತಕ ಗಳಿಸಿದ್ದರು. ಆದರೆ ಕೊಹ್ಲಿ ಮೂರನೇ ಪಂದ್ಯದಲ್ಲಿ 50 ರನ್‌ಗಳ ಗಡಿ ದಾಟಿದ್ದರೂ ಮೊದಲ ಎರಡು ಪಂದ್ಯಗಳಲ್ಲಿ ರನ್‌ಗಳಿಸಿರಲಿಲ್ಲ. 2027ರ ಏಕದಿನ ವಿಶ್ವಕಪ್ ತನಕ ಭಾರತಕ್ಕೆ ಸೀಮಿತ ಏಕದಿನ ಸರಣಿ ಮಾತ್ರ ಬಾಕಿ ಇದೆ. ರೋಹಿತ್ ಮತ್ತು ಕೊಹ್ಲಿ ಭಾರತ ಪರ ಆಡಲು ಬಯಸಿದರೆ, ದೇಶೀಯ ಕ್ರಿಕೆಟ್ ಆಡಲೇಬೇಕು ಎಂದು ಮಂಡಳಿ ಇಬ್ಬರಿಗೂ ತಿಳಿಸಿದೆ. ಅವರಿಬ್ಬರೂ ಎರಡು ಸ್ವರೂಪಗಳಿಂದ ನಿವೃತ್ತರಾಗಿರುವುದರಿಂದ, ಫಿಟ್‌ನೆಸ್ ಕಾಯ್ದುಕೊಳ್ಳಲು ದೇಶೀಯ ಕ್ರಿಕೆಟ್ ಆಡಲೇಬೇಕು ಎಂದು ಬಿಸಿಸಿಐ ಒತ್ತಿ ಹೇಳಿದೆ.

ಶುಕ್ರವಾರದಿಂದ ಈಡನ್ ಗಾರ್ಡನ್ಸ್‌ನಲ್ಲಿ ಟೀಮ್ ಇಂಡಿಯಾ-ದ.ಆಫ್ರಿಕಾ ಮೊದಲ ಟೆಸ್ಟ್

ನಾಳಿನ ಟೆಸ್ಟ್‌ಗೆ ಕಠಿಣಾಭ್ಯಾಸ

ಕೋಲ್ಕತಾ: ಇದೇ ಶುಕ್ರವಾರದಂದು ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಪ್ರಾರಂಭವಾಗಲಿರುವ ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯಕ್ಕೆ ಸಿದ್ಧತೆ ನಡೆಸಲು ಭಾರತ ಟೆಸ್ಟ್ ತಂಡವು ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಬುಧವಾರದಿಂದ ಕಠಿಣ ಸಮರಾಭ್ಯಾಸದಲ್ಲಿ ತಲ್ಲೀನವಾಗಿದೆ.

ನಾಯಕ ಶುಭಮನ್ ಗಿಲ್, ವೇಗಿ ಜಸ್ಪ್ರೀತ್ ಬುಮ್ರಾ ಸೇರಿದಂತೆ ಬಹುತೇಕ ಎಲ್ಲಾ ಕ್ರಿಕೆಟಿಗರೂ ಸಕ್ರಿಯ ಸಮರಾಭ್ಯಾಸವನ್ನು ನಡೆಸುತ್ತಿದ್ದಾರೆ. ಟೀಮ್ ಇಂಡಿಯಾವನ್ನು ಗಿಲ್ ಮುನ್ನಡೆಸಲಿದ್ದು, ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಅವರು ಉಪನಾಯಕನರಾಗಿದ್ದಾರೆ.

ರವೀಂದ್ರ ಜಡೇಜಾ ಮತ್ತು ಮೊಹಮ್ಮದ್ ಸಿರಾಜ್‌ರಂತಹ ಅನುಭವಿ ಆಟಗಾರರ ಜೊತೆಗೆ, ಆಯ್ಕೆದಾರರು ಸಾಯಿ ಸುದರ್ಶನ್, ದೇವದತ್ ಪಡಿಕ್ಕಲ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಅವರಂತಹ ಭರವಸೆಯ ಪ್ರತಿಭೆಗಳನ್ನು ಈ ಸರಣಿಗೆ ಆಯ್ಕೆ ಮಾಡಲಾಗಿದೆ.

ಅಕ್ಟೋಬರ್ ಆರಂಭದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ತವರಿನಲ್ಲಿ ನಡೆದ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಗಿಲ್ ಅವರು ಅರ್ಧ ಶತಕ, ಮತ್ತೊಂದು ಅಜೇಯ ಶತಕ ಗಳಿಸಿದ್ದರು. ಈಡನ್ ಗಾರ್ಡನ್ಸ್‌ನ ನೆಟ್ಸ್‌ನಲ್ಲಿ ತೊಡಗುವ ಮುನ್ನ ಗಿಲ್, ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು

ಸಹಾಯಕ ಕೋಚ್ ಸಿತಾಂಶು ಕೊಟಕ್ ಜೊತೆ ದೀರ್ಘ ಸಮಾಲೋಚನೆ ಮಾಡಿದ್ದಾರೆ. ಬಳಿಕ ಕೆಲಕಾಲ ಸ್ಲಿಪ್ ಫೀಲ್ಡಿಂಗ್ ಅಭ್ಯಾಸದಲ್ಲಿ ತೊಡಗಿಸಿಕೊಂಡರು. ಯಶಸ್ವಿ ಜೈಸ್ವಾಲ್ ಅವರೊಂದಿಗೆ ಪ್ಯಾಡ್ ಕಟ್ಟಿಕೊಂಡು ದೀರ್ಘಕಾಲ ಬ್ಯಾಟಿಂಗ್ ತಾಲೀಮಿನಲ್ಲೂ ಅವರು ಭಾಗವಹಿಸಿದ್ದಾರೆ.

ಭಾರತವು ಪ್ರಸ್ತುತ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಋತುವನ್ನು ಇಂಗ್ಲೆಂಡ್ ವಿರುದ್ಧ 2-2 ಡ್ರಾ ಮತ್ತು ಅಕ್ಟೋಬರ್‌ನಲ್ಲಿ ವಿಂಡೀಸ್ ವಿರುದ್ಧ ಕ್ಲೀನ್ ಸ್ವೀಪ್ ಮಾಡುವ ಮೂಲಕ ಪ್ರಾರಂಭಿಸಿತ್ತು.

ಪಾಕಿಸ್ತಾನ ವಿರುದ್ಧ ಹೋದ ತಿಂಗಳು ಸವಾಲಿನ ನಡುವೆಯೂ ಟೆಸ್ಟ್ ಸರಣಿಯನ್ನು 1-1 ಡ್ರಾ ಮಾಡಿಕೊಂಡ ವಿಶ್ವಾಸದಲ್ಲಿರುವ ದಕ್ಷಿಣ ಆಫ್ರಿಕಾ ತಂಡ ಕೂಡ ತಾಲೀಮಿನಲ್ಲಿ ತೊಡಗಿದ್ದು ಭಾರತಕ್ಕೆ ಪ್ರಬಲ ಪೈಪೋಟಿ ನೀಡುವ ನಿಟ್ಟಿನಲ್ಲಿ ಕಾತರವಾಗಿದೆ.

ಟೆಸ್ಟ್‌ಗೆ ಸ್ಪಿನ್ ಪಿಚ್

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಬಹುನಿರೀಕ್ಷಿತ ಮೊದಲ ಟೆಸ್ಟ್ ಪಂದ್ಯದ ಪಿಚ್ ಎಲ್ಲರಿಗೂ ಏನನ್ನಾದರೂ ನೀಡುತ್ತದೆ ಎಂದು ಈಡನ್ ಗಾರ್ಡನ್ಸ್ ಕ್ಯುರೇಟರ್ ಸುಜನ್ ಮುಖರ್ಜಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕೋಲ್ಕತ್ತಾದಲ್ಲಿ ಪತ್ರಿಕಾ ಸಂದರ್ಶನದಲ್ಲಿ ಮಾತನಾಡಿದ ಅವರು, ಕೋಚ್ ಗೌತಮ್ ಗಂಭೀರ್‌ನೇತೃತ್ವದ ತಂಡದ ಆಡಳಿತ ಮಂಡಳಿಯು ಸ್ವಲ್ಪ ತಿರುವು ನೀಡುವ ಪಿಚ್ ಕೇಳಿದೆ ಎಂದು ಹೇಳಿದರು. 'ಈ ಬಾರಿ ಪಿಚ್ ಚೆನ್ನಾಗಿರುತ್ತದೆ. ಇದು ಉತ್ತಮ ವಿಕೆಟ್ ಆಗಿರುತ್ತದೆ. ದಿನಗಳು ಮುಂದುವರೆದಂತೆ, ತಿರುವು ಇರುತ್ತದೆ, ಬೌನ್ಸ್ ಇರುತ್ತದೆ. ಹೀಗಿದ್ದರೂ ಬ್ಯಾಟರ್ ಮತ್ತು ಬೌಲರ್‌ಗಳಿಗೆ ಈ ಪಿಚ್‌ನಲ್ಲಿ ಏನಾದರೂ ಇರುತ್ತದೆ ಎಂದು ಸುಜನ್ ಮುಖರ್ಜಿ ಹೇಳಿದರು.

ದ.ಆಫ್ರಿಕಾ ತಂಡದ ಪ್ರಮುಖ ಸ್ಪಿನ್ನರ್ ಕೇಶವ್ ಮಹಾರಾಜ್ ಹೇಳಿಕೆ

ಭಾರತವನ್ನು ಸೋಲಿಸುವ ಹಸಿವಿದೆ

ಕೋಲ್ಕತ್ತಾ: ದಕ್ಷಿಣ ಆಫ್ರಿಕಾ ತಂಡವು 15 ವರ್ಷಗಳಿಂದ ಭಾರತದಲ್ಲಿ ಟೆಸ್ಟ್ ಪಂದ್ಯವನ್ನು ಗೆದ್ದಿಲ್ಲ. ಹೀಗಾಗಿ ಈ ಪ್ರವಾಸವನ್ನು ಗೆಲುವಿನೊಂದಿಗೆ ಆರಂಭಿಸಬೇಕೆಂಬ ಇರಾದೆಯಲ್ಲಿರುವ ದಕ್ಷಿಣ ಆಫ್ರಿಕಾ ತಂಡಕ್ಕೆ ಪ್ರಮುಖ ಸ್ಪಿನ್ನರ್ ಕೇಶವ್ ಮಹಾರಾಜ್ ತಮ್ಮ ಹೇಳಿಕೆ ಮೂಲಕ ಮತ್ತಷ್ಟು ಬಲ ತುಂಬಿದ್ದಾರೆ. ಈ ಸರಣಿಯ ಬಗ್ಗೆ ಮಾತನಾಡಿರುವ ಮಹಾರಾಜ್, 'ನಮ್ಮ ತಂಡವು ಭಾರತದಲ್ಲಿ ಅತಿಥೇಯರನ್ನು ಸೋಲಿಸಲು ನಿಜವಾಗಿಯೂ ಎದುರು ನೋಡುತ್ತಿದೆ. ಇದು ಬಹುಶಃ ಅತ್ಯಂತ ಕಠಿಣ ಪ್ರವಾಸಗಳಲ್ಲಿ ಒಂದಾಗಿದೆ. ನಮ್ಮ ಅತಿದೊಡ್ಡ ಟೆಸ್ಟ್ ಸರಣಿಗಳಲ್ಲಿ ಇದೂ ಒಂದಾಗಿದೆ ಎಂದು ನಾವು ಭಾವಿಸುತ್ತೇವೆ. ನಮ್ಮನ್ನು ನಾವು ನಿರ್ಣಯಿಸಿಕೊಳ್ಳಲು ಇದು ಉತ್ತಮ ಅವಕಾಶವಾಗಿರುತ್ತದೆ. ನಾವು ಎಲ್ಲಿದ್ದೇವೆ ಎಂಬುದನ್ನು ಕಂಡುಹಿಡಿಯಲು ಇದು ನಮಗೆ ಅವಕಾಶವನ್ನು ನೀಡುತ್ತದೆ' ಎಂದಿದ್ದಾರೆ.

'ನಾವು ಉಪಖಂಡದ ಇತರ ಭಾಗಗಳಲ್ಲಿ ಗೆಲ್ಲಲು ಪ್ರಾರಂಭಿಸಿದ್ದೇವೆ ಮತ್ತು ನಮ್ಮ ತಂಡವು ಭಾರತದಲ್ಲಿ ನಿಜವಾಗಿಯೂ ಗೆಲ್ಲಬೇಕೆಂಬ ಬಲವಾದ ಹಸಿವು ಮತ್ತು ಬಯಕೆಯನ್ನು ಹೊಂದಿದೆ. ಇಲ್ಲಿನ ಪರಿಸ್ಥಿತಿಗಳು ಸ್ಪಿನ್ನರ್‌ಗಳಿಗೆ ಅನುಕೂಲಕರವಾಗಿರುತ್ತವೆ ಎಂದು ನಾನು ಭಾವಿಸುವುದಿಲ್ಲ. ವಿಕೆಟ್‌ಗಳು ಉತ್ತಮವಾಗಿರುತ್ತವೆ ಮತ್ತು ಆಟ ಮುಂದುವರಿದಂತೆ ಸ್ಪಿನ್

ಬೌಲರ್‌ಗಳಿಗೆ ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ನಾವು ನೋಡಬಹುದಾದಂತೆ, ಭಾರತವು ಬಹುಶಃ ಸಾಂಪ್ರದಾಯಿಕ ಟೆಸ್ಟ್ ವಿಕೆಟ್‌ಗೆ ಆದ್ಯತೆ ನೀಡುತ್ತದೆ' ಎಂದು ಮಹಾರಾಜ್ ಹೇಳಿದ್ದಾರೆ.

'ಭಾರತ ತಂಡ ಕೂಡ ಪರಿವರ್ತನೆಯ ಅವಧಿಯಲ್ಲಿ ಉತ್ತಮ ಪ್ರಗತಿ ಸಾಧಿಸಿದೆ. ವೆಸ್ಟ್ ಇಂಡೀಸ್ ಸರಣಿಯಲ್ಲಿ ನಾವು ನೋಡಿದಂತೆ ಅವರು ಉತ್ತಮ ವಿಕೆಟ್‌ಗಳಲ್ಲಿ ಆಡುವುದನ್ನು ಆನಂದಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಪಾಕಿಸ್ತಾನದಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿ ನಾವು ಉತ್ತಮ ಪ್ರದರ್ಶನ ನೀಡಿದ್ದೇವೆ. ಆ ವೇಗವನ್ನು ಕಾಯ್ದುಕೊಳ್ಳಲು ನಾವು ಪ್ರಯತ್ನಿಸುತ್ತೇವೆ. ಟಾಸ್‌ನ ಫಲಿತಾಂಶ ಏನೇ ಇರಲಿ, ಪಂದ್ಯವನ್ನು ನಮ್ಮ ಪರವಾಗಿ ಪಡೆಯಲು ನಾವು ಯಾವುದೇ ಅವಕಾಶವನ್ನು ಬಿಡುವುದಿಲ್ಲ' ಎಂದು ದ.ಆಫ್ರಿಕಾ ಸ್ಪಿನ್ನರ್ ಕೇಶವ್ ಮಹಾರಾಜ್ ತಮ್ಮ ಹಂಬಲ ತೋಡಿಕೊಂಡಿದ್ದಾರೆ.

ಆ್ಯಶಸ್ ಸರಣಿಯ ಮೊದಲ ಪಂದ್ಯದಿಂದ ಹೊರಬಿದ್ದ ಆಸೀಸ್ ವೇಗಿ

ಆಸ್ಟ್ರೇಲಿಯಾ ತಂಡಕ್ಕೆ ಸೀನ್ ಅಬಾಟ್ ಅಲಭ್ಯ

ಸಿಡ್ನಿ: 2025-26ರ ಆ್ಯಶಸ್ ಸರಣಿಯಲ್ಲಿ ಇಂಗ್ಲೆಂಡ್-ಆಸ್ಟ್ರೇಲಿಯಾ ತಂಡಗಳು ಪರಸ್ಪರ ಸೆಣಸಾಡಲು ಸಜ್ಜಾಗಿದೆ. ಎರಡೂ ತಂಡಗಳು ಸರಣಿಗೆ ಸಿದ್ಧತೆ ನಡೆಸುತ್ತಿವೆ. ನವೆಂಬರ್ 21ರಂದು ಆಸ್ಟ್ರೇಲಿಯಾದ ಪರ್ತ್‌ನಲ್ಲಿ ಮೊದಲ ಟೆಸ್ಟ್ ಪಂದ್ಯ ಆರಂಭವಾಗಲಿದ್ದು, ಆತಿಥೇಯ ತಂಡವು ಗಾಯದ ಭೀತಿಯಲ್ಲಿದೆ, ಹಾಗಾಗಿ ವೇಗಿ ಸೀನ್ ಅಬಾಟ್ ಮೊದಲ ಪಂದ್ಯದಿಂದ ಹೊರಬಿದಿದ್ದಾರೆ, ಆದರೆ ಜೋಶ್ ಹೇಜಲ್‌ವುಡ್ ಲಭ್ಯರಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಎಸ್‌ಸಿಜಿಯಲ್ಲಿ ನ್ಯೂ ಸೌತ್ ವೇಲ್ಸ್ ಮತ್ತು ವಿಕ್ಟೋರಿಯಾ ನಡುವಿನ ಪಂದ್ಯದ ಸಮಯದಲ್ಲಿ ಹೇಜಲ್‌ವುಡ್ ಮತ್ತು ಅಬಾಟ್ ಗಾಯದ ಸಮಸ್ಯೆಯಿಂದ ಬಳಲಿದ್ದರು. ಮೈದಾನವನ್ನು ತೊರೆದಿದ್ದ ಈ ಜೋಡಿ ಆ ನಂತರ ಕಾಣಿಸಿಕೊಳ್ಳಲಿಲ್ಲ. ಹೀಗಾಗಿ ಆ್ಯಶಸ್ ಸರಣಿಯಲ್ಲಿ ಪಾಲ್ಗೊಳ್ಳುವುದು ಅನುಮಾನ ಎನ್ನಲಾಗಿತ್ತು.

ಪರ್ತ್ ಟೆಸ್ಟ್‌ನಲ್ಲಿ ಯೋಜಿಸಿದಂತೆ ಜೋಶ್ ಹೇಲ್‌ವುಡ್ ಆಸ್ಟ್ರೇಲಿಯಾ ತಂಡವನ್ನು ಸೇರಿಕೊಳ್ಳಲಿದ್ದಾರೆ. ಆದರೆ ಮತ್ತೋರ್ವ ವೇಗಿ ಸೀನ್ ಅಬಾಟ್ ಎಡ ಮಂಡಿರಜ್ಜು ನೋವಿನಿಂದ ಬಳಲುತ್ತಿದ್ದಾರೆ. ಅವರು ಆಯ್ಕೆಗೆ ಲಭ್ಯವಿರುವುದಿಲ್ಲ ಮತ್ತು ಆಟಕ್ಕೆ ಮರಳುವ ಯೋಜನೆಯನ್ನು ಮುಂಬರುವ ವಾರಗಳಲ್ಲಿ ತಿಳಿಸಲಾಗುವುದು ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಮಾಧ್ಯಮ ಪ್ರಕಟಣೆ ಮೂಲಕ ಬುಧವಾರ ದೃಢಪಡಿಸಿದೆ.

ಈ ಮಧ್ಯೆ ನಾಯಕ ಪ್ಯಾಟ್ ಕಮ್ಮಿನ್ಸ್ ಡಿಸೆಂಬರ್ 4ರಂದು ಗಬ್ಬಾದಲ್ಲಿ ಪ್ರಾರಂಭವಾಗುವ ಎರಡನೇ ಟೆಸ್ಟ್‌ಗೆ ಲಭ್ಯವಾಗುವ ಪ್ರಯತ್ನದಲ್ಲಿ ತಮ್ಮ ಫಿಟ್‌ನೆಸ್ ಕಾರ್ಯ ಮುಂದುವರಿಸಿದ್ದಾರೆ.

ಕರ್ನಾಟಕ ಕ್ರಿಕೆಟ್ ಸಂಕಷ್ಟದಲ್ಲಿದ್ದು ಸುಧಾರಿಸಲೆತ್ನಿಸುವೆ: ಕುಂಬ್ಳೆ

ವೆಂಕಿಗೆ ಕುಂಬ್ಳೆ, ಶ್ರೀನಾಥ್ ಬೆಂಬಲ

ಬೆಂಗಳೂರು: ಭಾರತದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ಅವರು ನವೆಂಬರ್ 30ರಂದು ನಡೆಯಲಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವುದನ್ನು ಮಂಗಳವಾರ ಅಧಿಕೃತವಾಗಿ ಘೋಷಿಸಿದ್ದರು. ಇದರ ಬೆನ್ನಲ್ಲೇ ಭಾರತೀಯ ಕ್ರಿಕೆಟ್ ದಿಗ್ಗಜ ಅನಿಲ್ ಕುಂಬ್ಳೆ ಮತ್ತು ಜಾವಗಲ್ ಶ್ರೀನಾಥ್ ಅವರು ವೆಂಕಟೇಶ್ ಪ್ರಸಾದ್‌ಗೆ ಬಲವಾದ ಬೆಂಬಲ ವ್ಯಕ್ತಪಡಿಸಿದ್ದಾರೆ.

ವೆಂಕಟೇಶ್ ಪ್ರಸಾದ್ ಅವರು ಟೀಮ್ 'ಗೇಮ್ ಚಾರ್ಜರ್ಸ್' ಎಂಬ ಹೆಸರಿನ ಸಮಿತಿಯನ್ನು ರಚಿಸಿದ್ದಾರೆ. ಇದರಲ್ಲಿ ಸುಜಿತ್ ಸೋಮಸುಂದರ್ (ಉಪಾಧ್ಯಕ್ಷ), ವಿನಯ್ ಮೃತ್ಯುಂಜಯ (ಕಾರ್ಯದರ್ಶಿ), ಎ.ವಿ. ಶಶಿಧರ್ (ಜಂಟಿ ಕಾರ್ಯದರ್ಶಿ) ಮತ್ತು ಬಿ.ಎನ್. ಮಧುಕರ್ (ಖಜಾಂಚಿ) ಇದ್ದಾರೆ.

'ಕರ್ನಾಟಕ ಕ್ರಿಕೆಟ್ ಸಂಕಷ್ಟದಲ್ಲಿದೆ ಮತ್ತು ಬದಲಾವಣೆ ತರಲು ವೆಂಕಿ ಇಲ್ಲಿದ್ದಾರೆ. ನಮ್ಮ ಮೂರು ವರ್ಷಗಳ ಅವಧಿಯಲ್ಲಿ (2010-2013) ನಾವು ಮಾಡಿದ ಎಲ್ಲಾ ಕೆಲಸಗಳು ಕಳೆದ ಹಲವು ವರ್ಷಗಳಿಂದ ನಡೆಯುತ್ತಿಲ್ಲ. ಕಳೆದ ವಾರ ನಾವು ಮಹಿಳಾ ವಿಶ್ವಕಪ್ ಗೆದ್ದಿದ್ದೇವೆ ಮತ್ತು ಅದು ಒಂದು ಹೆಗ್ಗುರುತಿನ ಸಂದರ್ಭವಾಗಿತ್ತು. ಆದರೆ ನಮಗೆ ರಾಜ್ಯಕ್ಕೆ ಒಂದೇ ಒಂದು ಪ್ರಾತಿನಿಧ್ಯವಿರಲಿಲ್ಲ. ಅದು ಬದಲಾಗಬೇಕು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಸಂಪೂರ್ಣ ವಾಗಿ ನಿಂತು ಹೋಗಿದೆ. ಅದರ ಗತವೈಭವ ಮರಳಬೇಕು, ಅದಕ್ಕಾಗಿ ಪ್ರಸಾದ್‌ರ ತಂಡ ಅಧಿಕಾರಕ್ಕೆ ಬರಬೇಕು' ಎಂದು ಕುಂಬ್ಳೆ ಹೇಳಿದರು.

ಉದ್ದೀಪನ ಮದ್ದು ಸೇವಿಸಿದ್ದ ಭಾರತದ ಹ್ಯಾಮರ್ ಎಸೆತಗಾರ್ತಿ

ಮಂಜು ಬಾಲಾ 5 ವರ್ಷ ಅಮಾನತು



ದೆಹಲಿ: ಈ ವರ್ಷದ ಆರಂಭದಲ್ಲಿ ನಿಷೇಧಿತ ಉದ್ದೀಪನ ಮದ್ದು ಸೇವಿಸಿರುವುದು ಕಂಡುಬಂದ ನಂತರ, ಏಷ್ಯನ್ ಕ್ರೀಡಾಕೂಟದ ಕಂಚಿನ ಪದಕ ವಿಜೇತೆ, ಹ್ಯಾಮರ್ ಎಸೆತಗಾರ್ತಿ ಮಂಜು ಬಾಲಾ ಅವರನ್ನು ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆಯ ಡೋಪಿಂಗ್ ವಿರೋಧಿ ಶಿಸ್ತು ಸಮಿತಿ (ಎಡಿಡಿಪಿ) ಐದು ವರ್ಷಗಳ ಅಮಾನತುಗೊಳಿಸಿದೆ. ಭಾರತದ ಕ್ರೀಡಾ ಇತಿಹಾಸದಲ್ಲಿ ಉದ್ದೀಪನ ಮದ್ದು ಸೇವನೆಗಾಗಿ ಪ್ರಕಟಿಸಲಾದ ದೀರ್ಘ ಅವಧಿಯ ಶಿಕ್ಷೆ ಪ್ರಕರಣಗಳಲ್ಲಿ ಇದೂ ಒಂದಾಗಿದೆ.

2014ರ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದಿದ್ದ ಮಂಜು ಬಾಲಾ, ಉದ್ದೀಪನಾ ಮದ್ದು ಸೇವಿಸಿರುವುದು ದೃಢಪಟ್ಟಿದೆ. ಇತ್ತೀಚಿನ ದಿನಗಳಲ್ಲಿ ಡೋಪಿಂಗ್ ವಿರೋಧಿ ಸಂಸ್ಥೆಯು ವಿಧಿಸಿರುವ ಕಠಿಣ ನಿರ್ಬಂಧಗಳಲ್ಲಿ ಐದು ವರ್ಷಗಳ ನಿಷೇಧವೂ ಒಂದಾಗಿದೆ. ಈ ತೀರ್ಪಿನ ಪ್ರಕಾರ ಬಾಲಾ ಅವರ ಅಮಾನತು ಅವಧಿಯಲ್ಲಿ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ (ಎಎಫ್‌ಐ) ಅಥವಾ ಇತರ ಅಂಗಸಂಸ್ಥೆಗಳು ಅನುಮೋದಿಸುವ ಯಾವುದೇ ಸ್ಪರ್ಧೆಯಲ್ಲಿ ಸ್ಪರ್ಧೆ, ಆಯ್ಕೆ ಅಥವಾ ಭಾಗವಹಿಸುವಿಕೆಯಿಂದ ಅವರನ್ನು ನಿಷೇಧಿಸಲಾಗುವುದು. ಅಧಿಕೃತ ಶ್ರೇಯಾಂಕ ಮತ್ತು ರಾಷ್ಟ್ರೀಯ ತಂಡದ ಪರಿಗಣನೆಗೆ ಅರ್ಹತೆಯನ್ನು ಸಹ ಅವರು ಕಳೆದುಕೊಳ್ಳುತ್ತಾರೆ.

ಕಡಲತಡಿಯಲಿ ಕೊರಗಜ್ಜ ಗಾನ

ಸುಧೀರ್ ಅತ್ತಾವರ್ ನಿರ್ದೇಶನದಲ್ಲಿ ಸಿದ್ಧವಾಗಿರುವ ಕೊರಗಜ್ಜ ಚಿತ್ರ ಆರಂಭದಿಂದಲೂ ಕುತೂಹಲ ಮೂಡಿಸಿದೆ. ತ್ರಿವಿಕ್ರಮ ಸಾಪಲ್ಯ ನಿರ್ಮಾಣದ ಸಕಸ್ ಫಿಲಂಸ್ ಮತ್ತು ತ್ರಿವಿಕ್ರಮ ಸಿನಿಮಾಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಕೊರಗಜ್ಜ ಅದ್ದೂರಿಯಾಗಿ ಮೂಡಿಬಂದಿದ್ದು, ಹೊಸ ಗುಳಿಗಾ ಗುಳಿಗಾ..ಗುಳಿಗಾ..ಗುಳಿಗಾ... ಘೋರ ಗುಳಿಗಾ.. ಹಾಡು ದೃಶ್ಯ ವೈಭವದ ಮೂಲಕ ಸಿನಿಪ್ರಿಯರ ಹೃದಯ ಗೆದ್ದಿತು. ನಿರ್ದೇಶಕ ಸುಧೀರ್ ಅತ್ತಾವರ್ ಸಾಹಿತ್ಯ ಬರೆದಿರುವ ಚಿತ್ರದ ಹಾಡುಗಳಿಗೆ ದಕ್ಷಿಣ ಭಾರತದ ಖ್ಯಾತ

ಮೈಲಿಗಲ್ಲು ಸ್ಥಾಪಿಸಿದೆ. ಕೊರಗಜ್ಜ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ನಿರ್ಮಾಣವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಿನಿಮಾಗಳ ಆಡಿಯೊ ಕೊಂಡುಕೊಳ್ಳಲು ಹಿಂದೇಟು ಹಾಕುತ್ತಿದ್ದ ಜ್ಹಿ ಮ್ಯೂಸಿಕ್ ಸಂಸ್ಥೆ ಕೊರಗಜ್ಜ ಸಿನಿಮಾದ ಎಲ್ಲಾ ಭಾಷೆಗಳ ಹಾಡುಗಳ ಹಕ್ಕನ್ನು ಪಡೆದುಕೊಂಡಿದೆ

ಕಡಲತಡಿಯಲಿ ಬಣ್ಣ ಬಣ್ಣದ ಬೆಳಕಿನ ಹಿನ್ನೆಲೆಯಲ್ಲಿ ಕೊರಗಜ್ಜ ಚಿತ್ರದ ಹಾಡುಗಳು ಬಿಡುಗಡೆಯಾದವು. ಗಾಳಿ ಗಂಧ.. ಹಾಡು ನೆರೆದಿರುವವರನ್ನು ಸೂಜಿಗಲ್ಲಿನಂತೆ ಸೆಳೆಯಿತು. ಜತೆಗೆ ಸಂಗೀತ ನಿರ್ದೇಶಕ ಗೋಪಿ ಸುಂದರ್ ಸಂಗೀತ ಸಂಯೋಜಿಸಿದ್ದಾರೆ.

ಶ್ರುತಿ, ಭವ್ಯಾ ಸೇರಿದಂತೆ ಬಾಲಿವುಡ್ ನಟರೂ ಕೂಡ ಕೊಗಜ್ಜನ ಸಿನಿಮಾದಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ಬಿಡುಗಡೆಯಾಗಿರುವ ನಮ್ಮ ಚಿತ್ರದ 3ಡಿ ಮೋಷನ್ ಪೋಸ್ಟರ್ ಲಕ್ಷಾಂತರ ವೀಕ್ಷಣೆ ಕಂಡಿದೆ. ಕೊರಗಜ್ಜನ ಆಶೀರ್ವಾದಿಂದ ಈ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಎಂದು ನಿರ್ಮಾಪಕ ತ್ರಿವಿಕ್ರಮ ಸಾಪಲ್ಯ ತಿಳಿಸಿದರು. ಒಟ್ಟಾರೆ ಕೊಗಜ್ಜ ಸಿನಿಮಾ ಭಾರತ್ತಿಯ ಚಿತ್ರರಂಗದ ಇತಿಹಾಸದಲ್ಲಿ ಹೊಸ ದಾಖಲೆ ಬರೆಯಲಿದೆ.

ಜಿಎಸ್‌ಟಿ ಮೆಚ್ಚಿದ ರಿಯಲ್ ಸ್ಟಾರ್

ನಟ ಸೃಜನ್ ಲೋಕೇಶ್ ನಟನಾಗಿ, ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದಾರೆ. ಈಗ ಜಿಎಸ್‌ಟಿ ಚಿತ್ರದ ಮೂಲಕ ನಿರ್ದೇಶಕನ ಕ್ಯಾಪ್ ತೊಟ್ಟಿದ್ದಾರೆ. ಈ ಚಿತ್ರವನ್ನು ಸಂದೇಶ್ ಪ್ರೊಡಕ್ಷನ್ಸ್ ಸಂಸ್ಥೆ ಲಾಂಛನದಲ್ಲಿ ಎನ್. ಸಂದೇಶ್ ನಿರ್ಮಾಣ ಮಾಡಿದ್ದಾರೆ. ಇದೇ 28ರಂದು ಜಿಎಸ್‌ಟಿ ತೆರೆಗೆ ಬರಲಿದೆ. ಸದ್ಯ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ರಿಯಲ್ ಸ್ಟಾರ್ ಉಪೇಂದ್ರ, ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಹಾರರ್ ಜತೆಗೆ ಕಾಮಿಡಿ ಕೂಡ ಬೆರೆತಿದೆ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ.

ಜಿಎಸ್‌ಟಿ ಎಂದರೆ ಘೋಸ್ಟ್ ಇನ್ ಟ್ರಬಲ್ ಎಂದರ್ಥ. ನಾನು ಈ ಚಿತ್ರದ ಮೂಲಕ ನಿರ್ದೇಶಕನಾಗಿಯೂ ಗುರುತಿಸಿಕೊಳ್ಳುತ್ತಿದ್ದೇನೆ. ಚಿತ್ರದ ಮತ್ತೊಂದು ವಿಶೇಷ ಅಂದರೆ ನಮ್ಮ ತಾತಾ ಸುಬ್ಬಯ್ಯ ನಾಯ್ಡು ಅವರು ಭಕ್ತ ಪ್ರಹ್ಲಾದ ಚಿತ್ರದಲ್ಲಿ ನಮ್ಮ ತಂದೆ ಲೋಕೇಶ್ ಅವರನ್ನು ಬಾಲನಟನಾಗಿ ತೆರೆಗೆ ತಂದರು. ಆನಂತರ ನಮ್ಮ ತಂದೆ ನಿರ್ದೇಶನದ ಬುಜಂಗಯ್ಯನ ದಶಾವತಾರದ ಮೂಲಕ ಬಾಲನಟನಾಗಿ ನಾನು ಚಿತ್ರರಂಗಕ್ಕೆ ಬಂದೆ. ಈಗ ನನ್ನ ಮಗ ಸುಕೃತ್ ನನ್ನ ಮೊದಲ

ನಿರ್ದೇಶನದ ಚಿತ್ರದಲ್ಲಿ ಬೆಳ್ಳಿತೆರೆ ಪ್ರವೇಶಿಸಿದ್ದಾನೆ. ಇದು ಭಾರತೀಯ ಚಿತ್ರರಂಗದಲ್ಲೇ ಪ್ರಥಮ ಎನ್ನಬಹುದು. ಇನ್ನು, ಇದರಲ್ಲಿ ನಮ್ಮ ತಾಯಿ, ನಾನು ಹಾಗೂ ನನ್ನ ಮಗ ಮೂರು ಜನ ನಟಿಸಿದ್ದೇವೆ. ಇದು ಹಾರಾರ್ ಚಿತ್ರವಾಗಿದ್ದರೂ, ಕಾಮಿಡಿಯೇ ಪ್ರಮುಖವಾಗಿದೆ. ಚಿತ್ರದಲ್ಲಿ ಯಾರು ಊಹಿಸಲಾಗದ ಕ್ಲೈಮ್ಯಾಕ್ಸ್ ಇದೆ ಎಂದು ಸೃಜನ್ ಲೋಕೇಶ್ ತಿಳಿಸಿದರು.

ಸೃಜನ್ ನನ್ನ ಆತ್ಮೀಯ ಗೆಳೆಯ, ಅವರು ಒಳ್ಳೆಯ ಸಿನಿಮಾ ನಿರ್ದೇಶನ ಮಾಡುತ್ತಾರೆ ಎಂಬ ನಂಬಿಕೆ ಇದೆ, ಹಾಗಾಗಿ ಕಥೆ ಕೇಳದೆ ನಿರ್ಮಾಣಕ್ಕೆ ಸಮ್ಮತಿಸಿದೆ.

ಇದು ನಮ್ಮ ಸಂಸ್ಥೆ ನಿರ್ಮಾಣದ ಮೂವತ್ತ ನಾಲ್ಕನೇ ಸಿನಿಮಾ ಎಂದು ನಿರ್ಮಾಪಕ ಸಂದೇಶ್ ಹೇಳಿದರು.

ಕನ್ನಡ ಚಿತ್ರರಂಗದ ಹಲವು ಪ್ರಥಮಗಳು ಸುಬ್ಬಯ್ಯ ನಾಯ್ಡು ಅವರ ಕುಟುಂಬದ್ದೆ ಆಗಿರುವುದು ನಮಗೆ ಹೆಮ್ಮೆ ಇದೆ. ಇದೇ ಮೊದಲ ಬಾರಿಗೆ ನನ್ನ ಮಗ ಸೃಜನ್ ಲೋಕೇಶ್ ನಿರ್ದೇಶನ ಮಾಡಿದ್ದಾನೆ. ನಾನು ಹಾಗೂ ನನ್ನ ಮೊಮ್ಮಗ ಸುಕೃತ್ ಈ ಚಿತ್ರದಲ್ಲಿ ನಟಿಸಿದ್ದೇವೆ ಎಂದರು ನಟಿ ಗಿರಿಜಾ ಲೋಕೇಶ್ ಸಂತಸ ಹಂಚಿಕೊಂಡರು. ಹಿರಿಯ ನಟ ಅಶೋಕ್, ರಜನಿ ಭಾರದ್ವಾಜ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಲವ್ ಕೇಸ್‌ಗೆ ಮುಹೂರ್ತ

ಎಂ.ಬಿ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಮೋಹನ್ ಬಾಬು ನಿರ್ಮಾಣ ಮಾಡುತ್ತಿರುವ ಲವ್ ಕೇಸ್ ಸಿನಿಮಾದ ಮುಹೂರ್ತ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ನೆರವೇರಿತು. ಜೈಶ್ ಕಥೆ, ಚಿತ್ರಕಥೆ ಬರೆದಿದ್ದು, ನಿರ್ದೇಶನದ ಸಾರಥ್ಯ ವಹಿಸಿಕೊಂಡಿದ್ದಾರೆ. ಲವ್ ಕೇಸ್ ಶೀರ್ಷಿಕೆಯೇ ಹೇಳುವಂತೆ ಚಿತ್ರದಲ್ಲಿ ನವಿರಾದ ಪ್ರೇಮಕಥೆಯೂ ಇದೆ. ಇದರ ಜತೆಗೆ ಕಾಮಿಡಿಯೂ ಬೆರೆತಿದೆ. ಲವ್ ಕೇಸ್‌ಗೆ ಪ್ಯೂರ್ ಲವ್ ಸ್ಟೋರಿ ಎಂಬ ಅಡಿ ಬರಹವಿದೆ. ಹಾಗಾಗಿ ಸಿನಿಮಾದಲ್ಲಿ ಭರಪೂರ ಮನರಂಜನೆ ಇರುವುದು ಇದರಿಂದ ತಿಳಿಯುತ್ತದೆ. ಶ್ರೀನಗರ ಕಿಟ್ಟಿ, ಟಗರು ಪಲ್ಯ ಖ್ಯಾತಿಯ ನಾಗಭೂಷಣ್, ಸಾಯಿಕುಮಾರ್, ಸುಧಾರಾಣಿ, ಪ್ರಮೋದ್ ಶೆಟ್ಟಿ, ರಂಜನ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಪುತ್ರ ಆದಿ ಹರಿಕೃಷ್ಣ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿಸುತ್ತಿದ್ದಾರೆ. ಮಾಸ್ತಿ ಸಂಭಾಷಣೆ ಸಂಭಾಷಣೆ ಬರೆದಿದ್ದು, ಕೆ.ಎಸ್ ಚಂದ್ರಶೇಖರ್ ಛಾಯಾಗ್ರಹಣ, ಅನುಕೃಷ್ಣ ಸಂಕಲನದ ಜವಾಬ್ದಾರಿ ಹೊತ್ತಿದೆ. ಬೆಂಗಳೂರು ಹಾಗೂ ರಾಜ್ಯದ ಸುಚಿದರ ತಾಣಗಳಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಆದಷ್ಟು ಬೇಗ ಚಿತ್ರೀಕರಣ ಮುಗಿಸಿ ಚಿತ್ರವನ್ನು ತೆರೆಗೆ ತರುವುದಾಗಿ ನಿರ್ದೇಶಕರು ಹೇಳಿದ್ದಾರೆ.

ಕೆಡಿಗೆ ಜೋಡಿಯಾದ ಕೀರ್ತಿ

ಮಹಾನಟಿ ಖ್ಯಾತಿಯ ಕೀರ್ತಿ ಸುರೇಶ್ ತಮಿಳು, ತೆಲುಗು, ಹಾಗೂ ಹಿಂದಿ ಸಿನಿಮಾಗಳಲ್ಲಿಯೂ ನಟಿಸಿ ಪ್ರಸಿದ್ಧಿ ಪಡೆದಿದ್ದಾರೆ. ಈಗ ಅದೇ ಕೀರ್ತಿ ಚಂದನವನಕ್ಕೂ ಎಂಟ್ರಿಕೊಡಲು ಸಜ್ಜಾಗಿದ್ದಾರೆ. ಹೌದು ಧ್ರುವ ಸರ್ಜಾ ಅಭಿನಯದ ಹೊಸ ಚಿತ್ರದಲ್ಲಿ ಕೀರ್ತಿ ಸುರೇಶ್ ನಾಯಕಿಯಾಗಿ ಅಭಿನಯಿಸಲಿದ್ದಾರೆ ಎನ್ನಲಾಗುತ್ತಿದೆ. ಕೆಡಿ ಚಿತ್ರದ ಚಿತ್ರೀಕರಣ ಮುಗಿಸಿರುವ ಧ್ರುವ ಸರ್ಜಾ ಹೊಸ ಚಿತ್ರದಲ್ಲಿ ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ. ಈ ಹಿಂದೆ ಕೆರೆಬೇಟೆ ಚಿತ್ರವನ್ನು ನಿರ್ದೇಶಿಸಿದ್ದ ರಾಜ್‌ಗುರು ಈ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಈ ತಿಂಗಳಲಿನಲ್ಲಿಯೇ ಬೆಂಗಳೂರಿನಲ್ಲಿ ಹೊಸ ಸಿನಿಮಾ ಮೂಹೂರ್ತ ಸಮಾರಂಭ ನೆರವೇರಿಲಿದೆ. ಈ ಸಿನಿಮಾದಲ್ಲಿಯೂ ಭರ್ಜರಿ ಆ್ಯಕ್ಷನ್ ನಿರೀಕ್ಷಿಸಬಹುದಾಗಿದೆ.

ಇತ್ತ ಕೆಡಿ ಚಿತ್ರೀಕರಣ ಮುಗಿಸಿರುವ ಧ್ರುವ ಸರ್ಜಾ ಈ ಸಿನಿಮಾದ ತೆರೆಗೆ ಎದಿರು ನೋಡುತ್ತಿದ್ದಾರೆ. ಜೋಗಿ ಪ್ರೇಮ್ ನಿರ್ದೇಶನದಲ್ಲಿ ಮೂಡಿಬಂದಿರುವ ಕೆಡಿ

ಬಲು ಅದ್ದೂರಿಯಾಗಿ ಮೂಡಿಬಂದಿದೆ. ಇದು ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ಧ್ರುವ ಅಂಡರ್‌ವರ್ಲ್ಡ್ ಡಾನ್ ಆಗಿ ಕಾಣಿಸಿಕೊಂಡಿದ್ದಾರೆ. ಅವರ ಲುಕ್ ಕೂಡ ಈ ಹಿಂದಿನ ಚಿತ್ರಗಳಿಗಿಂತ ವಿಭಿನ್ನವಾಗಿದೆ. ಕ್ರೇಜಿಸ್ಟಾರ್ ರವಿಚಂದ್ರನ್, ಸಂಜಯ್ ದತ್, ರಮೇಶ್ ಅರವಿಂದ್, ಶಿಲ್ಪಾ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ. ಈ ಸಿನಿಮಾ ತೆರೆಗೆ ಬರುವ ಮೊದಲೇ ಧ್ರುವ ಮತ್ತೊಂದು ಚಿತ್ರದಲ್ಲಿ ನಟಿಸುತ್ತಿರುವುದು ಸಿನಿಪ್ರಿಯರಲ್ಲಿ ಖುಷಿ ತಂದಿದೆ.